ಮಾನವಿಕ ಕರ್ಣಾಟಕ

ಸಂಪುಟ ೧೫ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೫

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನ್ಯರೆ,

ಈ ಸಂಚಿಕೆಯೊಂದಿಗೆ ಮಾನವಿಕ ಕರ್ಣಾಟಕದ 15ನೆಯ ಸಂಪುಟ ಮುಗಿಯುತ್ತದೆ. 16ನೆಯ ಸಂಪುಟಕ್ಕೆ ತಮ್ಮ ಚಂದಾಹಣವನ್ನು ದಯವಿಟ್ಟು ತಕ್ಷಣವೇ ಕಳಿಸಿಕೊಡಿರಿ. ಹಾಗೆ ಕಳುಹಿಸುವಾಗ ಈ ಹಾಳೆಯ ಮಗ್ಗುಲಿಗಿರುವ ಹಾಳೆಯಲ್ಲಿ ವಿವರಗಳನ್ನು ತುಂಬಿ ಕಳುಹಿಸಿಕೊಡಿರಿ.

ಇಂತೀ ನಮಸ್ಕಾರಗಳು
ಕೆ.ಟಿ. ವೀರಪ್ಪ
ನಿರ್ದೇಶಕರು

ಮಾನ್ಯರೆ,

ದಯವಿಟ್ಟು ನನ್ನನ್ನು / ಈ ಸಂಸ್ಥೆಯನ್ನು 'ಮಾನವಿಕ ಕರ್ಣಾಟಕ'ದ ಹದಿನಾರನೆಯ ಸಂಪುಟಕ್ಕೆ ಚಂದಾದಾರನನ್ನಾಗಿ ದಾಖಲು ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ವಾರ್ಷಿಕ ಚಂದಾಹಣ ಐದು/ಹತ್ತು/ಹದಿನೈದು ರೂಪಾಯಿಗಳನ್ನು ಮನಿಯಾರ್ಡರ್/ಚೆಕ್/ಡ್ರಾಫ್ಟ್ ಮೂಲಕ ಇಂದು ಕಳುಹಿಸಿದ್ದೇನೆ. ವಿವರಗಳನ್ನು ಕೆಳಗೆ ನಮೂದಿಸಿದ್ದೇನೆ.

ಇಂತೀ

(ರುಜು)

1. ಹೆಸರು: —

[ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ]

2. ವಿಳಾಸ —

[ವಿದ್ಯಾರ್ಥಿಯಾಗಿದ್ದರೆ ಶಾಲೆ ಅಥವಾ ಕಾಲೇಜಿನ ಹಾಗೂ ಮನೆಯ ವಿಳಾಸಗಳೆರಡನ್ನೂ ನಮೂದಿಸಿರಿ]

3. ಶಿಫಾರಸು —

[ವಿದ್ಯಾರ್ಥಿಗಳು ತಮ್ಮ ಶಾಲಾ ಕಾಲೇಜುಗಳ ಮುಖ್ಯಸ್ಥರಿಂದ ತಾವು ಅಲ್ಲಿ ವ್ಯಾಸಂಗ ಮಾಡುತ್ತಿರುವ ಬಗೆಗೆ ಇಲ್ಲಿ ಶಿಫಾರಸು ಬರೆಸಬೇಕು]

4. ಪತ್ರಿಕೆಯನ್ನು ರಿಜಿಸ್ಟ್ರೇಷನ್ ಮೂಲಕ ಕಳುಹಿಸಬೇಕೆ ? —

5. ಕಳೆದ ವರ್ಷ ನನ್ನ ಚಂದಾ ಸಂಖ್ಯೆ —

'ಮಾನವಿಕ ಕರ್ಣಾಟಕ'ದಲ್ಲಿ ಆಸಕ್ತಿ ತೋರಿಸಬಹುದಾದ ನನ್ನ ಕೆಲವು ಮಿತ್ರರ ವಿಳಾಸಗಳು :

1.

[ತಿರುಗಿಸಿ

2.

3.

4.

5.

ಮಾನವಿಕ ಕರ್ಣಾಟಕದ ಚಂದಾ ವಿವರ :

ಆಜೀವ ಸದಸ್ಯತ್ವ	:	ರೂ.	100–00
ಪ್ರತಿ ಸಂಪುಟಕ್ಕೆ ವಿದ್ಯಾರ್ಥಿಗಳಿಗೆ	:	ರೂ.	5–00
ಇತರರಿಗೆ	:	ರೂ.	10–00
ಸಂಸ್ಥೆಗಳಿಗೆ	:	ರೂ.	15–00

ವಿಳಾಸ :

ಡೈರೆಕ್ಟರ್, ಪ್ರಸಾರಾಂಗ
ಮೈಸೂರು–570006

ಮಾನವಿಕ ಕರ್ನಾಟಕ

ಸಂಪುಟ ೧೫ ಸಂಚಿಕೆ ೪

೬೦

ಆಗಸ್ಟ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೮೫

MANAVIKA KARNATAKA, Kannada quarterly of the University of Mysore, Volume 15, Number 4, August 1985. Edited by Dr. B.K. Gururaja Rao and Dr. C. K. Renukarya

ಪ್ರಧಾನ ಸಂಪಾದಕರು

ಡಾ|| ಎಚ್. ತಿಪ್ಪೇರುದ್ರಸ್ವಾಮಿ

ಸಂಪಾದಕರು

ಡಾ|| ಬಿ. ಕೆ. ಗುರುರಾಜರಾವ್

ಡಾ|| ಸಿ. ಕೆ. ರೇಣುಕಾರ್ಯ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವಿ ಬೀದಿ, 2ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧ ಸಿ. ಕೆ. ರೇಣುಕಾರ್ಯ	ಪ್ರವಾಚಕರು, ಅರ್ಥಶಾಸ್ತ್ರವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬
೨ ಪಿ. ಆರ್. ತಿಪ್ಪೇಸ್ವಾಮಿ	ನಿವೃತ್ತ ಕ್ಯೂರೇಟರ್, ಜಾನಪದ ವಸ್ತು ಸಂಗ್ರಹಾಲಯ, ಮಾನಸ ಗಂಗೋತ್ರಿ, ಮೈಸೂರು-೬
೩ ನಗುವನಹಳ್ಳಿ ಪಿ. ರತ್ನ	ಸಂಶೋಧನ ಸಹಾಯಕಿ, ಹಸ್ತಪ್ರತಿ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬
೪ ಶಿ. ರಾಜೇಂದ್ರಪ್ಪ	ಇತಿಹಾಸ ಅಧ್ಯಾಪಕರು, ಸರ್ಕಾರಿ ಕಿರಿಯ ಕಾಲೇಜು, ಕೌಜಗೇರಿ, ಬೆಳವಂಡಿ ಮಾರ್ಗ, ರೋಣ ತಾಲೂಕ್, ಧಾರವಾಡ ಜಿಲ್ಲೆ
೫ ಆರ್. ರಾಮಕೃಷ್ಣ	ಸಹಾಯಕ ಸಂಪಾದಕ, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬
೬ ಕೆ. ಕೇಶವಮೂರ್ತಿ	ಬಿ-೩/೧೮೯, ಎ. ರಾಮಣ್ಣ ಬೀದಿ, ಶ್ರೀರಂಗಪಟ್ಟಣ
೭ ಎಂ. ಪಿ. ಮಹಾದೇವಯ್ಯ	ಸಂಶೋಧನ ಸಹಾಯಕ, ಪ್ರಾಚೀನ ಇತಿಹಾಸ, ಮತ್ತು ಪುರಾತತ್ತ್ವ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬
೮ ಕೆ. ಕೆಂಪೇಗೌಡ	ಪ್ರವಾಚಕರು, ಭಾಷಾ ಶಾಸ್ತ್ರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬
೯ ಎಂ. ಬಿ. ಮಂಜುನಾಥಾಚಾರ್	S/o ಭದ್ರಾಚಾರ್, ಮಣಿಕುಪ್ಪೆ, ಸಿಂಗೋನಹಳ್ಳಿ ಅಂಚೆ, ಹೆಬ್ಬೂರು ಮಾರ್ಗ ತುಮಕೂರು ಜಿಲ್ಲೆ
೧೦ ಕೆಳದಿ ಗುಂಡಾಜೋಯಿಸ್	ಕೆಳದಿ ವಸ್ತು ಸಂಗ್ರಹಾಲಯ, ಕೆಳದಿ ಅಂಚೆ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
೧೧ ಯಮುನಾಬಾಯಿ ಆರ್. ರಾವ್	'ಶ್ರೀ' ೪೮೯, ೧೨ ನೆಯ ಮುಖ್ಯ ರಸ್ತೆ, ಸರಸ್ವತೀಪುರಂ, ಮೈಸೂರು-೯



ರಿಚರ್ಡ್ ಸ್ಟೋನ್

ಡಾ|| ಸಿ. ಕೆ. ರೇಣುಕಾರ್ಯ

ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ವಿಜೇತ ರಿಚರ್ಡ್ ಸ್ಟೋನ್

1984ರ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ಇಂಗ್ಲೆಂಡ್ ದೇಶದ ರಿಚರ್ಡ್ ಸ್ಟೋನ್‌ರವರ ಪಾಲಾಗಿದೆ. ಸ್ಟೋನ್‌ರವರು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು. 71 ವರ್ಷ ವಯಸ್ಸಿನ ಸ್ಟೋನ್, ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಪಡೆಯುತ್ತಿರುವ ನಾಲ್ಕನೆಯ ಬ್ರಿಟನ್ ಪ್ರಜೆ. 1979ರ ನಂತರ, ಪ್ರಶಸ್ತಿಯನ್ನು ಪಡೆಯುತ್ತಿರುವ ಅಮೆರಿಕೇತರರಲ್ಲಿ ಮೊದನೆಯವರು.

ಸ್ಟೋನ್‌ರವರ ಸಂಶೋಧನೆ "ರಾಷ್ಟ್ರೀಯ ವರಮಾನ ಲೆಕ್ಕಾಚಾರದ ವಿಧಾನಗಳ ವಿಶ್ಲೇಷಣೆ"ಗೆ ಸಂಬಂಧಿಸಿದುದು. ತಮ್ಮ ಇಡೀ ಜೀವನವನ್ನು ಅವರು ಇದಕ್ಕಾಗಿ ವಿನಿಯೋಗಿಸಿದ್ದಾರೆ.

ಸ್ಟೋನ್ ತಮ್ಮ ಸಂಶೋಧನೆಯನ್ನು 1950ರ ಅವಧಿಯಲ್ಲಿ ಪರಿಪಕ್ವಗೊಳಿಸಿಕೊಂಡು ಪ್ರಕಾಶಕ್ಕೆ ತಂದರು. ರಾಷ್ಟ್ರೀಯ ವರಮಾನವನ್ನು ಹೇಗೆ ಲೆಕ್ಕಾಚಾರ ಮಾಡಬೇಕು? ಈ ಲೆಕ್ಕಕ್ಕೆ ಯಾವ ಯಾವ ಬಾಬ್ತುಗಳನ್ನು ಸೇರಿಸಿಕೊಳ್ಳಬೇಕು? ಎನ್ನುವುದನ್ನು ವ್ಯಾಪಕವಾಗಿ ಇವರು ವಿಶ್ಲೇಷಿಸಿದ್ದಾರೆ. ಜೆ. ಎಮ್. ಕೇನ್ಸ್‌ರ ಸಹಾಯಕರಾಗಿ, ಸ್ಟೋನ್ ಮತ್ತು ಮತ್ತೊಬ್ಬ ಅರ್ಥವಿಜ್ಞಾನಿ ಮೀಡ್, ಬ್ರಿಟನ್ನಿನ ರಾಷ್ಟ್ರೀಯ ಅರ್ಥವ್ಯವಸ್ಥೆಗೆ ಸಂಬಂಧಿಸಿದ ಬೃಹದಾಕಾರದ ಅಂಕಿ-ಅಂಶಗಳನ್ನು ವ್ಯವಸ್ಥಿತವಾಗಿ ನಿರೂಪಿಸಿದರು. ಈ ಕಾರ್ಯದಿಂದಾಗಿ ಬ್ರಿಟನ್ನಿನ ಆಡಳಿತಗಾರರು, ರಾಷ್ಟ್ರದ ಸಂಪತ್ತು ಎಷ್ಟಿದೆ ಎನ್ನುವುದನ್ನು ಅರಿಯುವುದು ಬಹಳ ಸುಲಭವಾಯಿತು.

ಎರಡನೆ ಮಹಾಯುದ್ಧ ನಂತರ ಸ್ಟೋನ್, ಬ್ರಿಟನ್ನಿಗಲ್ಲದೆ ಇತರ ರಾಷ್ಟ್ರಗಳಿಗೆ ಸಂಬಂಧಿಸಿದಂತೆ, ರಾಷ್ಟ್ರೀಯ ವರಮಾನ ಲೆಕ್ಕಾಚಾರದ ವಿಧಾನವನ್ನು ರೂಪಿಸಿದರು. ಯುನೈಟೆಡ್ ನೇಷನ್ಸ್‌ನ ಯೋಜನೆಯೊಂದಕ್ಕೆ ಅಧ್ಯಕ್ಷರಾಗಿ, ಸ್ಟೋನ್ ವಿಶ್ವದ 100ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಸಂಬಂಧಿಸಿದಂತೆ, ರಾಷ್ಟ್ರೀಯ ವರಮಾನ ಲೆಕ್ಕಾಚಾರದಲ್ಲಿ ಏಕರೂಪತೆಯನ್ನು ಸಾಧಿಸುವ ವಿಧಾನವನ್ನು ರೂಪಿಸಿದರು. ಇಂದು ಅಂತರ

ರಾಷ್ಟ್ರೀಯ ಮಟ್ಟದಲ್ಲಿ, ಪರಸ್ಪರ ರಾಷ್ಟ್ರಗಳನ್ನು ಅನೇಕ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಹೋಲಿಸುವುದು ಸಾಧ್ಯವಾಗಿರುವುದಕ್ಕೆ, ಸ್ಟೋನ್ ಬಹುಮಟ್ಟಿಗೆ ಕಾರಣ. ಅಂತರ ರಾಷ್ಟ್ರೀಯ ಸಂಸ್ಥೆ, ವ್ಯವಸ್ಥಿತವಾಗಿ ಹೊರತರುತ್ತಿರುವ 'ಬ್ಯಾಲೆನ್ಸ್ ಆಫ್ ಪೇಮೆಂಟ್ಸ್'ನಲ್ಲಿ ಅನುಸರಿಸುತ್ತಿರುವ ವಿಶ್ಲೇಷಣ ವಿಧಾನಕ್ಕೆ ರಿಚರ್ಡ್‌ಸ್ಟೋನ್‌ರವರ ವಿಶ್ಲೇಷಣಾ ವಿಧಾನವೇ ಮಾದರಿ.

ಸ್ಟೋನ್‌ರವರ ಅತ್ಯಂತ ಪ್ರಮುಖ ಕೃತಿಗಳೆಂದರೆ, Mathematics in the Social Sciences and other essays, Role of Measurement in Economics, Income and Wealth (ಇತರರೊಡನೆ), National Income and Expenditure (ಇತರರೊಡನೆ), Measurement of Consumer's expenditure and behaviour in U.K.(ಇತರರೊಡನೆ), International Association for Research in Income and Wealth (ಇತರರೊಡನೆ).

ಸ್ಟೋನ್‌ರವರು ಪ್ರಕಟಿಸಿರುವ ಸ್ವತಂತ್ರವಾದ ಸಂಶೋಧನ ಲೇಖನಗಳು ತುಂಬಾ ಮಹತ್ವವಾದವು. ಸ್ಟೋನ್ ತಮ್ಮ ಇಡೀ ಜೀವಮಾನವನ್ನೇ ರಾಷ್ಟ್ರೀಯ ವರಮಾನ ವಿಶ್ಲೇಷಣೆಯ ವಿಧಾನವನ್ನು ರೂಪಿಸುವುದಕ್ಕೆ ವಿನಿಯೋಗಿಸಿದ್ದಾರೆ ಎನ್ನುವುದರಲ್ಲಿ ಅತಿಶಯೋಕ್ತಿಯೇನಿಲ್ಲ. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಂಬಂಧಿಸಿದಂತೆ, ಅಂಕಿ–ಅಂಶಗಳ ಕೊರತೆಯಿಂದಾಗಿ ಅವರ ವಿಧಾನಗಳನ್ನು ಈ ರಾಷ್ಟ್ರಗಳಲ್ಲಿ ಬಹುಮಟ್ಟಿಗೆ ಬಳಸಿಕೊಳ್ಳಲಾಗುತ್ತಿಲ್ಲ.

ಪುಸ್ತಕವನ್ನು ಓದುವುದು ಮತ್ತು ಅವುಗಳನ್ನು ಸಂಗ್ರಹಿಸುವುದು, ಸ್ಟೋನ್‌ರವರ ಹವ್ಯಾಸ. ತಮ್ಮ ಸ್ವಂತ ಗ್ರಂಥ ಭಂಡಾರದಲ್ಲಿ ಸುಮಾರು 10,000ಕ್ಕೂ ಹೆಚ್ಚು ಗ್ರಂಥಗಳನ್ನು ಅವರು ಹೊಂದಿದ್ದಾರೆ.

ಸ್ಟೋನ್ ಈಗಿನ ಅರ್ಥವಿಜ್ಞಾನಿಗಳ ಬಗ್ಗೆ ಈ ಮಾತುಗಳನ್ನು ಹೇಳುತ್ತಾರೆ :

"ತುಂಬಾ ಅರ್ಥವಿಜ್ಞಾನಿಗಳು ಇಂದು, ಸಣ್ಣ–ಸಣ್ಣ ವಿಷಯಗಳಲ್ಲೇ ಹೆಚ್ಚಿನ ಪರಿಣತೆಯನ್ನು ಪಡೆದುಕೊಳ್ಳಲು ಉದ್ಯುಕ್ತರಾಗಿದ್ದಾರೆ. ಹೀಗಾಗಿ ಅವರಿಗೆ ಚರಿತ್ರೆ ಮತ್ತು ಮನೋವಿಜ್ಞಾನಗಳ ಬಗ್ಗೆ ಸಾಕಷ್ಟು ತಿಳುವಳಿಕೆ ಇಲ್ಲ". ಇದು ಸರಿಯಾದುದಲ್ಲ. "ಅರ್ಥವಿಜ್ಞಾನಿಗಳು ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅನೇಕ ಆರ್ಥಿಕ ಸೂಚನೆಗಳನ್ನು ನೀಡುತ್ತಾರೆ. ಆದರೆ ಈ ವಿದ್ವಾಂಸರು ರಾಷ್ಟ್ರದ ಜನರಿಗೆ ಬದಲಾವಣೆಯನ್ನು ಹೊಂದುವ ಮನಸ್ಸಿದೆಯೋ ಅಥವಾ ಶಕ್ತಿಯಿದೆಯೋ ಎನ್ನುವುದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ".

ಸ್ಟೋನ್‌ರವರಿಗೆ, ನೊಬೆಲ್ ಪ್ರಶಸ್ತಿ ಸಂದಿರುವುದು ಅತ್ಯಂತ ಯುಕ್ತ. ಅವರು ಉತ್ತೇಜಿಸಿರುವ ಅನೇಕ ವಿದ್ಯಾರ್ಥಿಗಳಿಗೆ ಇದು ಪ್ರೋತ್ಸಾಹಕ ಕೂಡ. ವಿಶ್ವಬ್ಯಾಂಕಿನ ಉನ್ನತ ಶ್ರೇಣಿಯನ್ನಲಂಕರಿಸಿರುವ ಅವರ ಶಿಷ್ಯರನೇಕರು, ಇಂಥಹ ಪ್ರಶಸ್ತಿಗಳಿಸುವ ಯೋಗ್ಯತೆಯನ್ನು ಹೊಂದಿದ್ದಾರೆ ಮತ್ತು ಆ ದಿಕ್ಕಿನಲ್ಲಿ ಕೆಲಸಮಾಡುತ್ತಿದ್ದಾರೆ ಸಹ.

ಪಿ. ಆರ್. ತಿಪ್ಪೇಸ್ವಾಮಿ

"ಅಮೂರ್ತ ಕಲೆ" ಒಂದು ವಿವೇಚನೆ

ಮಾನವ ಕೆಲವೊಮ್ಮೆ ನಿಸರ್ಗದ ಮೊರೆ ಹೋಗುತ್ತಾನೆ. ಕೆಲವು ಸಾರಿ ನಿಸರ್ಗಕ್ಕೆ ಹೆದರಿ ಅದನ್ನೂ ಎದುರಿಸುವುದನ್ನು ಕಲಿತುಕೊಳ್ಳುತ್ತಾನೆ. ಉದಾಹರಣೆಗೆ ಹುಲಿಗೆ ಬಲೆ ಹಾಕಿ ಹಿಡಿಯುವುದು ಸಾಧ್ಯವಿಲ್ಲದಿದ್ದಾಗ ಪೂಜಿಸುವುದು. ಹೀಗೆ ಪೂಜಿಸುವಾಗ ದುಷ್ಟ ಜಂತುಗಳ ಚಿತ್ರಗಳನ್ನು ಗುಹೆಗಳ ಗೋಡೆಗಳ ಮೇಲೆ ಬರೆದುಕೊಳ್ಳುತ್ತಾನೆ. ಹಿಂದಿನ ಸೃಷ್ಟಿಗಳು ಮುಂದಿನ ಸೃಷ್ಟಿಗಳ ಮೇಲೆ ಪ್ರಭಾವ ಬೀರುತ್ತವೆ. ಆಗ ಸೃಷ್ಟಿಕರ್ತನನ್ನು ಗೇಲಿ ಮಾಡಬಹುದು. ಆದರೆ ಅವನ ಸೃಷ್ಟಿ ಉಳಿದುಕೊಳ್ಳುತ್ತದೆ. ಅವನ ಅಭಿಪ್ರಾಯ ದೃಢವಾದುದಾದರೆ ಅವನ ನಗು ಕೊನೆಗೆ ಉಳಿಯುತ್ತದೆ. ಇಂಥ ಸೃಜನ ಶೀಲರಿಗೆ ಹಿಂದಿನ ಕೆಲಸಗಳ ಬಗ್ಗೆ ನಂಬಿಕೆ, ಗೌರವಗಳಿರುವುದಿಲ್ಲ. ಆದರೆ ಹಿಂದಿನವು ಗಳಿಂದ ಕಲಿಯಬೇಕೆಂಬುದು ಅವನಿಗೂ ಗೊತ್ತು. ಅವನಿಗೆ ಉತ್ತಮಗೊಳಿಸುವಿಕೆ ಯಲ್ಲಿ ಅವನಲ್ಲಿ ಅಸ್ಪಷ್ಟ ಅಭಿಪ್ರಾಯವುಂಟು. ಆ ಅಭಿಪ್ರಾಯಗಳಿಂದ ತನ್ನತನವನ್ನು ಮರೆಯುತ್ತಾನೆ. ನಮ್ಮನ್ನು ವಿಸ್ಮಯಗೊಳಿಸುತ್ತಾನೆ.

ವಿಸ್ಮಯ ಸರಳವಾದುದಲ್ಲ, ಸರಳ ರೀತಿಯಲ್ಲಿ ರೂಪುಗೊಳ್ಳುವಂಥದೂ ಅಲ್ಲ. ಅದ್ದ ಉದ್ಭವವಾಗಬೇಕಾದರೆ ಅಸಮಾನ್ಯ ದೃಷ್ಟಿಕೋನಗಳನ್ನುಳ್ಳ ಅಸಮಾನ್ಯ ಪ್ರತಿಭೆಯ ಅವಶ್ಯಕತೆ ಇದೆ. ಅಂಥದೊಂದು ಪ್ರತಿಭೆ ಕಾಲದ ಗಣನೆಯನ್ನು ಪರಿಗಣಿಸದೆ ಎಲ್ಲ ಕಲಾಕೃತಿಗಳನ್ನು ಅಭ್ಯಸಿಸಿದ್ದರಿಂದ ವಿಸ್ಮಯಕಾರಕ ಕಲಾಪ್ರಕಾರವೊಂದು ರೂಪು ಪಡೆಯಿತು. ಪ್ರಾಚೀನ ಹೋಲಿಕೆಗಳನ್ನು ಬಳಸದೆ ಹೊಸ ವಿಷಯಗಳನ್ನು ಬಳಸಿ ಕೊಳ್ಳುವುದೇ ನವ್ಯಕಲೆ. 1870ರ ಅನಂತರದ ವರ್ಷಗಳಲ್ಲಿ ಆಧುನಿಕ ಚಿತ್ರಕಲೆ ರೂಪ ತಾಳಿತು. ಪ್ರಾಚೀನ ಅರ್ವಾಚೀನಗಳೆರಡರ ಅಭ್ಯಾಸವೆಂದರೆ ಅದು ನವ್ಯದ ಗಡಿಯನ್ನು ದಾಟಿದಂತಾಗಿ ಹೊಸದೊಂದು ಪ್ರಕಾರದ ಉದ್ಭವಕ್ಕೆ ಕಾರಣವಾಗಬಲ್ಲುದು. ಹೀಗೆ ಉದ್ಭವವಾದ ಕಲಾಪ್ರಕಾರವನ್ನು ಇಂದು ನಾವು ಅಮೂರ್ತ ಕಲೆ ಎಂದು ಗುರುತಿಸು ತ್ತಿದ್ದೇವೆ.

ಒಂದು ಪುಷ್ಪವನ್ನು, ವ್ಯಕ್ತಿಯ ರೂಪವನ್ನು ಇಲ್ಲವೆ ಮತ್ತಾವುದೇ ಒಂದು ವಸ್ತು

ವನ್ನು ಅದು ಇರುವಂತೆಯೇ ಚಿತ್ರಿಸುವುದು ಇಲ್ಲವೆ ಮರದಲ್ಲೋ ಕಲ್ಲಿನಲ್ಲೋ ಲೋಹ ದಲ್ಲೋ ನಿರ್ಮಿಸುವುದು ಅನಾದಿ ಕಾಲದಿಂದಲೂ ರೂಢಿಯಾಗಿ ಒಂದು ಕಲಾಪರಂಪರೆ ಇದ್ದಂತೆಯೇ ಚಿತ್ರಿಸುವುದು ಯಾವ ಮಹಾ ಕಲೆ; ಕ್ಯಾಮರಾ ಯಂತ್ರ ಈ ಕೆಲಸ ಮಾಡುತ್ತಿದೆಯಲ್ಲ: ಜ್ಯಾಮಿತೀಯ ಆಕೃತಿಗಳು ವರ್ಣ ರೇಖೆಗಳಲ್ಲೇ ವಸ್ತುಗಳನ್ನು ಕಲಾವಿದ ಸೆರೆಹಿಡಿಯಬೇಕು ಎನ್ನುವ ನೂತನ ಪಂಥ ಇಪ್ಪತ್ತನೆ ಶತಮಾನದ ಪೂರ್ವ ದಲ್ಲಿ ರೂಪುಗೊಂಡಿತು. ಅದು 'ಅಮೂರ್ತ ಕಲೆ' ಎನಿಸಿಕೊಂಡಿತು.

ಯಾವುದೇ ವಸ್ತುವನ್ನು ಅದು ಇದ್ದಂತೆಯೇ ರೂಪಿಸದೆ ಬಣ್ಣ ಆಕೃತಿಗಳನ್ನು ಹೊಂದಾಣಿಕೆಯಾಗುವಂತೆ, ಇಲ್ಲವೆ ಪರಿಣಾಮಕಾರಿಯಾಗುವಂತೆ ಮೂಡಿಸಿ ಚಿತ್ರಿಸು ವುದು ಅಮೂರ್ತ ಕಲೆ. ಒಂದು ದೃಷ್ಟಿಯಲ್ಲಿ ಎಲ್ಲ ಕಲೆಯೂ ಅಮೂರ್ತವೇ. ಈ ಅರ್ಥದಲ್ಲಿ ವಾಸ್ತವತೆಯ ಅತ್ಯಂತ ಮೂರ್ತ ಚಿತ್ರವು ಕೂಡ ಬೆಲೆ ಪಡೆಯಬೇಕಾದರೆ ರೇಖಾಸಂಯೋಜನೆಯ ಮೇಲೆ ಹೊಂದಾಣಿಕೆ ಮತ್ತು ಬಣ್ಣಗಳ ಆಧಾರದ ಮೇಲೆ ನಿಂತಿರಬೇಕು. ಏಕೆಂದರೆ ಕೃತಿಗೊಂಡಿರುವ ನಿಸರ್ಗದ ವಸ್ತುಗಳು ತಮ್ಮಷ್ಟಕ್ಕೆ ತಾವೇ ಚಿತ್ರದಲ್ಲಿ ಜೀವಂತವಾಗುತ್ತವೆ. ಅವು ತಾತ್ವಿಕವಾಗಿ ಅನುಕರಣೆ ಮಾಡದೆ ಅಥವಾ ನೈಸರ್ಗಿಕ ನಾದವನ್ನು ವರ್ಣಿಸದೆ ಭಾವೋದ್ದೀಪನ ಮಾಡುವ ಸಂಗೀತದ ಮೂಲಾಂಶ ಗಳಂತೆ ಇವೆ. ಸಂಗೀತ ಮತ್ತು ವಾಸ್ತುಶಿಲ್ಪಗಳನ್ನು ಅನುಸರಿಸುವ ಅಪೇಕ್ಷೆಯಿಂದ, ತನ್ನದೇ ಆದ ಸ್ವಾತಂತ್ರ್ಯವನ್ನು ಪಡೆದು ಹಾಗೂ ನಿಯಮಗಳನ್ನು ಬೆಳೆಸಿಕೊಂಡು ಹುಟ್ಟಿತು, ಅಮೂರ್ತ ಕಲೆ. ವ್ಯಾಗ್ನರನ 'ಲೋಯರ್ ಗ್ರಿನ್' ಎಂಬ ಸಂಗೀತ ಕೃತಿ ಯನ್ನು ಆಲಿಸಿದ ಮೇಲೆ ಆಸ್ವಾದಿಸಿದ ಮೇಲೆ ಸಂಗೀತದಲ್ಲಿರುವ ಶಕ್ತಿಗಳನ್ನು ಚಿತ್ರಕಲೆ ಯಲ್ಲೂ ಕೂಡ ತರಬಹುದೆಂದು ಕ್ಯಾಡೆನ್ಸ್ಕಿ (1866—1944) ಗೂ ಅನಿಸಿತು. ರಷ್ಯದಲ್ಲಿ ಜನಿಸಿದ ಈ ಚಿತ್ರಕಾರ ಅಮೂರ್ತ ಕಲೆಯ ಆದ್ಯಪ್ರವರ್ತಕ ಎಂದು ಪ್ರಸಿದ್ಧ ನಾದ. ಹಾಲೆಂಡಿನ ಮಾಂಡ್ರಿಯನ (1872—1944) ಕೂಡ ಪ್ರಖ್ಯಾತ ಅಮೂರ್ತ ಪಂಥದ ಕಲಾವಿದ. ಸಂಗೀತದಿಂದ ಭಾವ ಪ್ರೇರಣೆ ಪಡೆದ ಸಾಂಡಿನ್ಸ್ಕಿ ಮತ್ತು ವಾಸ್ತು ಶಿಲ್ಪದ ಆದರ್ಶದಿಂದ ಪ್ರೇರಣೆಗೊಂಡ.

ಮಾಂಡ್ರಿಯನ ಮತ್ತು ಸಾಂಡಿನ್ಸ್ಕಿ ಇವರಿಬ್ಬರ ಕೃತಿಗಳು ಅಮೂರ್ತ ಕಲೆಯ ಇತಿ ಮಿತಿಯನ್ನಲ್ಲದೆ ಅದರ ಮಹತ್ಸಾಧನೆ ಸಿದ್ಧಿಯನ್ನು ಅಮೋಘವಾಗಿ ಎದ್ದು ತೋರಿಸು ತ್ತವೆ. ಅಮೂರ್ತ ಆಕಾರಗಳನ್ನು ಅಲಂಕಾರ ಸೌಂದರ್ಯಕ್ಕಾಗಿ ಅದೆಷ್ಟೋ ಕಾಲದಿಂದ ಬಳಸುತ್ತಿದ್ದರೂ, ಕಲಾಜಗತ್ತು ಅದರ ಪ್ರಯೋಜನ ಗಳಿಸಿಕೊಂಡದ್ದು ಇಪ್ಪತ್ತನೆಯ ಶತಮಾನದಲ್ಲಿ. ಯಾವುದೇ ಕಟ್ಟುಪಾಡು ನಿರ್ಬಂಧಗಳಿಗೂ ಒಳಗಾಗದೆ, ಕಲ್ಪನೆಯ ಅದಮ್ಯ ಚೇತನಗಳಿಗೆ ಪ್ರಾಮುಖ್ಯತೆ ಇರುವ, ಅಮೂರ್ತ ಕಲೆ ತಾನು ತನ್ನ ವೈವಿಧ್ಯತೆ ಯಿಂದ ಆಗ ಬಹು ಜನರನ್ನು ಆಕರ್ಷಿಸಿತು.

ಪ್ರಪಂಚದ ಮೊದಲ ಯುದ್ಧವಾದ ಬಳಿಕ 15 ವರ್ಷಗಳ ನಂತರ ಅಮೂರ್ತ ಕಲೆಯಲ್ಲಿ ಒಂದು ಹೊಸ ಚೈತನ್ಯ ಕಂಡುಬಂದಿತು. ಸಮಕಾಲೀನ ಕಲೆಯ ಅನೇಕ

ಒಲವುಗಳಲ್ಲಿ ತಾಸೂ ಒಂದು ಎಂಬುವುದನ್ನು ಅಮೂರ್ತಕಲೆಯು ಸ್ಥಾಪಿಸಿರುವುದನ್ನು 1925—1950ರ ವರೆಗೆ ನಾವು ಗಮನಿಸಿದ್ದೇವೆ. ಆಕೃತಿ ಕಲೆಗೆ ಬದಲಾಗಿ ಬಂದ ಈ ಅಮೂರ್ತ ಕಲೆಯು ಒಂದು ಮೂಲಭೂತವಾದ ಪರ್ಯಾಯ ಎಂಬಂತೆ ಕಾಣಿಸಿ ಕೊಳ್ಳುತ್ತಿದೆ. ಜ್ಯಾಮಿತಿಯ ಅಮೂರ್ತವಾದವನ್ನು ಅದು ಅಲುಗಾಡಿಸುತ್ತಿದೆ. ಕ್ಯಾಡಿನ್ಸ್ಕಿ, ಮಾಂಡ್ರಿಯೇನ ಇವರ ಪ್ರಭಾವದಿಂದಾಗಿ ಜ್ಯಾಮಿತಿಯ ಅಮೂರ್ತಕಲೆಗೆ ಈ ಕಲೆ ಧಕ್ಕೆಯನ್ನು ಒಡ್ಡಿತು. ಇವರ ಕಲೆ ಅಮೂರ್ತಕಲೆಯನ್ನು ಮೀರಿಸುವ ಕೊಡುಗೆ ಯಾಗಿದೆ.

ಜ್ಯಾಮಿತಿಯ ಅಮೂರ್ತವಾದದ ಒಂದು ಶಾಖೆಯು ವಿಶೇಷವಾಗಿ ಕ್ರಿಯಾಶೀಲ ವಾಗಿವೆ. ಹ್ಯಾಗ್ಯೂಸ್ಟ ಹರ್ಬಿಸ್ (1882-1960) ಮತ್ತು ಜಿನ್ ಡಿವಾಸಿನ್ (ಜ.1921) ಇವರಿಂದ ಫ್ರಾನ್ಸಿನಲ್ಲಿಯೂ, ರಿಚರ್ಡ್ ಮೊರ್ಟೆನ್‌ಸರ್ (ಜ.1910) ನಿಂದ ಡೆನ್‌ಮಾರ್ಕ್‌ನಲ್ಲಿಯೂ ಮ್ಯಾರೊ ರಿಗ್ಯಾನಿ (ಜ.1897) ಆಡಾನ್ಸಿ ಸೋಲ್ದರಿ (1887-1955), ಮತ್ತು ಎನ್ರಿಕೊ ಪ್ರಾಪೊಲಿನಿ (1894—1956) ಇವರಿಂದ ಇಟಲಿಯಲ್ಲಿಯೂ ಅಮೂರ್ತಕಲೆ ಅತ್ಯಂತ ಜೀವಂತವಾಯಿತು. ಇವರಲ್ಲಿ ಕೊನೆಯವನು ಭವಿಷ್ಯತ್ತಿನ ಕಲೆಗೆ ಸೇರಿದ್ದಾನೆ. ಆದರೆ ಅವನ ಕಠೋರಶಿಸ್ತು ಹೊಸ ಹೊಸ ಅಮೂರ್ತ ಕಲಾವಿದರನ್ನು ಪರಕೀಯರನ್ನಾಗಿ ಮಾಡಿತು.

ಜ್ಯಾಮಿತಿಯ ಅಮೂರ್ತ ಕಲೆಯ ಜೊತೆ ಸಂಬಂಧ ಹೊಂದಿದ್ದ ಈ ಕಲಾವಿದರು ಆದರ ರೂಪಕ್ಕೆ ನಾನಾ ವಿಧವಾದ ಹೊಸ ಸೂಕ್ಷ್ಮಗಳನ್ನು ಕಾಣಿಕೆಯಾಗಿ ಕೊಟ್ಟಿದ್ದಾರೆ. ಇಟಲಿಯ ಅಲ್ಬರ್ಟೊ ಮ್ಯಾಗ್ನೆಲ್ಲಿ (1888—1972) ದೀರ್ಘವಾದ ಚಪ್ಪಟೆಯಾದ ಹೊಸ ರೇಖೆಗಳನ್ನು (ರೂಪರೇಖೆ) ರೂಪ ಮತ್ತು ಬಣ್ಣದಲ್ಲಿ ವೈದೃಶ್ಯವಾಗಿ ಕಾಣುವಂತೆ ಜ್ಯಾಮಿತಿಯ ಚೌಕಟ್ಟಿಗೆ ಹೊಂದಿಸಿದ್ದಾನೆ. ಇಂಗ್ಲೀಷ್ ಮಹಾನ್‌ಚಿತ್ರ, ಶಿಲ್ಪ ಹಾಗೂ ಗ್ರಾಫಿಕ್ ಕಲಾವಿದ ಬೆನ್ ನಿಕಲ್ಸನ್ (ಜ. 1894) ತನ್ನ ಸರಳ ಜಾಮಿತಿಯ ರಚನೆಗಳನ್ನು ಪರಿಪಕ್ವಗೊಳಿಸಿದ್ದಾನೆ. ಚೊಕ್ಕವಾದ ಖಚಿತವಾದ ಹೊರರೇಖೆಗಳಿಂದ ಚಿತ್ರವನ್ನು ಜೀವಂತಗೊಳಿಸಿದ್ದಾನೆ. ನಾಜಿಸಂ ಬಲವಂತವಾಗಿ ಗಡೀಪಾರು ಮಾಡಿದ್ದ ಬೊಹಾನ್ಸ್ ಪಂಥದ ಪ್ರಮುಖರಲ್ಲಿ ಒಬ್ಬನಾದ ಅಮೆರಿಕ ಸಂಯುಕ್ತಸಂಸ್ಥಾನದ ಜೊಸೆಫ್ ಅಲ್ಬರ್ಸ್ (ಜ. 1888), ತನ್ನ ಖಂಡಿತವಾದ ಜ್ಯಾಮಿತಿಯ ಚಿತ್ರ ರಚನೆಗಳಿಗೆ ನಪುರಾದ ಬಣ್ಣಗಳನ್ನು ಹೊಳೆಯುವ ದನಿಗಳನ್ನೂ ಮಿತಿ ಇಲ್ಲದ ಆಳವನ್ನು ತಂದಿದ್ದಾನೆ.

ಈ ಅವಧಿಯಲ್ಲಿ ಅಮೂರ್ತಕಲೆಯು ವಿವಿಧ ರೂಪಗಳು ಸಾಮಾನ್ಯ ಕಲಾತ್ಮಕ ತತ್ವಗಳಿಂದ ದೂರವಾದರೂ 1) ವಸ್ತುನಿಷ್ಠ ವಾಸ್ತವವನ್ನು ಉಲ್ಲೇಖಿಸಲು ತಿರಸ್ಕಾರ, (2) ಪ್ರತಿನಿಧಿಸಬೇಕೆಂಬ ಇಚ್ಛೆಯನ್ನು ತೊರೆದದ್ದು. (3) ಕೃತಿಯನ್ನು ಸಂಪೂರ್ಣವಾಗಿ ಸೃಷ್ಟಿಸುವ ನಿರ್ಧಾರ. ಸೃಷ್ಟಿಸುವ ಕೃತಿಯಲ್ಲಿ ಯಾವುದೇ ವಸ್ತು ಅಥವಾ ಅರ್ಥ ಇರದೆ ಆದರಿಂದ ನಾನಾ ದೃಷ್ಟಿಗಳಿಂದಲೂ ನಾನಾ ಸ್ಫೂರ್ತಿಗಳಿಂದಲೂ ಮತ್ತು

ನಾನಾ ಉದ್ದೇಶಗಳಿಂದಲೂ ಹೊರ ಹೊಮ್ಮಬೇಕು. ಈಗ ಅಮೂರ್ತವಾದ ಐಕ್ಯತೆ ಚೂರು ಚೂರಾಯಿತು. ಅನೇಕ ಗುಂಪುಗಳಾದುವು. ಪ್ರತಿಯೊಂದು ಗುಂಪೂ ತನ್ನದೇ ಆದ ಅನುಭವಗಳಲ್ಲಿ ಕಾಳಜಿ ವಹಿಸಿತು. ಒಂದು ಇನ್ನೊಂದರ ಜೊತೆ ಘರ್ಷಿಸುತ್ತ ಬೆಸೆದುಕೊಳ್ಳುತ್ತ ಹಾಗೂ ಪ್ರಭಾವಗೊಳಿಸುತ್ತ ಮುಂದುವರಿದುವು.

ಅಂಥ ಒಂದು ಚಳುವಳಿಯನ್ನು ಕಾವ್ಯಾತ್ಮಕ ಅಮೂರ್ತವಾದ ಕಲೆ ಎಂದು ಕರೆಯಬಹುದು. ತನ್ನ ವರ್ಣಗಳನ್ನು ಅನಾವರಣಗೊಳಿಸುವ ಈ ಕೃತಿಗಳಲ್ಲಿ ಕಾವ್ಯಾತ್ಮಕ ಪ್ರಜ್ಞೆ ಮತ್ತು ಪ್ರಶಾಂತ ಸಮತೋಲನತೆ ಕಂಡುಬರುತ್ತವೆ. ಈ ಚಳುವಳಿಯಲ್ಲಿ ಅನೇಕ ಜಂಬಲಿಗರಿದ್ದಾರೆ. ಇದನ್ನು ಫ್ರಾನ್ಸಿನಲ್ಲಿ ಆಲ್‌ಫ್ರೆಡ್ ಮ್ಯಾನಿಸಿಯನ್ (ಜ. 1911) ಪ್ರತಿನಿಧಿಸುತ್ತಾನೆ. ಇವನ ಅದ್ಭುತ ಕಲೆಯು ಪುರಾತನ ದೇವ ಮಂದಿರಗಳ ನೀಲಿವರ್ಣಮಯ ಗಾಜಿನ ಭಿತ್ತಿಚಿತ್ರಗಳನ್ನು ನೆನಪಿಸುತ್ತವೆ. ಜೀನ್ ಟೈನ್ಗೈನ್ (ಜ. 1930) ಮತ್ತು ಗುಸ್ತಾವ್ ಸಿಂಗ್ (ಜ. 1909) ಇವರ ಕೃತಿಗಳಲ್ಲಿ ಅಮೂರ್ತ ಆಕೃತಿಗಳ ಗಟ್ಟಿತನ ಎದ್ದು ಕಾಣುತ್ತದೆ. ಜರ್ಮನಿಯಲ್ಲಿ ತನ್ನ ತೆಳುವಾದ ವರ್ಣಗಳ 'ಚಿತ್ರ ರಚನೆಗಳಿಂದ ವಿಲಿ ಬೌಮಿಸ್ಟ (1889—1958) ಹಳೆಯ ಕಾಲದ ಪಳೆಯುಳಿಕೆಯಂತಿದ್ದಾನೆ. ಅರ್ನೆಸ್ಟ್ ವಿಲ್ಹೆಲ್ಮ್ ನೇ (ಜ. 1902) ತನ್ನ ಚಿತ್ರರಚನಾ ರೂಪಗಳಲ್ಲಿ ಹಿತಮಿತವಾದ ವರ್ಣಗಳಿಂದ ಮೆರೆಯುತ್ತಾನೆ. ಇಟಲಿ ದೇಶದ ಅಪ್ರಾಡೆಸಟಲ್ (ಜ. 1912) ತನ್ನ ಚಿತ್ರಕೃತಿಗಳಲ್ಲಿ ಒಂದು ಬಗೆಯ ಅಂತರಿಕ್ಷ ಮತ್ತು ವಾಯುಪ್ರಜ್ಞೆಯನ್ನು ಮೂಡಿಸಿದ್ದಾನೆ. ಇಟಲಿಯ ಅತ್ಯಂತ ಸೂಕ್ಷ್ಮ ಸಂವೇದಿ ಕಲಾವಿದನಾದ ರೆನಾಟೊ ಬಿರೋಲಿ (1905-1959) ತನ್ನ ಅಲ್ಪ ಜೀವಿತ ಕಾಲದಲ್ಲಿ ಕಾವ್ಯಾತ್ಮಕ ಅಮೂರ್ತ ಕಲೆಗೆ ಅದ್ಭುತವಾದ ಶೋಭೆಯನ್ನು ತನ್ನ ವರ್ಣ ಕೃತಿಗಳಿಂದ ತಂದುಕೊಟ್ಟನು.

ಪೋರ್ಚುಗಲ್ ನಲ್ಲಿ ಹುಟ್ಟಿ ಪ್ಯಾರಿಸ್‌ನಲ್ಲಿ ಬದುಕುತ್ತಿರುವ ಮೇರಿ ಎರಿನ ವೀರ ದಾಸಿಲ್ವಾ (ಜ. 1908) ವೈಯಕ್ತಿಕ ಶೈಲಿಯನ್ನು ರೂಪಿಸಿಕೊಂಡ ಕಲಾವಿದರಲ್ಲೇ ಪ್ರಮುಖಳು. ಉದ್ದ ಮತ್ತು ಅಡ್ಡಗೆರೆಗಳ ಅಟ್ಟಣಿಯಿಂದ ಆಕೆಯ ವರ್ಣ ಚಿತ್ರಗಳು ಹೊಳೆಯುತ್ತವೆ. ಇಡೀ ಕೃತಿಯೇ ಮಹಾ ದೀಪ್ತತೆಯ ಭ್ರಮೆಯನ್ನು ಮೂಡಿಸುತ್ತದೆ. ಎಂಥ ವೈಯುಕ್ತಿಕ ಮುದ್ರೆಯನ್ನು ಮುಂದಿನ ಪ್ರತಿಭಾವಂತ ಮತ್ತು ಸುಪ್ರಸಿದ್ಧರೂ ಆದ ಈ ಕಲಾವಿದರಲ್ಲಿ ನೋಡಬಹುದು. ಗಡೀಪಾರಾದ ರಷ್ಯಾದ ಕುಟುಂಬದಲ್ಲಿ ಜನಿಸಿದ ನಿಕಲಾಸ್ ಡಿ ಸ್ಟೀಲ್ (1914-1954) ಪ್ಯಾರಿಸ್‌ಗೆ ಹೋಗಿ ಅಲ್ಲಿ ತನ್ನ ಯಶಸ್ಸಿನ ಶಿಖರದಲ್ಲಿದ್ದಾಗ ಆತ್ಮಹತ್ಯೆ ಮಾಡಿಕೊಂಡನು. ಅವನು ಚುಕ್ಕಿಗಳ ಮತ್ತು ಮೊಚ್ಚೆಗಳ ಶೈಲಿಯನ್ನು ರೂಪಿಸಿದನು. ಬೆಳಕು ಮತ್ತು ಬಣ್ಣದ ಸಂಬಂಧವನ್ನು ವಿಶೇಷವಾಗಿ ಅರಿತಿದ್ದನು. ಚಪ್ಪಟೆಯೂ ತೀವ್ರ ವರ್ಣಮಯವೂ ಆದ ಅವನ ಕೃತಿಯಲ್ಲಿನ ಜಾಗಗಳು ಸರಳವೂ ಸ್ಪಷ್ಟವೂ ಆದ ಪ್ರಭಾವವನ್ನು ಉಂಟುಮಾಡುತ್ತದೆ. ಅಮೂರ್ತ

ಕಲೆಗೂ ವಾಸ್ತವಿಕ ಕಲೆಗೂ ಇರುವ ಅಂತರವನ್ನು ಡಿ ಸ್ಟೀಲ್ ತುಂಬ ಆದರ್ಶವಾದ ರೀತಿಯಲ್ಲಿ ಸಾಮರಸ್ಯಗೊಳಿಸಿದ್ದಾನೆ.

ಕಾವ್ಯಾತ್ಮಕ ಅಮೂರ್ತ ಕಲೆಗಿಂತ ಹೆಚ್ಚು ವೈವಿಧ್ಯವೂ ಸಂಕೀರ್ಣವೂ ಆದ ಕಲಾ ಚಳುವಳಿ ಎಂದರೆ ಅಮೂರ್ತ ಅಭಿವ್ಯಕ್ತಿ ಕಲೆ. ಅಮೂರ್ತ ಅಭಿವ್ಯಕ್ತಿ ಕಲೆಯು ಅಭಿವ್ಯಕ್ತಿ ಕಲೆಯ ಸಾಮಾನ್ಯ ಗುಣಲಕ್ಷಣಗಳನ್ನು ಹೊಂದಿದೆ. ಈ ಚಳುವಳಿಯು ರಾಗೋಜ್ವಲತೆ ತೀವ್ರ ಅವಿಶ್ರಾಂತ ಮನಸ್ಥಿತಿ ಮತ್ತು ನೊಂದ ದರ್ಶನವನ್ನು ಪ್ರಕಟಿಸುತ್ತದೆ.

ಅಮೂರ್ತ ಅಭಿವ್ಯಕ್ತಿ ಅಂತರಂಗದ ಒಳತೋಟಿಯನ್ನು ರಚನಾತ್ಮಕ ಕ್ರಿಯೆಯನ್ನು ಒಳಮನಸ್ಸಿನ ಒತ್ತಡವನ್ನು ಪ್ರಕಟಿಸಲು ಆಗತ್ಯವಾಯಿತು. ಸಂಕ್ಷಿಪ್ತವೂ ಮತ್ತು ಗಾಢವೂ ಆದ ಉಲ್ಸನ (Wols) (1913-51) ಕೃತಿಗಳು ಅತ್ಯಂತ ಗಮನಾರ್ಹವಾದವು. ಏಕೆಂದರೆ ಆತ ಜರ್ಮನಿಯ ಅಭಿವ್ಯಕ್ತಿ ಕಲಾತತ್ವವನ್ನು ಸಾಂಪ್ರದಾಯಿಕ ಸೂತ್ರಗಳನ್ನು ತಿರಸ್ಕರಿಸಿದನು. ನಾವು ನೋಡುವುದರಲ್ಲಿ ದೃಶ್ಯದ ನೋಟಗಳಲ್ಲಿ ತನ್ನ ಒಳಗನ್ನೂ ತಾನೇ ನೋಡುವುದು ಆತನ ದಾರಿ. ಪಾಲ್‌ಕ್ಲೀ(Paulklee) ಕೂಡ ವಿಶ್ವದ ಮೂಲ ಹಾಗೂ ಅದೃಶ್ಯ ರಚನೆಗಳನ್ನು ಕಂಡು ಹೀಗೆ ಮಾಡಿದನು. ನಾಜೀ ಜರ್ಮನಿಯಿಂದ ಹೊರಹಾಕಲ್ಪಟ್ಟ ನಿರಾಶ್ರಿತನೊಬ್ಬನು ಸರ್‍ರಿಯಲಿಸ್ಟ್ ಮತ್ತು ಎಕ್ಸಿಸ್ಟೆನ್ಷಿಯಲ್ (Existential) ಗುಂಪಿಗೆ ಸೇರಿದನು.

ಭೌತಿಕ ವಾದವನ್ನು ಪ್ರತಿಪಾದಿಸುವ ಗುಂಪು ಯುದ್ಧಕಾಲದಲ್ಲಿ ಶಿಕ್ಷೆ ನೀಡುವ ಶಿಬಿರಗಳ ದುರಂತ ಚಿತ್ರಣವನ್ನು ಉಲ್ಸ ಕೊಟ್ಟಿದ್ದಾನೆ. ಅದರಲ್ಲಿ ಆತ್ಮೀಯವಾದ (intimate) ಕಲೆಗಳಿದ್ದು ವ್ಯವಸ್ಥೆಯ ಒಳ ಎಳೆಗಳನ್ನು ಬಿಡಿಸಿ ತೋರಿಸುತ್ತದೆ. ಇದು ವಿಶ್ವದ ಶಕ್ತಿಯನ್ನು ಪ್ರದರ್ಶಿಸಿದೆ.

ಇಷ್ಟೆಲ್ಲ ಆದರೂ ಉಲ್ಸ ಏಕಾಂಗಿಯಾಗಿ ನಿಲ್ಲುತ್ತಾನೆ. ಅಮೂರ್ತ ಅಭಿವ್ಯಕ್ತಿ ಸಾಮಾನ್ಯವಾಗಿ ಬಹಿರಂಗವಾಗಿದ್ದು ಹಿಂಸೆಯನ್ನು ಆಕ್ರಮಣವನ್ನು ಅಭಿವ್ಯಕ್ತಿಗೊಳಿಸುತ್ತದೆ. ಕುಂಚದ ಹೊಡೆತಗಳು ಸಂಕ್ಷಿಪ್ತವಾಗಿದ್ದು ಚಲನಶೀಲನವಾಗಿರುತ್ತದೆ. ಇದು ಒಡೆದಿರುತ್ತದೆ ಅಥವಾ ಸುರುಳಿ ಸುರುಳಿಯಾಗಿರುತ್ತವೆ. ಅಪರೂಪದ ಆಕೃತಿಗಳು ಅದೃಶ್ಯವಾಗಿದ್ದು ಒಂದಕ್ಕೆ ಒಂದು ಹೆಣೆದುಕೊಂಡಿರುತ್ತದೆ. ಅದರಲ್ಲಿ ಸಮತೋಲನವಿಲ್ಲ ಮತ್ತು ವ್ಯವಸ್ಥೆ ಇರುವುದಿಲ್ಲ. ಇದು ಅಮೂರ್ತ ಚಿತ್ರಕಲೆಯಿಂದ ಸಾಧ್ಯ.

ಅಭಿವ್ಯಕ್ತಿ ಶೈಲಿ ಫ್ರೆಂಚ್ ದೇಶದ ಅಂಡ್ರೆಮೂಸೆನ್ (Andre Masson) ಅವನ ನಿಜವಾದ ನೆಲೆ. ಇವನನ್ನು ನಾವು ಈಗಾಗಲೇ ಯುದ್ಧಾನಂತರದ ಸರ್‍ರಿಯಲಿಸ್ಟ್ ಎಂದು ಪರಿಗಣಿಸಿದ್ದೇನೆ. ಮೂಸೆನ್ (Masson) ಅವನು ಅಪೋಕ್ಲಿಸ್ಟಿಕ್ (appoclyptic visons) ದೃಶ್ಯಗಳಿಂದ ವ್ಯಂಗ್ಯ ಹಾಗೂ ಪ್ರತಿಭಟನೆಯ ಅಭಿವ್ಯಕ್ತಿಗೆ ಸೇರುತ್ತಾನೆ. ಭಯದಿಂದ ಬೇರೆಯಾದ ಶ್ರೀಮಂತ ಸಿದ್ಧಾಂತಗಳನ್ನು

ಸೃಷ್ಟಿಸುತ್ತಾನೆ ಮತ್ತು ಸೀಮಿತವಲ್ಲದ ಕಲ್ಪನಾ ಲೋಕವನ್ನು ಸೃಷ್ಟಿಸುವಲ್ಲಿ ಪ್ರೇರಕನಾಗುತ್ತಾನೆ. ಸಂಯುಕ್ತ ರಾಷ್ಟ್ರಗಳಲ್ಲಿ ಆತ ವಾಸಿಸುವಾಗ ಅಲ್ಲಿನ ಕಲಾವಿದರ ಮೇಲೆ ಅದ್ಭುತ ಪ್ರಭಾವವನ್ನು ಬೀರಿದ್ದಾನೆ. ರಷ್ಯ ದೇಶಕ್ಕೆ ಸೇರಿದ ಸರ್ಜಿ ಪೊಲಿಕ್ಕಾಟ್ (Sergei Polickott) (ಜ. 1906)ನು 1923ರಲ್ಲಿ ಪ್ಯಾರಿಸನ್ನು ಸೇರಿದನು. ಜಾಮಿತಿಯ ಅಮೂರ್ತತತ್ವವನ್ನು ಒಡೆದನು. ಇವನು ಸಂಪೂರ್ಣವಾಗಿ ತನ್ನ ಕಲೆಯನ್ನು ತ್ಯಜಿಸದಿದ್ದರೂ ಬಣ್ಣದ ವಲಯಗಳನ್ನು ಕ್ರಮವಲ್ಲದ ಆಕೃತಿಗಳಲ್ಲಿ ಮತ್ತು ಅದರ ಮೇಲ್ಮೈನ ಒಳಭಾಗಗಳನ್ನು ಮತ್ತು ವಿರುದ್ಧ ಬಣ್ಣಗಳ ಚಲನೆಯಿಂದ ಬರುವ ಉದ್ವೇಗವನ್ನು ಅಳವಡಿಸಿಕೊಂಡಿದ್ದಾನೆ. ವೆನಿಷಿಯನ್ ಎಮಿಲಿಯೊ ವಡೋವ (Venetion Emilio Vedova) (ಜ. 1919) ಆಧುನಿಕ ಮಾನವನ ಅಸ್ತಿತ್ವವಾದವನ್ನು ವ್ಯಾಖ್ಯಾನಿಸಲು ಪ್ರಯತ್ನಪಟ್ಟಿದ್ದಾನೆ. ಸತ್ಯದ ವಿರುದ್ಧ ಸಂದರ್ಭಗಳನ್ನು ಪ್ರತಿಭಟಿಸುತ್ತಾನೆ. ಆತನ ರಚನೆಗಳು ಒಡೆದಿದ್ದು ಅದರಲ್ಲಿ ಕಪ್ಪು ಮತ್ತು ಬಿಳುಪು ವರ್ಣಗಳ ವೈದೃಶ್ಯವಿದೆ.

ಉತ್ತರ ಯೂರೋಪಿನ ದೇಶಗಳು ಈ ಬಗೆಯ ಅಭಿವ್ಯಕ್ತಿಗೆ ಫಲವತ್ತಾದ ಕ್ಷೇತ್ರವಾಗಿವೆ. ಡೆನ್ಮಾರ್ಕ್, ಬೆಲ್ಜಿಯಂ ಮತ್ತು ಹಾಲೆಂಡ್‌ಗಳಿಗೆ ಸೇರಿದ 'ಕೋಬ್ರಾ' (Cobra) ಗುಂಪಿನ ಚಳವಳಿಗಳು ಹಿಂಸೆಯನ್ನು ಆಕ್ರಮಣಶೀಲತೆಯನ್ನು ಸಿಡಿಸಬ್ಬಿಸುವ ಮಾರ್ಗವನ್ನು ಗುರಿಯಾಗಿ ಹೊಂದಿವೆ. ಈ ಗುಂಪಿನ ಪ್ರಧಾನ ಚಿತ್ರಕಲಾವಿದರೆಂದರೆ ಬೆಲ್‌ಜಿಯನ್ ಪಿಯರ್ ಅಲ್‌ಚಿನ್‌ಸ್ಕೆ (Belgian Pierre Alechinske) (ಜ. 1917) ಡಚ್ ದೇಶದ ಕಾಡ್ ಅಪೆಲ್ (Kard Appel) (ಜ. 1921) ಮತ್ತು ಬ್ರಾಮ್ ವ್ಯಾನ್ ವೆಲ್ಡ್ (Bram Van Velde) (ಜ. 1895) ಮತ್ತು ಡೇನ್ ಅಸ್ಗರ್ ಜರ್ನ್ (Dane Asgar Jorn) (ಜ. 1914) ಅವರ ಕಲೆ ಯಾವುದೇ ರೂಪದ ಪ್ರಾತಿನಿಧ್ಯವನ್ನು ತೋರುತ್ತದೆ ಮತ್ತು ಅಶ್ಲೀಲದಿಂದ ಬಣ್ಣದ ಉದ್ವೇಗಕ್ಕೆ ಸಾಗುತ್ತವೆ.

ಎಲ್ಲಕ್ಕಿಂತ ಮೇಲಾಗಿ ಸಂಯುಕ್ತ ರಾಷ್ಟ್ರಗಳಲ್ಲಿ ಅಮೂರ್ತ ಅಭಿವ್ಯಕ್ತಿ ಮೂಲಭೂತವಾಗಿ ಹುಟ್ಟಿಕೊಂಡಿತು. ಇದು ಯೂರೋಪ್ ದೇಶದ ಕಲೆಯಮೇಲೆ ಪ್ರಭಾವವನ್ನು ತೀವ್ರವಾಗಿ ಬೀರಿತು.

ಈ ಚಳವಳಿಯ ಆರಂಭ ಸಂಕೀರ್ಣವಾದದ್ದು. ಯುದ್ಧಪೂರ್ವದಲ್ಲಿ ಅಮೇರಿಕದ ಕಲಾವಿದರಿಗೆ ಯೂರೋಪಿನ ಅವೆಂಟ್ ಗಾರ್ಡೆಯ ಪರಿಚಯವಿದ್ದಿತು. ಸಂಯುಕ್ತರಾಷ್ಟ್ರಗಳಲ್ಲಿ ಅಭಿವ್ಯಕ್ತಿ ಪಂಥ (Expressionism) ಸಹಜಪಂಥ (Surrealism) ಮತ್ತು ಅಮೂರ್ತ ಪಂಥ (Abstractionism) ಗಳು ಒಂದರಿಂದ ಒಂದು ಎರವಲು ಪಡೆದಿದ್ದಲ್ಲದೆ ಒಂದರೊಳಗೊಂದು ಹಾಸುಹೊಕ್ಕಾದುವು. ಯುದ್ಧಾನಂತರ ಸಂಯುಕ್ತ ರಾಷ್ಟ್ರದಲ್ಲಿ ಚಿತ್ರಕಲಾ ಪ್ರದರ್ಶನಗಳಲ್ಲಿ ಯೂರೋಪಿನ ಕಲೆ ಹೆಚ್ಚು ಪ್ರದರ್ಶಿತವಾಯಿತು.

ಮ್ಯಾಸನ್ (Masson), ಮಿರೋ (Miro), ಡಾಲ್ಫ(Dalf), ಚಾಗಲ್, (Chagall), ಮಟ್ಟ (Matta), ಮತ್ತು ಮ್ಯಾನ್‌ರೇ (Manray) ಮುಂತಾದವರು ವೈಯಕ್ತಿಕವಾಗಿ ಯೂರೋಪಿನ ಕಲಾಶಾಲೆಗಳಿಗೆ ಭೇಟಿಯಿತ್ತರು. ಪಿಕಾಸೋವಿನ ಪ್ರತಿಧ್ವನಿ ಅಟ್ಲಾಂಟಿಕ್ ಸಾಗರವನ್ನು ದಾಟಿ ಅಮೇರಿಕವನ್ನು ತಲುಪಿತು. ಯುದ್ಧ ಪೂರ್ವದಲ್ಲಿ ಜರ್ಮನ್ ನಿರಾಶ್ರಿತರ ಪ್ರತಿಭಾನಂತ ತಂಡ ಒಂದು ಜರ್ಮನ್ ದೇಶದ ಅಭಿವ್ಯಕ್ತಿ ಪಂಥವನ್ನು ಅಮೂರ್ತ ಪಾರಿಭಾಷಿಕ ಶಬ್ದಗಳಲ್ಲಿ ವ್ಯಾಖ್ಯಾನಿಸತೊಡಗಿತು. ಅವರಲ್ಲಿ ಹನ್ಸ್ ಹಾಫಮನ್ (Hans Haffaman) (ಜ. 1880) ಇದ್ದನು. ಬೃಹತ್ ಸಂಖ್ಯೆಯ ಅಮೇರಿಕನ್ ಕಲಾವಿದರು ಅಮೂರ್ತ ಅಭಿವ್ಯಕ್ತಿ ಪಂಥಕ್ಕೆ ಒಲಿದರು. (ಅವರಲ್ಲಿ ಅಡಾಲ್ಫ ಗಾಟ್ಲಿಯುಬ್ (Adolf Gottlieb) (ಜ. 1903) ಕ್ಲಿಫರ್ಡ್ ಸ್ಟಿಲ್ (Clifford Still) (ಜ. 1904) ರಾಬರ್ಟ್ ಮದರ್ ವೆಲ್ (Robert Motherwell) (ಜ. 1915) ಮತ್ತು ವಿಲಿಯಂ ಬೈಜಿಯೋಟ್ಸ್ (Wiliam Byziotes) (1912–1963) ಹೆಸರಿಸಬೇಕಾದವರು.

ಆದರೆ ಮತ್ತೆ ಕೆಲವರು ಅಮೂರ್ತ ಪಂಥದ ವಿಭಿನ್ನ ವಲಯಗಳಲ್ಲಿ ಕ್ರಿಯಾಶೀಲರಾಗಿದ್ದರು. ಇವರಲ್ಲಿ ಇಬ್ಬರು ಕಲಾವಿದರು ನೇತಾರರಾಗಿ ಸಂಯುಕ್ತ ರಾಷ್ಟ್ರದಲ್ಲಿ ಕಾರ್ಯ ನಿರ್ವಹಿಸಿದರು. ಡಚ್ ಮೂಲದ ವಿಲಿಯಂ ಡಿ ಕೂನಿಂಗ್ (Willem de Kooning) 1926 ರಿಂದ ಸಂಯುಕ್ತ ರಾಷ್ಟ್ರದಲ್ಲಿ ನೆಲಸಿದ್ದು ಸ್ತ್ರೀ ನ ಮಾಡುವ ಹೆಂಗಸರ ಚಿತ್ರಮಾಲಿಕೆಯಲ್ಲಿ ತೀವ್ರವಾದ ಅಭಿವ್ಯಕ್ತಿಯನ್ನು ನೀಡುತ್ತಾನೆ. ದಟ್ಟವಾದ ಬಣ್ಣದ ಮೂಲಕ ಅಮೂರ್ತ ಕಲೆಯನ್ನು ರೂಪಿಸುತ್ತಾನೆ ಅಥವಾ ತನ್ನ ಚಿತ್ರಗಳನ್ನು ವ್ಯಂಗ್ಯಪೂರ್ವಕವಾಗಿ ವಿಕೃತಗೊಳಿಸುತ್ತಾನೆ.

ಅರ್ಷಿಲ್ ಗಾರ್ಕಿ (Arshile Gorky) (1904–1948) ತೀವ್ರ ದುಃಖದ ಮನೋಧರ್ಮದಲ್ಲಿ ತನ್ನ ಕೃತಿಗಳನ್ನು ರಚಿಸಿದ್ದಾನೆ. ಇದಕ್ಕೆ ಕಾರಣ ಆತ ಹುಟ್ಟಿದ ಸ್ಥಳವಾದ ಟರ್ಕಿಷ್ ಅರ್‌ಮೇನಿಯದ ದುಃಖಕರ ಸನ್ನಿವೇಶಗಳೇ ಕಾರಣ. ಈತ ಮೊದಲು ರಷ್ಯಾಕ್ಕೆ ಅನಂತರ ಸಂಯುಕ್ತ ರಾಷ್ಟ್ರಗಳಿಗೆ ಹೋದನು. ಸ್ವಂತವಾಗಿ ಕಲಿತ ತಂತ್ರವನ್ನು ಅಭಿವೃದ್ಧಿಗೊಳಿಸಿದನು. ಸರಲೆಜರಿ ಮತ್ತು ಅಮೂರ್ತ ತತ್ತ್ವಗಳ ಪ್ರಯೋಗಗಳಿಗೆ ತೆರೆದ ಮನಸ್ಸಿನವನಾಗಿದ್ದನು. ಸತ್ಯದಿಂದ ತುಂಬ ದೂರವಾದ ವಲಯಕ್ಕೆ ಸೇರಿದ ಚಿತ್ರಗಳನ್ನು ರಚಿಸಿದನು. ಅವ್ಯಕ್ತ ಮಾನಸಿಕ ವಲಯಗಳಿಗೆ ಈತ ತುಡಿದಿದ್ದಾನೆ. ಇದು ಒಂದು ರೀತಿಯಲ್ಲಿ ವೈದೃಶ್ಯ ಸ್ವರೂಪವನ್ನು ಪಡೆದಿದ್ದು ಈಗ ಶಕ್ತಿಗಳ ಸಂಘರ್ಷದಲ್ಲಿ ಬಿಡುಗಡೆಯನ್ನು ಹೊಂದಿ ಪುರಾತನ ಸಾಂಕೇತಿಕ ಚಿತ್ರಗಳನ್ನು ಅನ್ವೇಷಿಸುವಂಥದ್ದು – ಅಮೂರ್ತವಾಗಿಯೂ ಹೆಚ್ಚಿನ ದಃಖವನ್ನು (Misery) ಹೊಂದಿರುವಂತಹದು.

ಅಮೇರಿಕದ ಚಲನ (ಗತಿ) ಶೀಲ ಚಿತ್ರ ರಚನೆಯಾಗಿದ್ದು ಇಂದಿನ ನವ್ಯಕಲೆಗಳಲ್ಲಿ ಸ್ವತಂತ್ರರಾಗಿ ಬಳಕೆಯಲ್ಲಿರುವಂತಹದು. ಇದನ್ನು ಅಮೂರ್ತ ಅಭಿವ್ಯಕ್ತಿಯ

ಬೇರೊಂದು ಪಂಥವೆನ್ನಬಹುದು. ಸಂಯುಕ್ತ ರಾಷ್ಟ್ರಗಳಿಂದ ಬಂದ ಅತ್ಯಮೋಘ ಕಾಣಿಕೆಗಳಲ್ಲಿ ಇದೂ ಒಂದು. ಇದು ಸಾಂಪ್ರದಾಯಿಕವಾಗಿ ಕಲಾವಿದ ಕ್ಯಾನ್‌ವಾಸ್ ಮುಂದು ಕುಳಿತಿರುವುದನ್ನು ತಿರಸ್ಕರಿಸುತ್ತದೆ. ವೈಯುಕ್ತಿಕ ವ್ಯಕ್ತಿತ್ವ (Image) ವನ್ನು ಅಮೂರ್ತವಾಗಿರಲಿ ಇಲ್ಲದಿರಲಿ ತನ್ನ ಮನಸ್ಸಿನಲ್ಲಿರುವುದನ್ನು ಚಿತ್ರಿಸುವಲ್ಲಿ ಸಹಕರಿಸುತ್ತದೆ. ಸಾಂಪ್ರದಾಯಿಕ ನೋಟಕರು ಯಾವ ಪ್ರತಿಕ್ರಿಯೆ ಇಲ್ಲದೆ ಮುಗಿದ ಚಿತ್ರದ ಮುಂದೆ ನಿಲ್ಲುವುದನ್ನು ತಿರಸ್ಕರಿಸುತ್ತದೆ.

ಚಲನಶೀಲ ಚಿತ್ರರಚನಾಕಲೆಯಲ್ಲಿ ಚಿತ್ರರಚನಾ ಕಲೆಯೇ ಅಂತರಂಗಿಕ ಸ್ಪಷ್ಟಾತ್ಮಕ ತುಡಿತದಿಂದ ಬರುವಂತಹದು. ಇದು ಮನಸ್ಸಿನ ಮೂರ್ತಿಗೆ ಒಂದು ಸ್ವರೂಪವನ್ನು ಕೊಡುವಷ್ಟಕ್ಕೇ ನಿಲ್ಲುವುದಿಲ್ಲ. ಸ್ಪಷ್ಟಾತ್ಮಕ ತುಡಿತವು ಭಾವನಾತ್ಮಕವಾದದ್ದು ಮತ್ತು ಅಜಾಗ್ರತ ಮನಸ್ಸಿಗೆ ಸಂಬಂಧಿಸಿದ್ದು ಮತ್ತು ಚಿತ್ರವನ್ನು ರಚಿಸುವ ಕ್ರಿಯೆಯಲ್ಲಿ ಮಾತ್ರ ಕೆಲಸಮಾಡುವಂತಹದು. ಅವ್ಯಕ್ತವಾದ ಫಲಿತಾಂಶವನ್ನು ಕೊಡುವಂತಹದು. ಇದರಲ್ಲಿ ವಸ್ತು ಸ್ವರೂಪ ಮತ್ತು ವ್ಯಕ್ತಿತ್ವಗಳಿಗೆ ಪ್ರಾಧಾನ್ಯತೆ ಇಲ್ಲ. ಇದು ಒಂದು ಕ್ರಿಯೆ, ಒಂದು ಭಂಗಿ ಅಥವಾ ಭಂಗ್ಯಾತ್ಮಕ ಕ್ರಿಯೆ ಇದೇ ಇಲ್ಲಿ ಮುಖ್ಯವಾದದ್ದು. ಇದು ಆಧ್ಯಾತ್ಮಿಕವಾಗಿ ಭಾಗವಹಿಸುವ ಸ್ಪಷ್ಟಾತ್ಮಕ ಕ್ರಿಯೆ.

ಜಾಕ್ಸನ್ ಪೊಲಾಕ್ : (1912-56) (Jackson Pollack)

ಕಾರ್ ಅಪಘಾತದಲ್ಲಿ ಅನಿರೀಕ್ಷಿತವಾಗಿ ಮರಣ ಹೊಂದಿದ ಈತ ಈ ಕಲಾ ಚಳವಳಿಯ ಮುಖ್ಯ ಹಾಗೂ ವಿಶಿಷ್ಟ ಪ್ರತಿನಿಧಿ. ಈತ ಚಿತ್ರರಚನೆಗೆ ಬಳಸುವ ಫಲಕ ಮತ್ತು ಸ್ಟ್ಯಾಂಡುಗಳನ್ನು ತಿರಸ್ಕರಿಸಿ ನೆಲದ ಮೇಲೆ ಕ್ಯಾನ್‌ವಾಸುಗಳನ್ನು ಹಾಸಿ ಚಿತ್ರ ಬರೆದನು. ಎಲ್ಲ ದಿಕ್ಕುಗಳಿಂದಲೂ ಬರುತ್ತ ಕೆಲವು ವೇಳೆ ಕ್ಯಾನ್‌ವಾಸಿನ ಮೇಲೆ ನಡೆದಾಡುತ್ತ ಬಣ್ಣವನ್ನು ಆಲಿಕೆಗಳ ಮೇಲೆ ಸುರಿಯುತ್ತ ಅದಿ ಅಂತ್ಯಗಳಿಲ್ಲದೆ ಈ ಕಲಾವಿದನು ಏನನ್ನು ಸೇರಿಸದೆ ಚಿತ್ರವನ್ನು ರಚಿಸಿದನು. ಇದು ತಂತ್ರದ ಪ್ರಶ್ನೆಯಲ್ಲ. ಪೊಲಾಕನ ಉದ್ದೇಶ ಎಂದರೆ ಚಿತ್ರರಚನೆಗೆ ಪ್ರವೇಶಿಸುವುದು. ಅದು ಒಂದು ಕ್ರಿಯೆಯ ವಲಯವಾದರೂ ಒಂದನ್ನು ಒಂದು ಆಕ್ರಮಿಸುವಂತೆ ಅವನೇ ಹೇಳುವಂತೆ ಚಿತ್ರರಚನೆಯ ಸಂದರ್ಭದಲ್ಲಿ ನಾನು ಏನು ಮಾಡುತ್ತಿದ್ದೇನೆ ಎನ್ನುವ ಅರಿವೇ ಇರುತ್ತಿರಲಿಲ್ಲ. 'ಕೆಲವು ಕಾಲಾನಂತರ ಪ್ರಜ್ಞೆ ಮೂಡಿದಾಗಲೇ ನಾನು ಮಾಡಿರುವುದನ್ನು ನಾನು ಕಾಣುತ್ತಿದ್ದೆ. ನಾನು ಏನು ಮಾಡಿದೆ ಎನ್ನುವುದರ ಬಗ್ಗೆ ಏನು ಬದಲಾವಣೆ ಮಾಡಬೇಕು ಎನ್ನುವುದರ ಬಗ್ಗೆ ಒಂದು ಸ್ವಲ್ಪವೂ ಚಿಂತಿಸುತ್ತಿರಲಿಲ್ಲ. ಏಕೆಂದರೆ ಆ ಚಿತ್ರದಲ್ಲಿ ಸಹಜವಾದ ಜೀವವಿರುತ್ತಿತು. ನಾನು ಅದು ಹೊರಬರಲು ಮಾತ್ರವೇ ಪ್ರಯತ್ನಿಸುತ್ತಿದ್ದೆ' ಎಂದಿದ್ದಾನೆ.

ಪೊಲಾಕನು ಕೇವಲ ಚಲನಶೀಲ ಚಿತ್ರಕಾರನಷ್ಟೇ ಅಲ್ಲ. ಮಾರ್ಕ್ ಟೋಬೆ (Mark Tobey) (1890) ತನ್ನ ಶೀಘ್ರವಾಗಿ ಬರೆಯುವ ಬಿಳೀ ಬರವಣಿಗೆಗೆ ಬಣ್ಣದ ಸುತ್ತು ಬಳಸಿನ ದಾರಿಯಂಥಹದನ್ನು ಸೃಷ್ಟಿಸುತ್ತಿದ್ದ. ಬ್ರಾಡ್ಲೆ ಟಾಮ್ಲಿನ್

(Bradley Tomlin) (1899-1933) ತನ್ನನ್ನು (ಸ್ಪೇರ್) ಬದಲಿ ಅಮೂರ್ತ ಗೆರೆಗಳ ಮೂಲಕ ಅಭಿವ್ಯಕ್ತಿಸುತ್ತಾನೆ.

ಸ್ಯಾಮ್ ಫ್ರಾನ್ಸಿಸ್ (Sam Francis) (ಜ. 1902)ನು ಅಸ್ಪಷ್ಟವಾದ ಬಣ್ಣಗಳ ಮೂಲಕ ಸ್ವರೂಪವಿಲ್ಲದ ಚಿತ್ರ ರಚನೆಗಳ ಸಮೀಪಕ್ಕೆ ಬರುತ್ತಾನೆ. ಈತನು ಓಡಾಡಿಕೊಂಡು ಬಣ್ಣವನ್ನು ಸುರಿಯುವುದರ ಮೂಲಕ ಗೊಂದಲಮಯ ಕೊಂಡಿಗಳನ್ನು ಸೃಷ್ಟಿಸುತ್ತಾನೆ. ಇದರಿಂದಾಗಿ ಬೇರೊಂದು ವಿಧವಾದ ಅಮೂರ್ತ ಚಳವಳಿಯೊಂದು ರೂಪುಗೊಂಡಿತು. ಪದ್ಧತಿಗಿಂತ ಹೆಚ್ಚಾಗಿ ವಸ್ತುಪ್ರಾಧಾನ್ಯತೆ ಕಂಡು ಬಂದು ವಸ್ತು ಅಮೂರ್ತ ಪಂಥ ರೂಢಿಗೆ ಬಂದಿತು. ಇದರಲ್ಲಿ ಹೊಸಬಣ್ಣ ಮತ್ತು ವಸ್ತುಗಳು ಬಳಸಲ್ಪಟ್ಟವು—ಏನಾಮೆಲ್ಲುಗಳು ಹೊಳಪು ಬಣ್ಣಗಳ ಅಕ್ರಾಲಿಕ್ ಬಣ್ಣಗಳು.

ಲೋಹದ ಪುಡಿ ಮತ್ತು ಮರಳನ್ನು ಕೂಡಿಸುವ ಮೂಲಕ ಚಿತ್ರದ ಅಭಿವ್ಯಕ್ತ ತೀವ್ರತೆಯನ್ನು ಹೆಚ್ಚಿಸಿದನು. ಆ ಚಿತ್ರಗಳು ಬಣ್ಣವನ್ನು ಮೇಲೆತ್ತುವುದಲ್ಲದೆ ದಟ್ಟವಾದ ಅನುಭವನ್ನು ಮನಸ್ಸಿಗೆ ತಂದು ಕೊಡುತ್ತಿದ್ದುವು.

ಸ್ಪೈನ್ ದೇಶದ ಕಲಾವಿದರು ಆಂಟೊನಿಯೋ ಟಿಪೀಸ್ (Antonio Tapies) (ಜ. 1925) ರಾಟೆಲ್ ಕೆನೆಗಾ (Ratael Canegar) (ಜ. 1934) ಈ ಬಗೆಯ ಹೊಸ ಪದ್ಧತಿಯನ್ನು ಪ್ರಯೋಗಿಸಿದರು. ಇಟಲಿಯ ಆಲ್ಬರ್ಟೊ ಬುರಿ (Alberto Burri (1915) ಈತ ವೈದ್ಯಕೀಯ ವಿದ್ಯಾರ್ಥಿಯಾಗಿದ್ದು ಸಂಯುಕ್ತ ರಾಷ್ಟ್ರದಲ್ಲಿನ ಯುದ್ಧದ ಕೈದಿಗಳನ್ನು ಚಿತ್ರಿಸಿದ. ಈತ ಸಾಂಪ್ರದಾಯಿಕ ರೀತಿಯ ಚಿತ್ರಕಲೆಯನ್ನು ತಿರಸ್ಕರಿಸಿದ ಅಥವಾ ಅಪರೂಪವಾಗಿ ಬಳಸಿದ. ಇವನು ದಿನಬಳಕೆಯ ಮತ್ತು ತಿರಸ್ಕರಿಸಲ್ಪಟ್ಟ ವಸ್ತುವನ್ನು ಬಳಸಿದ. ಹರಿದ ಕಾಲುಚೀಲ, ಅರೆಬೆಂದ ಮರದ ತುಂಡುಗಳು, ತುಕ್ಕು ಹಿಡಿದ ಲೋಹದ ಚೂರುಗಳು, ಹರಿದ ಪ್ಲಾನಲಿನ ಚೀಲಗಳು, ಈ ವಸ್ತುಗಳ ಮೂಲಕ ಆತ ಆಳಉಳ್ಳ ಸಮತೂಕದ ಸ್ಪಷ್ಟವಾದ ಚಿತ್ರಗಳನ್ನು ರಚಿಸಿದ. ಈ ಪದ್ಧತಿಯನ್ನು ಡ್ಯಾಡಿಸ್ಟ್ ಸ್ಪಿರಿಟ್‌ನಲ್ಲಿ ಈಗಾಗಲೇ ಬಳಸಿದ್ದ. ಆದರೆ ಬುರಿ (Burri) ಡಾಡಿಸ್ಟರ ನೇತಾತ್ಮಕತೆಯಿಂದ ಬಳಸಲಿಲ್ಲ. ಅತನಿಗೆ ಶ್ರೇಷ್ಠ ಹಾಗೂ ಘನವಾದ ಅಮೂರ್ತ ಕಲೆಯನ್ನು ಯಾವುದೇ ವಸ್ತುವಿನಿಂದ ಸೃಷ್ಟಿಸಬಹುದು' ಎನ್ನುವುದನ್ನು ತೋರಿಸುವುದಷ್ಟೇ ಆಗಿದ್ದಿತು. ಆತ ವಸ್ತುಗಳಿಗೆ ಕೊಟ್ಟಿರುವ ಪ್ರಾಮುಖ್ಯತೆಯನ್ನು ಗಮನಿಸಿದಾಗ ಜೀನ್ ಡುಬುಫೆಟ್ (Jean Dubuffect) (ಜ. 1901) ಒಗ್ಗೆಯೂ ಮಾತನಾಡಲು ಇದು ಸರಿಯಾದ ಸಂದರ್ಭ. ಈತನು ಅಸಿರೀಕ್ಷಿತ ಹಾಗೂ ಗೊಂದಲಸ್ಥಿತಿಯನ್ನು ಕೆಲವು ವೇಳೆ ಆಕ್ರಮಣ ಮಾಡಿ ಮತ್ತು ಒರಟಾದ ಅನುಭವವನ್ನು ಸೃಷ್ಟಿಸಲು ಪ್ರಯತ್ನಿಸಿದ್ದಾನೆ. ಈತ ಸಮಕಾಲೀನ ಕಲೆಯಲ್ಲಿ ತುಂಬ ಸ್ವಂತಿಕೆ ಹಾಗೂ ಯಾವುದೇ ಭಯವಿಲ್ಲದ ವ್ಯಕ್ತಿತ್ವವನ್ನು ಹೊಂದಿದ್ದನು. ಈತನ ಕೃತಿಗಳು ಸರ್‌ರಿಯಲಿಸಂ ಅಭಿವ್ಯಕ್ತ ಪಂಥ, 'ಡಡಇಸಂ' ದುಃಖಪಂಥ ಮತ್ತು ಅಮೂರ್ತ ಪಂಥಗಳನ್ನು ಆಲಿಂಗಿಸಿದ ಒಂದು ಸಂಯೋಜಿತ ಸಂಸ್ಕೃತಿಯನ್ನು ಸೂಚಿಸುತ್ತದೆ. ಕಲಾ

ವಿದನ ಬಳಸುಕೆಯ ಮೂಲಕ ಎಲ್ಲ ಹಿಂದಿನ ಪದ್ಧತಿಗಳನ್ನು ಮರೆಯುವಂತೆ ಮಾಡುತ್ತದೆ. ಅಲ್ಲದೆ ಚಿತ್ರಕಲೆಯ ಎಲ್ಲ ಸಾಧ್ಯತೆಗಳನ್ನೂ ಹೊಸ ಉತ್ಸಾಹದ ಮೂಲಕ ಪುನರ್ ಸೃಷ್ಟಿಸುವುದಾಗಿದೆ. ಮತ್ತು ಆಕೃತಿಯ ಪರಿಣಾಮವನ್ನು ಉಂಟು ಮಾಡುವುದೇ ಆಗಿದೆ. ಡುಬಹೆಟ್ಸ್ (Duba Het's) ಕಲೆ ಶುದ್ಧವಾದ ಆಕೃತಿ ಇಲ್ಲದ ವಸ್ತು ವಿರುದ್ಧವಾದ, ಒರಟಾದ, ಮತ್ತು ಹಳತಾದ ಪ್ರಾತಿನಿಧಿಕವಾದ ಪದ್ಧತಿಗಳಿಗೆ ಬದಲಿಗೆ ಬರುವಂತಹದು. ಇದರಲ್ಲಿ ವೈವಿಧ್ಯವಿದೆ. ಪಟ್ಟಣಗಳ ಗೋಡೆಗಳ ಮೇಲೆ ಬರೆದ ಹೊಲಸು ಚಿತ್ರಗಳು, ಮಕ್ಕಳು ರಚಿಸಿದ ಮಾದರಿಗಳು ಮತ್ತು ಚಾರಿತ್ರಿಕ ರೇಖಾ ಚಿತ್ರಗಳಿಂದ ಪ್ರೇರಿತವಾದ ವ್ಯಂಗ್ಯವಿದೆ. ಈ ಕಾರಣದಿಂದ ಡುಬಹೆಟ್ (Dubu ffet) ಪಂಥವನ್ನು ಸಮಕಾಲೀನ ಕಲಾವಿದರಿಂದ ಭಿನ್ನವಾಗಿ ಗುರುತಿಸುವುದು ಕಷ್ಟ ವಾಗುತ್ತದೆ.

ಚಿತ್ರಗಳು ಮತ್ತು ಅಮೂರ್ತತ್ವ ರೂಪ ಮತ್ತು ರೂಪ ಇಲ್ಲದಿರುವಿಕೆ ಅಸ್ಪಷ್ಟ ಮತ್ತು ಗೊಂದಲಮಯ ರಚನೆಗಳು ಮತ್ತು ಹಿಂಸಾತ್ಮಕ ವ್ಯಂಗ್ಯ ಇದೆಲ್ಲವೂ ಇಲ್ಲಿ ಕೂಡಿದ್ದು ಅವನ ಕೃತಿಯಲ್ಲಿ ಒಂದರಿಂದ ಒಂದಕ್ಕೆ ಬದಲಾಯಿಸಬಹುದಾದ ಸಂಗತಿ ಗಳಾಗಿದ್ದವು, ಅಮೂರ್ತ ಪಂಥದ ಮತ್ತೊಂದು ವಲಯವೆಂದರೆ ಸ್ಟೈನ್ ಎಂಬುದು.

ಸ್ಟೈನ್ ಪಂಥದಲ್ಲಿ ಮೂಲಗಳು ಯಾವುದೇ ಬುದ್ಧಿಯ ವಲಯಕ್ಕೆ ಮೀರಿದವು ಮತ್ತು ಭಾವನಾತ್ಮಕವಾದವು, ಯಾವುದೇ ವಿವರಣೆಗೆ ಒಳಪಡದಂತಹವು.

ವ್ಯಕ್ತಿತ್ವ ಮತ್ತು ಸ್ವರೂಪಕ್ಕೆ ಒದಲಿಸಾಗಿ ಇರುವಂತಹದು. ಅಮೂರ್ತ ಅಭಿ ವ್ಯಕ್ತಿಯ ಜೊತೆಯಲ್ಲಿ ಈ ಪಂಥಕ್ಕೆ ಇರುವ ಸಂಬಂಧವನ್ನು ಗುರುತಿಸಬಹುದು. ಈ ಪಂಥಕ್ಕೆ ರೂಪದ ಹಿತ ಚಿತ್ರಕಲೆಯೊಡನೆ ಸಂಬಂಧವಿದೆ. ಆದರೆ ಸ್ಟೈನಿಗೆ ಕೊಟ್ಟ ಪ್ರಾಧಾನ್ಯತೆಯೊಂದನ್ನು ಬಿಟ್ಟಿದೆ. ಆದುದರಿಂದ ನಿರ್ದಿಷ್ಟ ವಲಯ ಅಥವಾ ನಿರ್ದಿಷ್ಟ ಕಲಾವಿದನೊಡನೆ ಇದನ್ನು ಸೇರಿಸುವುದು ಕಷ್ಟವಾಗುತ್ತದೆ. ಸ್ಟೈನ್ ಮೂರ್ತತ್ವ ಸಂಯುಕ್ತ ರಾಷ್ಟ್ರಗಳಲ್ಲಿ ತುಂಬಾ ಯಶಸ್ವಿಯಾಗಿದೆ. ಏಕೆಂದರೆ ಅಂಶಿಕವಾಗಿ ಜಪಾನಿನ ಅಮೂರ್ತ ಕಲಾವಿದರ ಪ್ರಭಾವ ಅವನ ಮೇಲೆ ಬಿದ್ದುದರಿಂದ ಜಪಾನಿ ಕಲಾವಿದರು "ಗುಟ್ಟೆ" (Gutai) ಎನ್ನುವ ಗುಂಪನ್ನು ರಚಿಸಿಕೊಂಡರು. ಇಲ್ಲಿ ಇಸಾಮು ನೊಗಾಚಿ (Isamu Nogachi) (ಜ.1904) ಮತ್ತು ಚಿತ್ರ ಕಲಾವಿದ ಕೆನ್‌ಜೊ ಒಕಾಡಾ (Kenzo Okada) (ಜ.1902) ಮತ್ತು ಅಂಶಿಕವಾಗಿ ಜೆನ್ ಬೌದ್ಧರ Zen Buddhist) ಕಲಾಕೃತ ಅಭಿವ್ಯಕ್ತಿ ಸಿದ್ಧಾಂತ ಮೀರಿದ ಪರಿಣಾಮ ಇದು.

ನಮ್ಮ ಕಾಲದ ಸಾಂಸ್ಕೃತಿಕ ಪದ್ಧತಿಯನ್ನು ಪುನರ್‌ಸೃಷ್ಟಿಸಿ ಪ್ರತಿಫಲಿಸುವ ಈ ಪದ್ಧತಿ ನಮ್ಮ ಕಾಲದ ಆಸರೂಪದ ಸಂಗತಿಗಳಲ್ಲಿ ಒಂದಾಗಿದೆ.

ಫ್ರಾನ್ಜ್ ಕ್ಲೈನ್‌ನ (Franz Kline) (1910-1962) ಬೃಹತ್ ಮನೆ

ಗ್ರಾಮಗಳಲ್ಲಿ ಬರುವ ತೀವ್ರ ಕಪ್ಪು ಮತ್ತು ಬಿಳುಪಿನ ಚಿತ್ರಗಳಿಂದ ಇದನ್ನು ಗಮನಿಸ ಬಹುದು. ಅಮೇರಿಕದ ಪ್ರಮುಖ ಕಲಾವಿದರು ಈ ಪದ್ಧತಿಯನ್ನು ಬೆಳೆಸಿಕೊಂಡರು. 1945ರ ವರೆಗೆ ತ್ಯಾರಿನ್‌ನಲ್ಲಿ ನಿರಾಶ್ರಿತರಾಗಿದ್ದ ಹ್ಯಾನ್ಸ್ ಹರ್‌ಟಂಗ್ (Hans Hurtung) (ಜ.1904) ತನ್ನ ಕಲೆಗೆ ಈ ಬಗೆಯ ರೇಖಾ ಚಿತ್ರಗಳನ್ನು ಅವಲಂಬಿಸಿ ದ್ದಾನೆ. ತೊಳುಗಳನ್ನು ಏಕಾಕಿ ಅಥವಾ ಸಮೂಹ ಚಿತ್ರಗಳನ್ನು ನಿರ್ಮಿಸಿದ್ದಾನೆ. ಪೆರಿ ಸೋವೆಜಸ್ (Pierre Souages) (ಜ.1919) ಭಯಂಕರವಾದ ಅಥವಾ ಹಳದಿ ಬಣ್ಣಗಳ ಮೂಲಕ ಹೊಳೆಯುವ ಕಪ್ಪು ಸ್ಟೈನ್‌ಗಳ ಮೂಲಕ ಚಿತ್ರಿಸಿದ್ದಾನೆ.

ಹೆನ್ರಿ ಮಿಚ್ಕೆ (Henri Michqay) (ಜ.1890) ನ ಅಮೂರ್ತ ಬರ ವಣಿಗೆಗೆ ಕಪ್ಪು ಮತ್ತು ಬಿಳುಪಿನ ವರ್ಣಗಳನ್ನು ಬಳಸಿ ವಿಶೇಷವಾಗಿ ಕೆಲಸ ಮಾಡಿ ದ್ದಾನೆ. ಹೆಚ್ಚು ಪ್ರಾಮಾಣಿಕವಾಗಿ ಪೌರ್ವಾತ್ಯ ಲಕ್ಷಣ ಪಡೆದಿದೆ. ಇಟಲಿಯ ಸ್ಪೈನ ಗ್ಯಿಸ್ಸಾಪಿ ಗ್ಯಾಪೊಗ್ಯಾನಿ (Giusope Gapogroni) ಇವನಲ್ಲಿ (1910–1973) ಪುನರಾವರ್ತನೆಗಳು ಮತ್ತು ವೈವಿಧ್ಯಗಳಿವೆ. ಮೂರು ನಾಲಿಗೆ ಇರು ವಂಥ ಬಾಚಣಿಗೆ ಅಥವಾ ಫೋರ್ಕ್ ಇಂಥ ಲಕ್ಷಣವುಳ್ಳ ವಸ್ತುಗಳಿಂದ ಕೂಡಿದೆ. ಒಂಟಿಯಾಗಿ ಇಲ್ಲವೆ ಗುಂಪಿನಲ್ಲಿ ಸಂಬಂಧಿಸಿ ದಟ್ಟವಾದ ಕಪ್ಪುಬಣ್ಣದ ಹಿನ್ನೆಲೆಯಲ್ಲಿ ಚಿತ್ರ ರಚಿತವಾಗಿದೆ.

ಲೂಸಿಯೊ ಫಾಂಟನ (Lucio Fontana) (1899–1968) ಕಲೆ ತೆಗೆದುಕೊಂಡರೆ ಈತ ಶಿಲ್ಪಿ, ರೇಖಾಚಿತ್ರಕಾರ ಹಾಗೂ ವರ್ಣಚಿತ್ರಕಾರ. ಈತ ಅಮೂರ್ತ ಕಲಾ ಪ್ರಭಾವಕ್ಕೆ ಒಳಗಾಗಿದ್ದಾನೆ. ಈತನ ಏಕವರ್ಣಛಾಯೆಯ ಚಿತ್ರ ಗಳಲ್ಲಿ ಶುದ್ಧವಾದ ಕಾಗದದ ಕೊಯ್ತುಗಳಿಂದ ಅಥವಾ ಬರ್ಬರತೆಯಿಂದ ಅಲ್ಲಲ್ಲಿ ತುಂಬಾ ರಂಧ್ರಗಳನ್ನುಂಟುಮಾಡುವುದರಿಂದ ಆಳಗಳನ್ನು ತಂದುಕೊಟ್ಟಿದೆ. ಇದರಿಂದ ಎರಡು ಆಯಾಮಗಳಲ್ಲಿ ಚಿತ್ರಿಸುವುದನ್ನು ಇದು ಸಾಧ್ಯಮಾಡಿತು.

ಅಮೂರ್ತ ಕಲೆಯಲ್ಲಿ ಇತ್ತೀಚಿನ ಪ್ರವೃತ್ತಿಗಳು

ಅಮೂರ್ತತೆ ರೂಪರಹಿತ ಚಿತ್ರಕಲೆ. ಇದು ನಿಜವಾಗಿಯೂ ಆರ್ಟ್ ಆಟ್ರೆ, (Art Autre). ಇದನ್ನು ಹೀಗೆ ಕರೆಯಲು ಕಾರಣ ನಿಖರವಾದ ಅಥವಾ ನಿರ್ದಿಷ್ಟ ವಾದ ರೂಪನನ್ನು ತಳೆಯಲು ನಿರಾಕರಿಸುವುದು. ಎಲ್ಲವನ್ನು ಬ್ರಷ್‌ನ ಮೂಲಕ ಚಿತ್ರ ರಚಿತವಾಗುತ್ತದೆ. ಈ ಕಲೆ ಟಚ್ಚಿಸಂ (Tachisme) ಎಂದು ಹೆಸರಾಯಿತು. ಫ್ರೆಂಚ್‌ನಲ್ಲಿ ಇದಕ್ಕೆ ಚಿಕ್ಕ ಅಥವಾ ಗುರುತು ಹಚ್ಚು ಎಂದು ಅರ್ಥ. ಇದು ವಿಶಾಲ ವ್ಯಾಪ್ತಿಯಲ್ಲಿ ಹರಡಿದ್ದರೂ ಒಂದು ಬಗೆಯಲ್ಲಿ ಅಸ್ಪಷ್ಟ ಚಳವಳಿಯಾಗಿದೆ.

ಈ ಕಲಾ ಪ್ರಕಾರವನ್ನು ಅಭಿವೃದ್ಧಿಪಡಿಸಿದವರಲ್ಲಿ ಜೀನ್ ಪೌಟ್ರಿರ್ (Jean Fautrier) (ಜ.1896) ಉತ್ತಮ ದೃಷ್ಟಾಂತವಾಗಿದ್ದಾನೆ. ಅವನು ಕೆಲವೇ

ಬಳಿತಪೊಂದಿಗೆ ಚಿತ್ರಗಳನ್ನು ನಿರ್ಮಿಸುತ್ತಿದ್ದ. ಇನ್ನೊಬ್ಬ ಕಲಾವಿದ ಅಮೆರಿಕದ ಮಾರ್ಕ್ ರೋಥ್‌ಗೊ (Mark Rothko) (1903-1970). ಅವನು ಅನೇಕ ವಿರುದ್ಧ ಬಣ್ಣಗಳ ಮೂಲಕ ಪರಿಣಾಮವನ್ನು ತಂದ.

ಈ ಚಳವಳಿಯಲ್ಲಿ ಕೆಲವೇ ಕಲಾವಿದರು ಹೆಸರು ಮಾಡಿರುವುದನ್ನು ಕಾಣಬಹುದು. ಅವರೆಂದರೆ ಜೀನ್ ಪಾಲ್ರಿಯೋಪೆಲ್ಲೊ (Jean Paalriopello) (ಜ. 1923) ಮತ್ತು ಫಿಲಿಪ್ ಗುಸ್ಟನ್ (Phillp Gustan) (ಜ. 1912). ಇವರಲ್ಲಿ ಮೊದಲಿನವನು ಅಲೆಗಳಂತಹ ಚಿತ್ರಗಳನ್ನು ರಚಿಸಿದ. ಅವುಗಳಲ್ಲಿ ಅಸಮವರ್ಣ ಪುಂಜಗಳಿರುತ್ತವೆ. ಎರಡನೆಯವನು ಇದರ ವಿರುದ್ಧ ಪ್ರಭಾವದ ಗುರುತುಗಳಿಂದ ಮತ್ತು ಬಣ್ಣದಗುಳ್ಳೆ ಅಥವಾ ಚುಕ್ಕಿ (Blobs) ಗಳಿಂದ ಅವನ ಚಿತ್ರಗಳಲ್ಲಿ ಅಪೇಕ್ಷಿತ ಭಾವ ತಂದ.

ಆಂಗ್ಲ ಸ್ಟೇನ್ಲಿ ಹೇಟರ್ (Stanley Hayter) (ಜ. 1901) ನು ತಿರುಚಿದ ಬಣ್ಣಗಳಿಂದ ಸಂಕೀರ್ಣತೆ ಸೃಷ್ಟಿಸಿದ. ಫ್ರೆಂಚ್‌ನವನಾದ ಕಾಮಿಲ್ಲೆ ಬ್ರೆಯೆನ್ (Camille Bryen) (ಜ. 1907) ಸಮಗ್ರವಾಗಿ ತೋರುವಂತೆ ಗಹನವಾದ ರಚನೆಗಳನ್ನು ವಿಸ್ತರಿಸಿದ್ದಾನೆ. ಈ ಚಳವಳಿಯನ್ನು ಹೀಗೆ ವಿವರಿಸುತ್ತಾನೆ. ಚಿತ್ರಕಲೆ ತನ್ನ ವಾಸ್ತವತೆ ಹೊಂದಿರುವುದು. ಕೇವಲ ಒಬ್ಬ ಚಿತ್ರಿಸುತ್ತಾನೆ ಎನ್ನುವ ಕಾರಣದಿಂದ ಅದು ಯೋಚಿಸುವುದಿಲ್ಲ, ಅಥವಾ ನುಡಿಯುವುದಿಲ್ಲ ಅಥವಾ ಏನನ್ನು ಹೇಳುವುದಿಲ್ಲ.

ಅಮೂರ್ತ ಶಿಲ್ಪಕಲೆ :

ಶಿಲ್ಪದಲ್ಲಿ ಸಹಜ ಮೂರ್ತಿ ಕೆತ್ತನೆಗೆ ಪ್ರತಿಯಾಗಿ ಅನೇಕ ಅಮೂರ್ತ ಚಳವಳಿಗಳು ಅಸ್ತಿತ್ವಕ್ಕೆ ಬಂದಿವೆ. ನೌಮ್ ಗ್ಯಾಬೊ (Naum Gabo) ಮತ್ತು (Anto Persner) ಅಂಟೊ ಪೆರ್‌ಸ್ನ ಸಹೋದರರು 1920 ರ ದಶಕದಲ್ಲಿ ರಷ್ಯಾದ ಯಂತ್ರ ಶಿಲ್ಪದ ಮೂಲಕ ಪ್ರಕಟಣೆಯ ಪಂಥದಿಂದ ಕನ್‌ಸ್ಟ್ರಕ್‌ನಿಜಂಮ್‌ ಪ್ರಭಾವಿತರಾಗಿ ಪಾರದರ್ಶಕ ವಸ್ತುಗಳು ಅಥವಾ ತಂತಿಯಿಂದ ನೈವಿಧ್ಯಪೂರ್ಣ ಆಕೃತಿಗಳನ್ನು ನಿರ್ಮಿಸಿದರು. ಹಾಗೆಯೇ ರೋಟರ್‌ಡಾಂ ಡಿಪಾರ್ಟ್‌ಮೆಂಟ್ ಸ್ಟೋರ್ ಎದುರಿಗೆ ಇರುವ ಗಾಬೋನನ ಶಿಲ್ಪದಂತ ಸ್ಮಾರಕವಾದ ಲೋಹದ ಆಕೃತಿಗಳನ್ನು ರಚಿಸಿದನು. ಗ್ಯಾಬೋ ಹೇಳುವಂತೆ — 'ಮೈಕೆಲ್ ಏಂಜಿಲೋನ ಪ್ರತಿಮೆಗಳಲ್ಲಿ ದೇಹ ರಚನಾಶಾಸ್ತ್ರವಿರುವಂತೆಯೇ ನನ್ನ ಕೃತಿಗಳಲ್ಲೂ ಕರಾರುವಾಕ್ಕು ಆಳತೆಯ ಶಾಸ್ತ್ರವಿದೆ' ಎನ್ನುತ್ತಾನೆ.

ಲೋಹದ ಆಕೃತಿರಚನೆಯಲ್ಲಿ ಸ್ಪೈನ್‌ದೇಶದ ಮಾಕ್ಸ್ ಬಿಲ್ (ಜ. 1908) ತನ್ನ ಶಿಲ್ಪರಚನೆಯಲ್ಲಿ ಆಳತೆಯಲ್ಲಿ ವಿಭಜಿಸಿಕೊಂಡ ಮತ್ತು ಹೊಳೆಯುವ ತಂತಿಗಳನ್ನು

ಬಳಸಿ ಬಗೆಯ ರೂಪದಲ್ಲಿ ತೂಗುಬಿಟ್ಟು ರಚಿಸಿದ. ಅಮೆರಿಕಾ ರಿಚರ್ಡ್ ಲಿಪ್‌ಸಿಡ್ Richard Lippsid) (ಜ.1915) ಮತ್ತು ಇಟಲಿಯ ಬರ್ಟೋ ಲಾರ್ಡೆರಸ್ (Berto Lardera's) (ಜ 1911)ನು ಲಂಬಾಕಾರದ ಲೋಹ ಸರಳುಗಳು ಮತ್ತು ಅಸಮಾನಾಂತರ ತಗಡುಗಳಿಗೆ ಬದಲಾಗಿ ಉಕ್ಕಿನ ಕೊಂಡಿಯಿಂದ ನಿರ್ಮಿಸತೊಡಗಿದ. ಅಮೆರಿಕದ ಅಲೆಕ್ಸಾಂಡರ್ ಕೆಲ್ಡರ್ (Alexander Celder) (ಜ.1899) ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತೂಗುಹಾಕುವ ಮಾದರಿಗಳನ್ನು ತಂದನು. ಈ ಲೋಹದ ಎಲೆಗಳು ಗಾಳಿಬೀಸುವಾಗಲೂ ತೂಗಾಡುವಷ್ಟು ಹಗುರವಾಗಿದ್ದವು. ಮುಂದೆ ಸ್ವಿಡ್ಜರ್‌ಲೆಂಡಿನಲ್ಲಿ ಹಂಗೇರಿಯದ ಜೊಲ್ಟನ್ ಕೆಮೆನಿ (Zolton Kemeny) (1907-1966) ಎಂಬುವನು ಬಹು ಸಂಕೀರ್ಣ ಅಮೂರ್ತ ಕೃತಿಗಳನ್ನು ರಚಿಸುತ್ತಾನೆ. ಇವನು ಲೋಹದ ಮೊಳೆ, ಸ್ಕ್ರೂಗಳು ಮತ್ತು ಪೈಪುಗಳ ಮೂಲಕ ಕೈಗಾರಿಕಾ ಉತ್ಪನ್ನಗಳಿಂದ ಶಿಲ್ಪಗಳನ್ನು ಪುನರ್ರಚಿಸಿದ. ಜರ್ಮನಿಯ ಹಾನ್ಸ್ ಉಲ್‌ಮನ್ (Hans Ulmann) (ಜ.1925) ನು ತುಕ್ಕು ಹಿಡಿದ ಉಕ್ಕಿನ ಕೊಳವೆಗಳಿಂದ ವಿಕೃತರೂಪಗಳನ್ನು ರಚಿಸಿದನು.

ಪ್ರತಿಯೊಂದು ದೇಶದಿಂದಲೂ ಇತರ ಶಿಲ್ಪಿಗಳು ಮುರಿದ (Broken) ಚಪ್ಪಟೆ ಅಲ್ಲದ (Uneven) ಮತ್ತು ಉದ್ವೇಗಗೊಳಿಸುವ ರೂಪಗಳನ್ನು ಸಹ ರಚಿಸಿದರು. ಇದರ ಮೂಲ ಅಭಿವ್ಯಕ್ತಿನಾ ಪ್ರಕಾರ ಇವರ ಕೃತಿಗಳು ರೂಪರಹಿತ ಚಿತ್ರಕಲಾ ಪಂಥದೊಂದಿಗೆ ನಿಕಟ ಸಂಬಂಧ ಹೊಂದಿವೆ.

ಶಿಲ್ಪಿಗಳು ಉಳಿಯ ಬದಲು ಹೆಚ್ಚು ಹೆಚ್ಚಾಗಿ ಬೆಸಗೆಯ ವಿಧಾನವನ್ನು ಅಳವಡಿಸಿಕೊಂಡರು. ಉದಾಹರಣೆಗೆ ಫ್ರಾನ್ಸ್ ದೇಶದ ಸೆಸಿರ್ ಬಾಲ್ಡ್‌ವಿನ್ ಅವನು ಗೀರಿದ ಕಬ್ಬಿಣದ ಸಂಯುಕ್ತಗಳಿಂದ ವಿವಿಧ ಕೂಡಿಕೆಗಳನ್ನು ಪ್ರಯೋಗಾತ್ಮಕವಾಗಿ ಮಾಡಿದನು. ಅವನ ಶಿಲ್ಪಾಕೃತಿಗಳಲ್ಲಿ ಹಳೆಯದಾದ ಮತ್ತು ಜಜ್ಜಿಹೋದ ಕಾರಿನ ಚೌಕಟ್ಟುಗಳಿಂದ ಬಹುವರ್ಣಿತ ಘನಾಕೃತಿಗಳನ್ನು ನಿರ್ಮಿಸಿದನು. ಮುಂದೆ ಮೂಲಭೂತವಾದ ಮತ್ತು ಸರಳ ರೇಖಾಗಣಿತ ರೂಪಗಳನ್ನು ಶಿಲ್ಪದಲ್ಲಿ ಅಳವಡಿಸಲಾಯಿತು. ಫ್ರಾನ್ಸಿನ ಹೆನ್ರಿಜಾರ್ಜ್ ಆಡಂ (Hanri Georges Adom) (1907-1967) ಮತ್ತು ಎಮಿಲಿಯೊ ಗಿಲಿಯೋಲಿ (Emilio Gilioli) (ಜ.1911) ನಿರ್ದಿಷ್ಟವಾಗಿ ಸಾಂಪ್ರದಾಯಿಕವಾದ ಮತ್ತು ಸ್ವಾಭಾವಿಕ ಆಕೃತಿಯ ಮಾದರಿಗಳನ್ನು ರಚಿಸಿದನು. ಅದು ಸ್ವಾಭಾವಿಕವೆನ್ನುವಂತೆ ರೂಪಗಳು ಅಮೂರ್ತವಾಗಿ ಮತ್ತು ರೂಪರಹಿತವಾಗಿದ್ದಿತು.

ಅನೇಕ ಇತರ ಶಿಲ್ಪಿಗಳು ಅದರಲ್ಲಿ ಇಟಲಿಯ ಮಿರೊ ಬಸಾಲ್‌ಡೆಲ್ಲಾ (Miro Basaldella) (ಜ.1910) ಅಸ್ಪಷ್ಟ ಸಾಂಕೇತಿಕ ಪ್ರಕಾರವನ್ನು ಆಯ್ದುಕೊಂಡರು. ಅದು ಆಧುನಿಕ ಪ್ರಪಂಚಕ್ಕೆ " ಲಾಂಛನವಾಗಿ ಪರಿಣಮಿಸಿದಂತಿದೆ.

ಈ ಎಲ್ಲ ಅಮೂರ್ತ ಕಲಾವಿದರು ಶಿಲ್ಪಿಗಳು ತಮ್ಮದೇ ಆದ ಶೈಲಿ ತಂತ್ರಗಳಲ್ಲಿ ಕೃತಿಗಳನ್ನು ರಚಿಸಿ ಜಗತ್ತಿಗೆ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ.

ಅಮೂರ್ತ ಕಲೆಯನ್ನು ಅರ್ಥಮಾಡಿಕೊಳ್ಳಲು ಕೊಂಚ ಪರಿಶ್ರಮ ಬೇಕಾಗುತ್ತದೆ. ಬರೀ ತ್ರಿಕೋಣಗಳನ್ನು ಬಣ್ಣದ ಗೆರೆ–ಚುಕ್ಕೆಗಳ ಸಮೂಹವನ್ನು ಗಮನಿಸಿದಾಗ ಇದು ಯಾವುದರ ಚಿತ್ರ ಎನ್ನುವುದೇ ತಿಳಿಯದಿರುವುದುಂಟು. ಅಮೂರ್ತ ಕಲಾಕೃತಿಯೊಂದನ್ನು ಗಮನಿಸಿದಾಗ ಉಂಟಾಗುವ ಒಳನೋಟ ಹಾಗೂ ಸಂವೇದನೆ ಆ ಕೃತಿಯನ್ನು ಅರ್ಥಮಾಡಿಕೊಳ್ಳಲು ಸಹಾಯಮಾಡುತ್ತದೆ. ಇದು ಅಮೂರ್ತಕಲೆಯ ವೈಶಿಷ್ಟ್ಯ, ವೈಖರಿ.

ಗ್ರಂಥಋಣ

1 'Art Now' by Herbert Read
2 'Modern Art' by William Gaunt
3 History of World Art

ನಗುವನಹಳ್ಳಿ ಪಿ. ರತ್ನ

ವಿವೇಕಾನಂದರ ಜೀವನ ಮತ್ತು ಸಂದೇಶ

ದತ್ತವಂಶದ ವಿಶ್ವನಾಥ ಮತ್ತು ಭುವನೇಶ್ವರಿಯವರ ಏಕೈಕ ಪುತ್ರ ನರೇಂದ್ರ [ವಿವೇಕಾನಂದರು.] ಭುವನೇಶ್ವರಿ ದೇವಿ ಕಾಶಿ ವಿಶ್ವನಾಥನಿಗೆ ಹರಕೆ ಹೊತ್ತ ಕೆಲವು ದಿನಗಳಲ್ಲಿ ಆಕೆಯ ಇಷ್ಟಾರ್ಥ ನೆರವೇರಿತು. ಒಂದು ದಿನ ಸ್ವಪ್ನದಲ್ಲಿ ಕಾಶಿ ವಿಶ್ವನಾಥನು ಮಗುವಿನ ರೂಪ ತಾಳಿ ಈಕೆಯ ಮಗುವಾಗಿ ಹುಟ್ಟುವಂತೆ ಕನಸು ಕಂಡಳು. ಅದರಂತೆ ಅವಳ ಇಷ್ಟಾರ್ಥ ಸಿದ್ಧಿಸಿತು. ಕ್ರಿ. ಶ. 1863ನೆಯ ಸಂವತ್ಸರದ ಜನವರಿ ತಿಂಗಳು 12ನೇ ತೇದಿ ಕರ್ಬುಟಿಕಾವೃತ ಹಿಮ ಮಲಿನ ದೃಶ್ಯ ಸಂಕ್ರಾಂತಿಯ ಪುಣ್ಯಪ್ರಭಾತ ದಲ್ಲಿ ಕಲ್ಕತ್ತಾ ಮಹಾನಗರದಲ್ಲಿ ಆ ಮಂಗಳ ಸಮಯದಲ್ಲಿ 6 ಘಂಟೆ ಮುವತ್ತು ಮೂರು ನಿಮಿಷ, ಮುವತ್ತು ಮೂರು ಸೆಕೆಂಡುಗಳಿಗೆ ಸರಿಯಾಗಿ ಕೃಷ್ಣಪಕ್ಷದ ಸಪ್ತಮಿಯ ಪುಣ್ಯ ಮಹೂರ್ತದಲ್ಲಿ ಭುವನೇಶ್ವರಿದೇವಿ ವಿಶ್ವವಿಜಯಿಯಾಗಲಿರುವ ಮಗನೊಬ್ಬನನ್ನು ಹೆತ್ತಳು.

ತುಂಬಿದ ಮುಖ, ಮುದ್ದಾದ ಗುಂಗುರು ಕೂದಲು, ತೇಜಸ್ಸು ತುಂಬಿದ ದೊಡ್ಡ ಕಣ್ಣುಗಳು, ಲವಲವಿಕೆಯೇ ಮೂರ್ತಿವೆತ್ತಂತಿತ್ತು ಮಗು. ವೀರೇಶ್ವರನ ಹರಕೆಯಿಂದ ಲಭಿಸಿದ ಶಿಶುವಿಗೆ, " ವೀರೇಶ್ವರ " ನೆಂದೇ ನಾಮಕರಣ ಮಾಡಿದರು. " ನರೇಂದ್ರ " ನೆಂದು ಬದಲಾಯಿತು.

ವಿಶ್ವನಾಥರು ವಕೀಲರಾಗಿ ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಬೈಬಲ್ ಮತ್ತು ಪರ್ಷಿಯಾದ ಮಹಾಕವಿ ಹಾಫೀಜನ ಕವಿತೆಗಳನ್ನೋದುವುದು ಎಂದರೆ ಅವರಿಗೆ ತುಂಬಾ ಆಸೆ. ಮಧುರವಾದ ಕಂಠ ಇದ್ದುದರಿಂದ ಸಂಗೀತದಲ್ಲೂ ಪ್ರಾವೀಣ್ಯತೆ ಇತ್ತು. ವಿಶ್ವನಾಥರು ದಾನ ಮಾಡುವುದರಲ್ಲಿ ಎತ್ತಿದ ಕೈ ಆಗಿದ್ದರು. ಭುವ ನೇಶ್ವರಿ ದೇವಿಯು ಮನೆಯ ಕೆಲಸಗಳಲ್ಲಿ ಆಸಕ್ತಿವುಳ್ಳವರಾಗಿದ್ದರು. " ಮನೆಯೇ ವ್ಯವ ಸ್ಥೆಯ ಸೊಬಗು " ಎನ್ನುವುದನ್ನರಿತಿದ್ದರು. ರಾಮಾಯಣ, ಮಹಾಭಾರತದಲ್ಲಿ ಹೆಚ್ಚಿನ ಪರಿಶ್ರಮವನ್ನು ಪಡೆದಿದ್ದರು.

ಎಲ್ಲರ ಕಷ್ಟವೂ ತನ್ನದೆಂದುಕೊಂಡು ಹಗಲಿರುಳೂ ದೀನದಲಿತರ ಸೇವೆಯಲ್ಲಿ ನಿರತಳಾಗಿರುತ್ತಿದ್ದರು. ನರೇಂದ್ರನ ತಾತ ದುರ್ಗಾಚರಣನು ಬುದ್ಧದೇವನಂತೆ ತನ್ನ

ಕುಮಾರನ ಜನನವನ್ನು ಕಂಡು ಸಂಸಾರ ತ್ಯಾಗಮಾಡಿ ಸನ್ಯಾಸವನ್ನು ಸ್ವೀಕರಿಸಿಬಿಟ್ಟ. ವೈರಾಗ್ಯಶೀಲನಾದ ಇಂತಹ ತಾತ, ಸುಸಂಸ್ಕೃತನಾದ ತಂದೆ, ಪರಮ ಸಾಧ್ವಿಯಾದ ತಾಯಿ, ಇವರ ಪ್ರೇಮ ತ್ಯಾಗಗಳ ಇಸಿಪರ್ಣ್ಣೀ ನರೇಂದ್ರ.

ಅಕ್ಕಂದಿರಿಬ್ಬರನ್ನು ಪೀಡಿಸುವುದೆಂದರೆ ನರೇಂದ್ರನಿಗೆ ಬೆಲ್ಲ ತಿಂದಂತೆ; ಹಿಂದಿನಿಂದ ಬಂದು ಅವರಿಬ್ಬರಿಗೂ ಒಂದೊಂದು ಗುದ್ದು ಕೊಟ್ಟು ಓಡಿಬಿಡುವನು. ಅವರು ಅಟ್ಟಿಸಿಕೊಂಡು ಬಂದರೆ ಓಡಿಹೋಗಿ ಮೋರಿಯಲ್ಲಿ ಅಡಗಿಕೊಳ್ಳುವುದು, ಅವರು ಅಲ್ಲಿಗೆ ಬರಲಾಗದೆ ನಿಂತಾಗ ಅವರನ್ನು ಅಣಕಿಸಿ ಕೆರಳಿಸುವುದು.

ನರೇಂದ್ರನಿಗೆ ಮೂಕ ಪ್ರಾಣಿಗಳೆಂದರೆ ಪ್ರಾಣ, ಅನೇಕ ಹಕ್ಕಿಪಕ್ಷಿಗಳನ್ನು ಅವನು ಆದರದಿಂದ ಸಾಕಿದ್ದ. ಮೇಕೆ, ನವಿಲು, ಪಾರಿವಾಳ, ಬಿಳಿ ಇಲಿಗಳು ಅವನ ಪರಿವಾರಕ್ಕೆ ತುಂಬಾ ಪ್ರೀತಿ. ನರೇಂದ್ರ ಚಿಕ್ಕ ಮಗುವಾಗಿದ್ದಾಗ, ಚಂಡಿ ಹಿಡಿದು ಅಳುವುದಕ್ಕಾರಂಭಿಸಿದರೆ, ತಾಯಿ ಭುವನೇಶ್ವರಿ ಅವನ ತಲೆಯ ಮೇಲೆ ನೀರು ಚುಮುಕಿಸಿ ಶಿವ ಮಂತ್ರವನ್ನು ಕಿವಿಯಲ್ಲಿ ಹೇಳುತ್ತಿದ್ದಳು. ಮಗು ಸುಮ್ಮನಾಗಿ ನಕ್ಕು ಆಟವಾಡುತ್ತಿತ್ತು. ಮಗನ ತುಂಟತನ ಜಾಸ್ತಿ ಆದಾಗ ಭುವನೇಶ್ವರಿದೇವಿ “ಮಗನನ್ನು ಕೊಡು ಎಂದು ನಾನು ಬೇಡಿದರೆ ಶಿವನು ಮಗನನ್ನು ಕೊಟ್ಟಿದ್ದಾನೆ. ತಾನೇ ಮಗನಾಗಿ ಬರುವ ಬದಲು ತನ್ನ ಗಣದಲ್ಲಿದ್ದ ಯಾವುದೋ ಒಂದು ತುಂಟಲಮಾರಿ ಭೂತವನ್ನು ಕಳುಹಿಸಿಬಿಟ್ಟಿದ್ದಾನೆ” ಎನ್ನುವಳು. ಮಗುವು ಯಾವುದಕ್ಕೂ ಹೆದರದೆ ಇದ್ದರೂ ಒಂದು ವಿಷಯದಲ್ಲಿ ಮಾತ್ರ ಅವನಿಗೆ ತುಂಬ ಭೀತಿಯಿರುವುದನ್ನು ಆಕೆ ಕಂಡು ಹಿಡಿದಿದ್ದಳು. ನರೇಂದ್ರನು ಬಹಳ ತಂಟೆ ಮಾಡಿದರೆ “ನೋಡು, ಬಿಲೇ [ತಾಯಿ ಮಗನನ್ನು ಕರೆಯುತಿದ್ದ ಮುದ್ದಿನ ಹೆಸರು] ನೀನು ಹೀಗೆಲ್ಲಾ ತಂಟೆ ಮಾಡಿದರೆ ಶಿವನು ನಿನ್ನನ್ನು ಕೈಲಾಸ ಪರ್ವತಕ್ಕೆ ಸೇರಿಸುವುದೇ ಇಲ್ಲ” ಎಂದು ಹೇಳುತ್ತಿದ್ದಳು. ಆದನ್ನು ಕೇಳಿ ಬಾಲಕನು ನಿಸ್ನು ದೃಷ್ಟಿಯಿಂದ ಮಾತೆಯ ಮುಖವನ್ನು ನೋಡುತ್ತಾ ಸುಮ್ಮನಾಗಿ ಬಿಡುತ್ತಿದ್ದನು.

ನರೇಂದ್ರನಿಗೆ ಚಿಕ್ಕಂದಿನಲ್ಲಿ ಸಾಧು ಸನ್ಯಾಸಿಗಳೆಂದರೆ ತುಂಬಾ ಪ್ರೀತಿ. ಮನೆಯಲ್ಲಿ ಇರುವುದನೆಲ್ಲಾ ಕೊಟ್ಟು ಬಿಡುತ್ತಿದ್ದನು. ದಾರಿಯಲ್ಲಿ ಒಬ್ಬ ಸಾಧು ಬರುತ್ತಿದ್ದುದನ್ನು ಕಂಡರೆ ಮನೆಯವರು ಅವನನ್ನು ಒಂದು ಕೋಣೆಗೆ ತುಂಬಿ ಬೀಗ ಹಾಕುತ್ತಿದ್ದರು. ಆದರೂ ನರೇಂದ್ರ ಕಿಟಕಿಯಿಂದಲೇ ತಾನುಟ್ಟ ಬಟ್ಟೆ ಮೊದಲುಗೊಂಡು ಕೋಣೆಯಲ್ಲಿದ್ದುದನ್ನೆಲ್ಲಾ ಸಾಧುವಿಗೆ ಹೊರಚೆಲ್ಲುತ್ತಿದ್ದನು.

ತಾಯಿ ಮಗನನ್ನು ತೊಡೆಯ ಮೇಲೆ ಕೂರಿಸಿಕೊಂಡು “ನರೇಂದ್ರ, ನರೇನ್, ನೀನು ದೊಡ್ಡವನಾದ ಮೇಲೆ ಏನಾಗಬೇಕೆಂದು ಮನಸ್ಸು ಮಾಡಿಕೊಂಡಿದ್ದಿಯೋ ? ಎಂದು ಕೇಳಿದರೆ, ನರೇಂದ್ರನು ತಾಯಿ ಮುಖವನ್ನು ನೋಡುತ್ತಾ “ಅಮ್ಮ, ಜೋಡು ಕುದುರೆ ಗಾಡಿ ಹೊಡೆಯುವ ಕೋಚ್‌ಮ್ಯಾನ್ ಆಗಬೇಕೆಂದು ಮಾಡಿಕೊಂಡಿದ್ದೇನೆ” ಎಂದು ಅಮ್ಮನನ್ನು ನಗಿಸುತ್ತಿದ್ದನು.

ಕಲ್ಕತ್ತಾದ ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಅವರ "ಮೆಟ್ರೋಪಾಲಿಟನ್ ಇನ್‌ಸ್ಟಿಟ್ಯೂಟಿಗೆ" ನರೇಂದ್ರ ಏಳನೆಯ ವಯಸ್ಸಿನಲ್ಲಿ ಸೇರಿದ್ದರು. ಶಾಲೆಯಲ್ಲಿ ಉಪಾಧ್ಯಾಯರು ಚೇಷ್ಟೆ ಮಾಡುತ್ತಿದ್ದ ಹುಡುಗನಿಗೆ ಮನಸಾರ ದಂಡಿಸಿದರು. ನರೇಂದ್ರ ಆ ಯಾತನೆಯನ್ನು ಅನುಭವಿಸಲಾರದೇ ನಗಲಾರಂಭಿಸಿದ, ಉಪಾಧ್ಯಾಯರ ಕೋಪ ಇವನ ಮೇಲೆ ತಿರುಗಿತು. ನರೇಂದ್ರನನ್ನು ಅತಿಯಾಗಿ ದಂಡಿಸಿ, ಕಿವಿಯಲ್ಲಿ ರಕ್ತ ಸುರಿವಷ್ಟು ಹಿಂಡಿದರು. ಆ ಸಮಯದಲ್ಲಿ ಬಂದಿದ್ದ ವಿದ್ಯಾಸಾಗರರು ನರೇಂದ್ರನನ್ನು ಉಪಚರಿಸಿ, ಉಪಾಧ್ಯಾಯರನ್ನು ದಂಡಿಸಿದರು. ನರೇಂದ್ರನಿಗಾದ ದಂಡನೆಯನ್ನು ಗಮನಿಸಿ ಮನೆಯವರು ಕೋಪಗೊಂಡು, ಆ ಶಾಲೆ ಬೇಡ, ಬಿಟ್ಟು ಬಿಡು" ಎಂದರು. ಆದರೆ ನರೇಂದ್ರ ಹಿಂದೆ ಆದುದನ್ನು ಮರೆತು ಎಂದಿನಂತೆ ಬರತೊಡಗಿದನು. ಏಳನೆಯ ವಯಸ್ಸಿನಲ್ಲಿ "ಮುಗ್ಧ ಬೋಧೆ" ಎಂಬ ವ್ಯಾಕರಣ ಗ್ರಂಥ ಇವನಿಗೆ ಕಂಠಪಾಠವಾಗಿತ್ತು. ರಾಮಾಯಣ, ಮಹಾಭಾರತ ಕಥೆಗಳನ್ನು ಚಾಚು ತಪ್ಪದೆ ಹೇಳುತ್ತಿದ್ದನು. ಪುಸ್ತಕಗಳನ್ನು, ವೃತ್ತ ಪತ್ರಿಕೆಗಳನ್ನು ಬಿಡದೇ ಓದುವುದು, ಉಪನ್ಯಾಸಗಳಿಗೆ ಹೋಗುವುದು, ಹಿರಿಯರೊಂದಿಗೆ ವಿಷಯಗಳನ್ನು ಚರ್ಚಿಸುವುದು—ಈ ರೀತಿ ತನ್ನ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದನು.

ತಾಯಿಯೊಂದು ದಿನ ಸೀತಾ ರಾಮರ ವಿಚಾರವಾಗಿ ಹೇಳಿ ಅವರಿಗೆ ಬಂದೊದಗಿದ ಕಷ್ಟ ಪರಂಪರೆಗಳನ್ನು ವಿವರಿಸಿದ್ದಳು. ವಿವರಿಸುತ್ತಿದ್ದ ಹಾಗೇನೇ ನರೇಂದ್ರ ಅಳುತ್ತಾ "ಅಮ್ಮಾ... ನಾನು ಸೀತಾ ರಾಮರನ್ನು ಹೇಗೆ ಪೂಜಿಸಲಿ ? ಸೀತೆ ರಾಮನ ಹೆಂಡತಿಯಲ್ಲವೇ ? ಎಂದನು. ತಾಯಿಯು ಮಗನನ್ನು ಮುದ್ದಿಸುತ್ತಾ "ಮಗು ಸೀತಾ ರಾಮರ ಪೂಜೆ ಬೇಡ, ನಾಳೆಯಿಂದ ಶಿವಪೂಜೆ ಮಾಡು" ಎಂದು ಸಂತೈಸಿದರು. ಆ ದಿನ ಸಂಜೆ ಮನೆಯ ಬೋಳು ಮಹಡಿಯ ಮೇಲೆ ಸೀತಾರಾಮರ ವಿಗ್ರಹವನ್ನು ನೋಡುತ್ತಿದ್ದ ನರೇಂದ್ರ, [ಕೆಲವು ನಿಮಿಷಗಳಲ್ಲಿ] ಒಂದು ಕಡೆ ಸೀತಾರಾಮರ ಮೇಲೆ ಭಕ್ತಿ, ಮತ್ತೊಂದು ಕಡೆ ತೀವ್ರ ನಿರಾಶೆ, ಕೃಷ್ಣ ವಿಗ್ರಹವನ್ನು ಮೇಲೆತ್ತಿ ಮಹಡಿಯಿಂದ ಬೀದಿಗೆ ಎಸೆದನು. ಅದು ನುಚ್ಚು ನೂರಾಯಿತು. ವಿನೋದಕರವಾಗಿ ಲಘುವಾಗಿ ತೋರುವ ಈ ಬಾಲಲೀಲೆಯ ಘಟನೆಯಲ್ಲಿ ಭವಿಷ್ಯತ್ತಿನ ಛಾಯೆ ಸುಳಿದಾಡುತ್ತಿತ್ತು.

ಒಂದು ದಿನ ಶಿವವಿಗ್ರಹದ ಮುಂದೆ ಶಿವಯೋಗಿಯ ವೇಷವನ್ನು ತಳೆದು ಕಾಲ ಮೇಲೆ ಕಾಲು ಹಾಕಿ ಕುಳಿತಿದ್ದನು. ಉಟ್ಟಿದ್ದ ಪಂಚೆಯನ್ನು ಹರಿದು ಕೌಪೀನವನ್ನಾಗಿ ಮಾಡಿಕೊಂಡಿದ್ದನು. ಮೈಗೆಲ್ಲಾ ಒಲೆಯ ಬೂದಿಯನ್ನು ದಟ್ಟವಾಗಿ ಮೆತ್ತಿಕೊಂಡಿದ್ದನು. ಅಷ್ಟರಲ್ಲಿ ಭುವನೇಶ್ವರಿ ದೇವಿ ಅಲ್ಲಿಗೆ ಬಂದು 'ನರೇನ್... ಏನು ಮಾಡುತ್ತಾ ಇದ್ದೀಯಾ' ಎಂದಾಗ "ನೋಡಮ್ಮಾ ನಾನು ಶಿವ; ನಾನು ಶಿವ; ಎಂದು ಹೇಳುತ್ತಿದ್ದೇನೆ' ಎಂದಾಗ ತಾಯಿಯ ಹೃದಯ ಆತಂಕದಿಂದ ಕಂಪಿತವಾಯಿತು. ತಾತನಂತೆ ಮಗನೂ ಎಲ್ಲಿ ಸನ್ಯಾಸಿ ಆಗಿ ಬಿಡುತ್ತಾನೆಯೋ ಎಂದು ಬೆದರಿದಳು.

ನರೇಂದ್ರನ ತಂದೆ ವಿಶ್ವನಾಥದತ್ತ ಕಲ್ಕತ್ತೆಯನ್ನು ಬಿಟ್ಟು ರಾಯಪುರಕ್ಕೆ ಹೋಗ

ಬೇಕಾಗಿ ಬಂತು. ಅಲ್ಲಿ ನರೇಂದ್ರನಿಗೆ ಶಾಲೆ ತಪ್ಪಿಹೋಯಿತು. ವಿಶ್ವನಾಥದತ್ತನು ಸ್ವಂತವಾಗಿ ಮಗನಿಗೆ ನಾನಾ ಗ್ರಂಥಗಳನ್ನು ಪಾಠ ಹೇಳಲು ತೊಡಗಿದನು. ಹಲವಾರು ವಿದ್ವತ್ಸಭೆ ಚರ್ಚೆಗಳಲ್ಲಿ ನರೇಂದ್ರನು ಭಾಗವಹಿಸಿದ್ದನು. ಹಲವಾರು ವಿಷಯಗಳನ್ನು ತಿಳಿದಿದ್ದನು. ಎರಡು ವರ್ಷಗಳಲ್ಲಿ ನರೇಂದ್ರನ ಮಾನಸಿಕ ಶಾರೀರಕ ಶಕ್ತಿಗಳು ವಿಚಿತ್ರ ಪರಿವರ್ತನೆ ಹೊಂದಿ ಅಭಿವೃದ್ಧಿಯಾದವು. ನಂತರ ಕಲ್ಕತ್ತಾಗೆ ಬಂದರು. ನರೇಂದ್ರ ಶಾಲೆಗೆ ಸೇರಿದನು. ಮೂರು ವರ್ಷದ ಪಾಠಗಳನ್ನು ಒಂದೇ ವರ್ಷದಲ್ಲಿ ಜೀರ್ಣಿಸಿಕೊಂಡು ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆಗೆ ಕುಳಿತುಕೊಂಡು ಮೊದಲನೇ ತರಗತಿಯಲ್ಲಿ ಉತ್ತೀರ್ಣನಾದನು. ತಂದೆ ಸಂತೋಷದಿಂದ ನರೇಂದ್ರನಿಗೆ ಒಂದು ಗಡಿಯಾರವನ್ನು ಬಹುಮಾನವಾಗಿತ್ತರು. ನರೇಂದ್ರ ಇಂಗ್ಲೀಷ್, ಬಂಗಾಳಿ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದನು. ಆದರೆ ಜಾಮಿಟ್ರಿ [ರೇಖಾಗಣಿತ] ಅವನಿಗೆ ಹತ್ತುತ್ತಿರಲಿಲ್ಲ. ಆದರೆ ಪರೀಕ್ಷೆ 2–3 ದಿವಸ ಇದ್ದಾಗ ಪಟ್ಟಾಗಿ ಹಠ ಹಿಡಿದು ಅಭ್ಯಾಸಿಸಿ ಅದನ್ನು ಸಾಧಿಸಿಕೊಂಡಿದ್ದ.

ಕಾಲೇಜಿನಲ್ಲಿ ನರೇಂದ್ರ ಕೇವಲ ಪಠ್ಯ ಪುಸ್ತಕಗಳಿಗೇ ಅಂಟಿಕೊಳ್ಳಲಿಲ್ಲ. ಸಾಹಿತ್ಯ, ತರ್ಕ, ದರ್ಶನ, ಪ್ರಾಚೀನ ಮತ್ತು ಅರ್ವಾಚೀನ ಇತಿಹಾಸಗಳ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳಲು ಯತ್ನಿಸುತ್ತಿದ್ದನು. ಸಂಗೀತದಲ್ಲೂ ಆಸಕ್ತಿ ಇದ್ದುದರಿಂದ ಅಹಮದ್ ಖಾನ್ ಮತ್ತು ವೇಣಿಗುಪ್ತ ಎಂಬ ಇಬ್ಬರು ಪ್ರಸಿದ್ಧ ವಿದ್ವಾಂಸರಲ್ಲಿ ನಾಲ್ಕೈದೂ ವರ್ಷ ಬಿಡದೇ ಅಭ್ಯಾಸ ಮಾಡಿದನು. ಕಾಲೇಜಿನ ಪ್ರಿನ್ಸಿಪಾಲರಾದ ವಿಲಿಯಂ ಹೇಸ್ಟಿಯವರ ಬಾಯಿಂದ ಶ್ರೀ ರಾಮಕೃಷ್ಣ ಪರಮಹಂಸರ ಹೆಸರನ್ನು ಕೇಳಿದನು. 'ಮನಸ್ಸಿನ ಪರಿಶುದ್ಧತೆ ಮತ್ತು ಏಕಾಗ್ರ ಚಿತ್ತಗಳಿಂದ ಇದು ಸಾಧಿಸುತ್ತದೆ. ನನಗೆ ತಿಳಿದಿರುವ ಮಟ್ಟಿಗೆ ಇದನ್ನು ಸಾಧಿಸುವ ಒಬ್ಬ ವ್ಯಕ್ತಿಯೆಂದರೆ ದಕ್ಷಿಣೇಶ್ವರದ ಶ್ರೀ ರಾಮಕೃಷ್ಣ ಪರಮಹಂಸರು. ಅವರನ್ನು ಹೋಗಿ ನೀವು ನೋಡಿದರೆ ಈ ವಿಷಯವಾಗಿ ಚೆನ್ನಾಗಿ ಅರ್ಥವಾಗುತ್ತದೆ' ಎಂದು ಪ್ರೊಫೆಸರು ವರ್ಣಿಸಿದರು. ಅಂದಿನಿಂದ ನರೇಂದ್ರನಿಗೆ ಯಾವಾಗ ರಾಮಕೃಷ್ಣ ಪರಮಹಂಸರ ದರ್ಶನವಾಗುತ್ತದೆಯೋ ಎಂದು ಕಾಯುತ್ತಿದ್ದನು.

ಕ್ರಿ. ಶ. 1869ರಲ್ಲಿ ನರೇಂದ್ರನ ಮುತ್ತಜ್ಜನಾದ ಕಾಳೀ ಪ್ರಸಾದ ದತ್ತನು ನಿರ್ವಾಣನಾಗಿ ಹಾಸಿಗೆ ಮೇಲೆ ಮಲಗಿದ್ದನು. ತಾನು ಸಾಯುವ ಕಾಲದಲ್ಲಿ ಬಂಧು ವರ್ಗದವರೆಲ್ಲರನ್ನೂ ನೋಡಬೇಕೆಂಬ ಆಸೆ ಆತನಿಗೆ ಇದ್ದುದರಿಂದ ಆತನ ಮನೆಯವರೆಲ್ಲರೂ ಅವನ ಮೃತ್ಯುಶಯ್ಯೆಯ ಸುತ್ತಲೂ ಸೇರಿದ್ದರು. ನರೇಂದ್ರನೂ ತಾತನಿಂದ ಎಷ್ಟೋ ಬಾರಿ ಮಹಾಭಾರತ ಕಥೆಗಳನ್ನು ಕೇಳಿ ಆನಂದಪಟ್ಟಿದ್ದನು. ಕಡೆಗಾಲದಲ್ಲಿ ಅಜ್ಜನನ್ನು ನೋಡಲು ನರೇಂದ್ರ ಬಂದಿದ್ದಾಗ ತಾತನು ನರೇಂದ್ರನ ಕಡೆಗೆ ಸ್ನೇಹದೃಷ್ಟಿ ಪ್ರಸಾರ ಮಾಡಿ "ವತ್ಸ, ಒಂದು ಮಹಿಮೆಯ ಭವಿಷ್ಯತ್ತು ನಿನಗಾಗಿ ಕಾದುಕೊಂಡಿದೆ. ನೀನು ದೊಡ್ಡ ಮನುಷ್ಯನಾಗುವೆ" ಎಂದು ಪ್ರಾಣ ಬಿಟ್ಟನು. ಆ ತಾತನು ಹೇಳಿದ ಆ ಭವಿಷ್ಯದ್ವಾಣಿ ನಿರರ್ಥಕವಾಗಲಿಲ್ಲ.

ನರೇಂದ್ರನು 1984ರಲ್ಲಿ ಬಿ.ಎ. ಪರೀಕ್ಷೆ ಮುಗಿಸಿದನು. "ಲಾ" ಪರೀಕ್ಷೆಗೆ ಸೇರಿದನು. ನರೇಂದ್ರನಿಗೆ ಮದುವೆ ಮಾಡಿ ಸೊಸೆ ಮನೆಗೆ ಬಂದದ್ದನ್ನು ಕಣ್ತುಂಬ ನೋಡಬೇಕೆಂದು ಅವನ ಅಜ್ಜಿ, ತಾಯಿ, ತಂದೆ ಆತುರ ಪಡುತ್ತಿದ್ದರು. ಪ್ರತಿ ಸಲ ಹೆಣ್ಣು ಗೊತ್ತು ಮಾಡಿ, ಮದುವೆ ನಿಶ್ಚಯ ಮಾಡಿದಾಗಲೂ ಯಾವುದಾದರೂ ಅಡ್ಡಿ ಆತಂಕ ಬಂದು ಮದುವೆ ನಿಂತು ಹೋಗುತ್ತಿತ್ತು. ನರೇಂದ್ರನು ಯಾವಾಗಲೂ ಮದುವೆ ಬಗ್ಗೆ ಅಸಮ್ಮತಿಯನ್ನು ವ್ಯಕ್ತಪಡಿಸುತ್ತಿದ್ದ. 'ನನಗೆ ಸಂಸಾರ ಬಂಧನ ಬೇಕಿಲ್ಲ. ನಾನು ಸನ್ಯಾಸಿಯಾಗಿರುತ್ತೇನೆ.' ಎಂದು ಹೇಳುತ್ತಿದ್ದನು. ಸನ್ಯಾಸವೇ ಮಾನವ ಜೀವನದ ಸರ್ವೋಚ್ಚವಾದ ಆದರ್ಶ. ಆತ್ಮ ಕಲ್ಯಾಣಾಕಾಂಕ್ಷಿಗಳು ಅನಿತ್ಯವಾದ ಸಂಸಾರದ ಸುಖಲಾಲಸೆಗಳಿಗಾಗಿ ಅತ್ತಿತ್ತ ಅಲೆದಾಡುವುದು ಹುಚ್ಚುತನ" ಎಂದು ಸಂಸಾರಿಯಾಗು ವಂತೆ ಬುದ್ಧಿ ಹೇಳಲು ಬಂದ ಸಹಾಧ್ಯಾಯಿಯಾದ ಬಂಧುವೊಬ್ಬನಿಗೆ ನರೇಂದ್ರನು ತಿಳಿಸಿದನು. ಸಮುಷ್ಟಿಯಾಚಾರ್ಯನಾದನು; ವಿಶ್ವವಿಖ್ಯಾತನಾದನು, ಸರ್ವಜನ ವಂದಿತನಾದನು. ಭಾರತವರ್ಷದ ಚೇತನದ ಪುನರುತ್ಥಾನಕ್ಕೆ ಕಾರಣನಾದನು.

ವಿವೇಕಾನಂದರ ಸಂದೇಶ

1893ನೇ ಇಸವಿ ಸೆಪ್ಟೆಂಬರ್ ತಿಂಗಳು 11ನೇ ತಾರೀಖು ಸೋಮವಾರ ಜಗತ್ತಿನ ಇತಿಹಾಸದಲ್ಲಿ ಸ್ಮರಣೀಯವಾಗಿರುತ್ತದೆ. ಪ್ರಾಚ್ಯ ಪ್ರಾಶ್ಚಾತ್ಯ ವಿಭಿನ್ನ ಮತ ಸಂಪ್ರದಾಯಗಳ ಸರ್ವ ಶ್ರೇಷ್ಠರಾದ ಪ್ರತಿನಿಧಿಗಳು ಒಂದೆಡೆ ಸೇರಿದ್ದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ವಿವೇಕಾನಂದರು ಸುವರ್ಣ ಸ್ವಪ್ನದಂತೆ ನಿಂತಿದ್ದಾರೆ. ಅಲ್ಲಿ ಜನತೆಯನ್ನು ಕುರಿತು "ಅಮೇರಿಕಾ ದೇಶದ ಭ್ರಾತೃಭಗಿನಿಯರೆ" ಎಂದು ಸಂಭೋದಿ ಸಿದರು. ಕೂಡಲೆ ಸಾವಿರಾರು ಸಿಡಿಲುಗಳು ಕೋಲಾಟವಾಡುವಂತೆ ದೊಡ್ಡ ಸದ್ದಾ ಯಿತು. ಈ ಬ್ರಹ್ಮವಿವಾದದ ಅರ್ಥವೇನು ? ನಂತರ ತಿಳಿಯಿತು. ಭ್ರಾತೃ ಭಗಿನಿಯರೆ ಎಂಬ ಸಂಭೋಧನೆ ಅವರ ಹೃದಯಗಳನ್ನು ಹುಚ್ಚೆಬ್ಬಿಸಿತು. ಸರ್ವ ಧರ್ಮ ಸಮನ್ವಯ ವನ್ನು ಸೂಚಿಸಿ ಭಾಷಣ ಮಾಡಿದರು.

ತ್ರಯಾ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ
ಪ್ರಭಿನ್ನಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ
ರುಚೀನಾಂ ವೈಚಿತ್ರ್ಯಾದೃಜುಕುಟಿಲ ನಾನಾ ಪಥಜುಷಾಂ
ನೃಣಾಮೇಕೋ ಗಮ್ಯಸ್ತ್ವಮಸಿ ಪಯ ಸಾಮರ್ಣವ ಇವ ||

ಭಿನ್ನ ಭಿನ್ನವಾದ ಪ್ರದೇಶಗಳಲ್ಲಿ ಜನಿಸಿದ ಭಿನ್ನ ಭಿನ್ನವಾದ ನದಿಗಳೆಲ್ಲವೂ ಹೇಗೆ ಕಟ್ಟ ಕಡೆಗೆ ಕಡಲನ್ನು ಸೇರುತ್ತವೆಯೋ ಹಾಗೆ ಮಾನವರ ವಿವಿಧ ಭಾವಜನ್ಯವಾದ ವಿವಿಧ ಮಾರ್ಗಗಳು ಬೇರೆ ಬೇರೆಯಾಗಿ ತೋರಿದರೂ ಋಜು ಕುಟಿಲ ದಾರಿಗಳಾಗಿ ಕಂಡು ಬಂದರೂ ನನ್ನನ್ನೇ ಸೇರುತ್ತವೆ. ಯಾರು ಯಾವ ರೂಪದಲ್ಲಿ ನನ್ನನ್ನು ಭಜಿಸುತ್ತಾರೋ

ನಾನನಂಗೆ ಆ ರೂಪದಲ್ಲಿ ದೊರಕುತ್ತೇನೆ. ಮನುಜರೆಲ್ಲರೂ ಕಟ್ಟ ಕಡೆಗೆ ನನ್ನಲ್ಲಿಯೇ ವಿಲೀನವಾಗುವ ಭಿನ್ನ ಭಿನ್ನ ಮಾರ್ಗಗಳಲ್ಲಿ ತೊಳಲುತ್ತಿದ್ದಾರೆ ಎಂದು ಸರ್ವಧರ್ಮ ಸಮ್ಮೇಳನದಲ್ಲಿ ತಿಳಿಸಿದರು. ಉಳಿದವರು ಯಾರೂ ಸಮನ್ವಯದ ಪ್ರಸ್ತಾಪವನ್ನು ಎತ್ತಿರಲಿಲ್ಲ. ಆದ್ದರಿಂದ ಸ್ವಾಮಿಗಳ ಉದಾರತಮ ವೇದವಾಣಿ ನೆರೆದಿದ್ದವರ ಜನರ ಎದೆ ತುಂಬಿತು.

ದೇವರು ಮನುಷ್ಯ ಒಂದೇ ಧರ್ಮವನ್ನು ಅನುಸರಿಸಬೇಕೆಂದು ಯೋಚಿಸಿದ್ದರೆ ಇಷ್ಟೊಂದು ಧರ್ಮಗಳು ಏತಕ್ಕೆ ಹುಟ್ಟಿದುವು ? ಒಂದೇ ಧರ್ಮವನ್ನು ಎಲ್ಲರಮೇಲೂ ಬಲಾತ್ಕರಿಸುವುದಕ್ಕೆ ಬೇಕಾದಷ್ಟು ಪ್ರಯತ್ನ ನಡೆದಿದೆ. ಕತ್ತಿಯ ಬಲದಿಂದ ಎಲ್ಲರೂ ಒಂದೇ ಧರ್ಮವನ್ನು ಅನುಸರಿಸಬೇಕೆಂದು ಎಲ್ಲಿ ಬಲತ್ಕಾರ ಮಾಡಿದರೋ ಅಲ್ಲೇ ಹತ್ತಾರು ಧರ್ಮಗಳು ಹುಟ್ಟಿವೆ ಎಂದು ಇತಿಹಾಸ ಸಾರುವುದು. ಒಂದೇ ಧರ್ಮ ಎಲ್ಲರಿಗೂ ಸರಿ ಹೋಗುವುದಿಲ್ಲ. ಮನುಷ್ಯ ಆಲೋಚನಾ ಜೀವಿ. ಮನಸ್ಸು ಇರುವವನೇ ಮನುಷ್ಯ. ಆಲೋಚನಾ ಶಕ್ತಿಯನ್ನು ಕಳೆದುಕೊಂಡೊಡನೆಯೇ ಅವನು ಪ್ರಾಣಿಗಿಂತ ಮೇಲಾಗಲಾರ. ನಿಮ್ಮ ಸಾಧನೆಗಾಗಿ ಇತರರನ್ನು ಕಣ್ಣು ಮುಚ್ಚಿಕೊಂಡು ಅನುಕರಿಸಲು ಹೋಗಬೇಡಿ. ರೀತಿ ನೀತಿಯನ್ನು ನೀವು ನೆಸಪಿಸಲ್ಲಡಿ. ಅಂಧಾನುಕರಣೆ ನಾಗರಿಕತೆಯಲ್ಲ.

ವಿಶ್ವನಾಥರು ಶ್ರೀಮಂತರಾಗಿದ್ದರು. ಹಣವನ್ನು ಲೆಕ್ಕಾಚಾರವಿಲ್ಲದೇ ಖರ್ಚು ಮಾಡುತ್ತಿದ್ದರು. ಇದು ನರೇಂದ್ರನಿಗೆ ಹಿಡಿಸುತ್ತಿರಲಿಲ್ಲ. ಒಂದು ಸಲ ತಂದೆಯ ಬಳಿ ಬಂದು "ಬಾಬಾ", ನೀನು ಮಿತಿಯಿಲ್ಲದೆ ಧನವ್ಯಯ ಮಾಡುತ್ತಿದ್ದೀಯೇ, ನನಗಾಗಿ ಏನು ಇಟ್ಟಿರುವೇ ? ಏನು ಕೊಟ್ಟಿರುವೆ ? ಎಂದನು. ತಂದೆ ಮಗನನ್ನು ನೋಡುತ್ತಾ ಹೆಮ್ಮೆಯಿಂದ 'ಹೋಗು, ಕನ್ನಡಿಯ ಮುಂದೆ ನಿಂತು ನೋಡು', ಎಂದನು. ಪಿತನ ಅಭಿಪ್ರಾಯ ತಿಳಿದು ಸುಮ್ಮನಾದನು. ಶ್ರೀ ವಿವೇಕಾನಂದರ ಸುಂದರ ಗಂಭೀರವೂ ಭದ್ರಾಕಾರವೂ ತೇಜಸ್ವಿಯೂ ಸಿಂಹಪ್ರಾಯವೂ ಆದ ಮಹಾವ್ಯಕ್ತಿತ್ವವು ಶ್ರೀಯುತ ವಿಶ್ವನಾಥ ದತ್ತರಾದುದೆಂದು ತಿಳಿಯಬೇಕು.

ವಿಶ್ವನಾಥನು ಮಗನಿಗೆ ಈ ರೀತಿ ಬುದ್ಧಿ ಹೇಳಿದ್ದರು, "ಎಂದಿಗೂ ದರ್ಪಕ್ಕೆ ಮಣಿಯಬೇಡ, ಎಂದಿಗೂ ವಿಸ್ಮಯವನ್ನು ತೋರಬೇಡ.—ಪರಕೀಯರ ನೆಲವನ್ನು ಗೆದ್ದರೆ ಜನರನ್ನು ಗೆದ್ದಂತಾಗುವುದಿಲ್ಲ, ಆದರೆ ಆ ಜನರ ಸಂಸ್ಕೃತಿಯನ್ನು ಗೆದ್ದರೆಂದರೆ ಅವರ ಮಾನಸಿಕ ಐಶ್ವರ್ಯವನ್ನು ಸುಲಿದುಕೊಂಡರೆಂದರೆ ಸರ್ವನಾಶವಾಗುವುದೇ ನಿಶ್ಚಯ" ಎಂದು ತಿಳಿಸಿದ್ದರು.

ವಿಶ್ವನಾಥರಿಗೆ ಮಗನಿಗೆ ಮದುವೆ ಮಾಡಬೇಕೆಂದು ತುಂಬಾ ಆಸೆ. ಶ್ರೀಮಂತ ಬಂಧುವೊಬ್ಬನ ಕುಮಾರಿಯನ್ನು ವಿಪುಲ ವರದಕ್ಷಿಣೆಯೊಂದಿಗೆ ನರೇಂದ್ರನಿಗೆ ತಂದು ಕೊಳ್ಳಲು ನಿಶ್ಚಯ ಮಾಡಿದ್ದರಂತೆ. ಹಿಂದೆ ಅನೇಕ ಸಾರಿ ತಂದೆಯ ಮಾತನ್ನು ನಿರಾಕರಿಸಿದ್ದ ನರೇಂದ್ರನೂ ತಂದೆಯ ಬಲವಂತಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರಂತೆ. ನರೇಂದ್ರನ ಮದುವೆ ಎಂದಾಗ ಪರಮಹಂಸರು ಸಿಟ್ಟಿಗೆದ್ದರಂತೆ. ನರೇಂದ್ರನ ಗುರಿಗೆ

ಅನಾನುಕೂಲವಾಗುತ್ತೆ ಎಂದರಂತೆ. ಪುತ್ರನ ವಿವಾಹಮಹೋತ್ಸವದ ನಡುವೆಯೇ ವಿಶ್ವನಾಥದತ್ತರು ಎದೆಬೇನೆಯಿಂದ ಸತ್ತರು. ತಂದೆ ಸತ್ತ ಕೆಲವೇ ದಿನಗಳಲ್ಲಿ ನರೇಂದ್ರ ಹಣಕ್ಕಾಗಿ ಬಹಳ ತೊಂದರೆಪಟ್ಟರು. ಊಟ ಮಾಡುವುದಕ್ಕೂ ಎಷ್ಟೋ ವೇಳೆ ಹಣ ಸಿಗುತ್ತಿರಲಿಲ್ಲ. ಆಗ ಸ್ನೇಹಿತರು ನೆಂಟರಿಷ್ಟರಿಗೂ ಸಹ ನರೇಂದ್ರನನ್ನು ಕಂಡರೆ ಏನೋ ಒಂದು ವ್ಯಗ್ರತೆ ಕಂಡು ಬರುತ್ತಿತ್ತು. ಮನೆಯಲ್ಲಿ ಬಡತನದ ಬವಣೆ ಕಾಣುತ್ತಿತ್ತು. ತಾಯಿಯ ಬಡತನವನ್ನು ನೋಡಿಯೇ ಅವರು ತಮ್ಮ ಸನ್ಯಾಸ ಸ್ವೀಕಾರವನ್ನು ಮುಂದು ಮುಂದಕ್ಕೆ ತಳ್ಳಿದ್ದರು. ರಾಮಕೃಷ್ಣರು ನರೇಂದ್ರನಿಗೆ ತಂದೆ ತಾಯಿ ಗುರು ಎಲ್ಲಾ ಆಗಿದ್ದರು. ಆರು ವರ್ಷ ಕಾಲ ನರೇಂದ್ರನಿಗೆ ಗುರು ಸಾನ್ನಿಧ್ಯ, ಉಪದೇಶ ಲಭಿಸಿತು. ಗುರುಶಿಷ್ಯರ ಸಂಪರ್ಕ ಸುವರ್ಣ ಸೇತುವೆ ಆಯಿತು. ನರೇಂದ್ರನೇ ವಿವೇಕಾನಂದ ಆದನು.

ನರೇಂದ್ರನ ತಾಯಿಯಾದ ಭುವನೇಶ್ವರಿ ಸಿಂಹಿಣಿಯಾದುದರಿಂದಲೇ ಪುರುಷ ಸಿಂಹನನ್ನು ಪಡೆದಳು. ನಾರಿಯರಿಗೆ ಸಹಜವಾದ ಕೋಮಲತೆಯಿದ್ದರೂ ಆಕೆಯ ಹೃದಯದಲ್ಲಿ ಬೇಕಾದಷ್ಟು ಧೃಡತೆಯಿತ್ತು. ಆಕೆಯ ಕಣ್ಣ ಮುಂದೆಯೇ ನರೇಂದ್ರನು ಹುಟ್ಟಿ ಬೆಳೆದು ಲೋಕವಿಖ್ಯಾತನಾಗಿ ಮಡಿದನು. ಆಕೆ ವಿವೇಕಾನಂದರು ದೇಹ ಪರಿತ್ಯಾಗ ಮಾಡಿದ ಮೇಲೆ ಒಂಬತ್ತು ವರುಷಗಳು ಬದುಕಿದ್ದಳು.

ನರೇಂದ್ರನು ಜನಿಸಿದನು, ಬೆಳೆದನು, ವಿದ್ಯಾರ್ಜನೆ ಮಾಡಿದನು, ವಿದ್ವನ್ಮಣಿಯಾದನು, ಶ್ರೀ ಸ್ವಾಮಿ ವಿವೇಕಾನಂದನಾದನು, ಲೋಕ ಕಲ್ಯಾಣ ಕೃತಾರ್ತನಾದನು, ನವಯುಗ ಪ್ರವರ್ತಕನಾದನು, ಧರ್ಮ ಗುರುವಾದನು. (ಹದಿನಾಲ್ಕನೇ ವರ್ಷದಲ್ಲಿ ನರೇಂದ್ರನಿಗೆ ಉದರ ವಾಯುರೋಗವೆಂಬ ಹೊಟ್ಟೆಯ ಜಾಡ್ಯ ಹಿಡಿಯಿತು. ಬಹಳ ದಿನಗಳವರೆಗೆ ಖಾಯಿಲೆ ಗುಣಮುಖವಾಗಲೇ ಇಲ್ಲ. ಧೃಡಕಾಯನಾಗಿದ್ದ ಮಗನು ಅಸ್ಥಿಪಂಜರದಂತೆ ಆದನು).

ಒಂದು ದಿನ ನರೇಂದ್ರ ತನ್ನ ತಾಯಿಗೆ ಸಣ್ಣ ಮಾತುಗಳನ್ನಾಡಿದ್ದನು, ಅವನು ಆಡಿದ ಮಾತುಗಳನ್ನು ಒಂದು ರಟ್ಟಿನ ಮೇಲೆ ಬರೆದು ಅವನ ಕೋಣೆಯ ಬಾಗಿಲ ಮೇಲೆ ತಂದು ಹಾಕಿದಳು. ಎಲ್ಲರೂ ಅದನ್ನು ಓದಿಕೊಂಡು ನರೇಂದ್ರನನ್ನೂ ಬೈಯುತ್ತಿದ್ದರು. ನರೇಂದ್ರನಿಗೆ ತನ್ನ ತಪ್ಪು ಗೊತ್ತಾಯಿತು. ತಾಯಿಯ ಕ್ಷಮೆ ಬೇಡಿ ಮುಂದೆ ಇಂತಹ ಅಪಚಾರವನ್ನು ಮಾಡುವುದಿಲ್ಲ ಎಂಬ ಮಾತನ್ನು ಕೊಟ್ಟನು.

ವಿದೇಶದಲ್ಲಿ ಹೆಂಗಸರಿಗಾಗಿದ್ದ ಮಾದರಿ ಸೆರಮನೆಯನ್ನು ನೋಡಿಕೊಂಡು ಹೊರಬಂದು ತಮ್ಮ ದೇಶವನ್ನು ನಿರ್ದೇಶಿಸಿ, ಅಯ್ಯೋ ಕಟುಕರಿರಾ, ಮನುಷ್ಯತ್ವದ ಮಹಿಮೆಯನ್ನು ಕುರಿತು ಹಿಂದೂ ಧರ್ಮದಂತೆ ಮತ್ತಾವುದೂ ಬೋಧಿಸುವುದಿಲ್ಲ. ಆದರೆ ಹಿಂದೂ ಧರ್ಮದಂತೆ ಮತ್ತಾವುದೂ ದೀನದರಿದ್ರಾನಾಥರ ಕುತ್ತಿಗೆ ಮೇಲೆ ಕಾಲಿಟ್ಟು ತುಳಿಯುವುದಿಲ್ಲ. ಇದು ತಪ್ಪು. ಹಿಂದೂ ಧರ್ಮ ಬರಡು ಎಂದು ನೊಂದು ನುಡಿದರು. ಆ ನೋವಿನಿಂದಲೇ ಲೇಖನಿಯನ್ನು ತಮ್ಮ ರಕ್ತದಲ್ಲಿ ಅದ್ದಿ ಭಾರತೀಯ ಯುವಕರಿಗೆ ಹೀಗೆಂದು ಬರೆದಿದ್ದಾರೆ.

"ಓ ನನ್ನ ತರುಣ ಮಿತ್ರರಿರಾ, ಕಂಕಣಬದ್ಧರಾಗಿ ಟೊಂಕಕಟ್ಟಿ ನಿಲ್ಲಿ. ಮಹ ತ್ಕಾರ್ಯಕ್ಕಾಗಿಯೇ ದೇವರ ಕರೆ ಬಂದಿದೆ ನನಗೆ.... ಮುಂದಿನ ಅಭ್ಯುದಯ ನಿಮ್ಮಲ್ಲಿದೆ — ದೀನರಲ್ಲಿ, ಸರ್ವ ಸಾಮಾನ್ಯರಲ್ಲಿ ಶ್ರದ್ಧಾನ್ವಿತರಲ್ಲಿ ಬಡವರಿಗಾಗಿ ಮರುಗಿ ಕೈಯೆತ್ತಿ ಮೊರೆಯಿರಿಸಿ, ನೆರವು ಬಂದೇ ಬರುತ್ತದೆ. ಶ್ರದ್ಧೆಯಿರಲಿ, ಸಹಾನುಭೂತಿಯಿರಲಿ, ಹೃದಯ ವಿರಲಿ, ಬಾಳು ತುಚ್ಛವಾಗಲಿ, ಸಾವು ತುಚ್ಛವಾಗಲಿ, ಮಹತ್ಕಾರ್ಯದಲ್ಲಿ ಸತ್ತರೇನಂತೆ, ಬದುಕಿದರೇನಂತೆ; ಜಯ ಜಗದೀಶ್ವರ ಎಂದು ಮುಂದೆ ನುಗ್ಗಿ, ಹಿಂದುರುಗಿ ನೋಡ ಬೇಡಿರಿ ಮುಂದೆ ....ಮುಂದೆ........ಇನ್ನೂ ಮುಂದೆ."

ಎಂದು ಅತ್ಯಮೂಲ್ಯವಾದ ಮಾತನ್ನು ತರುಣ ಪೀಳಿಗೆಗೆ ತಿಳಿಸಿದರೂ "ವಿಶ್ವವು ಒಂದು ಜೇಡರ ಬಲೆಯಂತೆ, ಮನಸ್ಸುಗಳು ಅಲ್ಲಿರುವ ಜೇಡರ ಹುಳುಗಳು ಏಕೆಂದರೆ ಮನಸ್ಸು ಭಿನ್ನಾಭಿಪ್ರಾಯವಾಗಿರುವುದು. ಸ್ವಾರ್ಥತೆಯಿಂದ ಸತ್ಯವು ಮುಚ್ಚಿ ಹೋಗು ವುದು.

ಪ್ರತಿಯೊಬ್ಬರಿಗೂ ತಾಳ್ಮೆಯಿರಲಿ, ಸಾವಧಾನದಿಂದ ಇರಿ, ಭವಿಷ್ಯ ನಮಗಾಗಿ ಕಾದಿದೆ, ಜಗತ್ತಿನ ಕಲ್ಯಾಣ ನಮ್ಮಿಂದ ಆಗಬೇಕಾಗಿರುವುದು. ಆವಸರ ಪಡಬೇಡಿ. ನಿಮ್ಮ ಸಾಧನೆಗಾಗಿ ಇತರರನ್ನು ಕಣ್ಣುಮುಚ್ಚಿಕೊಂಡು ಅನುಸರಿಸಲು ಹೋಗಬೇಡಿ. ಈ ನೀತಿಯನ್ನು ನೀವು ನೆನಪಿನಲ್ಲಿಡಿ. ಅಂಧಾನುಕರಣೆ ನಾಗರಿಕತೆಯಲ್ಲ, ರಾಜನ ಉಡುಗೆಯನ್ನು ತೊಟ್ಟುಕೊಂಡ ಮಾತ್ರಕ್ಕೆ ನಾನು ರಾಜನಾಗುವುದು ಅಸಾಧ್ಯ. ಸಿಂಹದ ಚರ್ಮವನ್ನು ಹೊದ್ದುಕೊಂಡ ಕತ್ತೆ ಎಂದಿಗೂ ಸಿಂಹವಾಗಲಾರದು. ಅಂಧಾನುಕರಣೆ, ವಿಚಾರ ಹೀನ ಹೇಡಿಯ ಅನುಕರಣೆ, ಎಂದಿಗೂ ನಮ್ಮ ಏಳಿಗೆಗೆ ಕಾರಣವಾಗಲಾರದು. ಹಿಂದು ಧಾರ್ಮಿಕ ಜೀವನದಿಂದ ದೂರವಾಗುವ ಪ್ರಯತ್ನ ಮಾಡಬೇಡಿ. ಭಾರತೀಯ ರೆಲ್ಲರೂ ಅನ್ಯದೇಶೀಯರ ಉಡುಗೆಯನ್ನುಟ್ಟು, ತಿಂಡಿಯನ್ನು ತಿಂದು, ನಡತೆಯನ್ನು ಕಲಿತರೆ ನಮ್ಮ ದೇಶಕ್ಕೆ ಮಂಗಳವಾಗುವುದೆಂದು ಒಂದು ಗಳಿಗೆಯೂ ಭಾವಿಸದಿರಿ. ವಿಶ್ವದ ಗುರಿಯೇ ಸ್ವಾತಂತ್ರ್ಯ—ಸ್ವಾತಂತ್ರ್ಯದ ಗುರಿಯನ್ನು ಮುಟ್ಟಲು ನಾವು ಪಡುತ್ತಿರುವ ಪಾಡೇ ಪ್ರಕೃತಿ ನಿಯಮ." ಮತಧರ್ಮಗಳನ್ನು ಕುರಿತು ಈ ರೀತಿ ಹೇಳಿದ್ದಾರೆ.

"ದೇವರನ್ನು ಹುಡುಕಿಕೊಂಡು ಎಲ್ಲಿಗೆ ಹೋಗುವಿರಿ ? ಬಡವರು, ದುರ್ಬಲರು, ಚಿಂತಾಗ್ರಸ್ತರು ದೇವರಲ್ಲವೆ ? ಅವರನ್ನೇಕೆ ಮೊದಲು ಪೂಜೆ ಮಾಡಬಾರದು. ಗಂಗಾ ತೀರದಲ್ಲಿ ಬಾವಿಯನ್ನು ತೋಡಬೇಕೆಂಬ ಮರುಳೇಕೆ ? ಈ ಜನವೇ ನಿಮ್ಮ ದೇವರಾಗಲೀ, ಅವರಿಗಾಗಿ ದುಡಿಯಿರಿ, ಪ್ರಾರ್ಥನೆ ಮಾಡಿರಿ, ಅವರನ್ನು ಕುರಿತು ಧ್ಯಾನಿಸಿರಿ—ದೇವರು ದಾರಿ ತೋರಿಸುತ್ತಾನೆ. ಮನುಷ್ಯ ಹುಟ್ಟಿರುವುದು ಪ್ರಕೃತಿಯನ್ನು ಜಯಿಸುವುದಕ್ಕೇ ವಿನಃ ಅನುಸರಿಸುವುದಕ್ಕಲ್ಲ."

ಈ ರೀತಿ ಹೇಳಿದ ವಿವೇಕಾನಂದರ ಸಂದೇಶವು ವಿಶ್ವ ಸಂದೇಶವಾಗಿರುವುದರಲ್ಲಿ ಯಾವ ಸಂಶಯವೂ ಇಲ್ಲ.

ಶಿ. ರಾಜೇಂದ್ರಪ್ಪ

ಗೋವೆಯ ಕುರ್ಡಿ ದೇವಾಲಯ - ಒಂದು ಅಧ್ಯಯನ*

ಗೋವಾ ಕೇವಲ ಕ್ರೈಸ್ತ ಇಗರ್ಜಿಗಳಿಗೆ ಪ್ರಖ್ಯಾತವಾಗಿರದೆ, ಹಿಂದು ದೇವಾಲಯಗಳ ಕೇಂದ್ರವೂ ಆಗಿತ್ತೆಂಬ ಅಂಶವನ್ನು ಇತಿಹಾಸದ ಪುಟಗಳು ಸ್ಪಷ್ಟಪಡಿಸುತ್ತವೆ. ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ಆಗಮನಕ್ಕೆ ಮುನ್ನ ಗೋವಾ ಬೌದ್ಧ-ಜೈನ-ಹಿಂದು ಧರ್ಮಗಳ ತೌರೂರಾಗಿತ್ತು ಎಂಬುದನ್ನು ಸಾರಿ ಹೇಳುವ ಬೌದ್ಧ ಗುಹೆಗಳು, ಜೈನ ಬಸದಿಗಳು, ಹಿಂದು ದೇವಾಲಯಗಳು ಗೋವೆಯಲ್ಲಿ ಹೇರಳವಾಗಿ ಲಭ್ಯವಿದ್ದು ಪ್ರಾಚೀನ ಗೋವೆಯ ಸರ್ವಧರ್ಮ ಸಮನ್ವಯತೆಯ ಅವಶೇಷಗಳಾಗಿ ಇಂದಿಗೂ ಪ್ರವಾಸಿಗಳನ್ನು, ವಿದ್ವಾಂಸರನ್ನು ಸೂಜಿಗಲ್ಲಿನಂತೆ ತಮ್ಮತ್ತ ಸೆಳೆಯುತ್ತಿವೆ. ಅರವೇಲಮ್ ಗುಹಾಲಯಗಳ ಪ್ರಾಚೀನತೆ ಕ್ರಿ.ಶ. 6ನೇ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಹಾಗೇಯೇ ತಾಮ್ರಸುಲ್ಲದ ದೇವಾಲಯ, ಕುಂಡೊಲಿಮ್‌ನ ಜೈನ ಬಸದಿ, ಚಾಂದೂರ್ ಹಾಗು ಕುರ್ಡಿಯ ಶೈವಾಲಯಗಳು ಮೇಲಿನ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ. ಇದಕ್ಕೆ ಪೂರಕವಾಗಿ ರಾಜ್ಯ ಪತ್ರಾಗಾರದಲ್ಲಿ ಲಭ್ಯವಿರುವ ದಾಖಲೆಗಳು ಮಧ್ಯಕಾಲೀನ ಗೋವೆಯಲ್ಲಿ ಮುಸ್ಲಿಂ ದೊರೆಗಳ, ಪೋರ್ಚುಗೀಸ್ ಗೌರ್ನರುಗಳ ಮತಾಂಧ ಆಳ್ವಿಕೆಯಲ್ಲಿ ನೂರಾರು ದೇವಾಲಯಗಳು ನೆಲಸಮಗೊಂಡುವೆಂಬುದನ್ನು ದಾಖಲಿಸಿವೆ. ಈ ಹಿನ್ನೆಲೆಯಲ್ಲಿ ಕುರ್ಡಿ ಗ್ರಾಮಕ್ಕೆ 2 ಕಿ.ಮಿ. ದೂರದಲ್ಲಿ ಗುಲೋಳಿ ನದಿಯ ಎಡದಂಡೆಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ಗೋವೆ ಕದಂಬರ ಕಾಲದ ಶೈವಾಲಯದ ಅಧ್ಯಯನವನ್ನು ಮಾಡುವ ಪ್ರಯತ್ನವೇ ಈ ಲೇಖನದ ಉದ್ದೇಶ.

ಕುರ್ಡಿ ಗ್ರಾಮವು ಸ್ಯಾಂಗ್ವೆಮ್ ತಾಲ್ಲೂಕಿನಲ್ಲಿದ್ದು ಪಣಜಿಯಿಂದ ಸುಮಾರು 60 ಕಿ.ಮಿ. ದೂರದಲ್ಲಿದೆ. ಪೊಂಡ-ಸವಾರ್ಡೆಮ್-ಸ್ಯಾಂಗ್ವೆಮ್ ಮಾರ್ಗವಾಗಿ ಈ

---

* ಕುರ್ಡಿ ದೇವಾಲಯದ ಅಧ್ಯಯನಕ್ಕೆಂದು ಅಧಿಕೃತ ಪ್ರವಾಸದ ಮೇಲೆ ನನ್ನನ್ನು ಕಳುಹಿಸಿದ ಮೇಲಾಧಿಕಾರಿ ಡಾ. ಜಿ. ಸಿ. ಚೌಲೆ ಹಾಗೂ ಪ್ರವಾಸದಲ್ಲಿ ಪಾಲ್ಗೊಂಡು ಚರ್ಚೆಯಲ್ಲಿ ಸಹಕರಿಸಿದ ಸಹೋದ್ಯೋಗಿಗಳಾದ ಡಾ. ಜೋಷಿ ಮತ್ತು ಪರಮಾನಂದನ್ ಅವರಿಗೆ ಲೇಖಕನ ಕೃತಜ್ಞತೆಗಳು.

ಗ್ರಾಮವನ್ನು ತಲುಪಲು ಸುಮಾರು ಮೂರು ತಾಸು ಎಣಿಸಬೇಕಾಗುತ್ತದೆ. ಕಿರಿದಾದ ಕಠಿಣ ತಿರುವುಗಳಿಂದ ಕೂಡಿದ ಈ ಹಾದಿ ಹಾವಿನಂತೆ ಹಚ್ಚಹಸಿರನ್ನುಟ್ಟ ಬನಸಿರಿಯ ನಡುವೆ ಹರಿದು ಹೋಗುತ್ತಿದ್ದು, ಮುಗಿಲನ್ನು ಚುಂಬಿಸುವ ಮಹದಾಸೆಯನ್ನು ಹೊತ್ತಂತೆ ಬೆಳೆದಿರುವ ಗುಡ್ಡಗಳು, ಅವುಗಳನ್ನು ಆಶ್ರಯಿಸಿಂತಿರುವ ನಾನಾ ಜಾತಿಯ ವನ್ಯ ಗಿಡ–ವೃಕ್ಷಗಳು, ತಳದಿಂದ ತಲೆಎತ್ತಿ ದಿಗಂತದತ್ತ ನೋಡಿದರೆ ಮೈತಳೆದು ನಿಂತಿರುವ ಪ್ರಕೃತಿ–ಸಿರಿ, ಮೇಲಿಂದ ಇಣಿಕಿದರೆ ಗುಡ್ಡ ರಾಶಿಯ ನಡುವೆ ವಸುಂಧರೆಗೆ ತಿಲಕವಿಟ್ಟಂತೆ ಶೋಭಿಸುತ್ತಿರುವ ನಯನ–ಮನೋಹರವಾದ ಬಯಲು ಪ್ರದೇಶ, ಅವನ್ನು ಬಳಸಿ ನಿಂತಿರುವ ಆಳೆತ್ತರದ ಜಾಳಿಯ ಸಮೂಹ, ಪಕ್ಕದಲ್ಲಿ ಮೋಡಗಳ ಅಂಚನ್ನು ಸೇರಬೇಂದು ಬಾನತ್ತ ಚಿಮ್ಮಿರುವ ತೆಂಗಿನಮರಗಳ ಗುಂಪು, ಅವುಗಳ ಸ್ಪಂದನದಿಂದ ಉಂಟಾಗುತ್ತಿರುವ ಧ್ವನಿ ಮಾಧುರ್ಯ, ಗಾಳಿಯಲ್ಲಿ ತೇಲಿ ಬರುತ್ತಿರುವ ಮಣ್ಣಿನ ಸುವಾಸನೆ, ಅದಕ್ಕೆ ಮಿಗಿಲಾದ ಹಲಸಿನ ಕಂಪು, ಕಾಡು ಪಕ್ಷಿಗಳ ಕೊರಳಿನ ಇಂಪು ಕಣ್ಮನಗಳಿಗೆ ಮುದವನ್ನು ನೀಡುತ್ತವೆ. ಹಾದಿಯ ಬದಿಯಲ್ಲಿ ಮೈತುಂಬಿ ನಿಂತಿದ್ದ ಹಲಸಿನ ಮರಕ್ಕೆ ಜೋತು ಬಿದ್ದಿದ್ದ ಜೇನುಗೂಡನ್ನು ಕಂಡು ಹಲಸು–ಜೇನಿನ ಸವಿ, ಅದರ ಒಡೆಯ ಕರಡಿ ರಾಯನ ನೆನಪನ್ನು ತಂದು, ಕುರ್ಡಿ ಗ್ರಾಮಕ್ಕೆ ಈ ಹೆಸರು ಬರಲು ಇದೇ ಕಾರಣವಿರಬಹುದೇ ಎಂದು ಚಿಂತಿಸುತ್ತಿದ್ದಂತೆ ಕುರ್ಡಿ ಗ್ರಾಮ ಹಿಂದಾಗಿ ದೇವಾಲಯದತ್ತ ಸಾಗಿದ್ದೆವು.

ಈ ದೇವಾಲಯವು ಕುರ್ಡಿ ಗ್ರಾಮಕ್ಕೆ ಸುಮಾರು ಎರಡು ಕಿ.ಮಿ. ಅಂತರದಲ್ಲಿದ್ದರೂ ಪುರಾತತ್ವ ಶಾಸ್ತ್ರಜ್ಞರಿಗೆ ಕುರ್ಡಿ ದೇವಾಲಯವೆಂದೇ ಪರಿಚಿತವಾಗಿದೆ. ಈ ದೇವಾಲಯವನ್ನು ಗೋವಾ ಕದಂಬರ ಆಳ್ವಿಕೆಯ ಅಂತ್ಯಾವಧಿಯಲ್ಲಿ ನಿರ್ಮಿಸಲಾಗಿದೆಯೆಂಬ ಅಭಿಪ್ರಾಯ ಸೂಕ್ತವಾಗಿದ್ದರೂ ಇವರ ಕಾಲದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಇದು ಸಿಲಾಹಾರ ಅರಸರ ಆಳ್ವಿಕೆಯಲ್ಲಿ (795–1010) ನಿರ್ಮಿಸಲಾಗಿದೆಯೆಂದು ಪಿ. ಟಿ. ಗುಣೆ ಸೂಚಿಸಿದರೆ, ಉಳಿದವರು ಇದು 12–13ನೇ ಶತಮಾನದ ರಚನೆಯೆಂದು ಅಭಿಪ್ರಾಯಪಡುತ್ತಾರೆ. ವಾಸ್ತುಶೈಲಿ ದೃಷ್ಟಿಯಿಂದ ಇದು ಗೋವೆ ಕದಂಬರ ಆಳ್ವಿಕೆಯ ಅಂತ್ಯಕಾಲದ್ದೆಂದು ಹೇಳಬಹುದಾಗಿದೆ. ಈ ಕಟ್ಟಡವನ್ನು ಅಲ್ಲೀ ಲಭ್ಯವಿರುವ ಲ್ಯಾಟಕ್ಸೈಟ್ ಶಿಲೆಯಿಂದ ರಚಿಸಲಾಗಿದ್ದು, ಇದಕ್ಕೆ ಅಡಿಪಾಯವಿಲ್ಲ. ಕಲ್ಲು ಹಾಸಿಗೆಯೇ ಇದರ ಅಡಿಪಾಯವಾಗಿದ್ದು, ಅದರ ಮೇಲೆ ಕಟ್ಟಡವನ್ನು ನಿರ್ಮಿಸಲಾಗಿದೆ. ಗರ್ಭಗೃಹ ಹಾಗು ಮುಖ ಮಂಟಪವುಳ್ಳ ಈ ಸಾಧಾರಣ ಕಟ್ಟಡದ ಹೊರ ಅಳತೆ 7 ಮೀಟರ್ ಉದ್ದ × 5½ ಮೀಟರ್ ಅಗಲವಿದೆ. ಚೌಕಾಕೃತಿಯಲ್ಲಿರುವ ಗರ್ಭಗೃಹದ ಒಳ ಅಳತೆಯು 210 ಸೆಂ.ಮಿ. × 210 ಸೆಂ.ಮಿ. ಇದ್ದು ಮುಖ ಮಂಟಪವು 210 ಸೆಂ.ಮಿ. × 180 ಸೆಂ.ಮಿ. ಸ್ಥಳವನ್ನು ಆಕ್ರಮಿಸಿಕೊಂಡಿದ್ದು ಮುಖಮಂಟಪಕ್ಕಿಂತ ಗರ್ಭಗೃಹವೇ ವಿಶಾಲವಾಗಿದೆ. ಅದೇ ಇದರ ವೈಶಿಷ್ಟ್ಯವಾಗಿದೆ. ಕಾಲದ ವಿಕೋಪಕ್ಕೆ ಬಲಿಯಾಗಿ ಶಿಖರವನ್ನು ಕಳೆದುಕೊಂಡು ತೊರೆಯುವರೆವಿಗೂ ಮಾತ್ರ ಉಳಿದಿರುವ ಹಾಳುಬಿದ್ದಿರುವ ಈ ದೇವಾಲಯವು ಸುಮಾರು 2·6 ಮಿ.

ಎತ್ತರವಿನ್ನು ಆಗ ಶಿಖರವೂ ಸೇರಿ ಇನ್ನೂ ಎತ್ತರವಿದ್ದಿರಬಹುದೆಂದು ಊಹಿಸಬಹುದಾಗಿದೆ. ಈ ದೇವಾಲಯವು ಶೈವಾಲಯವಾಗಿದ್ದು ಶ್ರೀ ಮಹಾದೇವ ದೇವಾಲಯವಾಗಿ ಪ್ರಸಿದ್ಧವಾಗಿತ್ತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಇಂದಲ್ಲಿ ಶಿವಲಿಂಗವಾಗಲಿ ಬೇರೆ ಯಾವುದೇ ವಿಗ್ರಹವಾಗಲಿ ಉಳಿದಿಲ್ಲ. ಈ ದೇವಸ್ಥಾನದ ಮುಂದೆ ಭಗ್ನವಾಗಿದ್ದ ನಂದಿಯಿತ್ತೆಂಬ ವಿದ್ವಾಂಸರ ಮಾತಿಗೂ ಅಲ್ಲಿ ಯಾವುದೊಂದು ಸಾಕ್ಷ್ಯವಿಲ್ಲ. ಆದರೂ ಇತರೇ ಮೂಲಗಳಿಂದ ಇದು ಶೈವಾಲಯವೆಂಬ ಅಂಶ ಸ್ಪಷ್ಟವಾಗುತ್ತದೆ.

ಈ ದೇವಾಲಯದ ನಿರ್ಮಾಣದಲ್ಲಿ ಲ್ಯಾಟರೈಟ್ ಶಿಲೆಯನ್ನು ಬಳಸಲಾಗಿದ್ದರೂ ಸಹ, ದೇವಸ್ಥಾನದ ಮೂಲಸ್ಥಾನವನ್ನು ನಿರ್ಮಿಸುವಲ್ಲಿ ಶಿಲ್ಪಿಯು ತೋರಿರುವ ತಾಳ್ಮೆ, ಜಾಣ್ಮೆ, ಎಲ್ಲಕ್ಕೂ ಮಿಗಿಲಾಗಿ ಅವುಗಳಲ್ಲಿ ವ್ಯಕ್ತಗೊಂಡಿರುವ ಕಲಾಪ್ರೌಢಿಮೆ ಸ್ಥಪತಿಯ ಕೈಚಳಕದ ಪ್ರಾವೀಣ್ಯಕ್ಕೆ ಉದಾಹರಣೆಯಾಗಿದೆ. ಗರ್ಭಗೃಹದ ಪ್ರವೇಶ ದ್ವಾರವನ್ನು ಬಂಧಿಸುವ ದ್ವಾರಬಂಧನ ಕಂಭಶ್ರೋಣಗಳನ್ನು ಬಳಪದ ಕಲ್ಲಿನಲ್ಲಿ ಕಡೆಯಲಾಗಿದ್ದು ಬಳ್ಳಿ–ವಜ್ರಕೋನಾಕೃತಿಗಳಿಂದ ಅಲಂಕರಿಸಲಾಗಿದೆ. ತಳಭಾಗದಲ್ಲಿ ಪೂರ್ಣ ಕುಂಭ ಹಿಡಿದು ವೈಯಾರದಿಂದ ನಿಂತಿರುವ ಸ್ತ್ರೀಯರನ್ನು ಕೆತ್ತಲಾಗಿದೆ. ಮೇಲ್ಭಾಗದಲ್ಲಿ ಮಧ್ಯದಲ್ಲಿ ಗಣೇಶನ ಮೂರ್ತಿಯನ್ನು ಕೆತ್ತಲಾಗಿದ್ದು, ಪಕ್ಕದಲ್ಲೇ ಕುಬೇರನನ್ನು ಕಾಣಬಹುದಾಗಿದೆ. ಗರ್ಭಗೃಹವನ್ನು ಅಪ್ಪಿ ನಿಂತಿರುವ ಮುಖಮಂಟಪವನ್ನು ಬಳಪದ ಕಲ್ಲಿನಿಂದ ತಯಾರಿಸಲ್ಪಟ್ಟಿರುವ ಎರಡು ಕಂಬಗಳು ಅಲಂಕರಿಸಿವೆ. ಈ ಕಂಬಗಳು ನಿರಾಡಂಭರವಾಗಿದ್ದು ತಳಭಾಗದಲ್ಲಿ ಚೌಕಕಾರದ ಪೀಠವನ್ನು ಹೊಂದಿದ್ದು ಶಿರವನ್ನು ಕಮಲಾಕೃತಿಯ ಬೋದಿಗೆಯಿಂದ ಅಲಂಕರಿಸಲಾಗಿದೆ. ಈ ದೇವಾಲಯದ ಹಾಳಾಗಿರುವ ಶಿಖರವು ವೇಸರ ಶೈಲಿಯಲ್ಲಿ ಇದ್ದಿರಬಹುದೆಂದು ಸೂಚಿಸಿದರೆ ತಪ್ಪಾಗಲಾರದು. ಆದರೆ ಈ ದೇವಾಲಯದ ಛಾವಣಿಗೆ ಸಂಬಂಧಿಸಿದಂತೆ ಚರ್ಚಿಸುತ್ತ ವಿದ್ವಾಂಸರು, ಛಾವಣಿಯು ಇಳಿಜಾರಾಗಿದ್ದು ಮೇಲೆ ಹೆಂಚನ್ನು ಹೊದಿಸಲಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ. ದೇವಾಲಯದ ಅಕ್ಕ ಪಕ್ಕಗಳಲ್ಲಿ ಹೇರಳವಾಗಿ ಕಂಡುಬರುವ ಹೆಂಚಿನ ಅವಶೇಷಗಳು ಮೇಲ್ನೋಟಕ್ಕೆ ಇವನ್ನು ಪುಷ್ಟೀಕರಿಸುವಂತೆ ತೋರಿಬಂದರೂ ಸೂಕ್ಷ್ಮ ಅಧ್ಯಯನದಿಂದ ಇದು ಅಸಮರ್ಪಕವೆಂಬ ಅಂಶ ಗೋಚರವಾಗುತ್ತದೆ. ಈ ಕಟ್ಟಡದ ಭಿತ್ತಿಗಳು ಸುಮಾರು ಎರಡು ಮೀಟರಿನಷ್ಟು ದಪ್ಪವಿದ್ದು ಶಿಖರದ ಭಾರವನ್ನು ಹೊರಬಲ್ಲವಾಗಿವೆ. ಈ ಕಟ್ಟಡದ ಛಾವಣಿಯು ಹೆಂಚಿನದಾಗಿದ್ದಲ್ಲಿ ಗೋಡೆಗಳ ಗಾತ್ರದ ಔಚಿತ್ಯದ ಪ್ರಶ್ನೆ ಏಳುತ್ತದೆ. ಶಿಖರದ ಭಾರವನ್ನು ಹೊರಲೆಂದೇ ಬೃಹತ್ ಗಾತ್ರದ ಭಿತ್ತಿಗಳನ್ನು ಅಂದಿನ ಕಾಲದಲ್ಲಿ ನಿರ್ಮಿಸುತ್ತಿದ್ದರೆಂಬ ಅಂಶ ವಾಸ್ತುಶಿಲ್ಪಕ್ಕೇನೂ ಹೊಸದಲ್ಲ. ಮೇಲಾಗಿ ಅಲ್ಲಿ ಲಭ್ಯವಿರುವ ಹೆಂಚಿನ ತುಣುಕುಗಳು ಪ್ರಾಯಶಃ ಅದರ ಬಲಪಾರ್ಶ್ವದಲ್ಲಿದ್ದ ದೇವಾಲಯದ ಛಾವಣಿಗೆ ಸಂಬಂಧಿಸಿದವುಗಳೆಂಬ ಅಭಿಪ್ರಾಯವನ್ನು ಆ ದೇವಾಲಯದ ಗೋಡೆಯ ಅಡಿಪಾಯದ ಗಾತ್ರ ಪುಷ್ಟೀಕರಿಸುತ್ತದೆ.

ಪ್ರಾಮುಖ್ಯತೆ

ಈ ದೇವಾಲಯವನ್ನು ಕಾಡಿನ ನಡುವೆ ಕಟ್ಟಿರುವುದರಿಂದ ಅಂದಿನ ಕಾಲದಲ್ಲಿ ಇದು ಅಂತಹ ಪ್ರಾಮುಖ್ಯತೆಯನ್ನೇನೂ ಪಡೆದಿರಲಿಲ್ಲವೆಂದು ಭಾವಿಸಿದರೆ ತಪ್ಪಾಗುತ್ತದೆ. ಈ ದೇವಾಲಯದ ನಿರ್ಮಾಣಕ್ಕೆ ಆಯ್ದಿರುವ ಪ್ರದೇಶ ಧಾರ್ಮಿಕ ದೃಷ್ಟಿಯಿಂದ ಔಚಿತ್ಯ ಪೂರ್ಣವಾಗಿದೆ. ಈ ದೇವಾಲಯವನ್ನು ಜುವಾರಿ ನದಿಯ ಉಪನದಿಯಾದ ಗುಲೇಳಿ ನದಿಯ ಎಡದಂಡೆಯ ಮೇಲೆ ಕಟ್ಟಲಾಗಿದ್ದು, ಉತ್ತರಾಭಿಮುಖವಾಗಿ ಪ್ರವಹಿಸುವ ನದಿ ಈ ಸ್ಥಳದಲ್ಲಿ ಸರಕ್ಕನೆ ಪೂರ್ವಕ್ಕೆ ತಿರುಗಿದ್ದು, ಆದ್ದರಿಂದಾಗಿ ಈ ಸ್ಥಳವನ್ನು ದೇವಾಲಯ ನಿರ್ಮಾಣಕ್ಕೆ ಆಯ್ದುಕೊಂಡಿರಬೇಕು. ದೇವಾಲಯದಿಂದ ನದಿ ದಂಡೆಯನ್ನು ತಲುಪಲು ಬಂಡೆಯಲ್ಲಿ ಕಡೆದಿರುವ ಸೋಪಾನಗಳಿವೆ. ದೇವಾಲಯದ ಮುಂಭಾಗದಲ್ಲಿ ಸುಮಾರು 25 ಮಿ. ಅಂತರದಲ್ಲಿ ಎರಡು ನಂದಿ ಮಂಟಪಗಳಿದ್ದುದರ ಬಗ್ಗೆ ಸುಳಿವು ನೀಡುವ ಕುರುಹುಗಳಿವೆ. ದೇವಾಲಯದಿಂದ ನದಿಯತ್ತ ಸಾಗುವಾಗ ಬಲಭಾಗದ ಬಂಡೆಯಲ್ಲಿ ಕೊರೆದಿರುವ ಎರಡು ಚಿಕ್ಕ ಕೊಠಡಿಗಳನ್ನು ಕಾಣಬಹುದಾಗಿದ್ದು ಅವೂ ಕೂಡ ದೇವಾಲಯ ನಿರ್ಮಾಣಕ್ಕೆ ಸಮಕಾಲೀನವೆಂದು ಭಾವಿಸಬಹುದಾಗಿದೆ. ದೇವಾಲಯದ ಹಿಂಭಾಗದಲ್ಲಿ ಸುಮಾರು ಹತ್ತಾರು ಎಕರೆ ವಿಶಾಲವಾದ ಬಯಲು ಪ್ರದೇಶವಿದ್ದು, ಸುಂದರವಾದ ಕೆರೆಯೊಂದಿದೆ. ಸಮೀಪದಲ್ಲೇ ಹಿಂದೆ ಬೃಹತ್ ಕಟ್ಟಡವೊಂದಿತ್ತೆಂದು ಸೂಚಿಸುವ ಅಡಿಪಾಯದ ಅವಶೇಷ ಹಾಗು ಕಿರು ಕಟ್ಟಡಗಳ ಬಗೆಗೆ ಸುಳಿವು ನೀಡುವ ಕುರುಹುಗಳು ಇವು ದೇವಾಲಯದ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತದೆ. ಇದು ಪ್ರಾಯಶಃ ವಾರ್ಷಿಕ ಹಬ್ಬಹರಿದಿನಗಳಲ್ಲಿ ಭಕ್ತರು ತಂಗುತ್ತಿದ್ದ ನೆಲೆಯಿದ್ದಿರಬಹುದೆಂದು ಭಾವಿಸಬಹುದಾಗಿದೆ. ದೇವಾಲಯದ ಹಿಂಭಾಗದಲ್ಲಿ 4-6 ಮಿ. ಅಂತರದಲ್ಲಿ ಕಲ್ಲು ಹಾಸಿಗೆಯ ಮೇಲೆ ಕೆತ್ತಲ್ಪಟ್ಟಿರುವ ಸ್ತ್ರೀಯ ಕೆತ್ತನೆಯೊಂದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಇದನ್ನು ನನ್ನ ಗಮನಕ್ಕೆ ತಂದ ಮಿತ್ರ ಜೋಷಿಯವರು ಇದಕ್ಕೂ ಶಕ್ತಿ ಪೂಜೆಗೂ ಸಂಬಂಧ ಕಲ್ಪಿಸಿದರು. ಆದರೆ ನನ್ನ ಅಭಿಪ್ರಾಯದಲ್ಲಿ ಇದು ಭಕ್ತಶಿಲ್ಪವಾಗಿರಬಹುದು ಇಲ್ಲವೇ ದೇವಾಲಯ ನಿರ್ಮಾಣ ಕಾಲದಲ್ಲಿ ಬಿಡುವಿನ ವೇಳೆಯಲ್ಲಿ ಯಾವನೋ ಶಿಲ್ಪಿ ತನ್ನ ಮನದನ್ನೆಯನ್ನು ನೆನೆದು ಕೆತ್ತಿರಬಹುದೆಂದೆನಿಸುತ್ತದೆ. ಅವರಲ್ಲೂ ಮೊದಲಿನ ಅಭಿಪ್ರಾಯ ಹೆಚ್ಚು ಪ್ರಾಶಸ್ತ್ಯವಾಗಿ ತೋರುತ್ತವೆ. ಈ ಬಯಲು ಪ್ರದೇಶದಲ್ಲಿ ಕಂಡು ಬಂದ ಶಿಲಾವೃತ್ತಗಳು ಬೃಹತ್ ಶಿಲಾಯುಗದ ಮಾನವ ಸಮಾಧಿಗಳಾಗಿದ್ದು, ಈ ಪ್ರದೇಶದ ಪ್ರಾಚೀನತೆಯನ್ನು ಬೃಹತ್ ಶಿಲಾಯುಗದಷ್ಟು ಹಿಂದಕ್ಕೆ ದೂಡಬಹುದಾಗಿದೆ.

ದೇವಾಲಯವನ್ನು ಸ್ಥಳಾಂತರಿಸುವ ಯೋಜನೆ

ಗೋವಾ ಸರ್ಕಾರದ ಸಲವಳ್ಳಿ ನೀರಾವರಿ ಯೋಜನಾ ಕಾರ್ಯ ಸಾಗುತ್ತಿದ್ದು, ಈ ಯೋಜನೆ 1988ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಇದರ ಹಿನ್ನಲೆಯಲ್ಲಿ ಸಲವಳ್ಳಿಯಲ್ಲಿ ಅಣೆಕಟ್ಟು ನಿರ್ಮಾಣಗೊಂಡ ನಂತರ ಮುಳುಗಡೆಯಾಗಲಿರುವ ಪ್ರದೇಶಗಳಲ್ಲಿ

ಕುರ್ಡಿಗ್ರಾಮ, ದೇವಾಲಯವಿರುವ ಪ್ರದೇಶವೂ ಸಹ ಸೇರಿದೆ. ಇದರಿಂದಾಗಿ ಮುಂಜಾಗ್ರತಾ ಕ್ರಮವಾಗಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು, ಈ ದೇವಾಲಯವನ್ನು ಬೇರೆಡೆಗೆ ಸ್ಥಳಾಂತರಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದು, ಮೊದಲಕಂತಾಗಿ ದೇವಾಲಯದ ಭಾಗಗಳನ್ನು ವೈಜ್ಞಾನಿಕವಾಗಿ ಅಂಕಿತಗೊಳಿಸಿ, ಹಂತ ಹಂತವಾಗಿ ಅವುಗಳನ್ನು ಪುನರ್ ಸ್ಥಾಪಿಸಲು ಆಯ್ದುಕೊಂಡಿರುವ ನಿವೇಶನಕ್ಕೆ ವರ್ಗಾಯಿಸುವ ಕಾರ್ಯ ಸದ್ಯ ಮುಗಿದಿದೆ. ಈ ದೇವಾಲಯವನ್ನು ಸ್ಥಳಾಂತರಿಸುವ ಯೋಜನೆಯನ್ನು ಪೋರ್ಚುಗೀಸ ಗೌರ್ನರ್ ಡಿ ಸಿಲ್ವ ಬಹಳ ಹಿಂದೆಯೇ ಸೂಚಿಸಿದ್ದುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ದೇವಾಲಯವು ಪ್ರಸ್ತುತ 43 ಮಿ. ಎತ್ತರದಲ್ಲಿದ್ದು ಗುಲೋಳಿ ನದಿಯ ಎಡದಂಡೆಯ ಮೇಲೆ ಉತ್ತರವಾಹಿನಿ ನದಿ ಪೂರ್ವಕ್ಕೆ ತಿರುಗಿರುವ ಸ್ಥಳದಲ್ಲಿ ಕಟ್ಟಲ್ಪಟ್ಟಿದ್ದು, ಈಗ ಆಯ್ಕೆ ಮಾಡಿರುವ ನಿವೇಶನವು ಪ್ರಸ್ತುತ ನಿವೇಶನದಿಂದ ಉತ್ತರಾಭಿಮುಖವಾಗಿ ಸುಮಾರು 12 ಕಿ.ಮಿ. ದೂರದ ಸಲವಳ್ಳಿ ಅಣೆಕಟ್ಟು ನಿವೇಶನದ ಬಳಿಯಲ್ಲಿ 75 ಮಿ. ಎತ್ತರದ ಪ್ರದೇಶದಲ್ಲಿ ಪುನರ್ ಸ್ಥಾಪಿತಗೊಳ್ಳುವುದಿದೆ. ಅಲ್ಲಿನ ಪರಿಸರವು ಪ್ರಸ್ತುತ ಪರಿಸರಕ್ಕೆ ನೂರಕ್ಕೆ ನೂರರಷ್ಟು ತಾಳೆ ಹೊಂದುತ್ತಿದ್ದು ಭಾರತೀಯ ಪುರಾತತ್ವ ಸರ್ವೇಕ್ಷಣದ ಸ್ಮಾರಕ ಸಂರಕ್ಷಣಾ ಪರಿಣತಿಗೆ ಉತ್ತಮ ಉದಾಹರಣೆಯಾಗಿ ನಿಲ್ಲಲಿದೆ. ಈ ಯೋಜನೆ ಕಾರ್ಯಗತಗೊಂಡ ನಂತರ ಪ್ರವಾಸಿ ಆಕರ್ಷಣಾ ಕೇಂದ್ರವಾಗಿ ನೂರಾರು ಪ್ರವಾಸಿಗಳ ಮೆಚ್ಚುಗೆಗೆ ಪಾತ್ರವಾಗುವುದರಲ್ಲಿ ಸಂಶಯವಿಲ್ಲ.

ಗ್ರಂಥ ಋಣ

೧. ಪಿ. ಟಿ. ಗುಣೆ (೧೯೮೦) : ಗೆಜೆಟಿಯರ್ ಆಫ್ ಗೋವಾ, ದಾಮನ್ ಅಂಡ್ ದಿಯು, ಭಾಗ–೧, ಗೋವಾ ; ಪಣಜಿ.

೨. ರಾಜಗೋಪಾಲ್ ಎಸ್. (೧೯೮೦) : ಓಲ್ಡ್ ಗೋವಾ, ಎ.ಎಸ್.ಐ., ದೆಹಲಿ.

ಕರ್ನಾಟಕದಲ್ಲಿ ಕದಂಬರ ಕಾಲ ಶಿಲಾವಾಸ್ತುವಿನ ಆರಂಭ ಕಾಲವೆನ್ನಬಹುದು. ಅವರು ವಾಸ್ತುಶಿಲ್ಪಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದಾರೆ. ದೇವಾಲಯಗಳ ಜೊತೆಗೆ ಜೈನಬಸದಿಗಳೂ ಆ ಕಾಲದಲ್ಲಿ ನಿರ್ಮಿತವಾಗಿವೆ. ಕದಂಬಶೈಲಿ ಎಂದು ವಾಸ್ತುಶಿಲ್ಪದಲ್ಲಿ ಬೇರೆ ಬೇರೆಯಾಗಿ ಗುರುತಿಸಲು ತಕ್ಕಷ್ಟು ಉದಾಹರಣೆಗಳಿಲ್ಲದಿದ್ದರೂ ಸ್ಥೂಲವಾಗಿ ಅದರ ವೈಶಿಷ್ಟ್ಯವನ್ನು ಹೀಗೆ ಸೂಚಿಸಬಹುದು: ಚತುರಸ್ರ ಅಥವಾ ದೀರ್ಘಚತುರಸ್ರವಾದ ತಲವಿನ್ಯಾಸ, ಸರಳವಾದ ಗೋಡೆಗಳು, ಅವುಗಳಿಗೆ ಅಡ್ಡಲಾಗಿ ಮಧ್ಯೆ ಹೂ ಸಾಲಿನಿಂದ ಕೂಡಿದ ದೊಡ್ಡಪಟ್ಟಿಕೆ, ಗರ್ಭಗೃಹದ ಮೇಲೆ ಪಿರಮಿಡ್ಡಿನಾಕೃತಿಯಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಮೇಲೆ ಹೋದಂತೆ ಚಿಕ್ಕದಾಗುವ ಚಪ್ಪಟೆ ಸ್ತರಗಳು, ಒಮ್ಮೊಮ್ಮೆ ಅವುಗಳಿಗೆ ಮೇಲಿದ್ದ ದಂತಾಕೃತಿಯ ಸಾಲುಗಳು ಇದ್ದು ಇದನ್ನು ಕದಂಬನಾಗರ ಶೈಲಿ ಎಂದು ಕರೆಯಲಾಗುತ್ತದೆ. ಈಗ ಉಳಿದು ಬಂದಿರುವ ಕದಂಬರ ಕಾಲದ ಕಟ್ಟಡಗಳಲ್ಲಿ ಉರುಟು ಕಲ್ಲುಗಳಿಂದ ನಿರ್ಮಿತವಾದ ಗರ್ಭಗೃಹಕ್ಕಿಂತ ಸುಕನಾಸಿಯು ದೊಡ್ಡದಾಗಿರುವ, ಯಾವ ರೀತಿಯ ಶಿಲ್ಪಾಲಂಕರಣವೂ ಇಲ್ಲದ ಹಲಸಿಯ ಜೈನ ಬಸದಿ ಅತ್ಯಂತ ಪ್ರಾಚೀನವೆನ್ನಬಹುದು. ಈಗ ಉಳಿದುಬಂದಿರುವ ಅತಿ ಪ್ರಾಚೀನ ಶಿಲಾನಿರ್ಮಿತ ಕಟ್ಟಡವೂ ಇದೇ. ಈ ಊರಿನಲ್ಲಿರುವ ಹತ್ತಿಕೇಶ್ವರ, ಕಲ್ಲೇಶ್ವರ, ಸುವರ್ಣೇಶ್ವರ, ರಾಮೇಶ್ವರ ದೇವಾಲಯಗಳೂ ಕದಂಬರ ಕಾಲಕ್ಕೆ ಸೇರಿದವು.

ಕರ್ನಾಟಕ ವಿಷಯ ವಿಶ್ವಕೋಶ
ಪುಟ–1304

ಆರ್. ರಾಮಕೃಷ್ಣ

ಜನಾಂಗ, ಭಾಷೆ ಮತ್ತು ಸಂಸ್ಕೃತಿ

ಜನಾಂಗ ಎಂಬ ಪದ, ಭಾಷೆ ಸಂಸ್ಕೃತಿ ಎಂಬ ಅರ್ಥಗಳಲ್ಲಿ ಬಳಕೆಯಾಗಿದೆ. ಜನಾಂಗಿಕ ಭಿನ್ನತೆಗಳು ಮಾನವನ ದೈಹಿಕ ರಚನೆಗಳಲ್ಲಿಯ ವ್ಯತ್ಯಾಸಗಳನ್ನು ಒಳಗೊಂಡಿವೆ. ಈ ರಚನಾತ್ಮಕ ವ್ಯತ್ಯಾಸಗಳನ್ನು ವಂಶವಾಹಿಗಳು (ಜೀನ್ಸ್) ನಿರ್ಧರಿಸುತ್ತವೆ. ಆದುದರಿಂದ ಜನಾಂಗ ಎಂಬುದು ಜೈವಿಕವಾದ ಅನುವಂಶಿಕತೆಗೆ ಸಂಬಂಧಿಸಿದ ಪದ ಎಂಬ ಸ್ಪಷ್ಟ ತಿಳಿವಳಿಕೆ ವಿದ್ವಾಂಸರಲ್ಲಿ ಇಲ್ಲದ್ದರಿಂದಲೇ ಆ ಪದ ಬೇರೆ ಬೇರೆ ಅರ್ಥಗಳಲ್ಲಿ ಪ್ರಯೋಗಗೊಂಡಿರುವುದಕ್ಕೆ ಕಾರಣವಿರಬಹುದು. ಅನುವಂಶಿಕತೆಯ ಕಾರಣದಿಂದಾಗಿ ಮಾನವನ ದೈಹಿಕ ಲಕ್ಷಣಗಳು ಬೇರೆಯಾಗಿವೆ. ಅವು : 1 ತಲೆಗೂದಲು ಮೃದು (ನುಣುಪು), ನೇರ (ನೆಟ್ಟಗಿರುವುದು), ಗುಂಗುರು ಮತ್ತು ಉಣ್ಣೆಯಂಥದು (ತುಪ್ಪಳು) ; 2 ದೇಹದ ಎತ್ತರ, ಎದೆ ಭುಜಗಳ ಪ್ರಧಾನ ಅಳತೆ ; 3 ತಲೆ ಆಕಾರ ; 4 ಮುಖ ಲಕ್ಷಣ : ಕಣ್ಣು, ಮೂಗು, ಗದ್ದ, ಕಿವಿ, ಕೆನ್ನೆಲುಬು, ದವಡೆಯ ರೂಪ ; 5 ಚರ್ಮದ ಬಣ್ಣ ; 6 ತೋಳು ಮತ್ತು ಕಾಲುಗಳ ಉದ್ದ. ಜನಾಂಗಿಕ ಸಮೂಹಗಳನ್ನು ವರ್ಗೀಕರಿಸುವಾಗ ಈ ಎಲ್ಲ ಲಕ್ಷಣಗಳು ಮುಖ್ಯವಾಗಿರುತ್ತವೆ.

ಜನಾಂಗಕ್ಕೂ ಭಾಷೆ ಮತ್ತು ಸಂಸ್ಕೃತಿಗೂ ಇರುವ ಅರ್ಥಭೇದಗಳನ್ನು ವಿವರಣೆಗಳನ್ನೂ ಗಮನಿಸದೆ ಅವನ್ನೆಲ್ಲ ಸಮಾನಾರ್ಥದಲ್ಲಿ ಬಳಸಿರುವುದರಿಂದ ಗೊಂದಲಕ್ಕೂ ಸಂದೇಹಕ್ಕೂ ಆಸ್ಪದವಾಗಿದೆ. ಮಾನವ ಶಾಸ್ತ್ರಜ್ಞರು ಮಾನವನನ್ನು ದೈಹಿಕ ರಚನೆಯ ದೃಷ್ಟಿಯಿಂದ ಜನಾಂಗಗಳನ್ನಾಗಿ ವರ್ಗೀಕರಿಸಿರುವಂತೆಯೇ ಭಾಷಾವರ್ಗೀಕರಣದಲ್ಲಿ ಆಸಕ್ತಿ ವಹಿಸಿದ ವಿದ್ವಾಂಸರ ಪೈಕಿ ಕೆಲವರು ಭಾಷೆಗಳನ್ನು ಜನಾಂಗದ ರೀತಿಯಲ್ಲೇ ವರ್ಗೀಕರಿಸಿ ತಪ್ಪು ಮಾಡಿದರು. ನಿರ್ದಿಷ್ಟ ಜನಾಂಗವೊಂದಕ್ಕೆ ಭಾಷೆ ಯಾವುದೂ ಇಲ್ಲವೆಂಬ ವಿಚಾರ ಅವರ ಅರಿವಿಗೆ ಬರಲಿಲ್ಲವಾದ್ದರಿಂದ ಸ್ಲಾವಿಕ್, ಲ್ಯಾಟಿನ್, ಸೆಮಿಟಿಕ್, ಆರ್ಯನ್ (ಆರ್ಯ), ದ್ರವಿಡಿಯನ್ (ದ್ರಾವಿಡ) ಮುಂತಾದ ಪದಗಳು ಜನಾಂಗ ಎಂಬ ಅರ್ಥದಲ್ಲೇ ಬಳಕೆಯಾದವು. ವಾಸ್ತವಿಕವಾಗಿ ಅವು ಭಾಷೆಗಳನ್ನು ಪ್ರತಿನಿಧಿಸುತ್ತವೆಯೇ ಹೊರತು ಜನಾಂಗಗಳನ್ನು ನಿರ್ದೇಶಿಸುವಂಥವಲ್ಲ. ಸ್ಲಾವಿಕ್ ಭಾಷೆಗಳನ್ನಾಡುವ ಜನ (ರಷ್ಯನ್, ಪೋಲಿಷ್ ಮತ್ತು ಸರ್ಬಿಯನ್) ಬೇರೆ ಬೇರೆ ಜನಾಂಗ

ಗಳಿಗೆ ಸೇರಿದವರು. ಅಂತೆಯೇ ಸ್ಪ್ಯಾನಿಷ್, ಇತಾಲಿಯನ್ ಮತ್ತು ಫ್ರೆಂಚ್ ಭಾಷೆಗಳನ್ನಾಡುವವರೂ (ಲ್ಯಾಟಿನ್ ಜನ) ಸೆಮಿಟಿಕ್ ಗುಂಪಿನ ಅರಾಬಿಕ್, ಹೀಬ್ರೂ ಅಥವಾ ಅರಮಾಯಿಕ್ ಭಾಷೆಗಳನ್ನಾಡುವವರೂ ವಿವಿಧ ಜನಾಂಗಗಳಿಗೆ ಸೇರಿದ್ದಾರೆ. ಭಾರತದ ಪ್ರಮುಖ ಭಾಷಾಪರಿವಾರಗಳಿಂದ ಆರ್ಯ, ದ್ರಾವಿಡ ಗುಂಪಿಗೆ ಸೇರಿದ ಅನೇಕ ಭಾಷೆಗಳನ್ನು ಯಾವುದೇ ಒಂದು ನಿರ್ದಿಷ್ಟ ಜನಾಂಗ ಮಾತನಾಡುತ್ತಿಲ್ಲ. ಬೇರೆ ಬೇರೆ ಜನಾಂಗಿಕ ವರ್ಗಗಳಿಗೆ ಸೇರಿದ ಪಪುವನ್, ಮಲಯನ್ ಮತ್ತು ಪಾಲಿನೇಷಿಯನ್ನರು ಮಲಯೋ-ಪಾಲಿನೇಷಿಯನ್ ಭಾಷಾವರ್ಗಕ್ಕೆ ಸೇರಿದ ಭಾಷೆಗಳನ್ನಾಡುತ್ತಾರೆ. ಪಪುವನ್ನರು ಆಡುವ ಭಾಷೆ ವಿಶಿಷ್ಟವಾದುದು. ಅದು ಅವರ್ಗೀಕೃತ ಭಾಷಾಗುಂಪಿಗೆ ಸೇರಿದ್ದೆಂದು ಮೋರಿಸ್ ಎಂಬಾತ ಅಭಿಪ್ರಾಯಪಟ್ಟಿದ್ದಾನೆ.

ಭಾಷೆ ಸಮಾಜದ ಪ್ರತಿನಿಧಿ. ಸಾಮಾಜಿಕ ಕ್ರಿಯೆ. ದೈಹಿಕ ರಚನೆಯಂತೆ ಅನುವಂಶಿಕವಲ್ಲ. ಆದುದರಿಂದ ನಮ್ಮ ತಾಯ್ನುಡಿ ತಲೆತಲೆಗೂ ಮುಂದುವರಿಯುತ್ತದೆ ಎಂಬ ಮಾತು ಸುಳ್ಳು. ತಮಿಳು ಅಥವಾ ಕನ್ನಡ ಭಾಷೆಯನ್ನಾಡುವ ಒಂದು ಕುಟುಂಬ ತಾಯಿನಾಡಿನಿಂದ ದೂರವಾಗಿ ಪರದೇಶದಲ್ಲೇ ನೆಲಸಿದರೆ ಅವರ ಸಂತಾನ ತಾಯ್ನುಡಿಯನ್ನೇ ಆಡುತ್ತದೆಯೆ ? ಭಾಷೆ ವಂಶಪಾರಂಪರ್ಯ ರೂಪದಲ್ಲಿ ಬರುವಂಥವಲ್ಲ. ಅದು ಕಲಿಯುವುದರಿಂದಲೂ, ಕಲಿಯುವುದರಿಂದಲೂ ಬರುವ ವಿದ್ಯೆ, ಕಪ್ಪು, ಬಿಳಿ ಎಂಬ ವರ್ಣಗಳಿಂದ ಸಾಗಿಬಂದುದಲ್ಲ. ಅಮೆರಿಕೆಯಲ್ಲೇ ಹುಟ್ಟಿ ಬೆಳೆದ ಸಾವಿರಾರು ಮಂದಿ ನೀಗ್ರೋಗಳಿಗೆ ಹಾಗೂ ಇನ್ನಿತರ ಜನಾಂಗಗಳಿಗೆ ಇಂಗ್ಲಿಷ್ ಬಿಟ್ಟು ಬೇರೆ ಭಾಷೆ ಗೊತ್ತಿಲ್ಲ. ಆದ್ದರಿಂದ ಜನಾಂಗಕ್ಕೂ ಭಾಷೆಗೂ ಸಂಬಂಧ ಕಲ್ಪಿಸುವುದು ಸರಿಯಲ್ಲ. ಭಾಷೆಯನ್ನಾಡುವ ಜನರನ್ನು ಮುಖ್ಯ ಆಧಾರವಾಗಿಟ್ಟುಕೊಂಡು ಭಾಷೆಗಳನ್ನು ವರ್ಗೀಕರಿಸುವ ಕ್ರಮ ಸಾಧುವಲ್ಲ.

ಜನಾಂಗಿಕ ಭಿನ್ನತೆ ದೈಹಿಕ ವ್ಯತ್ಯಾಸಗಳನ್ನು, ಭೌತಿಕ ಅನುವಂಶಿಕತೆಯನ್ನು ಪಡೆದಿರುವಂಥದು. ಮಾನವ ಸಂಸ್ಕೃತಿಗಳಲ್ಲೂ ಅನೇಕ ಬಗೆಯ ಭಿನ್ನತೆಗಳನ್ನು ಗುರುತಿಸಬಹುದಾದ ಸಾಧ್ಯತೆಗಳಿವೆ. ಒಂದು ಸಾಮಾಜಿಕ ಗುಂಪಿನ ಸದಸ್ಯರು ಅರ್ಜಿಸಿದ ವರ್ತನಾ ಮಾದರಿಗಳ ಒಟ್ಟು ಮೊತ್ತದ ಮೇಲೆ ಸಂಸ್ಕೃತಿ ಬದಲಾಗುತ್ತಾ ಹೋಗುತ್ತದೆ. ಮುಂದುವರಿದ ದೇಶಗಳಲ್ಲಿ ಇಂಥ ವ್ಯತ್ಯಾಸ ಸಹಜವಾಗಿಯೇ ಕಾಣಿಸಿಕೊಳ್ಳುತ್ತದೆ. ಜಪಾನ್, ಭಾರತ, ಅಮೆರಿಕ, ಯೂರೋಪ್ ರಾಷ್ಟ್ರಗಳ ಜನ ತಮ್ಮ ಆಹಾರ, ಉಡುಪು, ಧರ್ಮ ಮತ್ತಿತರ ಸಾಂಸ್ಕೃತಿಕ ಪ್ರಕಾರಗಳಲ್ಲಿ ಭಿನ್ನರಾಗಿದ್ದಾರೆ. ಹೀಗಿದ್ದೂ ಅನೇಕ ವೇಳೆ ಜನಾಂಗಗಳ ಜೊತೆ ಸಾಂಸ್ಕೃತಿಕ ಗುಂಪುಗಳನ್ನು ಸಮೀಕರಿಸುವ ಪ್ರಯತ್ನ ನಡೆದಿದೆ. ಉದಾಹರಣೆಗೆ ನೀಗ್ರೋ ಸಂಸ್ಕೃತಿ, ಯೆಹೂದಿ ಜನಾಂಗ ಎಂಬ ಪ್ರಯೋಗಗಳನ್ನು ಗಮನಿಸಿದಾಗ ಸಹಜವಾಗಿಯೇ ಸಂಶಯ ಮೂಡುತ್ತದೆ. ಕಾರಣ, ಎಲ್ಲ ನೀಗ್ರೋಗಳಿಗೂ ಸಮಾನ ಸಂಸ್ಕೃತಿ ಯಾವುದೂ ಇಲ್ಲ. ಆಫ್ರಿಕೆಯ, ಅಮೆರಿಕೆಯ ಮತ್ತು ಪೆಸಿಫಿಕ್ ಸುತ್ತಮುತ್ತಲಿನ ಹಲವಾರು ದ್ವೀಪಗಳಲ್ಲಿ ವಾಸಿಸುತ್ತಿರುವ ನೀಗ್ರೋ

ಗಳಲ್ಲಿ ಗಮನಾರ್ಹ ಸಾಂಸ್ಕೃತಿಕ ಭಿನ್ನತೆಗಳನ್ನು ಕಾಣಬಹುದು. ಅಷ್ಟೇ ಏಕೆ? ಆಫ್ರಿಕೆಯಲ್ಲಿ ವಾಸಿಸುತ್ತಿರುವ ನೀಗ್ರೋಗಳಲ್ಲೇ ಈ ಭಿನ್ನತೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ದಕ್ಷಿಣ ಆಫ್ರಿಕೆಯ ಬುಷ್‌ಮನ್ ಜನ ತಮ್ಮ ನೆರೆಯುವರಿಂದ ಬ್ಯಾಂಟೂ ಪಂಗಡದೊಂದಿಗೆ ಜನಾಂಗಿಕ, ಭಾಷಿಕ ಮತ್ತು ಸಾಂಸ್ಕೃತಿಕ ಅಂಶಗಳಲ್ಲಿ ವೈದೃಶ್ಯಾತ್ಮಕ ಲಕ್ಷಣಗಳನ್ನು ಪಡೆದಿದ್ದಾರೆ. ಯೆಹೂದಿ ಸಮೂಹಗಳು, ಮಂಗೋಲ ಮತ್ತು ನೀಗ್ರೋ ಜನಾಂಗಿಕ ಲಕ್ಷಣಗಳಿಂದಾಗಿ ಅಥವಾ ಅವುಗಳ ಯಾವುವೇ ಒಂದರ ವಿಶಿಷ್ಟ ಸಂಯೋಗದಿಂದಾಗಿ ಅವರನ್ನು ಕಕೇಸಿಯನ್ ವರ್ಗಕ್ಕೆ ಸೇರಿಸಬಹುದಾದ ಸಾಧ್ಯತೆಗಳಿವೆ.

ಧ್ರುವ ವಲಯಗಳಲ್ಲಿ ವಾಸಿಸುವ ಎಸ್ಕಿಮೋಗಳು ಸಹ ಭಾಷೆ, ಸಂಸ್ಕೃತಿ ವಿಚಾರಗಳಲ್ಲಿ ತಮ್ಮ ನೆರೆಹೊರೆಯುವರಿಗಿಂತ ಭಿನ್ನರಾಗಿದ್ದಾರೆ. ಅನ್ಯ ಸಾಂಸ್ಕೃತಿಕ ಲಕ್ಷಣಗಳು ಅವರ ಮೇಲೆ ಪ್ರಭಾವ ಬೀರಿವೆ. ಅಲಾಸ್ಕಾದ ದಕ್ಷಿಣ ತುದಿಯಲ್ಲಿ ವಾಸಿಸುವ ಎಸ್ಕಿಮೋಗಳು ತಮ್ಮ ಪಕ್ಕದವರಾದ ಟ್ಲಿನ್‌ಜಿಟ್ ಜನರ ಸಾಂಸ್ಕೃತಿಕ ಅಂಶಗಳನ್ನು ಸ್ವೀಕರಿಸಿದ್ದಾರೆ. ಸೈಬೀರಿಯಾದ ಈಶಾನ್ಯ ಭಾಗದಲ್ಲಿ ವಾಸಿಸುವ ಎಸ್ಕಿಮೋ ಮತ್ತು ಚಕ್ಚಿ ಜನರ ನಡುವೆ ಸಾಂಸ್ಕೃತಿಕ ಸೀಮಾರೇಖೆ ಯಾವುದೂ ಇಲ್ಲ.

ಯಾವುದಾದರೊಂದು ಪ್ರಮುಖ ಭಾಷಾಗುಂಪಿಗೆ ಸೇರಿದ ಭಾಷೆಗಳನ್ನು ನಿರ್ದಿಷ್ಟವಾದ ಸಾಂಸ್ಕೃತಿಕ ಕ್ಷೇತ್ರವೊಂದರ ಜನರೇ ಆಡುವುದಿಲ್ಲ. ಬೇರೆ ಬೇರೆ ಕ್ಷೇತ್ರಗಳ ಜನರೂ ಅನೇಕ ಕಾರಣಗಳಿಂದ ಆ ಭಾಷೆಗಳನ್ನಾಡುವರು. ಉದಾಹರಣೆಗೆ ಅಥಬಾಸ್ಕನ್ ಭಾಷೆಗಳು. ಈ ಭಾಷೆಗಳನ್ನಾಡುವ ಜನ (ಲೂಷೆ, ಸಿಪ್ಪ್ಯೂಯನ್, ಸಾರ್ಸಿ, ನವಾಹೋ ಮತ್ತು ಹ್ಯೂಪ) ವಿಭಿನ್ನವಾದ ನಾಲ್ಕು ಸಾಂಸ್ಕೃತಿಕ ಕ್ಷೇತ್ರಗಳಿಗೆ ಸೇರಿದ್ದಾರೆ. ಅವರ ಪೈಕಿ ಹ್ಯೂಪ ಇಂಡಿಯನ್ನರ ಸಂಸ್ಕೃತಿ ಸಂಕೀರ್ಣ ಬಗೆಯದು. ಹ್ಯೂಪ ಇಂಡಿಯನ್ನರು ತಮ್ಮ ನೆರೆಯುವರಾದ ಯೂರೋಕ್ ಮತ್ತು ಕಾರೋಕ್ ಜನರೊಂದಿಗೆ ಸಾಂಸ್ಕೃತಿಕವಾಗಿ ಬಹಳಷ್ಟು ಬೆರತು ಹೋಗಿದ್ದಾರೆ. ಈ ಮೂವರೂ ಅಮೆರಿಕದ ಮೂರು ಪ್ರಧಾನ ಭಾಷಾಗುಂಪುಗಳಿಗೆ ಸೇರಿದ ಭಾಷೆಗಳನ್ನಾಡುತ್ತಾರೆ. ಹ್ಯೂಪ ಇಂಡಿಯನ್ನರು ಅಥಭಾಸ್ಕನ್ ಭಾಷೆಗಳನ್ನೂ, ಯೂರೋಕರು ಆಲ್ಗೋನ್ಸಿಯನ್ ಮೂಲದಿಂದ ಬೇರೆಯಾಗಿರುವ ಎರಡು ಭಾಷಾಗುಂಪಿನ ಪೈಕಿ ಒಂದನ್ನೂ, ಕಾರೋಕರು ಹೋಕನ್ ಗುಂಪಿಗೆ ಸೇರಿದ ಭಾಷೆಗಳನ್ನು ಮಾತನಾಡುವರು.

ಈ ರೀತಿ ಜನಾಂಗ ಭಾಷೆ ಮತ್ತು ಸಂಸ್ಕೃತಿಗಳಲ್ಲಿಯ ಭಿನ್ನತೆಗಳನ್ನು ಗುರುತಿಸುವ ಪ್ರಯತ್ನ ನಡೆದಿದೆ. ಒಬ್ಬ ವ್ಯಕ್ತಿ ಒಂದು ಜನಾಂಗಿಕ ವರ್ಗಕ್ಕೆ ಸೇರಿದ್ದಾನೆ ಎಂದರೆ ಅವನ ತಾಯಿತಂದೆ ಮತ್ತು ಅವರ ಹಿರಿಯರಿಂದ ಹರಿದು ಬಂದ ವಾಂಶಿಕತೆಗೆ ಒಳಪಟ್ಟಿದ್ದಾನೆ ಎಂದರ್ಥ, ಅವರಾಡುವ ಭಾಷೆಯನ್ನು ಕಲಿತು, ಅವರ ಸಂಸ್ಕೃತಿಗೆ ಸೇರಿದ್ದಾನೆ ಎಂದರೆ ಅವರ ಸಮಾಜದಿಂದ ದತ್ತವಾದ ಕಲಿಕೆ, ಶಿಕ್ಷಣ ಮತ್ತು ಪೌರತ್ವದ ಆವಶ್ಯಕತೆಗೆ ಒಳಪಟ್ಟಿದ್ದಾನೆ ಎಂಬುದಾಗಿ ಭಾವಿಸಬಹುದು. ಜನಾಂಗಿಕ ವ್ಯತ್ಯಾಸಗಳು ಎಷ್ಟೇ ಇದ್ದರೂ ಭಾಷಿಕ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಜನಾಂಗದಿಂದ

ವಿವರಿಸಲು ಖಂಡಿತ ಸಾಧ್ಯವಿಲ್ಲ. ಏಕೆಂದರೆ ಜನಾಂಗಿಕ ವ್ಯತ್ಯಾಸಗಳಿಗಿಂತ ಸಾಂಸ್ಕೃತಿಕ ವ್ಯತ್ಯಾಸಗಳು ವೇಗವಾಗಿ ಸಾಗುತ್ತವೆ. ಜೈವಿಕ ಪರಿವರ್ತನೆ ನಿಧಾನವಾದರೆ ಮಾತ್ರ ಸಾಂಸ್ಕೃತಿಕ ಪರಿವರ್ತನೆಗಳು ಪ್ರತಿಯೊಂದು ತಲೆಮಾರಿನಲ್ಲೂ ಕಾಣಿಸಿಕೊಳ್ಳಬಹುದು. ಆದರೆ ಸಾಂಸ್ಕೃತಿಕ ಪರಿವರ್ತನೆಗಳನ್ನು ಜನಾಂಗಿಕ ಸ್ಥಿರತೆಯಿಂದ ವಿವರಿಸುವುದು ಪ್ರಯೋಜನಕಾರಿಯಲ್ಲ. ಸಂಸ್ಕೃತಿಯನ್ನು ಜನ ಸಂಪರ್ಕ, ಭೌಗೋಳಿಕ ಪರಿಸರ ಮೊದಲಾದ ಅಂಶಗಳಿಂದ ವಿವರಿಸಲು ಸಾಧ್ಯ. ಆದರೆ ಜನಾಂಗಿಕ ಭಿನ್ನತೆಗಳಿಂದ ವಿವರಿಸಲು ಸಾಧ್ಯವಾಗುವುದಿಲ್ಲ. ಸಾಂಸ್ಕೃತಿಕ ಅಂಶಗಳು ವಾಂಶಿಕವಾಗಿ ನಿರ್ಧಾರವಾಗುವಂಥವಲ್ಲ. ಅನುವಂಶಿಕ ವ್ಯತ್ಯಾಸಗಳಿಗೂ, ಬೌದ್ಧಿಕ ಸಾಮರ್ಥ್ಯಗಳಿಗೂ ಸಂಬಂಧವಿಲ್ಲ. ಈ ಕಾರಣದಿಂದ ಜನಾಂಗವನ್ನು ನಿರ್ಧರಿಸುವಲ್ಲಿ ಸಾಂಸ್ಕೃತಿಕ ಸಾಧನೆಯಲ್ಲಿಯ ವ್ಯತ್ಯಾಸಗಳನ್ನು ಪರಿಗಣನೆಗೆ ತೆಗೆದುಕೊಳ್ಳಬಾರದು.

* * * *

ಜನಾಂಗ, ಭಾಷೆ ಮತ್ತು ಸಂಸ್ಕೃತಿಗಳಲ್ಲಿ ಭಿನ್ನತೆಗಳು ಕಾಣಿಸಿಕೊಂಡ ಮಾತ್ರಕ್ಕೆ ಅವುಗಳಲ್ಲಿ ಪರಸ್ಪರ ಸಂಬಂಧ ಇಲ್ಲವೆ ಎಂಬ ಪ್ರಶ್ನೆ ಮಾಡುವುದು ಸಹಜ. ಜನಾಂಗ–ಭಾಷೆ, ಜನಾಂಗ – ಸಂಸ್ಕೃತಿ, ಭಾಷೆ – ಸಂಸ್ಕೃತಿ, ಇವುಗಳಲ್ಲಿ ಸಂಬಂಧ ಇದೆ ನಿಜ. ಆದರೆ ಅವು ಕೇವಲ ಆಕಸ್ಮಿಕ. ಅವು ಜೊತೆಯಾಗಿ ಏಕಕಾಲದಲ್ಲಿ ಉಗಮ ಹೊಂದಿ ವಿಕಾಸವಾದವಲ್ಲ. ನಿರ್ದಿಷ್ಟ ಜನಾಂಗಕ್ಕೆ ಯಾವುದೇ ಒಂದು ಭಾಷೆ, ಒಂದು ಸಂಸ್ಕೃತಿ ಸೇರಿಲ್ಲ. ಒಂದೇ ಭಾಷೆ ಬೇರೆ ಬೇರೆ ಜನಾಂಗಗಳನ್ನೂ ಸಂಸ್ಕೃತಿಗಳನ್ನೂ ಒಳಗೊಳ್ಳಬಹುದು. ಭಾಷಿಕ ಪರಿವರ್ತನೆಯಾಗದೆ ಸಾಂಸ್ಕೃತಿಕ ಪರಿವರ್ತನೆ ಸಾಧ್ಯ ಎಂಬ ವಿಚಾರವನ್ನು ಮಾನವ ಭಾಷಾವಿಜ್ಞಾನಿಗಳು ತಮ್ಮ ಸಂಶೋಧನೆಗಳಿಂದ ಸಾಬೀತುಪಡಿಸಿದ್ದಾರೆ. ಜನಾಂಗ, ಭಾಷೆ ಮತ್ತು ಸಂಸ್ಕೃತಿಗಳು ಆಕಸ್ಮಿಕ ಸಂಬಂಧ ಪಡೆದ ಮಾತ್ರಕ್ಕೇ ಅವು ಅವಿಭಾಜ್ಯ ಅಂಶಗಳೆಂದು ತಿಳಿಯುವುದು ತಪ್ಪಾಗುತ್ತದೆ. ಅವು ಪ್ರತ್ಯೇಕವಾಗಿಯೇ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬೆಳೆಯಬಲ್ಲವು.

ಸಹಾಯಕ ಗ್ರಂಥಗಳು

1 Beals, Ralph, L. Hoijer, Harry : An Introduction to Anthropology. 1965.
2 Boas, Franz ; The Mind of Primitive Man ; Race Language and culture, 1938, 1940.
3 Leiris, Michel ; Race and culture, 1951.
4 Sapir, Edward ; Language, 1949.

ಕೆ. ಕೇಶವಮೂರ್ತಿ

ಜಪಯೋಗ

ಜಕಾರೋ ಜನ್ಮ ವಿಚ್ಛೇದಃ ಪಕಾರಃ ಪಾಪನಾಶಕಃ ।
ತಸ್ಮಾಜ್ಜಪ ಇತಿ ಪ್ರೋಕ್ತೋ ಜನ್ಮ ಪಾಪ ವಿನಾಶಕಃ ॥

........ಅಗ್ನಿಪುರಾಣ

('ಜ' ಎಂದರೇನು? ಜನ್ಮ ವಿನಾಶಕವಾದುದು. 'ಪ' ಎಂದರೆ ಪಾಪಗಳನ್ನು ನಾಶಮಾಡುವುದು. ಯಾವುದು ನಮ್ಮ ಪಾಪಗಳನ್ನು ಕಳೆದು ಪುನರಾವೃತ್ತಿರಹಿತರನ್ನಾಗಿ ಮಾಡುವುದೋ ಅದೇ ಜಪವು)

ಜಪವೆಂದರೇನು ?

'ಜಪ' ಎಂಬುದು ಒಂದು ಧಾತು. ಧಾತುವೆಂದ ಕೂಡಲೆ ಅದು ಒಂದು ಕ್ರಿಯೆಯೆಂದ ಹಾಗಾಯಿತು. ಅದರ ಅರ್ಥ ಹೀಗಿದೆ.

'ಜಪವ್ಯಕ್ತಾಯಾಂ ವಾಚಿ'

ಅಂದರೆ ದೇವತಾ ಮಂತ್ರವೊಂದನ್ನೋ ಅಥವಾ ಪರಮಾತ್ಮನ ನಾಮವನ್ನೋ ಸ್ಪಷ್ಟವಾಗಿ ಉಚ್ಚರಿಸುವುದು ಅಥವಾ ಮನಸ್ಸಿನಲ್ಲಿ ಉಚ್ಚರಿಸುವುದು ಇಲ್ಲವೇ ಒಂದೇ ಮನಸಿನಿಂದ ಪಠಣೆ ಮಾಡುವುದು – ಇವೆಲ್ಲವೂ ಜಪವೆನಿಸಿಕೊಳ್ಳುವುದು.

ಜಪದ ಹಿರಿಮೆ

ಜಪ ಮಾಡುವ ಕ್ರಮವು ವಿಶ್ವದ ಎಲ್ಲ ಧರ್ಮದವರಲ್ಲಿಯೂ ಎಲ್ಲ ಸಂಪ್ರದಾಯದವರಲ್ಲಿಯೂ ಆಧ್ಯಾತ್ಮಿಕ ಸಾಧನೆಯ ಅಂಗವಾಗಿದೆ. ವಿಗ್ರಹಾರಾಧನೆಯಿಲ್ಲದಿರುವ ಅನೇಕ ಮತಗಳಲ್ಲಿ ಕೂಡ ಜಪಾನುಷ್ಠಾನವಿದೆ. ಇದರ ಮಹಿಮೆಯಿಂದಲೇ ಇತ್ತೀಚಿನ ಮಹಾಪುರುಷರು ನಮ್ಮ ಕಣ್ಣೆದುರಿನಲ್ಲಿಯೇ ಅನೇಕ ಸಿದ್ಧಿಗಳಿಂದ ವಿಜೃಂಭಿಸಿದುದು ಹಾಗೂ ವಿಜೃಂಭಿಸುತ್ತಿರುವುದು ಸುವೇದ್ಯ. ಪತಿತರನ್ನು ಉದ್ಧಾರ ಮಾಡಲು ಅನೇಕ ವಿಭೂತಿ ಪುರುಷರು ಜೀವನ್ಮುಕ್ತರಾದಾಗ್ಯೂ ಸತ್ಯಸಂಕಲ್ಪ ಮಾತ್ರದಿಂದ ಪುನಃ ಇಲ್ಲಿ ಆವಿರ್ಭವಿಸಿ ಪತಿತರನ್ನೂ ಸಹ ಸನ್ಮಾರ್ಗಿಗಳನ್ನಾಗಿ ಮಾಡುತ್ತಾರೆ.

ಕಲಿಯುಗದಲ್ಲಿ 'ಜಪ' ಅಥವಾ 'ನಾಮ ಸಂಕೀರ್ತನೆ'ಯೇ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಸುಲಭ ಮಾರ್ಗವೆಂದು ಅನೇಕ ಮಹನೀಯರು ಸಾರಿದ್ದಾರೆ. ಉಳಿದ ಮೂರು ಯುಗಗಳಿಗಿಂತ ಈ ಯುಗದಲ್ಲಿ ಮಾನವನ ಆಯುಃ ಪ್ರಮಾಣ ಅಲ್ಪ. ಅಷ್ಟು ಅಲ್ಪ ಅವಧಿಯಲ್ಲಿ ತಪಸ್ಸು-ಯಜ್ಞ ಯಾಗಾದಿಗಳಿಂದ ಸಾಕ್ಷಾತ್ಕಾರ ಹೊಂದುವುದು ಕಷ್ಟ ಸಾಧ್ಯ. ಆದ್ದರಿಂದಲೇ ಮಹನೀಯರು ಹೀಗೆ ಹೇಳಿದ್ದಾರೆ.

ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯ ನೌಸ್ತ್ವಯಾ
ಪಾರಂ ದುಃಖೋದಧೇಃ ಗಂತುಂ ತರಯಾವನ್ನ ಭಿದ್ಯತೇ ||

ಅತಿಶಯವಾದ ನಮ್ಮ ಪುಣ್ಯದ ವಿನಿಮಯದಿಂದ ಈ ದೇಹವೆಂಬ ದೋಣಿಯನ್ನು ಆ ಪರಮಾತ್ಮನಿಂದ ಕೊಂಡುಕೊಂಡಿದ್ದೇವೆ. ಈ ದೋಣಿಯು ಬಿರುಗಾಳಿಗೆ ಸಿಕ್ಕಿ ಸೀಳಿ ಹೋಗುವುದರೊಳಗಾಗಿ ದುಃಖವೆಂಬ ಸಂಸಾರ ಸಮುದ್ರವನ್ನು ದಾಟಬೇಕು. ಈ ಸಂಸಾರವೆಂಬ ಘೋರ ಸಮುದ್ರವನ್ನು ದಾಟಲು ಇರುವ ಮಾರ್ಗವೆಂದರೆ 'ಜಪ ಯೋಗ; ಜಪದಿಂದ ಸಾಕ್ಷಾತ್ಕಾರ ಸುಲಭ ಸಾಧ್ಯ.

ಪೂಜಾಕೋಟಿ ಸಮಂ ಸ್ತೋತ್ರಂ ಸ್ತೋತ್ರಕೋಟಿ ಸಮೋ ಜಪಃ |

ಎಂದು ಹೇಳಿದ್ದಾರೆ. ಅಂದರೆ ದೇವರನ್ನು ಕೋಟಿ ಆವೃತ್ತಿ ಪೂಜಿಸಿದರೆ ಅದು ಒಂದು ಸ್ತೋತ್ರಕ್ಕೆ ಸಮವಾಗುತ್ತದೆ. ಅಂತಹ ಕೋಟಿ ಸ್ತೋತ್ರಕ್ಕೆ ಒಂದು ಜಪವು ಸಮವೆಂದರೆ ಜಪದ ಹಿರಿಮೆಯೆಷ್ಟೆಂಬುದು ಸುವೇದ್ಯ.

ಅನೇಕ ಪುಣ್ಯಪುರುಷರು 'ನಾಮಜಪ' ದಿಂದಾಗುವ ತಮ್ಮ ಅನುಭವಾಮೃತವನ್ನು ಹೊರಗೆಡಹಿದ್ದಾರೆ. ಜಪಯೋಗ ಸಾಧನೆಯಿಂದ ದುರಾಚಾರಿಯು ಧರ್ಮಾತ್ಮನಾಗುವನೆಂದು ಶ್ರೀ ಸಂತ ಏಕನಾಥರು ಹೇಳಿದ್ದಾರೆ. ಈ ಹೇಳಿಕೆಗೆ ಕ್ರೌಂಚಾಟವಿಯಲ್ಲಿ ಚೋರನಾಗಿದ್ದ ಪೂರ್ವಾಶ್ರಮದ ವಾಲ್ಮೀಕಿಯೇ ಉತ್ತಮ ಉದಾಹರಣೆ.

ಈ ಜಪಕ್ಕೆ ಶ್ರಮ-ಖರ್ಚು ಎರಡೂ ಇಲ್ಲವೆಂದು ಸಂತ ವಿನೋಬಾಜಿಯವರ ಹೇಳಿಕೆ. ಶ್ರೀ ಸಂತ ಜ್ಞಾನೇಶ್ವರರು "ಜಪ ನೋಡುವುದಕ್ಕೆ ಸುಲಭ - ಆದರೂ ಜನ್ಮ ಜನ್ಮಾಂತರದ ಪುಣ್ಯವಿದ್ದರೇನೇ ನಾಲಗೆ ನುಡಿಯುವುದು" ಎಂದಿದ್ದಾರೆ.

ಕಠಿಣ ಪ್ರಾಣಾಯಾಮ ಹಾಗೂ ಧ್ಯಾನಗಳಿಂದ ಉದ್ಬೋಧನೆಯಾಗುವ ಕುಂಡಲಿನೀ ಶಕ್ತಿಯು ಹನ್ನೆರಡು ಕೋಟಿ ನಾಮಜಪದಿಂದ ಸಾಧ್ಯವೆಂದು ಶ್ರೀ ಟೇಂಬೆ ಮಹಾರಾಜರು ಹೇಳಿದ್ದಾರೆ. ಒಂದೊಂದು ಕೋಟಿ ಜಪಕ್ಕೆ ಒಂದೊಂದು ಸ್ಥಾನ ಶುದ್ಧವಾಗಿ, ವಿಕಲ್ಪವಳಿದು, ಸ್ವಪ್ನಗಳಲ್ಲಿ ದಿವ್ಯದರ್ಶನಗಳಾಗಿ, ಸಗುಣ ಸಾಕ್ಷಾತ್ಕಾರ, ಶ್ರೀ ಗುರುವಿನ ಅನುಗ್ರಹ ದೊರೆತು ಕೃತಕೃತ್ಯತೆಯು ಪ್ರಾಪ್ತವಾಗುವುದು ಎಂದಿದ್ದಾರೆ.

ಮಹಾತ್ಮಾ ಗಾಂಧೀಜಿಯವರು 'ನಾಮಜಪ' ಆತ್ಮವನ್ನು ಪರಿಶುದ್ಧಗೊಳಿಸುವ ದಿವ್ಯಗಂಗೆ; ಹೇಡಿತನವನ್ನು ಜಯಿಸುವ ವಜ್ರಾಯುಧ; ದುರ್ಭಾವನೆಗಳನ್ನು ಭಸ್ಮ ಮಾಡುವ ವಡಬಾಗ್ನಿ ಎಂದಿದ್ದಾರೆ.

ಹೃಷೀಕೇಶದ ಶ್ರೀ ಶಿವಾನಂದರು ಆಂಧ್ರಪ್ರದೇಶ ಸಂಚಾರ ಕಾಲದಲ್ಲಿ ಶ್ರೀ

ಮೃತ್ಯುಂಜಯ ಜಪಸಿದ್ಧಿಯಿಂದ ರೋಗಗ್ರಸ್ತ ಎತ್ತನ್ನು ನಾವು ಪುನಶ್ಚರಣೆಯಿಂದ ಅಲ್ಲೇ ಎದ್ದು ಓಡಾಡುವಂತೆ ಮಾಡಿ ಪವಾಡವನ್ನು ಸಹ ಮೆರೆದಿದ್ದಾರೆ.

ಜಪ ಮಾಡುವವನನ್ನು ಸಂರಕ್ಷಿಸುತ್ತೇನೆಂದು ಶ್ರೀ ಕೃಷ್ಣಪರಮಾತ್ಮನು ಭಗವದ್ಗೀತೆಯಲ್ಲಿ ತಾನೇ ಉದ್ಘೋಷಿಸಿದ್ದಾನೆ.

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ |
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ||

ಅಂದರೆ "ಯಾರು ನನ್ನನ್ನೇ ಅನನ್ಯ ಶ್ರದ್ಧಾಭಕ್ತಿಗಳಿಂದ ಜಪಿಸುತ್ತಾರೋ ಯಾರು ನನ್ನನ್ನೇ ಉಪಾಸಿಸುತ್ತಾರೋ ಅಂತಹವರೊಡನೆ ನಾನಿರುತ್ತೇನೆ; ಅಲ್ಲದೆ ಅವರ ಯೋಗಕ್ಷೇಮದ ಹೊಣೆಯನ್ನು ನಾನು ಹೊರುತ್ತೇನೆ." ನಮ್ಮ ಯೋಗಕ್ಷೇಮದ ಹೊಣೆಯನ್ನೇ ಹೊರುವ ಆ ಪರಮಾತ್ಮನನ್ನು ಜಪಿಸಲು ನಮಗೇಕೆ ತಾತ್ಸಾರ ?

ಯೋಗ ಸಾಧನೆಗೆ ಅನೇಕ ಮಾರ್ಗಗಳಿವೆ. ನಿಜ, ಆದರೆ ಜ್ಞಾನಯೋಗ ಮಂದಬುದ್ಧಿಯವರಿಗೆ ಸಾಧ್ಯವಿಲ್ಲ. ಕರ್ಮಯೋಗ ನಿಷ್ಕಾಮ ಕರ್ಮಿಗಳಿಗೆ ಮಾತ್ರ ಸಾಧ್ಯ. ಭಕ್ತಿಯೋಗ ಭಾವನಾ ಸಾಮರ್ಥ್ಯವುಳ್ಳ ನಿರ್ಮಲಾತ್ಮರಿಗೆ ವಿಶಾಸಲು. ರಾಜಯೋಗ ದೃಢಮನಸ್ಕರಿಗೆ ಮಾತ್ರ ಒಗ್ಗುತ್ತದೆ. ಆದರೆ ಈ 'ಜಪಯೋಗ'ದಲ್ಲಿಯ ಸುಲಭಾಚರಣೆಯು ಮಾತ್ರ ಎಲ್ಲರಿಗೂ ಒಗ್ಗತಕ್ಕದ್ದಾಗಿದೆ. ಆದರೆ ಜಪಿಸಬೇಕೆಂಬ ಮನಸ್ಸೊಂದಿದ್ದರಾಯಿತು. ಆದ್ದರಿಂದಲೇ ಪೂರ್ವಾಚಾರ್ಯರು

ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ

ಎಂದು ಹೇಳಿದ್ದಾರೆ. ಅಂದರೆ ನಮ್ಮ ಇಹಲೋಕದ ಬಂಧನಕ್ಕಾಗಲೀ ಅಥವಾ ಮೋಕ್ಷಕ್ಕಾಗಲೀ ನಮ್ಮ ನಮ್ಮ ಮನಸ್ಸೇ ಕಾರಣ. ಅಂತಹ ಮನಸ್ಸನ್ನು ಒಂದೆಡೆ ನಿಲ್ಲಿಸಿ ಜಪ ಮಾಡಬೇಕು.

ಶಂಕರ ಭಗವತ್ಪಾದರೂ ಸಹ ಜಪಯೋಗವನ್ನು ಅನುಮೋದಿಸಿದ್ದಾರೆ. ಎಲ್ಲರಿಗೂ ಜ್ಞಾನಯೋಗವು ಸಾಧ್ಯವಿಲ್ಲವೆಂದು ಅರಿತಿದ್ದ ಆಚಾರ್ಯರು ಅವರವರ ಸ್ವಭಾವಕ್ಕೆ ತಕ್ಕಂತೆ ಜಪಯೋಗ, ಭಕ್ತಿಯೋಗ, ಧ್ಯಾನಯೋಗಗಳನ್ನೂ ಹೇಳಿದ್ದಾರೆ. ವ್ಯಾಕರಣ ಸೂತ್ರವನ್ನು ಉರು ಹಚ್ಚುತ್ತಿದ್ದವನೊಬ್ಬನನ್ನು ಕಂಡ ಶ್ರೀ ಶಂಕರರು,

ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿನಹಿ ರಕ್ಷತಿ ಡುಕೃಂಕರಣೇ
ಭಜಗೋವಿಂದಂ ಭಜಗೋವಿಂದಂ ಗೋವಿಂದಂ ಭಜ ಮೂಢಮತೇ" |

ಅಂದರೆ "ನಿನಗೆ ಉತ್ಕ್ರಮಣವು ಸನ್ನಿಹಿತವಾದಾಗ ಈ ಡುಕೃಂಕರಣೇ ಸೂತ್ರವು ನಿನ್ನನ್ನು ರಕ್ಷಿಸುವುದಿಲ್ಲ. ಆದುದರಿಂದ ಗೋವಿಂದನ ನಾಮಸ್ಮರಣೆ ಮಾಡು" ಎಂದು ಆತನಿಗೆ ಉಪದೇಶಿಸಿದರು.

"ಜಿಹ್ವೇ ಶ್ರೀಕೃಷ್ಣಮಂತ್ರಂ–ಜಪ ಜಪ ಸತತಂ ಜನ್ಮ ಸಾಫಲ್ಯಮಂತ್ರಂ" ಎಂದು ಮುಕುಂದಮಾಲಾ ಸ್ತೋತ್ರದಲ್ಲಿ ನಿರೂಪಿಸಿದ್ದಾರೆ. ಅಂದರೆ "ಎಲೈ ನಾಲಿಗೆಯೇ ಸತತವೂ ಶ್ರೀ ಕೃಷ್ಣನಾಮ ಮಂತ್ರ ಜಪಿಸಿ ನಿನ್ನ ಜನ್ಮವನ್ನು ಸಾರ್ಥಕ ಮಾಡಿಕೊ."

"ಯಜ್ಞಾನಾಂ ಜಪಯಜ್ಞೋಽಸ್ಮಿ" ಎಂಬುದು ಗೀತೆಯ ವಿಭೂತಿ ಯೋಗದ ಇಪ್ಪತ್ತೈದನೇ ಶ್ಲೋಕ. ಪರಮಾತ್ಮನು ತನ್ನ ವಿಭೂತಿಯನ್ನು ಅರ್ಜುನನಿಗೆ ವಿವರಿಸುತ್ತಾ "ಯಜ್ಞಗಳಲ್ಲಿ ಜಪಯಜ್ಞವು ನಾನು ; ಅಂದರೆ ಯಜ್ಞಗಳೆಲ್ಲಾ ಜಪ ಯಜ್ಞವು ಸರ್ವಶ್ರೇಷ್ಠವು" ಎಂದು ಹೇಳಿದ್ದಾನೆ. ಹಾಗಾದರೆ ಯಜ್ಞವೆಂದರೇನು ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಪುರುಷಸೂಕ್ತದಲ್ಲಿಯೂ ಸಹ,

"ಯಜ್ಞೇನ ಯಜ್ಞಮಯಜಂತ ದೇವಾಃ"

ಎಂಬ ಮಾತು ಬರುತ್ತದೆ.

ಯಜ್ಞವೆಂದರೆ ಆರಾಧನೆ, ಪೂಜೆ, ಅರ್ಚನೆ ಮಂತ್ರ ಪೂರ್ವಕವಾಗಿ, ಅಗ್ನಿಯಲ್ಲಿ ದೇವತಾ ಪ್ರೀತ್ಯರ್ಥವಾಗಿ ಉಕ್ತ ಸಾಮಗ್ರಿಗಳನ್ನು ಅರ್ಪಿಸುವ ಕ್ರಮ.

ಜಪದ ಕ್ರಮಗಳು :

ಜಪದಲ್ಲಿ ಮೂರು ಕ್ರಮಗಳಿವೆ, ಗಟ್ಟಿಯಾಗಿ ಬೀಜ ಮಂತ್ರವನ್ನೋ ಅಥವಾ ದೇವತಾ ನಾಮವನ್ನೋ ಸ್ಮರಣೆ ಮಾಡುವುದಕ್ಕೆ 'ವೈಖರೀ' ಎಂತಲೂ, ತುಟಿಗಳು ಅಲುಗಾಡುತ್ತಿದ್ದರೂ ಶಬ್ದವು ಹೊರಗೆ ಬಾರದೇ ಇರುವ ಕ್ರಮಕ್ಕೇ 'ಉಪಾಂಶು'ವೆಂತಲೂ ತುಟಿಗಳನ್ನು ಅಲುಗಾಡಿಸದೆ ಮನಸ್ಸಿನಲ್ಲಿಯೇ ಉಚ್ಚರಿಸುವ ಕ್ರಮಕ್ಕೆ 'ಮಾನಸಿಕ ಜಪ' ವೆಂತಲೂ ಹೆಸರು. ಇದನ್ನು 'ಮಾನಸೀ ಜಪ'ವೆಂತಲೂ ಕರೆಯುವರು. ವೈಖರೀ ಜಪಕ್ಕಿಂತ ಹತ್ತುಪಾಲು ಗುಣವುಳ್ಳದ್ದು ಉಪಾಂಶು, ಉಪಾಂಶುವಿಗಿಂತ ನೂರುಪಟ್ಟು ಗುಣವುಳ್ಳದ್ದು ಮಾನಸೀ ಜಪ. ಆದ್ದರಿಂದ ಜಪವನ್ನು ಮನಸ್ಸಿನಲ್ಲಿಯೇ ಜಪಿಸುವುದುತ್ತಮ.

ಜಪವಿಧಾನ :

ಜಪ ಮಾಡುವ ಸ್ಥಳವು ಪರಿಶುದ್ಧವಾದ ಕೋಣೆ, ನದೀ ತೀರ, ದೇವಾಲಯ, ಸಂಸ್ಕಾರ ಪಡೆದ ಅಶ್ವತ್ಥ ಅಥವಾ ಔದುಂಬರ ವೃಕ್ಷ ಆಗಿರಬಹುದು. ಏಕಾಗ್ರತೆಗೆ ಭಂಗ ಬರುವ ಸ್ಥಳವಾಗದಿದ್ದರಾಯಿತು. ಈ ದೃಷ್ಟಿಯಿಂದ ಸ್ವಗೃಹದ ದೇವತಾಲಯ ಶ್ರೇಷ್ಠವಾದುದು. ಸ್ವಚ್ಛವಾದ ಈ ಗೃಹದಲ್ಲಿ ಜಪಾಸನವನ್ನು ಹಾಕಿ ಅದರ ಮೇಲೆ ಕುಳಿತುಕೊಳ್ಳಬೇಕು.

ಜಪವನ್ನು ಬರಿಯ ನೆಲದ ಮೇಲೆ ಕುಳಿತು ಮಾಡಬಾರದು. ಕಾರಣ ಆಧ್ಯಾತ್ಮ ಸಾಧಕನ ಶರೀರದಿಂದ ಸಾಧನಾ ಸಮಯದಲ್ಲಿ ವಿದ್ಯುಚ್ಛಕ್ತಿಯು ಹರಿಯುತ್ತಿರುತ್ತದೆ. ಈ ಶಕ್ತಿಯು ಭೂಮಿಗೆ ಹೋಗಬಾರದು. ಆದ್ದರಿಂದ ವಿದ್ಯುನ್ನಿರೋಧಕವಾದ ದರ್ಭಾಸನ ಅದರ ಮೇಲೆ ಉಣ್ಣೆಯ ಅಥವಾ ಶುದ್ಧವಾದ ಹತ್ತಿ ಬಟ್ಟೆಯನ್ನು ಹಾಸಿ, ಅದರ ಮೇಲೆ ಕುಳಿತುಕೊಳ್ಳಬೇಕು. ಅನುಕೂಲವಿದ್ದವರು ಕೃಷ್ಣಾಜಿನ ಅಥವಾ ವ್ಯಾಘ್ರ

ಜಿನಗಳನ್ನು ಪಯೋಗಿಸಬಹುದು. ಯಾವುದೂ ಸಿಗದಿದ್ದರೆ ಚಾಪೆಯ ಮೇಲೆ ಕುಳಿತು ಕೊಂಡು ಜಪವನ್ನಾಚರಿಸಬಹುದು. ಈ ಆಸನವು ಪೂರ್ವ ಇಲ್ಲವೇ ಉತ್ತರಾಭಿ ಮುಖವಾಗಿರಬೇಕು. ಹೆಚ್ಚು ಎತ್ತರವೂ, ಹೆಚ್ಚು ತಗ್ಗೂ ಆಗಿರಬಾರದು.

"ನಾತ್ಯುಚ್ಛ್ರಿತಂ ನಾತಿ ನೀಚಂ ಚೇಲಾಜಿನ ಕುಶೋತ್ತರಂ . . ."

ಎಂಬುದು ಗೀತಾವಾಣಿ. ಜಪಕ್ಕೆ ಕುಳಿತುಕೊಳ್ಳುವಾಗ ಪತಂಜಲಿಗಳು ಅಧ್ಯಾತ್ಮ ಸಾಧನೆಗಾಗಿ ಹೇಳಿರುವ ಪದ್ಮಾಸನ, ಸ್ವಸ್ತಿಕಾಸನ, ವಜ್ರಾಸನ, ಭದ್ರಾಸನ, ವೀರಾಸನ ಮತ್ತು ಸಿದ್ಧಾಸನಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಂಡು ಆಸೀನರಾಗಬೇಕು. ಈ ಮೇಲೆ ಹೇಳಿರುವ ಯಾವ ಆಸನವೂ ಆಗದಿದ್ದರೆ,

"ತತ್ರಸ್ಥಿರ ಸುಖಮಾಸನಂ"

ಎಂದಿದ್ದಾರೆ. ಅಂದರೆ ಸ್ಥಿರವಾಗಿಯೂ, ಸುಖಕರವಾಗಿಯೂ ಇರುವ ಆಸನದಲ್ಲಿ ಕುಳಿತು ಕೊಳ್ಳಬೇಕು. ನಮಗೆ ಒಗ್ಗದಿರುವ ಆಸನ ಸಾಧನೆಗೆ ಹೋಗಿ ನೋವಾಗಿ ಮನಸ್ಸಿನ ಏಕಾಗ್ರತೆಗೆ ಭಂಗತಂದು ಕೊಳ್ಳಬಾರದು. ನಿತ್ಯವೂ ಒಂದೇ ಆಸನದಲ್ಲಿ ಕುಳಿತುಕೊಳ್ಳ ಬೇಕೇ ವಿನಃ ಆಸನಗಳನ್ನು ಪದೇ ಪದೇ ಬದಲಾಯಿಸುತ್ತಿರಬಾರದು. ಇನ್ನು ಕುಳಿತು ಕೊಳ್ಳುವ ಭಂಗಿ,

"ಸಮಂ ಕಾಯ ಶಿರೋಗ್ರೀವಂ"

ಎಂದು ಹೇಳಿದ್ದಾರೆ. ಅಂದರೆ ಶರೀರ ಮತ್ತು ತಲೆ ನೇರವಾಗಿರಬೇಕು. ಮೇರುದಂಡ ನೆಟ್ಟಗಿರಬೇಕು.

ಜಪಪೂರ್ವದಲ್ಲಿ ಶರೀರಬಾಧಾದಿ ನಿತ್ಯವಿಧಿಗಳನ್ನು ತೀರಿಸಿರಬೇಕು. ಸ್ನಾನಮಾಡಿ ಇಲ್ಲವೇ ಮುಖ, ಹಸ್ತಪಾದ ಪ್ರಕ್ಷಾಲನೆಗಳನ್ನು ನಿರ್ವರ್ತಿಸಿರಬೇಕು. ಜಪಕ್ಕೆ ಯೋಗ್ಯ ಕಾಲ ಪ್ರಾತಃಕಾಲ ಮತ್ತು ಸಂಧ್ಯಾಕಾಲ. ಎರಡೂ ಕಾಲಗಳಲ್ಲಿ ಜಪ ಮಾಡಬಹುದು. ದ್ವಿಜರಾದರೆ ಪ್ರಾತಃಸಾಯಂ ಸಂಧ್ಯಾವಂದನಾದಿಗಳನ್ನು ಪೂರೈಸಿ ಕುಳಿತುಕೊಳ್ಳಬೇಕು. ಇತರರು ತಮ್ಮ ಇಷ್ಟದೈವವನ್ನು ಪೂಜಿಸಿದ ಬಳಿಕ ಇಷ್ಟದೇವತಾ ಸ್ತೋತ್ರಗಳನ್ನು ಗಟ್ಟಿಯಾಗಿ ಹೇಳುತ್ತಾ ಕೆಲವು ಹೊತ್ತು ಇದ್ದು ನಂತರ ಜಪಕ್ಕೆ ತೊಡಗಬೇಕು.

ಏಕೆಂದರೆ ಮನಸ್ಸು ಪ್ರಪಂಚ ವ್ಯವಹಾರದಲ್ಲೇ ಸದಾಕಾಲವೂ ಇರುವುದರಿಂದ ಏಕಾಗ್ರತೆ ಸಿಗುವುದು ಕಷ್ಟಸಾಧ್ಯ. ಸ್ತೋತ್ರವು ಏಕಾಗ್ರತೆಗೆ ಸಹಾಯ ಮಾಡುತ್ತದೆ. ಹೀಗೆಯೇ ಜಪಾಂತ್ಯದಲ್ಲಿಯೂ ಸಹ ಪ್ರಾರ್ಥನಾ ಶ್ಲೋಕಗಳನ್ನು ಹೇಳಿ ಆಸನಬಿಟ್ಟು ಮೇಲೇಳಬೇಕು.

ವೇದೋಕ್ತ ಜಪ ಕೈಗೊಳ್ಳುವವರು ಜಪಕ್ಕೆ ಪೂರ್ವ ಆಚಮನ, ಪ್ರಾಣಾ ಯಾಮ, ಮಾರ್ಜನೆ, ಸಂಕಲ್ಪ, ಪುನರ್ಮಾರ್ಜನೆ, ಅರ್ಘ್ಯಪ್ರಧಾನ, ಭೂಶುದ್ಧಿ, ಭೂತಶುದ್ಧಿ, ಆಸನ ಕಲ್ಪನೆ ಇವುಗಳನ್ನು ವಿಧಿವತ್ತಾಗಿ ಮಾಡಬೇಕು. ಉತ್ತರಾಂಗದಲ್ಲಿ ದಿಗ್ದೇವತಾವಂದನೆ, ಹಾಗೂ ಸಮರ್ಪಣೆ. ಆಕಸ್ಮಾತ್ತಾಗಿ ಮಧ್ಯೆ ಆಲಸಿಕೆ, ಸೀನು, ಆಕಳಿಕೆ, ನಿದ್ರೆ, ಅನ್ಯಚಿಂತನೆಗಳು ಬಂದರೆ ಮೂರು ಬಾರಿ ಆಚಮನ ಮಾಡಿ,

ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ ।
ದಿವೀವ ಚಕ್ಷುರಾತತಂ । ತದ್ವಿಪ್ರಾಸೋ ವಿಪನ್ಯವೋ
ಜಾಗ್ರ ವಾಗುಂ ಸಸ್ಪಮಿಂಧತೇ । ವಿಷ್ಣೋರ್ಯತ್ಪರಮಂ ಪದಂ ।

ಎಂದು ಶ್ರೀ ವಿಷ್ಣು ಸ್ಮರಣೆ ಮಾಡಬೇಕು. ಜಪ ಮುಗಿದ ಮೇಲೆ 'ಹವನ', 'ಹೋಮ', 'ದಾನ', 'ಬ್ರಾಹ್ಮಣ', 'ಭೋಜನ', 'ಸುವಾಸಿನಿಯರಿಗೆ ವಸ್ತ್ರ' ಇವುಗಳನ್ನು ಶಕ್ತಿಯಿದ್ದವರು ಮಾಡುವುದೊಳ್ಳಿತು.

ಎಷ್ಟು ಜಪ ಮಾಡಬೇಕು?

ಜಪದ ಸಂಖ್ಯೆಯೂ ಸಹ ಅವರವರ ಆಶ್ರಮಕ್ಕೆ ಅನುಸಾರವಾಗಿಯೇ ಇದೆ. ಬ್ರಹ್ಮಚಾರಿ ಹಾಗೂ ಗೃಹಸ್ಥರಿಗೆ ನೂರೆಂಟು, ವಾನಪ್ರಸ್ಥರಿಗೆ ಹಾಗೂ ಸನ್ಯಾಸಿಗಳಿಗೆ ಸಾವಿರವೆಂಟು ಎಂದು ಹೇಳಿದೆ.

ಅಸಂಖ್ಯಾತಂತು ಯಜ್ಞಪ್ತಂ–ತತ್ಸರ್ವಂ ನಿಷ್ಫಲಂಭವೇತ್ ।

ಎಂದು ಹೇಳಿವೆ. ಅಂದರೆ ಲೆಕ್ಕವಿಲ್ಲನಂತೆ ಮಾಡಿದ ಜಪವು ವ್ಯರ್ಥವೇ ಎಂಬುದೊಂದು ವಾದವಿದೆ. ಮನಸ್ಸು ಏಕಾಗ್ರತೆಯಲ್ಲಿರುವಾಗ ಲೆಕ್ಕವನ್ನಿಡುವುದೆಂತು ? ಅದಕ್ಕೆ ಎರಡು ಕ್ರಮಗಳನ್ನು ಹೇಳಿದ್ದಾರೆ.

ಮೊದಲನೆಯದು ಬೆರಳುಗಳ ಎಣಿಕೆ. ಇಲ್ಲಿ ಬಲಗೈಯನ್ನು ಮಾತ್ರ ಉಪಯೋಗಿಸಬೇಕು. ನಮ್ಮ ಕೈಯಲ್ಲಿ ಐದು ಬೆರಳುಗಳಿವೆ. ಮೊದಲನೆಯದು ಹೆಬ್ಬೆರಳು. ಇದು ಎಣಿಕೆ ಮಾಡಲು ಅತ್ಯವಶ್ಯ. ಎರಡನೆಯದು 'ತರ್ಜನೀ', ಮೂರನೆಯದು 'ಮಧ್ಯಮಾ', ನಾಲ್ಕನೆಯದು 'ಅನಾಮಿಕಾ', ಕಡೆಯದು 'ಕನಿಷ್ಠಿಕಾ' ಲೆಕ್ಕವನ್ನು ಅನಾಮಿಕೆ (ಉಂಗುರ ಬೆರಳು) ಯ ಮಧ್ಯಗೆರೆಯಿಂದ ಪ್ರಾರಂಭಿಸಬೇಕು. ಒಂದೊಂದೂ ಬೆರಳಲ್ಲಿ ಮೂರು ಗೆರೆಗಳಿವೆ.

ಲೆಕ್ಕಾಚಾರದ ಕ್ರಮ ಹೀಗಿದೆ.

ಅನಾಮಿಕಾ ಬೆರಳಿನ ಮಧ್ಯಗೆರೆ ನಂತರ ಬುಡದ ಗೆರೆ	2
ಕನಿಷ್ಠಿಕಾ (ಕಿರು) ಬೆರಳಿನ ಮೂರು ಗೆರೆ	3
ಪುನಃ ಅನಾಮಿಕೆಯ ಮೇಲಿನ ಗೆರೆ (ಹಿಂದೆ ಬಿಟ್ಟಿದ್ದು)	1
ಮಧ್ಯಮ (ಮಧ್ಯ) ಬೆರಳಿನ ಮೇಲಿನ ಗೆರೆ	1
ತರ್ಜನೀ (ತೋರು) ಬೆರಳಿನ ಎಲ್ಲಾ ಗೆರೆಗಳು (ಮೇಲಿಂದ)	3
ಒಟ್ಟು	10

ಇದು ಆರೋಹರಣದಲ್ಲಾಯಿತು. ಮತ್ತೆ ಅವರೋಹಣದಲ್ಲಿ ಹತ್ತು ಒಟ್ಟು ಇಪ್ಪತ್ತು ಆಯಿತು. ಇಂಥ ಇಪ್ಪತ್ತರ ಜಪವನ್ನು ಎಡಗೈ ಬೆರಳಿನಲ್ಲಿ 'ಒಂದು' ಎಂದು ಲೆಕ್ಕ

ಇಟ್ಟುಕೊಂಡರೆ ಐದು ಬೆರಳಿಗೆ ನೂರು ಆಯಿತು. ಹಾಗೇ ಉಳಿದ ಎಂಟು ಮುಗಿಸಿದಾಗ 'ನೂರಎಂಟು' ಆಯಿತು. ಇದನ್ನೇ ದಶಾವೃತ್ತಿಗೊಳಿಸಿದರೆ ಸಾವಿರದೆಂಟು ಆಗುತ್ತದೆ. ದಶಾವೃತ್ತಿಗೊಳಿಸಲು ಧಾನ್ಯ ಅಥವಾ ಬೀಜಗಳನ್ನು ಉಪಯೋಗಿಸಬಹುದು.

ಇಲ್ಲಿ ಕೈಬೆರಳು-ಧಾನ್ಯ-ಸಂಖ್ಯೆಗಳ ಮೇಲೆ ಮನಸ್ಸಿಡುವುದಕ್ಕಿಂತ ನಿರಂತರ 'ಜಪ' ತನ್ಮಯರಾಗಿ ಮಾಡುವುದೇ ಒಳ್ಳೆಯದೆಂದು ಕೆಲವರ ಮತ. ಒಂದು ನಿಮಿಷಕ್ಕೆ ಎಷ್ಟು ಜಪವಾಗುತ್ತದೆಂದು ನೋಡಿಕೊಂಡು ಮಾಡಬೇಕಾಗಿರುವ ಜಪದ ಸಂಖ್ಯೆಗೆ ಕಾಲವನ್ನು ಗೊತ್ತು ಮಾಡಿಕೊಳ್ಳುವುದು.

ಇನ್ನೊಂದು ಕ್ರಮ ಜಪಮಾಲೆಯಲ್ಲಿರುವ ಮಣಿಗಳನ್ನು ಎಣಿಸುವುದು. ಇದು ಹಿಂದೆ ಹೇಳಿದ ವಿಧಾನಕ್ಕಿಂತ ಅತಿ ಸರಳ. ಮಾಲೆಯಲ್ಲಿ 108 ಮಣಿಗಳು ಅಥವಾ 54 ಅಥವಾ 27 ಮಣಿಗಳಿರಬೇಕು. ಮಾಲೆಯ ಎರಡೂ ಕಡೆ ಸೇರುವೆಡೆ ಶಿಖಾಮಣಿ ಯೊಂದನ್ನು ಪೋಣಿಸಬೇಕು. ಈ ಮಣಿಗೆ 'ಮೇರು'ವೆಂದು ಹೆಸರು. ಒಂದು ಮಾಲೆ ಜಪ ಮುಗಿದ ಮೇಲೆ 'ಮೇರು'ವನ್ನು ದಾಟದಂತೆ ತಿರುಗಿಸಿಕೊಂಡು ಪುನಃ ಎಣಿಸಬೇಕು, ಮಣಿ ಎಣಿಸುವಲ್ಲಿ ತೋರ್ಬೆರಳನ್ನುಪಯೋಗಿಸಬಾರದು. ಅಂಗುಷ್ಟ, ಅನಾಮಿಕ ಅಥವಾ ಮಧ್ಯಮ ಬೆರಳನ್ನು ಉಪಯೋಗಿಸಬೇಕು.

ಮಾಲೆಯು ಬೆಳ್ಳಿ ಅಥವಾ ಚಿನ್ನದ ತಂತಿಯಿಂದ ಹೆಣೆದ 'ಶಂಖ' ಸರ, ಬೇವಿನ ಬೀಜದ ಮಾಲೆ (ನಿಂಬಜೈಃ) ಪದ್ಮಾಕ್ಷಿ, ರುದ್ರಾಕ್ಷಿ, ಮುತ್ತು, ಹವಳ, ಸ್ಫಟಿಕ, ಸುವರ್ಣ, ತುಳಸೀಕಾಷ್ಠ ಇವುಗಳಲ್ಲಿ ಯಾವುದಾದರೂ ಆಗಿರಬಹುದು. ಇದು ಯಾವುದೂ ಸಿಗದಿದ್ದರೆ ಕೊನೆಗೆ ದರ್ಭೆಯ ಗಂಟುಗಳ ಮಾಲೆಯನ್ನಾದರೂ ಉಪಯೋಗಿಸಬಹುದು. ಮೇಲೆ ಹೇಳುವ ಎಲ್ಲವನ್ನೂ ಸೇರಿಸಿದ ಮಾಲೆ ಉತ್ತಮವೆನಿಸುವುದು.

ಏನನ್ನು ಜಪಿಸುವುದು ?

ಜಪವಲ್ಲಿ ಎರಡು ಬಗೆ, ಮೊದಲನೆಯದು 'ನಾಮಜಪ'. ಎರಡನೆಯದು 'ಮಂತ್ರಜಪ'. ಯಾವ ಜಪಕ್ಕೇ ಆಗಲಿ, ಅರಿಷಡ್ವರ್ಗಗಳಿಂದ ಮುಕ್ತನಾದ ಗುರುವಿನ ಉಪದೇಶವನ್ನು ಪಡೆಯಬೇಕು. ಸದ್ಗುರುವು ತಾನು ಅನುಷ್ಠಿಸಿ ಸಿದ್ಧಿ ಪಡೆದ ಮಂತ್ರ ವನ್ನೋ ಅಥವಾ ಪರಮಾತ್ಮ ನಾಮವನ್ನೋ ಶಿಷ್ಯನ ಅರ್ಹತೆ ನೋಡಿ ಆತನಿಗೆ ಉಪ ದೇಶಿಸುತ್ತಾನೆ. ಗುರುವಿನಿಂದ ಉಪದೇಶವಾಗದೆ ಸಾಧಕನು ಸ್ವಯಂ ಜಪಿಸಲು ಪ್ರಾರಂಭಿ ಸುವುದು ಶ್ರೇಯಸ್ಕರವಲ್ಲ. ಗುರುವಿಲ್ಲದೆ ಪುಸ್ತಕದಲ್ಲಿರುವ ಮಂತ್ರವನ್ನು ಜಪಮಾಡಿದರೂ ನಿಷ್ಫಲವೇ. ಯಾವ ಇತರೇ ಮಾಧ್ಯಮಗಳೂ ಗುರುವಿಗೆ ಪರ್ಯಾಯವಾಗುವುದಿಲ್ಲ ವೆಂಬುದನ್ನು ತಿಳಿಸುವುದೇ ನಮ್ಮ ಉದ್ದೇಶವಾಗಿದೆ. ಇದಕ್ಕೆ ಕಾರಣ ಗುರುವು ಕೇವಲ ಮಂತ್ರೋಪದೇಶ ಮಾತ್ರ ಮಾಡುವುದಲ್ಲ; ಅದರ ಜತೆಗೆ ತನ್ನ ಆಶೀರ್ವಾದ ಶ್ರೀರಕ್ಷೆಯನ್ನು ನೀಡುತ್ತಾನೆ. ಮಂತ್ರಕ್ಕಿಂತ ಆ ಗುರುವಿನ ಆಶೀರ್ವಚನವೇ ಶಿಷ್ಯನಿಗೆ ಮುಖ್ಯವೆಂಬುದನ್ನು ಮನಗಾಣಬೇಕು. ಆದ್ದರಿಂದಲೇ 'ಗುರು' ಎಂಬ ಪದದ ಅರ್ಥ ಹೀಗಿದೆ.

ಗುಕಾರಸ್ತ್ವಂಧಕಾರಸ್ತು ರುಕಾರಸ್ತನ್ನಿರೋಧಕಃ ।
ಅಂಧಕಾರಂ ನಿರೋಧತ್ವಾತ್ಗುರುರಿತ್ಯಭಿಧೀಯತೇ ॥

'ಗು' ಎಂದರೆ ಕತ್ತಲು ಅರ್ಥಾತ್ ಅಜ್ಞಾನ, 'ರು' ಎಂದರೆ ಅವನ್ನು ಪರಿಹರಿಸುವುದು' ಯಾವನು ನಮ್ಮಲ್ಲಿರುವ ಅಜ್ಞಾನವನ್ನು ದೂರಮಾಡಿ ಸುಜ್ಞಾನವನ್ನು ಬೋಧಿಸುವನೋ ಅವನೇ 'ಗುರು'. ಅಂತಹ ಸದ್ಗುರುವಿನ ಉಪದೇಶವನ್ನು ವಿಧಿವತ್ತಾಗಿ ಪಡೆದು 'ಜಪ' ಮಾಡಲು ಉಪಕ್ರಮಿಸಬೇಕು.

ಈ ಉಪದೇಶವು ಏಕಾಕ್ಷರೀ, ದ್ವ್ಯಕ್ಷರೀ, ತ್ರ್ಯಕ್ಷರೀ, ಪಂಚಾಕ್ಷರೀ, ಷಡಕ್ಷರೀ' ಅಷ್ಟಾಕ್ಷರೀ, ದಶಾಕ್ಷರೀ, ದ್ವಾದಶಾಕ್ಷರೀ, ಪಂಚದಶಾಕ್ಷರೀ, ಷೋಡಶಾಕ್ಷರೀ, ಚತುರ್ವಿಂಶತ್ಯಕ್ಷರೀ, ಇವುಗಳಲ್ಲಿ ಯಾವುದಾದರೂ ಆಗಿರಬಹುದು.

೧ ಏಕಾಕ್ಷರೀ ಮಂತ್ರ :

ಒಂದೇ ಒಂದು ಅಕ್ಷರ ಸಂಖ್ಯೆಯನ್ನುಳ್ಳ ಮಂತ್ರವನ್ನು 'ಏಕಾಕ್ಷರೀ' ಎಂದು ಕರೆಯುತ್ತಾರೆ. ಅದೇ 'ಓಂ' ಕಾರ. ಓಂಕಾರವು ಅತಿಶ್ರೇಷ್ಟವಾದ ಮಂತ್ರ. ಇದಕ್ಕೆ ಕಾರಣ ಇದು ನಿರ್ಗುಣೋಪಾಸನೆಯ ಮಂತ್ರವಾಗಿರುವುದೇ ಆಗಿದೆ. ನಿರ್ಗುಣೋಪಾಸನೆಗೆ 'ನಾದೋಪಾಸನೆ' ಎಂಬ ಇನ್ನೊಂದು ಹೆಸರೂ ಉಂಟು. ನಾದ ಎಂದರೆ ಸ್ವರ, ಧ್ವನಿ, ಶಬ್ಧ ಎಂದು. ಈ ಧ್ವನಿ ತರಂಗಗಳ ಏರಿಳಿತದ ಅಲೆಗಳ ಸ್ಪಂದನದ ಪರಿಣಾಮವಾಗಿಯೇ ಸಕಲ ಉತ್ಪತ್ತಿಯಾಗಿದೆ. ಅಂದರೆ ಬ್ರಹ್ಮಾಂಡ ಪಿಂಡಾಂಡಗಳ ರಹಸ್ಯವೆಲ್ಲ ನಾದದಲ್ಲಿಯೇ ಅರ್ಥಾತ್ ಓಂಕಾರದಲ್ಲಿಯೇ ಅಡಗಿದೆ. ಆದ್ದರಿಂದಲೇ ಓಂಕಾರವನ್ನು ಪರಬ್ರಹ್ಮನ ಸಂಕೇತ, ಸಚ್ಚಿದಾನಂದ ಸ್ವರೂಪಿಯಾದ ಆತ್ಮನ ಸ್ವರೂಪ ಎನ್ನಲಾಗಿದೆ. ಅವ್ಯಕ್ತ, ವ್ಯಕ್ತ ಮತ್ತು ವ್ಯಾಪಕಾವಸ್ಥೆಯಲ್ಲಿ ಕೂಡ ವೇದದ ಮೂಲ ತಿರುಳಾದ ಓಂಕಾರವೇ ಮೊದಲು ಕುಂಡಲಿನೀ ಶಕ್ತಿಯಿಂದ ಪ್ರಕಾಶಿತ ವಾಯಿತು. ಉಳಿದೆಲ್ಲ ದೇವ ದೇವತೆಗಳ ಮಂತ್ರದ ರಚನೆಯೂ ಅನಂತರವೇ. ಆದುದ ರಿಂದಲೇ ಮುಮುಕ್ಷುವಿಗೆ ಕುಂಡಲಿನೀ ಶಕ್ತಿಯ ಜಾಗ್ರತೆಯೂ ಈ ಓಂಕಾರದ ಉಪಾಸನೆ ಯಿಂದಲೇ ಆಗಬೇಕಾಗಿದೆ. ಕಾರಣ ಓಂಕಾರವೇ ಈ ಎಲ್ಲ ಸೃಷ್ಟಿಯ ಮೂಲ. ಸರ್ವೋತ್ತಮವಾದ ಬ್ರಹ್ಮವೂ ಇದೇ. ಇದನ್ನೇ ತೈತ್ತಿರೀಯ ಉಪನಿಷತ್ತಿನಲ್ಲಿ "ಓಂ ಇತಿ ಬ್ರಹ್ಮ" ಓಂಕಾರವೇ ಬ್ರಹ್ಮ ಎಂದು ಹೇಳಿದೆ.

"ಓಂ ಮಿತಿ ಇದಂ ಸರ್ವಂ"

ಅಂದರೆ ಓಂಕಾರವೇ ಈ ಸರ್ವಸೃಷ್ಟಿಗೆ ಮೂಲ ; ಧ್ಯಾನ ಬಿಂದೂಪನಿಷತ್ತಿನಲ್ಲಿ,

"ಓಂ ಇತ್ಯೇಕಾಕ್ಷರಂ ಬ್ರಹ್ಮಂ ಧ್ಯೇಯಂ ಸರ್ವ ಮುಮುಕ್ಷುಭಿಃ"

ಎಂದು ಹೇಳಿದೆ. ಅಂದರೆ ಓಂಕಾರವನ್ನೇ ಸರ್ವಮುಮುಕ್ಷುಗಳೂ ಬ್ರಹ್ಮವೆಂದು ಧೃಢೀ ಕರಿಸಿಕೊಂಡಿರಬೇಕು. ಇದನ್ನೇ ಭಗವದ್ಗೀತೆಯಲ್ಲಿ

"ಪ್ರಣವಸ್ಸರ್ವ ವೇದೇಷು"

ಎಂದು ಹೇಳಿದೆ. ಅಂದರೆ ಓಂಕಾರವೇ ಎಲ್ಲಾ ವೇದಗಳ ಸಾರ. ಓಂಕಾರಕ್ಕೆ ಪ್ರಣವಾಕ್ಷರ ಎಂಬ ಹೆಸರೂ ಇದೆ. ಆದುದರಿಂದ ಓಂಕಾರವನ್ನು ಜಪ ಮಾಡುವುದರಿಂದ ಚತುರ್ವೇದ ವನ್ನೂ ಜಪ ಮಾಡಿದಂತಾಗುತ್ತದೆ.

ಓಂಕಾರವು ಶಾಂತಿ ಮಂತ್ರ. ಆದುದರಿಂದಲೇ ಪ್ರತಿಯೊಂದು ಶಾಂತಿ ಮಂತ್ರದ ಪ್ರಾರಂಭವೂ ಓಂಕಾರದಿಂದಲೇ ಪ್ರಾರಂಭವಾಗುತ್ತದೆ. ಉದಾಹರಣಾರ್ಥವಾಗಿ

ಓಂ ಶನ್ನೋ ಮಿತ್ರಃ ಶಂ ವರುಣಃ ....
ಓಂ ಸಹನಾಮವತು, ಸಹನೌಭುನಕ್ತು ....
ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ....
ಓಂ ತಚ್ಛೈ ಯೋರಾ ವೃಣೀಮಹೇ

ಇವೇ ಅಲ್ಲದೇ ದೇವದೇವಿಯರ ಅಷ್ಟೋತ್ತರ, ತ್ರಿಶತಿ ಸಹಸ್ರನಾಮಗಳೂ ಸಹ ಓಂಕಾರ ದಿಂದಲೇ ಪ್ರಾರಂಭವಾಗುತ್ತದೆ. ಉದಾಹರಣೆಗೆ

ಓಂ ಶಿವಾಯನಮಃ — ಶ್ರೀ ಶಿವಾಷ್ಟೋತ್ತರ ಶತನಾಮಾವಳಿ,
ಓಂ ಶ್ರೀ ಮಾತ್ರೇನಮಃ — ಶ್ರೀ ಲಲಿತಾ ಸಹಸ್ರನಾಮ
ಓಂ ಶ್ರೀ ಸತ್ಯದೇವಾಯ ನಮಃ— ಶ್ರೀ ಸತ್ಯನಾರಾಯಣಾಷ್ಟೋತರ
ಓಂ ಅರುಣಾಯ ನಮಃ — ಶ್ರೀ ಸೂರ್ಯಾಷ್ಟೋತ್ತರ
ಓಂ ಕಕಾರರೂಪಾಯೈ ನಮಃ — ಶ್ರೀ ಲಲಿತಾ ತ್ರಿಶತಿ,

ಇತ್ಯಾದಿ

ಓಂಕಾರವು ಅ, ಉ, ಮ ಎಂಬ ಮೂರು ಅಕ್ಷರಗಳಿಂದ ಕೂಡಿದೆ. ಓಂಕಾರವು ಕೇವಲ ಹಿಂದೂಧರ್ಮದಲ್ಲೇ ಅಲ್ಲ, ಇತರ ಧರ್ಮದವರಲ್ಲೂ ಈ ಪವಿತ್ರ ಮಂತ್ರವಿದೆ. ಪರ್ಶಿಯನ್ ಭಾಷೆಯಲ್ಲಿ 'ಓಂ' ಎಂದರೆ 'ಓ ನಾನಿದ್ದೇನೆ' ಎಂದರ್ಥ. ಇದನ್ನೇ. ಕ್ರಿಶ್ಚಿಯನ್ನರು 'ಎಮೆನ್' (Amen) ಎಂದೂ ಮಹಮ್ಮದೀಯರು 'ಅಮೀನ್' ಎಂದೂ ಗ್ರೀಕರು 'ಅಮಿಗಾ' ಎಂದೂ ಕರೆಯುತ್ತಾರೆ. ಹೀಗೆ ವಿಶ್ವದ ಎಲ್ಲ ಮತ ಧರ್ಮಗಳಲ್ಲೂ ಚಿಕ್ಕ ಪುಟ್ಟ ಬದಲಾವಣೆಗಳೊಡನೆ ಓಂಕಾರವು ಅಸ್ತಿತ್ವದಲ್ಲಿದೆ. ಇದು ಕೆಲವು ಧರ್ಮಗಳಲ್ಲಿ ಪರಬ್ರಹ್ಮನ ಸಂಕೇತವಾದರೆ, ಮತ್ತೆ ಕೆಲವರಲ್ಲಿ ಶಾಂತಿಯ ಕುರುಹು. ಇನ್ನು ಕೆಲವರಲ್ಲಿ ಆನಂದದ ಚಿಹ್ನೆ. ಪ್ರಾರ್ಥನೆಯಲ್ಲಿ ಮನಸ್ಸು ಕರಗಿ ಒಂದಾದಾಗ ಭಗವಂತನಲ್ಲಿ ತಾದಾತ್ಮ್ಯಗೊಂಡಾಗ ಉಂಟಾದ ಆನಂದದಲ್ಲಿ ನಿತ್ಯನೂತನ ವಾದ ಈ ಅಂತರ್ನಾದವು ನಿರಂತರವೂ ನಡೆಯುತ್ತಿರುತ್ತದೆ.

ಯೋಗಿಯಾದವನು ಈ ಓಂಕಾರವನ್ನು ನಿತ್ಯವೂ ಜಪಿಸುವುದರಿಂದ ಅವನ ಪರಮಗಂತವ್ಯವಾದ ಮೋಕ್ಷವು ಪ್ರಾಪ್ತಿಯಾಗುತ್ತದೆ. ಅದನ್ನೇ

ಓಂಕಾರ ಬಿಂದು ಸಂಯುಕ್ತಂ ನಿತ್ಯಂ ಧ್ಯಾಯಂತಿ ಯೋಗಿನಃ |
ಕಾಮದಂ ಮೋಕ್ಷದಂ ಚೈವ ಓಂಕಾರಾಯ ನಮೋನಮಃ ||

ಎಂದು ಹೇಳಿದೆ. ಅಲ್ಲದೆ ಪ್ರಣವವೇ ತಾನೆಂದು ಪರಮಾತ್ಮನೇ ಹೇಳಿದ್ದಾನೆ.

" ಅಹಮೇಕೋ ಅಖಿಲ ಗುಣೋವಾಚಕಃ "

ಓಂಕಾರದಷ್ಟು ಚಿಕ್ಕ ಮಂತ್ರ ಬೇರೆ ಯಾವುದೂ ಇಲ್ಲ. ಮಂತ್ರವು ಚಿಕ್ಕದಿದ್ದಷ್ಟೂ ಪುನಶ್ಚರಣೆಗೆ ಸುಲಭವಾದ್ದರಿಂದ ಓಂಕಾರವು ಜಪಿಸಲು ಸರ್ವಶ್ರೇಷ್ಠವಾದ ಮಂತ್ರ.

೨ ದ್ವ್ಯಕ್ಷರೀ :

ಎರಡು ಅಕ್ಷರಗಳಿಂದ ಕೂಡಿದ ಮಂತ್ರವೇ ಅಥವಾ ನಾಮವೇ ದ್ವ್ಯಕ್ಷರೀ. ಎಲ್ಲರೂ ಓಂಕಾರವನ್ನೇ ಜಪಿಸಬೇಕೆಂಬ ನಿರ್ಬಂಧನೆಯೇನೂ ಇಲ್ಲ. ಸಾಧಕನ ಆಂತರಿಕ ಮತ್ತು ಬಾಹ್ಯ ಸ್ಥಿತಿಗತಿಗಳಿಗನುಸಾರವಾಗಿ ಗುರುಗಳು ಅವನಿಗೆ ಸೂಕ್ತವಾದ ಮಂತ್ರವನ್ನು ಉಪದೇಶಿಸುತ್ತಾರೆ. ಅಲ್ಲದೆ ಓಂಕಾರವು ಯತಿಗಳಿಗೆ ಹೆಚ್ಚು ಒಗ್ಗುವುದೆಂದು ಭಾವನೆಯೂ ಇದೆ. ಆದುದರಿಂದ ಸಾಧಕನು ತನಗಿಷ್ಟವಾದ ಯಾವ ನಾಮವನ್ನು ಬೇಕಾದರೂ ಜಪಕ್ಕೆ ಅಳವಡಿಸಿಕೊಳ್ಳಬಹುದು.

ಅಂತಹ ಪವಿತ್ರನಾಮಗಳಲ್ಲಿ 'ರಾಮನಾಮ'ವು ಅತಿ ಶ್ರೇಷ್ಠವಾದುದು. ರಾಮನಾಮವನ್ನು 'ತಾರಕನಾಮ'ವೆಂತಲೂ ಕರೆಯುತ್ತಾರೆ. ರಾಮನಾಮ ಸ್ಮರಣ ಮಾತ್ರದಿಂದ ನಮ್ಮನ್ನು ಭವ ಸಮುದ್ರದಿಂದ ದಾಟಿಸುವುದರಿಂದಲೇ ಅದು ತಾರಕನಾಮ :

ಆದುದರಿಂದಲೇ ಪುರಂದರದಾಸರು,

"ರಾಮನಾಮವ ಜಪಿಸೋ ಹೇ ಮನುಜ | ಆ ಮಂತ್ರ ಈ ಮಂತ್ರ ಜಪಿಸಿ ನೀ ಕೆಡಬೇಡ | ಸೋಮಶೇಖರ ತನ್ನ ಭಾಮೆಗೆ ಹೇಳಿದ ಮಂತ್ರ |"

ಎಂದು ರಾಮನಾಮವನ್ನು ಕೊಂಡಾಡಿದ್ದಾರೆ.

ಅಲ್ಲದೆ, "ರಾಮರಾಮೆನ್ನಿರೊ ನರಜನ್ಮ ಸ್ಥಿರವಲ್ಲ..........
"ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ............
"ರಾಮ ಎಂಬುವ ಎರಡು ಅಕ್ಷರದ ಮಹಿಮೆಯನು
ಪಾಮರರು ತಾವೇನು ಬಲ್ಲರಯ್ಯ
"ರಾಮನಾಮವ ನುಡಿ ನುಡಿ | ಕಾಮಕ್ರೋಧಗಳ ಬಿಡಿ ಬಿಡಿ ...."
"ನೀನ್ಯಾಕೋ ನಿನ್ನ ಹಂಗ್ಯಾಕೋ | ನಿನ್ನ ನಾಮದ ಬಲವೊಂದಿದ್ದರೆ ಸಾಕೋ...."

ಎಂದು ಮುಂತಾಗಿ ದಾಸವರೇಣ್ಯರು ರಾಮನಾಮವನ್ನು ಹೊಗಳಿದ್ದಾರೆ.

"ಹರಣ ಹಿಂಗದ ಮುನ್ನ ಶ್ರೀ ಹರಿಯ ಜಪಿಸಿ ಸುಖಿಯಾಗು ಮನವೇ "

ಎಂದು ಭಕ್ತ ಕನಕದಾಸರು ಪ್ರಾರ್ಥಿಸಿದ್ದಾರೆ.

ಸರ್ವಜ್ಞನು "ರಾಮನಾಮವೆ ನಾಮ ..." ಎಂದು ಹೇಳಿ ರಾಮನಾಮದ ಮಹಿಮೆಯನ್ನು ಎತ್ತಿ ಹಿಡಿದಿದ್ದಾನೆ.

ಸಂಗೀತ ತಪಸ್ವಿ ಶ್ರೀ ತ್ಯಾಗರಾಜರು ರಾಮನಾಮದ ಜಪದಿಂದ ಆತನನ್ನು ಸಾಕ್ಷಾತ್ಕರಿಸಿಕೊಂಡ ಮಹಾನುಭಾವರು.

" ರಾಮತತ್ತ್ವಾಧಿಕಂ ನಾಮ ಇತಿಮನ್ಯಾಮಹೇ ವಯಮ್ "

ಅಂದರೆ ಪರಮಭಕ್ತನಾದ ಮಾರುತಿಗೆ ಶ್ರೀ ರಾಮನಾಮ ಜಪವೇ ತಾರಕ ಮಂತ್ರವಾಯಿತು. ಆ ಮಂತ್ರಬಲದಿಂದ ನೂರು ಯೋಜನ ಸಮುದ್ರವನ್ನು ಹಾರುವ ಶಕ್ತಿ ಆತನಿಗೆ ಉಂಟಾಯಿತು.

ರಾಮನಾಮ ಜಪದ ಹಿರಿಮೆಯ ಬಗ್ಗೆ ಜೈಮಿನಿ ಭಾರತದಲ್ಲಿ ಕುಶಲವರ ಕಾಳಗದ ಸನ್ನಿವೇಶ ಉಲ್ಲೇಖನೀಯ. ಲಕ್ಷ್ಮಣ, ಭರತ, ಶತ್ರುಘ್ನರೇ ಆದಿಯಾಗಿ ರಾಮನ ಚತುರಂಗ ಸೈನ್ಯವನ್ನೂ ಪಸುಳೆಗಳಾದ ಕುಶಲವರು ಮೂರ್ಛಾಕ್ರಾಂತರನ್ನಾಗಿಸಿದಾಗ ಸಾಕ್ಷಾತ್ ಶ್ರೀ ರಾಮಚಂದ್ರನೇ ರಣರಂಗಕ್ಕೆ ಬರಬೇಕಾಗಿ ಬಂತು. ಬಂದು ವಿಸ್ಮಿತನಾಗಿ ಆ ಯಮಳರನ್ನು ಕುರಿತು. " ಎಮ್ಮ ಸೇನೆಯಂ ಜಯಿಸುವೀ ಬಲಂ ಏತರಿಂದಾದುದು ? " ಎಂದು ಪ್ರಶ್ನಿಸುತ್ತಾನೆ.

ಅದಕ್ಕೆ ಕುಶನು ಹೀಗೆ ಉತ್ತರಿಸುತ್ತಾನೆ.

" ರಾಮಚಾರಿತ್ರ್ಯ ಪಠನಾಭ್ಯಾಸ ಯೋಗದಿಂ
ಕ್ಷೇಮಂ ಸುಪುಷ್ಟಿ ನಿಶ್ಚಲಮತಿ ನಿರಾಲಸ್ಯ
ಮೀ ಮಹಾಸೈನ್ಯವಂ ಗೆಲ್ವದಟು ತಮಗಾದುದು "

ಅಂದರೆ ರಾಮನಾಮದ ಜಪದ ಮಹಿಮೆಯಿಂದ ಅವರಿಗೆ ಆಯುರಾರೋಗ್ಯ, ನಿರ್ಮಲ ಚಿತ್ತ, ನಿರಾಲಸ್ಯ ಹಾಗೂ ರಾಮನ ಸೈನ್ಯ ಸಾಗರವನ್ನು ಗೆಲ್ಲುವ ಶಕ್ತಿಯುಂಟಾಯಿತೆಂದು ಕುಶನು ತಿಳಿಸುತ್ತಾನೆ.

ಇಷ್ಟೇ ಅಲ್ಲದೆ, ರಾಮಾಯಣದಲ್ಲಿಯೂ ಸಹ ಇಂತಹ ಒಂದು ಘಟನೆ ಇದೆ. ಲಂಕೆಗೆ ಸೇತುವೆಯನ್ನು ಕಟ್ಟುವಾಗ ಕಪಿವೀರರು ಬಂಡೆಗಳನ್ನು ಹೊತ್ತು ತಂದು ಅದರ ಮೇಲೆ 'ರಾಮ' ಎಂಬ ಎರಡಕ್ಷರವನ್ನು ಬರೆದು ನೀರಿಗೆ ಹಾಕುತ್ತಿದ್ದರು. ಶ್ರೀರಾಮನಾಮದ 'ಲಿಖಿತಜಪದ' ಮಹಿಮೆಯಿಂದ ಆ ಬಂಡೆಗಳು ತೇಲುತ್ತಿದ್ದವು. ಇಲ್ಲದಿದ್ದರೆ ಸಮುದ್ರಕ್ಕೆ ಸೇತುವೆಯನ್ನು ಕಟ್ಟಲು ಸಾಧ್ಯವಾಗುತ್ತಿದ್ದಿತೇ !

೩. ತ್ರ್ಯಕ್ಷರಿ :

ಇದು ಮೂರಕ್ಷರದ ಮಂತ್ರ. ಇಲ್ಲಿ ರಾಮನಾಮಕ್ಕೆ ಶ್ರೀಕಾರವನ್ನು ಸೇರಿಸುವುದು, ಇಲ್ಲವೇ ಜೈಕಾರವನ್ನು ಸೇರಿಸುವುದು. 'ಶ್ರೀರಾಮ ಅಥವಾ 'ಜೈರಾಮ', ಶಿವಪರವಾಗಿ ಜಪಮಾಡಬೇಕೆಂದು ಅಪೇಕ್ಷಿಸುವವರು 'ಓಂಶಿವ' ಅಥವಾ 'ಶಿವೋಹಂ' ಇತ್ಯಾದಿ ಮಂತ್ರಗಳನ್ನು ಅಳವಡಿಸಿಕೊಳ್ಳಬಹುದು.

೪. ಪಂಚಾಕ್ಷರೀ :

ಐದು ಅಕ್ಷರಗಳನ್ನೊಳಗೊಂಡ ಮಂತ್ರವೇ 'ಪಂಚಾಕ್ಷರೀ ಮಹಾ ಮಂತ್ರ'.

ಉದಾಹರಣೆಗೆ 'ನಮಃಶಿವಾಯ', ಇದನ್ನು ಶಿವ ಪಂಚಾಕ್ಷರೀ ಮಹಾಮಂತ್ರವೆಂದು ಕರೆಯುತ್ತಾರೆ.

೫. ಷಡಕ್ಷರೀ :

ಆರಕ್ಷರಗಳಿಂದ ಕೂಡಿದ ಮಂತ್ರವೇ ಷಡಕ್ಷರೀ. ಶಿವಪಂಚಾಕ್ಷರಿಗೆ ಓಂಕಾರವನ್ನು ಸೇರಿಸಿದರೆ ಅದು ಷಡಕ್ಷರೀ ಮಂತ್ರವಾಗುತ್ತದೆ. 'ಓಂ ನಮಃ ಶಿವಾಯ' ಅಥವಾ ಓಂ 'ಶಿವಾಯನಮಃ' ಇಲ್ಲವೇ 'ಶಿವಾಯನಮಃಓಂ'.

ಮಾತೆಯನ್ನು ಜಪಿಸಬೇಕೆನ್ನುವವರು 'ಹ್ರೀಂ ನಮಃ ಶಿವಾಯೈ' ಎಂಬ ಗೌರೀ ಮಂತ್ರವನ್ನು ಪುನಶ್ಚರಣೆ ಮಾಡಬಹುದು. ಸಾಮಾನ್ಯವಾಗಿ ಸ್ತ್ರೀಯರು ಇದನ್ನು ಜಪಿಸುತ್ತಾರೆ. ಅಂದರೆ ಪುರುಷರು ಜಪಿಸಬಾರದೆಂದಲ್ಲ. ಯಾವ ಮಂತ್ರವನ್ನು ಯಾರು ಬೇಕಾದರೂ ಜಪಿಸಬಹುದು. ಇಲ್ಲಿ 'ಹ್ರೀಂ' ಎಂಬುದು ಮೂಲಮಂತ್ರವು. ಹ್ರೀಂಕಾರ ಸ್ವರೂಪಳಾದ ಶಿವೆಗೆ ನಮಸ್ಕಾರವೆಂದು ಇದರ ಅರ್ಥ. ಮೂಲಮಂತ್ರವಾದ 'ಹ್ರೀಂ' ಎಂಬ ಒಂದು ಅಕ್ಷರದ ಅರ್ಥವು ಪರಬ್ರಹ್ಮಸ್ವರೂಪಿಣಿಯಾಗಿರುವ ಶ್ರೀದೇವಿಯು ಸಚ್ಚಿದಾನಂದ ಸ್ವರೂಪವನ್ನೂ, ಈಶ್ವರನ ಪತ್ನಿಯಾಗಿಯೂ, ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಪ್ರಭುವಾಗಿಯೂ ಇರುವ ಈಶ್ವರೀ ಸ್ವರೂಪವನ್ನೂ, ಹ್ರೀಂಕಾರವೇ ಬ್ರಹ್ಮಾಂಡವಾಗಿರುತ್ತೆಂಬುದನ್ನೂ ಪ್ರತಿಪಾದಿಸುವುದು. ಆದುದರಿಂದ ಪರಬ್ರಹ್ಮಸ್ವರೂಪಿಣಿಯೂ, ಈಶ್ವರೀ ಸ್ವರೂಪಿಣಿಯೂ ಆದ ಶಿವೆಗೆ ನಮಸ್ಕಾರವೆಂಬುದೇ 'ಹ್ರೀಂ ನಮಃ ಶಿವಾಯೈ' ಎಂಬ ಮಂತ್ರಾರ್ಥ.

೬. ಅಷ್ಟಾಕ್ಷರೀ :

ಎಂಟು ಅಕ್ಷರ ಸಂಜ್ಞೆಯನ್ನುಳ್ಳ ಮಂತ್ರವೇ 'ಅಷ್ಟಾಕ್ಷರೀ'. 'ಓನ್ನಮೋ ನಾರಾಯಣಾಯ' ಎಂಬುದು ಅಂತಹ ಒಂದು ಮಂತ್ರ. ಒಂದೊಂದೂ ವಿಭಾಗದಲ್ಲಿ ಒಂದೊಂದೇ ದೇವತೆಯ ಮಂತ್ರವನ್ನು ಕೇವಲ ಉದಾಹರಣಾರ್ಥವಾಗಿ ಕೊಡುತ್ತಿರುವುದರಿಂದ ಆ ವಿಭಾಗದಲ್ಲಿ ಅಷ್ಟೇ ಮಂತ್ರ ಎಂದು ಯಾರು ತಪ್ಪಾಗಿ ಎಣಿಸಬಾರದು. ಅಷ್ಟಾಕ್ಷರೀ ಮಂತ್ರವು ಇನ್ನೂ ಹಲವಾರು ದೇವತೆಗಳ ಪರವಾಗಿ ಹಲವಾರು ಇವೆ. ಅವುಗಳಲ್ಲಿ ಅತಿ ಪ್ರಸಿದ್ಧವಾದ ಒಂದನ್ನು ಮಾತ್ರ ಇಲ್ಲಿ ನಿದರ್ಶನಕ್ಕಾಗಿ ಕೊಟ್ಟಿದೆ.

೭. ದಶಾಕ್ಷರೀ :

ಹತ್ತು ಅಕ್ಷರಗಳಿಂದ ಕೂಡಿದ ಮಂತ್ರವೇ 'ದಶಾಕ್ಷರೀ' ಮಂತ್ರ "ಓನ್ನಮೋ ಭಗವತೇ ರುದ್ರಾಯ" ಇದು ಶಿವಪರವಾದ ಮಂತ್ರ.

೮. ದ್ವಾದಶಾಕ್ಷರೀ :

ಹನ್ನೆರಡು ಅಕ್ಷರ ಸಂಖ್ಯೆಗಳಿಂದ ಕೂಡಿದ ಮಂತ್ರವೇ 'ದ್ವಾದಶಾಕ್ಷರೀ ಮಂತ್ರ.

"ಓಂ ನಮೋಭಗವತೇ ವಾಸುದೇವಾಯ" ಅಥವಾ
"ಶ್ರೀ ಲಲಿತಾ ತ್ರಿಪುರ ಸುಂದರ್ಯೈನಮಃ" ಇತ್ಯಾದಿ.

೯. ತ್ರಯೋದಶಾಕ್ಷರೀ :

ಹದಿಮೂರು ಅಕ್ಷರ ಸಂಜ್ಞೆಯನ್ನುಳ್ಳ ಮಂತ್ರವೇ 'ತ್ರಯೋದಶಾಕ್ಷರೀ'. ಉದಾಹರಣಾರ್ಥವಾಗಿ "ಓಂ ಶ್ರೀ ಲಲಿತಾ ತ್ರಿಪುರ ಸುಂದರ್ಯೈ ನಮಃ" ಹಿಂದಿನ ದ್ವಾದಶಾಕ್ಷರ ಮಂತ್ರಕ್ಕೆ ಇಲ್ಲಿ ಓಂಕಾರವನ್ನು ಸೇರಿಸಿದೆ.

೧೦. ಪಂಚದಶಾಕ್ಷರೀ :

ಹದಿನೈದು ಅಕ್ಷರಗಳಿಂದ ಕೂಡಿದ ಮಂತ್ರವೇ 'ಪಂಚದಶಾಕ್ಷರೀ' ಮಂತ್ರ. ಈ ಮಂತ್ರವು ಶ್ರೀ ಹಯಗ್ರೀವಾವತಾರವನ್ನೆತ್ತಿದ್ದ ಶ್ರೀ ಮಹಾವಿಷ್ಣುವು ಅಗಸ್ತ್ಯಮಹರ್ಷಿಗಳಿಗೆ ಉಪದೇಶ ಮಾಡಿ ಪರಂಪರೆಯಾಗಿ ಬಂದ ಮಂತ್ರವಾಗಿದೆ. "ಕ, ಏ, ಈ, ಲ, ಹ್ರೀಂ, ಹ, ಸ, ಕ, ಹ, ಲ, ಹ್ರೀಂ, ಸ, ಕ, ಲ, ಹ್ರೀಂ" ಎಂಬುದು ಶ್ರೀ ಲಲಿತಾ ಪಂಚದಶಾಕ್ಷರೀ ಮಂತ್ರವು. ಇಲ್ಲಿ ಹನ್ನೆರಡು ಅಕ್ಷರಗಳೂ ಮೂರು ಹ್ರೀಂಕಾರಗಳೂ ಇವೆ. ಮಂತ್ರವು ಅಕ್ಷರಗಳ ಸಂಯೋಗದಿಂದುಂಟಾಗುವ ಪದಗಳನ್ನೊಳಗೊಂಡಿಲ್ಲ. ಆದುದರಿಂದ ಪದಗಳ ಅರ್ಥಗಳ ಮೂಲಕ ಮಂತ್ರದ ಮಹಿಮೆಯನ್ನರಿಯಲು ಸಾಧ್ಯವಿಲ್ಲ. ಮಂತ್ರದಲ್ಲಿರುವ ಪ್ರತ್ಯೇಕ ಪ್ರತ್ಯೇಕವಾದ ಅಕ್ಷರಗಳ ಶಕ್ತಿಯಿಂದಲೇ ಮಂತ್ರದ ಮಹಿಮೆಯನ್ನು ತಿಳಿಯಬೇಕಾಗಿದೆ. ಅಕ್ಷರ ಶಕ್ತಿಗಳು,

"ನಕ್ಷರತೀತ್ಯಕ್ಷರಂ"

ಎಂಬಂತೆ ನಾಶರಹಿತವುಳ್ಳವುಗಳಾಗಿ ಸೃಷ್ಟಿಸ್ಥಿತಿಲಯಗಳ ಅನೇಕ ವಿಧವಾದ ನಾದಬ್ರಹ್ಮದ ಕಾರ್ಯಗಳಿಗೆ ಕಾರಣಗಳಾಗಿವೆ. ಯಾವ ಯಾವ ಅಕ್ಷರಗಳು ಯಾವಯಾವ ಸಂದರ್ಭಗಳಲ್ಲಿ ಎಂತೆಂತಹ ಕಾರ್ಯಗಳಿಗೆ ಕಾರಣಗಳಾಗಿವೆಯೋ ಅವುಗಳನ್ನರಿಯಲು ಶ್ರುತಿ ಪ್ರಮಾಣ ಮತ್ತು ಮಹಾತ್ಮರ ವಚನಗಳನ್ನೇ ಆಧಾರವಾಗಿ ತೆಗೆದುಕೊಳ್ಳಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲ. ಶ್ರೀ ಲಲಿತಾ ಮಂತ್ರದಲ್ಲಿರುವ ಅಕ್ಷರ ಶಕ್ತಿಗಳ ವಿವರಣೆಗೆ ಶ್ರೀ ಶಂಕರಭಗವತ್ಪಾದರು ಸೌಂದರ್ಯ ಲಹರಿಯಲ್ಲಿ ಹೇಳಿರುವ ಶ್ಲೋಕವು ಹೀಗಿದೆ.

ಶಿವಶ್ಶಕ್ತಿಃ ಕಾಮಃ ಕ್ಷಿತಿರಥ ರವಿಶ್ಶೀತಕಿರಣಃ ।
ಸ್ಮರೋ ಹಂಸಶ್ಶಕ್ರಸ್ತದನುಚ ಪರಾಮಾರ ಹರಯಃ ॥
ಅಮೀ ಹೃಲ್ಲೇಖಾಭಿಸ್ತಿಸೃಭಿರವಸಾನೇಷು ಘಟಿಕಾ ।
ಭಜಂತೇ ವರ್ಣಾಸ್ತೇ ತವಜನನಿ ನಾಮಾವಯುವತಾಂ ॥

ಅಂದರೆ "ಎಲೌ ಜಗನ್ಮಾತೆಯೇ, ಕ, ಏ, ಈ, ಲ ಎಂಬ ನಾಲ್ಕು ವರ್ಣಗಳು ಅನಂತರ ಹ, ಸ, ಕ, ಹ, ಲ ಎಂಬ ಐದು ವರ್ಣಗಳು, ತದನಂತರ ಸ, ಕ, ಲ, ಎಂಬ ಮೂರು ವರ್ಣಗಳಿಗೆ ಆಯಾಯ ವರ್ಣ ಸಮುದಾಯದ ಅಂತ್ಯದಲ್ಲಿ 'ಹ್ರೀಂ' ಅಕ್ಷರವನ್ನು ಸೇರಿ

ಸಿದರೆ ಹ್ರೀಂಕಾರ ಸ್ವರೂಪಳಾದ ನಿನ್ನ ನಾಮದ ಅವಯವಗಳಾಗುವವು. ಅಲ್ಲಿನ ಕ, ಏ, ಈ, ಲ, ಎಂಬ ಪ್ರಥಮ ಪಾದದ ಅಕ್ಷರಗಳಿಗೆ ಶಿವಃ, ಶಕ್ತಿಃ, ಕಾಮಃ, ಕ್ಷಿತಿಃ ಎಂಬ ವಿವರಣೆಯೂ: ಹ, ಸ, ಕ, ಹ, ಲ ಎಂಬ ದ್ವಿತೀಯಪಾದದ ಅಕ್ಷರಗಳಿಗೆ ರವಿಃ, ಶೀತಕಿರಣಃ, ಸ್ಮರಃ, ಹಂಸಃ, ಶಕ್ರಃ, ಎಂಬ ವಿವರಣೆಯೂ; ಸ, ಕ, ಲ ಎಂಬ ತೃತೀಯ ಪಾದ ಅಕ್ಷರಗಳಿಗೆ ಪರಾ, ಮಾರ, ಹರಿಃ ಎಂಬ ವಿವರಣೆಯೂ ಆಗುವುದು". ಎಂದು ಹೇಳಿರುತ್ತಾರೆ.

೧೧. ಚತುರ್ವಿಂಶತ್ಯಕ್ಷರೀ:

ಇಪ್ಪತ್ನಾಲ್ಕು ಅಕ್ಷರಗಳಿಂದ ಕೂಡಿದ ಮಂತ್ರವೇ "ಚತುರ್ವಿಂಶತ್ಯಕ್ಷರೀ ಮಹಾ ಮಂತ್ರ"ವು. ಇದೇ 'ಶ್ರೀ ಗಾಯತ್ರೀ ಮಂತ್ರ' ಗಾಯತ್ರಿಯು ಋಗ್ವೇದ [೩-೬೨-೧೦] ದಲ್ಲಿ ಬರುವ ಸವಿತೃದೇವತಾತ್ಮಕವಾದ ಒಂದು ಮಂತ್ರ. ವಿಶ್ವಾಮಿತ್ರ ಋಷಿಯು ಈ ಮಂತ್ರದ ದ್ರಷ್ಟಾರ, ಈ ಮಂತ್ರಕ್ಕೆ 'ಗಾಯತ್ರೀ' ಎಂಬ ಹೆಸರು ಬರಲು ಅದು ಪ್ರತಿ ಪಾದದಲ್ಲಿಯೂ ಎಂಟು ಅಕ್ಷರಗಳುಳ್ಳ ಮೂರು ಪಾದಗಳಿಂದ ಕೂಡಿದ 'ಗಾಯತ್ರೀ' ಎಂಬ ಛಂದಸ್ಸಿನಲ್ಲಿರುವುದೇ ಕಾರಣ. ಋಗ್ವೇದದಲ್ಲಿ ನೂರಾರು 'ಗಾಯತ್ರೀ' ಛಂದಸ್ಸಿನ ಮಂತ್ರಗಳಿವೆ. ನ್ಯಾಯವಾಗಿ ನಾವು ಅವುಗಳೆಲ್ಲವನ್ನೂ 'ಗಾಯತ್ರೀ' ಎಂಬುದಾಗಿಯೇ ಕರೆಯಬೇಕು. ಆದರೆ ಅದರ ಗಂಭೀರವಾದ ಅರ್ಥವ್ಯಾಪ್ತಿಯ ದೆಸೆಯಿಂದ ಮತ್ತು ಜನ ಪ್ರಿಯತೆಯ ಕಾರಣದಿಂದ 'ಗಾಯತ್ರೀ' ಎಂಬ ಪದವು ವಿಶ್ವಾಮಿತ್ರ ಋಷಿಯು ಕಂಡ

ತತ್ಸವಿತುರ್ವರೇಣ್ಯಂ ।
ಭರ್ಗೋದೇವಸ್ಯ ಧೀಮಹಿ ।
ಧಿಯೋಯೋ ನಃ ಪ್ರಚೋದಯಾತ್ ॥

ಎಂಬ ಮಂತ್ರಕ್ಕೆ ಮಾತ್ರ ಪರಿಮಿತವಾಗಿದೆ. ಅಷ್ಟೇ ಅಲ್ಲದೆ ಕಾಲಾಂತರದಲ್ಲಿ ಅದನ್ನು 'ಗಾಯತ್ರೀ' ಎಂದು ಕರೆಯಲು ಅನೇಕ ಹೊಸ ಕಾರಣಗಳು ಕೊಡಲ್ಪಟ್ಟಿವೆ.

"ಗಾಯಂತಂ ತ್ರಾಯತೇ ಯಸ್ಮಾತ್ ಗಾಯತ್ರೀತಿ ಸ್ಮೃತಾ ತತಃ ।"

ಯಾವನು ಅದನ್ನು ಗಾನ ಮಾಡುತ್ತಾನೆಯೋ ಅಥವಾ ಜಪಿಸುತ್ತಾನೆಯೋ ಅವನನ್ನು ಕಾಪಾಡುವುದರಿಂದ ಅದು ಗಾಯತ್ರೀ ಎನಿಸಿಕೊಳ್ಳುತ್ತದೆ.

"ಪ್ರಾಣಾಗಯಾ ಇತಿ ಪ್ರೋಕ್ತಾಃ ತ್ರಾಯತೇ ತು ಸಥಾಪಿ ವಾ ॥"

ಪ್ರಾಣಗಳು 'ಗಯಾ' ಎಂದು ಕರೆಯಲ್ಪಡುತ್ತವೆ. ಅವುಗಳನ್ನು ಕಾಪಾಡುವುದರಿಂದ ಅದಕ್ಕೆ ಆ ಹೆಸರು ಬಂದಿರುತ್ತದೆ.

"ಗಾಯತ್ರೀತಿ ಭವೇನ್ನಾಮ ಕೇವಲಂ ತ್ರಾಯತೀತಿ ವಾ ।"

'ಗಾಯತ್ರೀ ಎಂಬುದಕ್ಕೆ ಕಾಪಾಡುವವಳು ಎಂದರ್ಥ.

ವ್ಯಾಸಶೇತ್ಪ್ರಾಣ ಜಿಹ್ವಾಸು ಸದಾ ವಾಗ್ರಸ ವರ್ತನಾತ್ ।
ಸರಸ್ವತೀತಿ ನಾಮ್ನಾ ಚ ಸಮಾಖ್ಯಾತಾ ಮಹರ್ಷಿಭಿಃ ॥

ಅಂದರೆ ನಾಲಗೆಯಲ್ಲಿ ಸದಾ ವಾಗ್ರಸವನ್ನುಂಟುಮಾಡುತ್ತಾ ಅದರಲ್ಲಿ ನೆಲೆಸಿರುವುದರಿಂದ ಈ ಗಾಯತ್ರಿಯನ್ನೇ ಮಹರ್ಷಿಗಳು "ಸರಸ್ವತೀ" ಎಂದು ಕರೆದಿರುತ್ತಾರೆ.

ಅನಾದಿ ಕಾಲದಿಂದ ಈ ಗಾಯತ್ರೀ ಮಂತ್ರವು ನಮ್ಮ ದೇಶದ ಜನರ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಜೀವನಗಳ ಮೇಲೆ ಉಂಟುಮಾಡಿರುವ ಪ್ರಭಾವವನ್ನು ಸ್ವಲ್ಪದರಲ್ಲಿ ವರ್ಣಿಸಲಾಗುವುದಿಲ್ಲ. ನಮ್ಮ ದೇಶದ ಕಾವ್ಯೇತಿಹಾಸ, ನಿನ್ನೆ ಮೊನ್ನೆಯವರೆಗೆ ನಮ್ಮ ಜೀವನವನ್ನು ರೂಪಿಸಿದ ಧರ್ಮಶಾಸ್ತ್ರ, ತಂತ್ರ, ಮಂತ್ರ, ಆಗಮಶಾಸ್ತ್ರ ಮುಂತಾದು ವೆಲ್ಲವೂ ಹೆಜ್ಜೆ ಹೆಜ್ಜೆಗೂ ಗಾಯತ್ರಿಯ ಸ್ಮರಣೆಯಿಂದ ಪುನೀತವಾಗಿರುತ್ತದೆ. ಗಾಯತ್ರಿಯ ಮೂರು ಪಾದಗಳು ಮೂರು ವೇದಗಳ ಸಾರವನ್ನೆತ್ತಿ ಮಾಡಲ್ಪಟ್ಟಿದೆಯೆಂಬ ನಂಬಿಕೆಯು ಗಾಯತ್ರೀ ಮಂತ್ರಕ್ಕೆ ಅನನ್ಯ ಸಾಧಾರಣವಾದ ಮಾನ್ಯತೆಯನ್ನು ದೊರಕಿಸಿಕೊಟ್ಟಿರು ತ್ತದೆ. ಆದುದರಿಂದಲೇ ಪರಂಪರೆಯ ಪ್ರಕಾರ ಸಕ್ರಮವಾಗಿ ಗಾಯತ್ರಿಯ ಉಪದೇಶ ವಾಗದವನಿಗೆ ವೇದಾಧ್ಯಯನ ಮಾಡುವ ಅಧಿಕಾರವಿಲ್ಲ. ಅದರ ಮೂಲಕವೇ ಒಬ್ಬ ವ್ಯಕ್ತಿಯು ಪವಿತ್ರವಾದ ವೇದ ಸಾಹಿತ್ಯಗಳಿಗೆ ಪ್ರವೇಶ ಮಾಡುತ್ತಾನೆ.

ಬಹಳ ಹಿಂದಿನಿಂದ ಈ ಗಾಯತ್ರೀ ಮಂತ್ರವು ಸಂಧ್ಯಾಕಾಲಗಳ ಜಪಕ್ಕೆ ವಿಷಯ ವಾಗಿರುತ್ತದೆ. ಮನುವು ಆ ಬಗ್ಗೆ ಈ ರೀತಿ ಹೇಳಿರುತ್ತಾನೆ.

ಏತದಕ್ಷರಂ ಏತಾಂ ಚ ಜಪ್ತ್ವಾ ವ್ಯಾಹೃತಿ ಪೂರ್ವಿಕಾಂ |
ಸಂಧ್ಯಯೋರ್ವೇದ ವಿದ್ವಿಪ್ರೋ ವೇದ ಪುಣ್ಯೇನ ಯುಜ್ಯತೇ ||

ಅಂದರೆ ಪ್ರಣವ ಮಂತ್ರವನ್ನೂ ಮತ್ತು ವ್ಯಾಹೃತಿಗಳಿಂದ ಆರಂಭಿಸಿ ಗಾಯತ್ರೀ ಮಂತ್ರವನ್ನೂ ವೇದವಿತ್ತಾದ ವಿಪ್ರನು ಸಂಧ್ಯಾಕಾಲಗಳಲ್ಲಿ ಜಪಿಸುವುದರಿಂದ ವೇದ ಗಳನ್ನು ಹೇಳಿದ ಪುಣ್ಯವನ್ನು ಹೊಂದುತ್ತಾನೆ. ಅವನೇ ಮತ್ತೊಂದು ಶ್ಲೋಕದಲ್ಲಿ,

ಓಂಕಾರಪೂರ್ವಿಕಾಸ್ತಿಸ್ರೋ ಮಹಾವ್ಯಾಹೃತಯೋಽವ್ಯಯಾಃ |
ತ್ರಿಪದಾ ಚೈವ ಸಾವಿತ್ರೀ ವಿಜ್ಞೇಯಂ ಬ್ರಹ್ಮಣೋ ಮುಖಂ ||

ಅಂದರೆ ಓಂಕಾರ ಪೂರ್ವಕವಾದ ಮೂರು ಶಾಶ್ವತವಾದ ವ್ಯಾಹೃತಿಗಳೂ (ಭೂಃ, ಭುವಃ, ಸುವಃ) ಮತ್ತು ಮೂರು ಪಾದಗಳಿಂದ ಕೂಡಿದ ಸಾವಿತ್ರಿಯೂ ಪರಮಾತ್ಮ ಪ್ರಾಪ್ತಿಯ ದ್ವಾರಾ ಎಂಬುದಾಗಿ ಹೇಳುವುದರ ಮೂಲಕ ಅದು ಪರಿಪೂರ್ಣವಾದ ಬ್ರಹ್ಮಜ್ಞಾನವನ್ನು ಹೊಂದಲು ಶ್ರೇಷ್ಠವಾದ ಸಾಧನವೆಂಬುದನ್ನು ಒತ್ತಿ ಹೇಳಿದ್ದಾನೆ.

ಮುಂದೆ ಬಂದ ತತ್ತ್ವಜ್ಞಾನಿಗಳು ಗಾಯತ್ರಿಯ ೨೪ ಅಕ್ಷರಗಳಲ್ಲಿ ಸೃಷ್ಟಿಕಾರಣ ವಾದ ೨೪ ತತ್ತ್ವಗಳ ಸಮಾವೇಶವನ್ನು ನೋಡಿರುತ್ತಾರೆ. ಅದನ್ನೇ ಯೋಗಿಗಳು ತಮ್ಮ ಭಾಷೆಯಲ್ಲಿ ವಿವರಿಸುತ್ತಾ ಪ್ರಾಣಧಾರಿಣಿಯಾದ ಗಾಯತ್ರಿಯು ಕುಂಡಲಿನೀ ಶಕ್ತಿಯೇ ಸರಿ ; ತತ್ತ್ವ ಸ್ವರೂಪಳಾದ ಗಾಯತ್ರಿಯು ಕುಂಡಲಿನಿಯಿಂದಲೇ ಹುಟ್ಟಿರು ತ್ತಾಳೆ ಎಂದು ಹೇಳಿದ್ದಾರೆ.

ಕುಂಡಲಿನ್ಯಾಂ ಸಮುದ್ಭೂತಾ ಗಾಯತ್ರೀ ಪ್ರಾಣಧಾರಿಣೀ ||

ಎಂಬುದಾಗಿ ಘೋಷಿಸಿರುತ್ತಾರೆ.

ಗಾಯತ್ರೀ ಜಪದಿಂದ ಮನುಷ್ಯನು ತೊಳೆದುಕೊಳ್ಳಲಾಗದ ಪಾಪವೇ ಇಲ್ಲ, ಎಂಬುದಾಗಿ ಧರ್ಮಶಾಸ್ತ್ರಕಾರರೆಲ್ಲರೂ ಒಮ್ಮತದಿಂದ ನುಡಿದಿದ್ದಾರೆ. ದೊಡ್ಡ ಮತ್ತು ಸಣ್ಣ ಪಾಪಗಳೆಲ್ಲಕ್ಕೂ ಗಾಯತ್ರೀ ಜಪವನ್ನು ಅವರು ಪ್ರಾಯಶ್ಚಿತ್ತವಾಗಿ ವಿಧಿಸಿರುವುದು ಕಂಡು ಬರುತ್ತದೆ.

ಗಾಯತ್ರೀ ಮಂತ್ರವು ಮನುಷ್ಯನನ್ನು ಉನ್ನತವಾದ ಸ್ಥಿತಿಯಲ್ಲಿರಿಸುವ ಶಕ್ತಿ. ಅದನ್ನು ಬಿಟ್ಟ ದ್ವಿಜನು ತತ್ಕಾಲದಲ್ಲಿಯೇ ಪತನ ಹೊಂದುತ್ತಾನೆ. ಅದನ್ನು ಬಿಡದೇ ಅವಲಂಬಿಸಿದವನು ತನ್ನ ಜೀವನವನ್ನು ಅವಶ್ಯವಾಗಿ ಉತ್ಕೃಷ್ಟವಾಗಿಸಿಕೊಳ್ಳುತ್ತಾನೆ, ಎಂಬ ನಂಬಿಕೆಯು ಸಹಸ್ರಾರು ವರ್ಷಗಳಿಂದ ನಮ್ಮ ದೇಶದಲ್ಲಿ ನಿರಂತರವಾಗಿ ವ್ಯಾಪಾರ ಮಾಡಿಗುತ್ತದೆ. ಆದುದರಿಂದಲೇ ಒಂದು ಕಾಲವೂ ಸಹ ಗಾಯತ್ರೀ ಜಪ ಪ್ರಧಾನವಾದ ಸಂಧ್ಯಾವಂದನೆಯನ್ನು ಬಿಡಲು ವಿಪ್ರರಾದವರು ಅಳುಕುತ್ತಿದ್ದರು. ಒಂದು ವೇಳೆ ಆಲಸ್ಯದಿಂದ ಒಬ್ಬರಿಗೆ ಸಂಧ್ಯಾವಂದನೆ ಮಾಡಲಾಗದಿದ್ದರೆ ಅವರಿಗೋಸ್ಕರ ಬೇರೊಬ್ಬರು ಸಂಧ್ಯಾವಂದನೆ ಮಾಡುತ್ತಿದ್ದರು. ಇದರಿಂದ ಗಾಯತ್ರೀ ಜಪದ ಮಹಿಮೆಯು ಸುವೇದ್ಯ.

ಜಪದ ಪ್ರಕಾರಗಳು

ಜಪದಲ್ಲಿ ಅವರವರ ಇಷ್ಟಾರ್ಥಕ್ಕೆ ಸಂಬಂಧಿಸಿದಂತೆ ಹಲವು ಪ್ರಕಾರಗಳಿವೆ.

೧. ನಿತ್ಯಜಪ

ಮೇಲೆ ಹೇಳಿದ ಗಾಯಿತ್ರಿ ಜಪವೇ 'ನಿತ್ಯಜಪ'. ಪ್ರತಿದಿನ ದೇಹಾರೋಗ್ಯಕ್ಕಾಗಿ — ಸ್ನಾನ, ಆಹಾರ, ವ್ಯಾಯಾಮ, ವಿಶ್ರಾಂತಿ ಹೇಗೆ ಅವಶ್ಯಕವೋ ಆಧ್ಯಾತ್ಮ ಉನ್ನತಿಗಾಗಿ ನಿತ್ಯಜಪವೂ ಅಷ್ಟೇ ಅವಶ್ಯಕ. ಇದರಿಂದ ಹಂತ ಹಂತವಾಗಿ ಆಂತರಿಕ ಆತ್ಮಶಕ್ತಿ ವಿಕಾಸವಾಗುತ್ತದೆ.

೨. ನೈಮಿತ್ತಿಕಜಪ

ವಿಶೇಷ ದಿನಗಳಲ್ಲಿ ವಿಶೇಷ ಆರಾಧನೆಗಾಗಿ ಆಚರಿಸುವ ಜಪಕ್ಕೆ 'ನೈಮಿತ್ತಿಕಜಪ' ವೆಂದು ಹೆಸರು. ಅಮಾವಾಸ್ಯ, ಪೂರ್ಣಿಮಾ, ಸಂಕ್ರಮಣ, ಗ್ರಹಣ ಮೊದಲಾದ ಪರ್ವ ಕಾಲಗಳಲ್ಲಿಯೂ, ನವರಾತ್ರಿ, ಕೃಷ್ಣಾಷ್ಟಮಿ, ಶಿವರಾತ್ರಿ, ಮತ್ತು ವ್ರತಕಾಲಗಳಲ್ಲಿ ಇದನ್ನು ಆಚರಿಸುವ ಪದ್ಧತಿಯಿದೆ.

೩. ಕಾಮ್ಯಜಪ

ಇಷ್ಟಾರ್ಥಸಿದ್ಧಿಗಾಗಿ ಮಾಡುವ ಜಪವಿದು. ಉದಾಹರಣಾರ್ಥವಾಗಿ ಪುತ್ರ ಸಂತಾನ, ವಿವಾಹ, ಆರೋಗ್ಯಲಾಭ, ಧನಾಪೇಕ್ಷೆಗಳಿಂದ ಮಾಡುವ ಜಪವೇ ನವಗ್ರಹ ಜಪ, ಮೃತ್ಯುಂಜಯಜಪ, ಪರ್ಜನ್ಯಜಪ ಇತ್ಯಾದಿ.

೪. ಪ್ರಾಯಶ್ಚಿತ್ತಜಪ

ಹೆಸರೇ ತಿಳಿಸುವಂತೆ ತಿಳಿದೋ ತಿಳಿಯದೆಯೋ ಮಾಡಿದ ತಪ್ಪಿನ ದೋಷನಿವಾರಣೆಗಾಗಿ ಮಾಡುವ ಜಪವೇ 'ಪ್ರಾಯಶ್ಚಿತ್ತಜಪ'. ನಾವು ನಿತ್ಯಾರ್ಚನೆ ಅಥವಾ ವ್ರತಗಳ ಕೊನೆಯಲ್ಲಿ ಮಾಡುವ "ಶ್ರೀ ಅಚ್ಯುತಾನಂತ" ಜಪವು ಈ ಬಗೆಯದು.

"ಮಧ್ಯೆ ಮಂತ್ರ ತಂತ್ರ ಸ್ವರವರ್ಣ ನ್ಯೂನಾತಿರಿಕ್ತ ಲೋಪದೋಷ ಪ್ರಾಯಶ್ಚಿತ್ತಾರ್ಥಂ ನಾಮತ್ರಯ ಶ್ರೀ ಅಚ್ಯುತಾನಂತ ಮಹಾಮಂತ್ರ ಜಪಂ ಕರಿಷ್ಯೆ" ಎಂದು ಸಂಕಲ್ಪ ಮಾಡುತ್ತೇವೆ.

"ಶ್ರೀ ಅಚ್ಯುತಾಯನಮಃ ಶ್ರೀ ಅನಂತಾಯನಮಃ ಶ್ರೀ ಗೋವಿಂದಾಯನಮಃ" ಇದನ್ನು ಮೂರಾವರ್ತಿ ಜಪಿಸುತ್ತೇವೆ.

೫. ಅಚಲಜಪ

ಚಲನೆ ಮಾಡದೆ ಏಕಾಸನದಲ್ಲಿ ಕುಳಿತು ದಿನ, ವಾರ, ಮಾಸಪರ್ಯಂತ ಮಾಡುವ ಜಪ.

೬. ಚಲಜಪ

ಇದು ಮೇಲೆ ಹೇಳಿದ ಜಪಕ್ಕೆ ವಿರುದ್ಧವಾದುದು. ಓಡಾಡುತ್ತಾ, ಕೆಲಸ ಮಾಡುತ್ತಾ, ಯಾತ್ರೆಮಾಡುತ್ತಾ ಮಾಡುವ ಜಪ. ಆದರೆ ಮನಸ್ಸು ಮಾತ್ರ ಮಂತ್ರದ ಮೇಲಿರಬೇಕು. ಮಂತ್ರಜಪವು ಯಾಂತ್ರಿಕವಾಗಬಾರದು.

೭. ಅಖಂಡಜಪ

ಇದೂ ಸಹ ಅಚಲಜಪದಂತೆಯೇ ಒಬ್ಬರೂ ಮಾಡಬಹುದು. ಪರಸ್ಪರ ಸಹಾಯದಿಂದಲೂ ಒಂದು ನಿಮಿಷವೂ ಬಿಡುವು ಕೊಡದಂತೆ ಮಾಡುವ ಜಪವೇ 'ಅಖಂಡಜಪ'.

೮. ಪ್ರದಕ್ಷಿಣಜಪ

ದೇವಾಲಯ, ಈಶ್ವರಲಿಂಗ, ಮಹಾತ್ಮರ ಸಮಾಧಿ, ಅಶ್ವತ್ಥ ವೃಕ್ಷಗಳನ್ನು ಪ್ರದಕ್ಷಿಣೆ ಮಾಡುವಾಗ ಆಚರಿಸುವ ಜಪ. ಉದಾಹರಣೆಗಾಗಿ ಅಶ್ವತ್ಥ ವೃಕ್ಷವನ್ನು ಪ್ರದಕ್ಷಿಣೆ ಮಾಡುವಾಗ ಈ ಮಂತ್ರವನ್ನು ಜಪಿಸುತ್ತೇವೆ.

ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣುರೂಪಿಣೇ ।
ಅಗ್ರತಃ ಶಿವ ರೂಪಾಯ ವೃಕ್ಷರಾಜಾಯತೇ ನಮಃ ।

೯. ಅಜಪಾಜಪ

ಇದಕ್ಕೆ 'ಹಂಸಜಪ' ವೆಂದೂ ಹೆಸರು. ಪ್ರತಿಯೊಬ್ಬರೂ ಒಂದು ದಿನಕ್ಕೆ

೨೧, ೬೦೦ ಬಾರಿ ಉಸಿರಾಡುತ್ತೇವೆ. ಉಚ್ಛ್ವಾಸ ಸಮಯದಲ್ಲಿ 'ಸೋ' ಎಂದೂ, ನಿಃಶ್ವಾಸ ಸಮಯದಲ್ಲಿ 'ಹಂ' ಎಂದೂ ತನ್ನಷ್ಟಕ್ಕೆ ತಾನೇ ಈ ಜಪ ನಡೆಯುತ್ತಿರುತ್ತವೆ.

೧೦. ವಿಲೋಮಜಪ

ಆರೋಹಣ ಕ್ರಮದಲ್ಲಿ ಜಪಿಸುವ ಮಂತ್ರವನ್ನು ಅವರೋಹಣ ಕ್ರಮದಲ್ಲಿ ಜಪಿಸುವುದೇ ವಿಲೋಮಜಪ. ಉದಾಹರಣೆಗಾಗಿ 'ನಮಃಶಿವಾಯ' ಎಂಬ ಮಂತ್ರವನ್ನು 'ಯವಾಶ್ಶಿಮನ' ಎಂಬ ಕ್ರಮದಲ್ಲಿ ಜಪ ಮಾಡುವುದು. ಈ ರೀತಿಯ ಜಪವು ಅಭಿಚಾರಾದಿ ಕ್ಷುದ್ರಕರ್ಮ ನಿವಾರಣೆಗೆ ಉಪಯುಕ್ತವಾಗುತ್ತದೆ.

೧೧. ನಿಷಿದ್ಧಜಪ

ಉಪದೇಶವಾಗದ ಮಂತ್ರವನ್ನು ಅನಿಯಮಿತವಾಗಿಯೂ, ಅಪವಿತ್ರತೆಯಿಂದಲೂ, ಸಂಯಮ ರಹಿತವಾಗಿಯೂ ಜಪಿಸುವುದೇ 'ನಿಷಿದ್ಧಜಪವು'. ಇದರಿಂದ ಹಾನಿಯೇ ಹೊರತು ಶ್ರೇಯಸ್ಸಾಗಲಾರದು.

೧೨. ಲಿಖಿತಜಪ

ಗುರೂಪದಿಷ್ಟವಾದ ಮಂತ್ರವನ್ನು ವಿಶಿಷ್ಟವಾದ ಯೋಗಾಸನದಲ್ಲಿ ಬಹಳಕಾಲ ಕುಳಿತು ಅಂತರ್ಮುಖಿಗಳಾಗಿ ಜಪಮಾಡುವುದಕ್ಕೆ ಅವಕಾಶವೂ, ಒಲವೂ ಇಲ್ಲದ, ಬಹಿರ್ಮುಖವಾದ ಚಿತ್ತವೃತ್ತಿಯುಳ್ಳ ಜನರಿಗಾಗಿ ರೂಪಿತವಾಗಿರುವುದೇ 'ಲಿಖಿತಜಪ'ವು. ವಿರಾಮವಿರುವಾಗಲೆಲ್ಲಾ ಪುಸ್ತಕಗಳಲ್ಲಿ ದೇವರನಾಮಗಳನ್ನು ಒಮ್ಮನಸ್ಸಿನಿಂದ ಬರೆಯುವುದು. ಆದರೆ ಹಾಗೆ ಬರೆಯುವಾಗ ಶುಚಿರ್ಭೂತರಾಗಿ ಒಂದೆಡೆ ಕುಳಿತು, ಪವಿತ್ರಭಾವನೆಯಿಂದ ಪರಮಾತ್ಮನನ್ನು ಚಿಂತನೆಗೈಯುತ್ತಾ, ಮೌನವಾಗಿ ನಾಮವನ್ನು ಬರೆಯಬೇಕು. ಈ ರೀತಿ ಸುಲಭವಾಗಿ ಕೋಟಿ ಕೋಟಿ ನಾಮಗಳನ್ನು ಬರೆಯಬಹುದು. ಸಾಮಾನ್ಯವಾಗಿ 'ರಾಮನಾಮ' ವನ್ನು ಲಿಖಿತಜಪಕ್ಕೆ ಅಳವಡಿಸಿಕೊಳ್ಳುವುದು ಮೊದಲಿನಿಂದಲೂ ರೂಢಿಯಲ್ಲಿದೆ. 'ರಾಮನಾಮ ಹೋಮ'ವನ್ನು ಮಾಡುವಾಗ ಇದನ್ನು ಸಲ್ಲಿಸುತ್ತಾರೆ.

ಜಪದಿಂದುಂಟಾಗುವ ಲಾಭ

ಮಂತ್ರಸಿದ್ಧರ ಶಕ್ತಿಯಿಂದ ವಿಧಿವತ್ತಾಗಿ ಉಪದೇಶ ಪಡೆದ ಸಾಧಕರಿಗೆ ಸಿದ್ಧಿಯುಂಟಾಗುತ್ತದೆ. ಈ ಮಂತ್ರಜಪವು ವಿಶ್ವದಲ್ಲಿರುವ ವಿವಿಧ ದೇವತಾ ಮತ್ತು ಅನೇಕ ಯಕ್ಷ, ರಾಕ್ಷಸ, ಭೂತ, ಪ್ರೇತ, ಪಿಶಾಚಿ, ಶಾಕಿನಿ, ಡಾಕಿನಿ, ಹಾಕಿನೀ, ಮೋಹಿನೀ, ಭೇತಾಳ ಮುಂತಾದವುಗಳನ್ನೂ ಕುರಿತಾಗಿವೆ. ಉನ್ನತ ಮಟ್ಟದ ಜಪದಿಂದ ಮನಸ್ಸಿನ ಕಲ್ಮಶಗಳು ದೂರವಾಗಿ, ಪಾಪ ಪರಿಹಾರವಾಗಿ, ಸಾಧಕನಿಗೆ ದೈವ ಸಾಕ್ಷಾತ್ಕಾರವುಂಟಾಗುತ್ತದೆ. ಜಪದಿಂದ ಸ್ಪಂದನವಾಗಿ ಅಧ್ಯಾತ್ಮಶಕ್ತಿ ಬೆಳೆದು ಆತ್ಮೋನ್ನತಿಯಾಗು

ತ್ತದೆ. ಜಪದ ಪರಿಣಾಮವನ್ನು ಬುದ್ಧಿ ಬಲದಿಂದಾಗಲೀ, ತರ್ಕದಿಂದಾಗಲೀ, 'ಇದಮಿತ್ಥಂ' ಎಂದು ಸ್ಥಾಪಿಸಲು ಸಾಧ್ಯವಿಲ್ಲ. ಶ್ರದ್ಧಾಭಕ್ತಿಗಳಿಂದ ಅನುಷ್ಠಿಸಿದರೆ ಮಾತ್ರ ಅನುಭವವೇದ್ಯ.

ಜಪ ಸಾಧನೆಯನ್ನು 'ಕ್ರಿಯಾಯೋಗ' ವೆಂದೂ, 'ನಾದಾನುಸಂಧಾನ' ವೆಂದೂ, 'ಜಪಯೋಗ' ವೆಂದೂ ಕರೆಯುತ್ತಾರೆ. ಯೋಗ ಸಾಧನೆ ಮಾಡಲು ಶರೀರದಾರ್ಢ್ಯತೆ ಇಲ್ಲದವರೂ ಸಹ ಜಪ ಸಾಧನೆಮಾಡಿ, ಯೋಗದಿಂದ ಪಡೆಯುವ ಫಲವನ್ನು ಹೊಂದ ಬಹುದು. ಜಪಸಾಧನೆ ಬಲವಾಗುತ್ತ ನಡೆದಲ್ಲಿ ಅಕ್ಷರಕ್ಕೆ ಲಕ್ಷಜಪ ನಡೆದು ಮಂತ್ರ ಶುದ್ಧಿಯಾಗುತ್ತದೆ. ಕೋಟಿ ನಡೆದಲ್ಲಿ ಸಿದ್ಧಿಯಾಗುತ್ತದೆ. ಯೋಗಸಾಧನೆಯಲ್ಲಿ ಆಗುವ ಅನುಭವದಂತೆ ಕುಂಡಲಿನೀ ಜಾಗ್ರತವಾಗಿ ಸುಷುಮ್ನಾ ಮಾರ್ಗವಾಗಿ ಸಹಸ್ರಾರಕ್ಕೆ ಸೇರಿ ಸಮಾಧಿಸ್ಥಿತಿಯುಂಟಾಗಿ ಜಪ, ಮಂತ್ರ, ಸಾಧಕ, ದೇವತೆ ಎಲ್ಲಾ ಒಂದೇ ಆಗಿ ಆನಂದಾನುಭವವಾಗುತ್ತದೆ. ಇದು 'ಪಿಪೀಲಿಕಾಮಾರ್ಗ' ಅಂದರೆ ಇರುವೆ ಮರದ ಬೇರಿನಿಂದ ನಿಧಾನವಾಗಿ ಹತ್ತಿ ತುದಿಮುಟ್ಟುವಂತೆ. 'ವಿಹಂಗಮಮಾರ್ಗ'ವೂ ಉಂಟು. ಒಂದೇ ಸಾರಿ ಸಹಸ್ರಾರ ಮುಟ್ಟಲೂಬಹುದು. ಇದು ಸಾಧಕನ ಪ್ರಕೃತಿ, ಶಕ್ತಿಸಾಧನ ಮಾರ್ಗ, ಮಂತ್ರ ಮತ್ತು ಗುರುವನ್ನವಲಂಬಿಸುತ್ತದೆ. ಕೆಲವು ಸಾಧಕರಿಗೆ ಜಪಸಿದ್ಧಿ ಯಾಗಿ ಮಂತ್ರಾಧಿದೇವತೆಯ ಪ್ರತ್ಯಕ್ಷದರ್ಶನವೂ ಆಗುತ್ತದೆ.

ಹೀಗೆ 'ಜಪಯಜ್ಞ'ವು ಶ್ರೇಯಃ ಪ್ರೇಯಗಳೆರಡಕ್ಕೂ ಸಾಧನವಾಗಿದೆ. ಈ 'ಜಪಯೋಗ' ದಿಂದ ದೇವಋಣ, ಋಷಿಋಣ, ಪಿತೃಋಣಗಳು ಹರಿಯುತ್ತವೆ. ಅಜ್ಞಾನ ಅಹಂಕಾರ ನಾಶವಾಗಿ ಮನಸ್ಸು ಪಾವನ-ಪ್ರಶಾಂತವಾಗುತ್ತದೆ. ಆತ್ಮವಿದ್ಯಾ ಸಾಧಕರಿಗೆ ಅಖಂಡತ್ವ - ಸ್ವಯಂಪ್ರಕಾಶ, ಸತ್ಯ ತೇಜೋರಾಶಿದರ್ಶನ – ಆದಿಶಕ್ತಿ ಪರಾತ್ಪರಶಕ್ತಿ ಪರಂಜ್ಯೋತಿ ಸ್ವರೂಪದರ್ಶನ ಲಾಭ, ಸ್ವಾನುಭವವೇದ್ಯವಾಗುತ್ತದೆ. ಸಾಪೇಕ್ಷೆ'ಯವರಿಗೂ ಇಷ್ಟಾರ್ಥ ಲಭಿಸಿ, ಆಯುರಾರೋಗ್ಯೈಶ್ವರ್ಯ ವಿಜಯಸ್ಥೈರ್ಯ ದೊರೆತು ಸಾತ್ವಿಕರಾಗುತ್ತಾರೆ. 'ಜಪಯೋಗ'ವು ಸಹಸ್ರ ಅಶ್ವಮೇಧಯಾಗ ಶತವಾಜಪೇಯಗಳ ಫಲಕೊಡುತ್ತದೆಂದು ಋಷಿವಾಕ್ಯವಿದೆ. 'ನಾಮಜಪ'ದ ಬಲದಿಂದಲೇ ಆಂಜನೇಯ, ಪ್ರಹ್ಲಾದ, ಧ್ರುವ. ದ್ರೌಪದಿ, ಶಬರಿ, ವಿದುರ, ಗಜೇಂದ್ರ, ಅಜಾಮಿಳ ಮುಂತಾದವರು ವಿಜಯ ಗಳಿಸಿದರು ; ಕೆಲವರು ಮೋಕ್ಷ ಪಡೆದರು. 'ಜಪಯೋಗ' ಸಾಧಕನಿಗೆ ಸುಪ್ತವಾಗಿ ಆತ್ಮಬಲವೃದ್ಧಿಯಾಗುತ್ತಲೇ ಇರುತ್ತದೆ. ಆದಕಾರಣ ಇಂದು ನಾಳೀ ಎನ್ನದೆ ಈ ಕ್ಷಣದಿಂದಲೇ ದೀಕ್ಷಾಬದ್ಧರಾಗಿ, ಈ 'ಜಪಯೋಗ'ವನ್ನು ಪ್ರಾರಂಭಿಸೋಣ.

ಉತ್ತಿಷ್ಠತ, ಜಾಗ್ರತ, ಪ್ರಾಪ್ಯವರಾನ್ನಿಬೋಧತ.

ಭಕ್ತಿಯೋಗ

ಜಪ ಮನುಷ್ಯನ ದುಃಖಗಳನ್ನು ಪರಿಹರಿಸಿ ಭಗವಂತನಲ್ಲಿ ಭಕ್ತಿಯನ್ನು ಮೂಡಿಸುತ್ತದೆ. ಭಕ್ತಿಯು ಪರಾಕಾಷ್ಠತೆ ಮನಸ್ಸಿನ ದುಗುಡಗಳನ್ನು ಹೊರದೂಡಿ ಆತ್ಮದ ಅಶಾಂತಿಯನ್ನು ಪರಿಹರಿಸುತ್ತದೆ. ಭಕ್ತಿಯೆಂದರೆ ಭಗವಂತನಲ್ಲಿ ಉದ್ವೇಗಪೂರ್ಣವೂ ಕಾವ್ಯಮಯವೂ ಆದ ಸ್ತೋತ್ರಗಳ ಹಾಡುವಿಕೆ ಮಾತ್ರವಲ್ಲ, ಭಕ್ತಿ ಮಾನವನ ಅಂತರಾತ್ಮದ ಆಳದಲ್ಲಿ ಮೂಲಭೂತವಾದ ಬದಲಾವಣೆಯನ್ನು ಉಂಟು ಮಾಡಿ ಅವನ ದೃಷ್ಟಿ ಪಥವನ್ನೇ ಭಗವಂತನತ್ತ ತಿರುಗಿಸುವುದಾಗಿರುತ್ತದೆ. ಮಾನವನ ಹೊಣೆಗಾರಿಕೆಯನ್ನು ಹಗುರವಾಗಿಸುವುದಲ್ಲದೆ ದೈನಂದಿನ ಘಟನೆಗಳನ್ನು ಸಮರ್ಪಣಾಭಾವದಿಂದ ಎದುರಿಸಲು ಅವನನ್ನು ಸಿದ್ಧಗೊಳಿಸುತ್ತದೆ. ಮನುಷ್ಯ ಜನ್ಮದ ಕಷ್ಟ ಸುಖಗಳನ್ನು ಏಳು–ಬೀಳುಗಳನ್ನು ಎದುರಿಸಲು ಅವಶ್ಯವಾದ ಮಾನಸಿಕ ಸ್ಥೈರ್ಯವನ್ನು ಜಪದಿಂದ ಪಡೆಯಬಹುದಾಗಿದೆ.

'ಅನನ್ಯಾಶ್ಚಿಂತಯಂತೋಮಾಂ ಯೇಜನಾಃ ಪರ್ಯುಪಾಸತೇ |
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್' ||

ಎಂಬ ಗೀತಾ ವಾಕ್ಯ ಈ ಜಪ ಯಜ್ಞದ ಮಹತ್ತನ್ನು ಸ್ಪಷ್ಟಪಡಿಸುತ್ತದೆ. ನಿತ್ಯ ಜೀವನದ ಪ್ರಾಪಂಚಿಕ ಘಟನೆಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೇ, ಸೃಷ್ಟಿ ಸ್ಥಿತಿ ಲಯ ಕರ್ತನಾದ ಲೋಕನಾಯಕನಲ್ಲಿ ಮನಸ್ಸನ್ನು ದೃಢವಾಗಿ ನೆಲೆಗೊಳಿಸಿ ಆತನ ಸರ್ವಶಕ್ತಿತ್ವ, ದಯಾಮಯತೆಯನ್ನು ನೆನೆಯುತ್ತಾ ನಾಮಸಂಕೀರ್ತನೆಯನ್ನು ಮಾಡುವುದೇ ಮೋಕ್ಷ ಹೇತುವೆಂದು ಸರ್ವಶಾಸ್ತ್ರಗಳೂ, ಜ್ಞಾನಿಗಳೂ ನಿರಂತರನಾಗಿ ಹೇಳುತ್ತಾ ಬಂದಿದ್ದಾರೆ.

ಶ್ರೀ ಕೃಷ್ಣ ವಾಕ್ಯದಂತೆ ಸರ್ವ ಯಜ್ಞಗಳಲ್ಲಿ ಜಪಯಜ್ಞವೇ ಶ್ರೇಷ್ಠ.

ಎಂ. ಪಿ ಮಹಾದೇವಯ್ಯ

ಪ್ರಾಚೀನ ಕರ್ನಾಟಕದಲ್ಲಿ ದಿವ್ಯಗಳು

ಪ್ರಾಚೀನ ಕಾಲದಲ್ಲಿ ನ್ಯಾಯತೀರ್ಮಾನವನ್ನು ಮಾಡುವಾಗ, ಸಂಬಂಧಪಟ್ಟ ದಾಖಲೆಗಳು, ಸಾಕ್ಷಿಗಳು ಮುಂತಾದ ಆಧಾರಗಳನ್ನು ಅನುಸರಿಸಿ ತೀರ್ಮಾನವನ್ನು ಮಾಡುತ್ತಿದ್ದರೆಂಬುದು ತಿಳಿದಿರುವ ವಿಷಯವೇ ಆಗಿದೆ. ಆದರೆ ಅನೇಕ ವ್ಯಾಜ್ಯಗಳನ್ನು ತೀರ್ಮಾನ ಮಾಡುವಾಗ ದೈವೀ ಪರೀಕ್ಷೆಗಳನ್ನು ಮಾಡುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಬಹುಶಃ ದಾಖಲೆಗಳು ಮತ್ತು ಸಾಕ್ಷಿಗಳು ಸಾಕಷ್ಟು ಇರದೇ ಇದ್ದಾಗ, ದೈವೀ ಪರೀಕ್ಷೆಗಳಿಂದ ಕರ್ಪೂರವನ್ನು ಕೈಯಲ್ಲಿ ಉರಿಸುವುದು, ಕುದಿಯುವ ಎಣ್ಣೆಯಲ್ಲಿ ಕೈಯನ್ನು ಅದ್ದುವುದು ಮುಂತಾದ ಪರೀಕ್ಷೆಗಳಿಗೆ ಆಪಾದಿತರನ್ನು ಒಳಪಡಿಸುತ್ತಿದ್ದರೆಂದು ಭಾವಿಸಬಹುದು. ದೈವೀ ಶಕ್ತಿಯ ಮುಂದೆ ಮನುಷ್ಯ ಸುಳ್ಳು ಹೇಳುವುದಿಲ್ಲ ಎಂಬ ನಂಬಿಕೆ ಮತ್ತು ನಿರ್ದೋಷಿಗೆ ದೈವೀ ಪರೀಕ್ಷೆಗಳಿಂದ ಏನೂ ತೊಂದರೆಯಾಗುವುದಿಲ್ಲ ಎಂಬ ಅಭಿಪ್ರಾಯಗಳೂ ಬಲವಾಗಿದ್ದ ಪ್ರಾಚೀನ ಕಾಲದಲ್ಲಿ ಈ ರೀತಿಯ ಪರೀಕ್ಷೆಗಳನ್ನು ನಡೆಸುತ್ತಿದ್ದರು. ಇದಕ್ಕೆ ರಾಜರ ಮತ್ತು ಸಮಾಜದ ಒಪ್ಪಿಗೆಯೂ ಇದ್ದಿತೆಂಬುದು ಸ್ಪಷ್ಟ. ಇಂದಿಗೂ ಈ ರೀತಿಯ ಪರೀಕ್ಷೆಗಳು ಅಲ್ಲಲ್ಲಿ ಹಳ್ಳಿಗಾಡಿನಲ್ಲಿ, ನಡೆಯುವುದುಂಟು. ಶಾಸನದ ಆಧಾರದ ಮೇಲೆ ಈ ರೀತಿಯ ಕೆಲವು ಪರೀಕ್ಷೆಗಳನ್ನು ಗಮನಿಸಬಹುದು.

ಹೊಯ್ಸಳ ದೊರೆ ಮೂರನೆಯ ನರಸಿಂಹನ ಕಾಲದಲ್ಲಿ ಈ ರೀತಿಯ ಪ್ರಸಂಗವೊಂದು ನಡೆಯಿತೆಂದು ಮಂಡ್ಯ ಜಿಲ್ಲೆಯ ದೊಡ್ಡಗರುಡನ ಹಳ್ಳಿಯ ಶಾಸನ ತಿಳಿಸುತ್ತದೆ.[1] ಸೋಮೇಶ್ವರ ದೇವಾಲಯದಲ್ಲಿರುವ ಈ ಶಾಸನದ ಕಾಲ ಕ್ರಿ.ಶ. 1275. ಮುರುಡಿಪುರ ಮತ್ತು ಗರುಡನಹಳ್ಳಿಯ ಜನಗಳಿಗೆ, ಈ ಎರಡೂ ಗ್ರಾಮಗಳ ಗಡಿಯ ವಿಷಯದಲ್ಲಿ ವಿವಾದ ಉಂಟಾಯಿತು. ಗರುಡನಹಳ್ಳಿಯ ಪ್ರಜೆಯಾದ ಕನ್ನಯ್ಯ ಎಂಬುವನು ಈ ವಿಷಯದಲ್ಲಿ ಹೊಯ್ಸಳ ಮೂರನೆಯ ನರಸಿಂಹನಿಗೆ ದೂರು ಕೊಟ್ಟು, ನ್ಯಾಯ ತೀರ್ಮಾನವನ್ನು ಮಾಡಬೇಕೆಂದು ಪ್ರಾರ್ಥಿಸಿದನು. ಮೂರನೆಯ ನರಸಿಂಹನ ಅಧ್ಯಕ್ಷತೆಯಲ್ಲಿ ಸೋಮೇಶ್ವರನ ದೇವಾಲಯದಲ್ಲಿ ಸಭೆ ಸೇರಿತು. ಕನ್ನಯ್ಯನು ದಿವ್ಯವನ್ನು ಹಿಡಿದು ಮುರುಡಿಪುರದ ಗ್ರಾಮಸ್ಥರು, ನೆಟ್ಟಿದ್ದ ಗಡಿಕಲ್ಲನ್ನು ಕಿತ್ತು ಬದಲಾಯಿಸಿದ್ದಾರೆ

ಎಂದು ಪ್ರಮಾಣ ಮಾಡಿದನು. ಈ ದಿವ್ಯ ಪರೀಕ್ಷೆಯಲ್ಲಿ ಕನ್ನಯ್ಯನು ಜಯಶಾಲಿ ಯಾದುದರಿಂದ ಸಂತೋಷಗೊಂಡ ನರಸಿಂಹನು, ದೊಡ್ಡ ಗರುಡನಹಳ್ಳಿಯ ಪರವಾಗಿ ತೀರ್ಮಾನವನ್ನು ಕೊಟ್ಟು, ಗಡಿಕಲ್ಲನ್ನು ಅದರ ಹಿಂದಿನ ಜಾಗಕ್ಕೆ ಬದಲಾಯಿಸಿದನು. ಕನ್ನಯ್ಯನು ಪರೀಕ್ಷೆಯಲ್ಲಿ ಜಯಶಾಲಿಯಾದುದರಿಂದ, ಈ ಶಾಸನವನ್ನು ಜಯಪತ್ರ ವೆಂದೂ ಕರೆಯಲಾಗಿದೆ. ಅಷ್ಟೇ ಅಲ್ಲದೆ ಸಂತೋಷಗೊಂಡ ದೊರೆ ನರಸಿಂಹನು ಕನ್ನಯ್ಯನಿಗೆ ಭೂಮಿಯನ್ನು ದಾನವಾಗಿ ಕೊಟ್ಟನು. ಈ ಶಾಸನದಲ್ಲಿ ಆ ದಿವ್ಯ ಏನೆಂದು ಸ್ಪಷ್ಟವಾಗಿ ಹೇಳಿಲ್ಲ. ಅದೊಂದು ರೀತಿಯ ಪರೀಕ್ಷೆಯೆಂಬುದು ಮಾತ್ರ ಖಚಿತವಾಗುತ್ತದೆ.

ಮತ್ತೊಂದು ಶಾಸನ 1654ನೆಯ ವರ್ಷಕ್ಕೆ ಸೇರಿದ್ದು, ದಿವ್ಯದ ವಿಷಯವನ್ನು ತಿಳಿಸುತ್ತದೆ.2 ಮಂಡ್ಯ ಜಿಲ್ಲೆಯ ಗುತ್ತಲು ಗ್ರಾಮದ ಈ ಶಾಸನ ನ್ಯಾಯ ತೀರ್ಮಾನದ ಕೆಲವು ವಿಷಯಗಳನ್ನು ತಿಳಿಸುತ್ತದೆ. ಗುತ್ತಲು ಗ್ರಾಮದ ಬ್ರಾಹ್ಮಣರಿಗೂ ಅದೇ ಗ್ರಾಮದ ದೇವಾಲಯಗಳಲ್ಲಿ ಪೂಜೆಯನ್ನು ನಡೆಸುತ್ತಿದ್ದ ಕೆಂಪು ಅರ್ಕ ಒಡೆಯನಿಗೂ ಜಗಳ ಉಂಟಾಯಿತು. ಕೆಂಪು ಅರ್ಕ ಒಡೆಯನು ಹಿರಿ ಅರ್ಕೇಶ್ವರ, ದೇವಮ್ಮ, ಸಿಡಿಲ ಬಸವ ಮತ್ತು ಭೈರವ ದೇವಾಲಯಗಳ ಪೂಜೆಯ ಹಕ್ಕನ್ನು ಹೊಂದಿದ್ದನು. ಈ ಪೂಜೆಯ ಹಕ್ಕಿನ ಬಗೆಗೆ ಈ ಇಬ್ಬರಲ್ಲಿಯೂ ಜಗಳ ಉಂಟಾಯಿತು. ಗುತ್ತಲಿನ ಪಾಳೆಯಗಾರನಾದ ಶಿವೋಜಿ ನಾಯಕ ಮತ್ತು ಅಮಲ್‌ದಾರ ವೆಂಕಟಪ್ಪನಾಯಕರಿಗೆ ದೂರನ್ನು ಕೊಡಲಾಯಿತು. ಈ ವ್ಯಾಜ್ಯ ತೀರ್ಮಾನಕ್ಕಾಗಿ ಮಹಾನಾಡು ಮತ್ತು ದೇಸಿಗಳ ಸಭೆಯನ್ನು ಕರೆಯಲಾಯಿತು. ಈ ಸಭೆಗೆ ಶ್ಯಾನುಭೋಗ ಮತ್ತು ಊರಿನ ಪ್ರಮುಖ ಮಹಾಜನಗಳನ್ನೂ ಆಹ್ವಾನಿಸಲಾಯಿತು. ಇವರೆಲ್ಲರೂ ಅರ್ಕೇಶ್ವರ ದೇವಾಲಯದಲ್ಲಿ ಪಾಳೆಯಗಾರನ ಸಮ್ಮುಖದಲ್ಲಿ ಸಭೆ ಸೇರಿದರು. ಮಹಾಜನಗಳ ಅಪೇಕ್ಷೆಯ ಮೇಲೆ, ದೂರನ್ನು ಕೊಟ್ಟ ಕೆಂಪುಅರ್ಕ ಒಡೆಯನು ಕುದಿಯುವ ತುಪ್ಪದಲ್ಲಿ ಕೈಯನ್ನು ಮೂರು ಸಾರಿ ಅದ್ದಿ ತೆಗೆಯಬೇಕೆಂದು ತೀರ್ಮಾನಿಸಲಾಯಿತು. ಈ ದಿವ್ಯ ವನ್ನು ಎಲ್ಲರೂ ಒಪ್ಪಿಕೊಂಡ ನಂತರ, ಕೆಂಪುಅರ್ಕ ಒಡೆಯನು ಮೂರು ಸಾರಿ ತುಪ್ಪದಲ್ಲಿ ಕೈಯನ್ನು ಅದ್ದಿ, ಯಾವ ತೊಂದರೆಯೂ ಇಲ್ಲದೆ ಜಯಶಾಲಿಯಾದನು. ಆದುದರಿಂದ ಪೂಜೆಯ ಹಕ್ಕನ್ನು ಇವನಿಗೆ ಕೊಡಲಾಯಿತು. ಜೊತೆಗೆ ದೇವಾಲಯಗಳ ಭೂಮಿಯೇ ಮೊದಲಾದ ಆಸ್ತಿಗಳನ್ನು ನೋಡಿಕೊಳ್ಳುವ ಹಕ್ಕನ್ನೂ ಇವನಿಗೇ ವಹಿಸಿಕೊಡ ಲಾಯಿತು. ಈ ರೀತಿಯಾಗಿ ಕೆಂಪುಅರ್ಕ ಒಡೆಯನು ದಿವ್ಯದಲ್ಲಿ ಜಯಶಾಲಿಯಾಗಿ, ತನ್ನ ಹಕ್ಕನ್ನು ಸಾಧಿಸಿಕೊಂಡನು. ಅಧಿಕಾರಿಗಳು ಈ ರೀತಿಯಾಗಿ ಆ ಪರೀಕ್ಷೆಯಿಂದ ಈ ವ್ಯಾಜ್ಯವನ್ನು ತೀರ್ಮಾನಿಸಿದರು. ಇದನ್ನು ಗಮನಿಸಿದರೆ, ಈ ವ್ಯಾಜ್ಯಕ್ಕೆ ಸಂಬಂಧ ಪಟ್ಟ ಸಾಕ್ಷಿಗಳಾಗಲೀ, ದಾಖಲೆಗಳಾಗಲೀ ಇರದೇ ಇದ್ದುದರಿಂದ, ಪಾಳೆಯಗಾರನಿಗೆ ಬೇರೆ ಮಾರ್ಗವಿಲ್ಲದೆ, ಈ ಪರೀಕ್ಷೆಯ ಮಾರ್ಗವನ್ನು ಅನುಸರಿಸಬೇಕಾಯಿತು ಎಂದು ಊಹಿಸಬಹುದು.

ಶಾಸನದಲ್ಲಿ ಕಂಡು ಬರುವ ಮತ್ತೊಂದು ನಿದರ್ಶನವನ್ನು ಈಗ ಗಮನಿಸಬಹುದು.

ಹದಿನೇಳನೆಯ ಶತಮಾನದ ಯಳಂದೂರಿನ ಶಾಸನ ರಾಮರಾಜನಾಯಕನ ಕಾಲದಲ್ಲಿ ನಡೆದ ದಿವ್ಯದ ವಿವರಗಳನ್ನು ಕೊಡುತ್ತದೆ.[3] ಯಳಂದೂರಿನ ಅಗಸರಿಗೂ ಮತ್ತು ಕುಂಬಾರರಿಗೂ ಕೆಲವು ಹಕ್ಕುಗಳ ವಿಷಯದಲ್ಲಿ ಜಗಳ ಉಂಟಾಯಿತು. ಅಗಸರ ಕಡೆಯವರಾದ ಚಾಮ, ಹೊನ್ನ, ಧೂಮ, ಚಂಡ ಮತ್ತು ಅಂಸಮಾನ ಎಂಬುವರು ಈ ಊರಿನ ಕುಂಬಾರರಿಗೆ ಕಾಲುಗುರು ಮತ್ತು ಮೇಲುಕಟ್ಟು ಎಂಬ ಹಕ್ಕುಗಳು ಇಲ್ಲವೆಂದೂ, ಅವುಗಳನ್ನು ಅವರು ಉಪಯೋಗಿಸಕೂಡದೆಂದು ರಾಜನಿಗೆ ದೂರು ಕೊಟ್ಟರು. ಈ ಜಗಳವನ್ನು ತೀರ್ಮಾನ ಮಾಡುವ ಸಲುವಾಗಿ ರಾಮರಾಜನಾಯಕನು ದಿವ್ಯಗಳಿಗಾಗಿ ಖ್ಯಾತವಾಗಿದ್ದ ಹರವನಹಳ್ಳಿಯ ದಿವ್ಯಲಿಂಗೇಶ್ವರನ ದೇವಾಲಯದಲ್ಲಿ ಸಭೆಯನ್ನು ಕರೆದನು. ಈ ಸಭೆಯಲ್ಲಿ, ಊರಿನ ಕುಂಬಾರ ಸೆಟ್ಟಿಗಳು ಕಾದ ತುಪ್ಪದಲ್ಲಿ ಕೈಯನ್ನು ಅದ್ದಿ ಜಯಶೀಲರಾದರು. ಈ ಪರೀಕ್ಷೆಯಲ್ಲಿ ಅವರು ಜಯಶಾಲಿಗಳಾದುದರಿಂದ ಕುಂಬಾರ ಸೆಟ್ಟಿಗಳಿಗೆ ಕಾಲುಗುರು ಮತ್ತು ಮೇಲುಕಟ್ಟುಗಳೆಂಬ ಹಕ್ಕು ಅವರಿಗೂ ಉಂಟೆಂದು ರಾಮರಾಜನಾಯಕನು ತೀರ್ಮಾನವನ್ನು ಕೊಟ್ಟನು. ಕಾಲುಗುರು ಮತ್ತು ಮೇಲುಕಟ್ಟು ಎಂಬುವು ಯಾವ ರೀತಿಯ ಹಕ್ಕುಗಳು ಎಂಬುದನ್ನು ಶಾಸನದಲ್ಲಿ ತಿಳಿಸಿಲ್ಲವಾದುದರಿಂದ, ಅವುಗಳ ಸ್ವರೂಪ ತಿಳಿದಿಲ್ಲ. ಒಟ್ಟಿನಲ್ಲಿ ನ್ಯಾಯತೀರ್ಮಾನಕ್ಕೆ ರಾಮರಾಜನಾಯಕನು ದಿವ್ಯವನ್ನು ಬಳಸಿದ ವಿಷಯ ಮಾತ್ರ ಈ ಶಾಸನದಿಂದ ಸ್ಪಷ್ಟವಾಗುತ್ತದೆ.

ವಿಜಯನಗರದ ದೊರೆ ಇಮ್ಮಡಿ ಶ್ರೀರಂಗರಾಯನ ಕಾಲದ ಮತ್ತೊಂದು ದಿವ್ಯ ಪ್ರಸಂಗವನ್ನು ಆ ಕಾಲದ ಶಾಸನ ಚೆನ್ನಾಗಿ ವರ್ಣಿಸಿದೆ. ಹಿರಿಯೂರು ತಾಲೂಕಿನ ಅಬ್ಬಿನ ಹೊಳೆ ಗ್ರಾಮದಲ್ಲಿರುವ ರಂಗನಾಥ ದೇವಾಲಯದಲ್ಲಿರುವ ಈ ಶಾಸನದ ಕಾಲ ಕ್ರಿ.ಶ. 1664. ಈ ಗ್ರಾಮದ ಶ್ಯಾನುಭೋಗಿಕೆಯ ಹಕ್ಕಿನ ವಿಷಯದಲ್ಲಿ ಕೆಲವು ವ್ಯಕ್ತಿಗಳಿಗೆ ವ್ಯಾಜ್ಯ ಉಂಟಾಯಿತು. ಗೌರಣ್ಣನ ಮಗನಾದ ಸದಾಶಿವಯ್ಯನು ಒಂದು ಕಡೆ ಮತ್ತು ದುಮ್ಮಳಲು ಗ್ರಾಮದ ಶ್ಯಾನುಭೋಗ ಕಂಬಯ್ಯನ ಮಗ ಮದುರಂಗನು ಮತ್ತೊಂದು ಕಡೆ ನಿಂತು, ಆ ಊರಿನ ಶ್ಯಾನುಭೋಗಿಕೆ ತಮಗೆ ಸೇರಿದ್ದೆಂದು ತಕರಾರು ತೆಗೆದರು. ಮಹಾಮಂಡಲೇಶ್ವರ ಸರಜರಾಯಪ್ಪನು ಕೂಡಲೇ ಒಂದು ಸಭೆಯನ್ನು ಕರೆದನು. ಈ ಸಭೆಯಲ್ಲಿ ಗೌಡರು, ಸೇನಬೋವರು, ಸೆಟ್ಟಿಗಳು, ಅಗಳಿ, ಮುದುವೀಡು, ರತ್ನವಳಲು ಗ್ರಾಮಗಳ ಪಟ್ಟಣ ಸ್ವಾಮಿಗಳು ಮುಂತಾದವರು ಇದ್ದರು, ಈ ಮಹಾ ಸಭೆಯು ಎಲ್ಲ ಸಾಕ್ಷಿಗಳನ್ನೂ, ದಾಖಲೆಗಳನ್ನೂ ಪರಿಶೀಲಿಸಿ, ಶ್ಯಾನುಭೋಗಿಕೆಯ ಹಕ್ಕು ಸದಾಶಿವಯ್ಯನಿಗೆ ಇರುವುದಾಗಿಯೂ, ಮದುರಂಗನಿಗೆ ಯಾವ ಹಕ್ಕು ಇಲ್ಲವೆಂದು ತೀರ್ಮಾನ ಮಾಡಿತು. ಈ ತೀರ್ಪಿನಿಂದ ಮದುರಂಗನಿಗೆ ಸಮಾಧಾನವಾಗಲಿಲ್ಲ. ಈ ತೀರ್ಪು ನ್ಯಾಯವಲ್ಲವೆಂದು ಮತ್ತೆ ಅವನು ಮತ್ತು ಅವನ ಕಡೆಯವರು ತಕರಾರು ಎತ್ತಿದರು. ಆಗ ಬೇರೆ ದಾರಿ ಕಾಣದೆ ಮಹಾಮಂಡಳೇಶ್ವರ ಸರಜರಾಯಪ್ಪನು ದಿವ್ಯ ಪರೀಕ್ಷೆಯೊಂದೇ ಇದಕ್ಕೆ ಮಾರ್ಗವೆಂದು ಭಾವಿಸಿ ಕೋಡಿಹಳ್ಳಿಯ ಎಲ್ಲಮ್ಮನ ಸನ್ನಿಧಿಯಲ್ಲಿ ಕಾದ ತುಪ್ಪದಲ್ಲಿ ಕೈಯನ್ನು ಅದ್ದುವ ಪರೀಕ್ಷೆಯನ್ನು ವಿಧಿಸಿದನು. ಮದುರಂಗ

ಮತ್ತು ಅವನ ಕಡೆಯವರು 'ಈ ಶ್ಯಾನುಭೋಗಿಕೆಯ ಹಕ್ಕು ನಮ್ಮದು.' ಎಂದು ಹೇಳುತ್ತಾ ಬಿಸಿತುಪ್ಪದಲ್ಲಿ ತಮ್ಮ ಕೈಗಳನ್ನು ಅದ್ದಿದರು. ಕೂಡಲೆ ಅವರ ಕೈಗಳು ಸುಟ್ಟುಹೋದವು. ಇದರಿಂದ ಹತಾಶರಾದ ಮದುರಂಗ ಮತ್ತು ಸಂಗಡಿಗರು "ನಾವು ಈ ಪರೀಕ್ಷೆಯಲ್ಲಿ ಸೋತು ಹೋದೆವು" ಎಂದು ಒಪ್ಪಿಕೊಂಡು, 'ಸೂರ್ಯಚಂದ್ರರಿರುವವರೆಗೂ ಈ ಶ್ಯಾನುಭೋಗಿಕೆಯ ಹಕ್ಕನ್ನು ನೀವು ಪಾಲಿಸಿಕೊಂಡು ಬನ್ನಿ' ಎಂದು ಹೇಳುತ್ತ ಸದಾಶಿವಯ್ಯನಿಗೆ ಜಯಪತ್ರವನ್ನು ಬರೆದು ಕೊಟ್ಟರು. ಸರಜರಾಯಪ್ಪನು ಈ ಪ್ರಕಾರ ಸದಾಶಿವಯ್ಯನಿಗೆ ಗುಡಸ್ಥಳ ಗ್ರಾಮದ ಶ್ಯಾನುಭೋಗಿಕೆಯ ಹಕ್ಕನ್ನು ವಾಪಸ್ಸು ಕೊಡಿಸಿದನು. ಇದರಿಂದ ತಿಳಿಯುವ ಒಂದು ವಿಷಯವೆಂದರೆ ತಕರಾರು ತೆಗೆಯುವವರು ದಿವ್ಯಪರೀಕ್ಷೆಗೆ ಒಳಗಾಗಬೇಕಾದ ನಿಯಮವಿತ್ತು ಎನ್ನುವುದು. ಇಲ್ಲಿ ಸದಾಶಿವಯ್ಯ ಮತ್ತು ಮದುರಂಗ ಇವರಲ್ಲಿ ಜಗಳ ಉಂಟಾದರೂ, ಮದುರಂಗನು ತನ್ನ ಹಕ್ಕನ್ನು ಸಾಧಿಸುವ ಸಲುವಾಗಿ ದೂರನ್ನು ಕೊಟ್ಟಿದ್ದರಿಂದ, ಅವನನ್ನೇ ಪರೀಕ್ಷೆಗೆ ಗುರಿಮಾಡಲಾಯಿತು.

ಇನ್ನೊಂದು ದಿವ್ಯ ಪ್ರಸಂಗದ ವಿಷಯವನ್ನು ಮತ್ತೊಂದು ಶಾಸನ ತಿಳಿಸುತ್ತದೆ.[5] ವಿಜಯನಗರದ ಕಾಲದಲ್ಲಿ ಮೇಲತಾಣ್ಯ ಎಂಬ ಗ್ರಾಮದಲ್ಲಿ ಎರಡು ಜಾತಿಯ ಜನಗಳಿಗೆ ಅವರವರ ಹಕ್ಕುಗಳ ಬಗೆಗೆ ಜಗಳ ಉಂಟಾಯಿತು. ಆಗ ವೀರಸಿಣ್ಣ ನಾಯಕನು, ಆ ಎರಡೂ ಜಾತಿಯ ಮುಖಂಡರನ್ನು ಕರೆಯಿಸಿ ದೇವರ ಮುಂದೆ ಕುದಿಯುವ ತುಪ್ಪದಲ್ಲಿ ಕೈಗಳನ್ನು ಅದ್ದುವಂತೆ ಹೇಳಿದನು. ಪಳ್ಳರ್ ಜಾತಿಯ ಜನಗಳು ಕುದಿಯುವ ತುಪ್ಪದಲ್ಲಿ ಕೈಗಳನ್ನು ಅದ್ದಿ ಜಯಶಾಲಿಗಳಾದುದರಿಂದ, ಹಕ್ಕುಗಳಿಗೆ ಅವರೇ ಬಾಧ್ಯರೆಂದು ತೀರ್ಮಾನ ಕೊಡಲಾಯಿತು.

ವಿಜಯನಗರ ಕಾಲದಲ್ಲಿ ದಿವ್ಯಗಳು ವಿಶೇಷವಾಗಿ ಪ್ರಚಲಿತವಾಗಿದ್ದುವೆಂದು ವಿದೇಶೀ ಯಾತ್ರಿಕ ನಿಕೊಲೊ ಕೊಂಟಿ ತಿಳಿಸುತ್ತಾನೆ.[6] ಅವನ ಪ್ರಕಾರ ಕುದಿಯುವ ತುಪ್ಪದಲ್ಲಿ ಕೈಗಳನ್ನು ಅದ್ದುವುದು, ಕಾದ ಕಬ್ಬಿಣವನ್ನು ನಾಲಿಗೆಯಿಂದ ನೆಕ್ಕುವುದು ಬಹಳ ಸಾಮಾನ್ಯವಾದ ಪರೀಕ್ಷೆಗಳು. ಆದರೆ ಶಾಸನಗಳಲ್ಲಿ ವಿಶೇಷವಾಗಿ ಕಾಣಬರುವ ಪರೀಕ್ಷೆಯೆಂದರೆ ಕುದಿಯುವ ತುಪ್ಪದಲ್ಲಿ ಕೈಗಳನ್ನು ಅದ್ದುವುದು. ಬಹುಶಃ ಅದೇ ವಿಶೇಷವಾಗಿ ಬಳಸಲಾಗುತ್ತಿದ್ದಿತೆಂದು ಇದರಿಂದ ಊಹಿಸಬಹುದು; ಏಕೆಂದರೆ ಇತರ ಪರೀಕ್ಷೆಗಳಿಗಿಂತ ಇದು ಸುಲಭವಾದ ಪರೀಕ್ಷೆ.

ಹೀಗೆ ಪ್ರಾಚೀನ ಕರ್ನಾಟಕದಲ್ಲಿ ನ್ಯಾಯ ತೀರ್ಮಾನ ಕಾರ್ಯದಲ್ಲಿ ದಿವ್ಯ ಮಹತ್ತರವಾದ ಪಾತ್ರವನ್ನು ವಹಿಸುತ್ತಿದ್ದವು ಎಂದು ತಿಳಿಯಬಹುದು. ಸಾಹಿತ್ಯ ಗ್ರಂಥಗಳಲ್ಲಿಯೂ ಕಾಣಬರುವ ದಿವ್ಯ ಪ್ರಸಂಗಗಳನ್ನು ಗಮನಿಸಿದರೆ, ಇದರ ಮಹತ್ವ ಏನೆಂಬುದು ಇನ್ನೂ ವಿಶದವಾಗಿ ತಿಳಿಯುತ್ತದೆ.

ಟಿಪ್ಪಣಿಗಳು

1. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 7, ಮಂಡ್ಯ 25
2. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 7, ಮಂಡ್ಯ 63
3. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 4, ಯಳಂದೂರು 2
4. ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್, 1918, ಪುಟ 54
5. ಶಾಸನ 430 ; 1919 ; ಭಾರತ ಸರ್ಕಾರದ ಶಾಸನ ವರದಿ
6. ಟಿ. ವಿ. ಮಹಾಲಿಂಗಂ : ಅಡ್ಮಿನಿಸ್ಟ್ರೇಷನ್ ಎಂಡ್ ಸೋಷಿಯಲ್ ಲೈಫ್ ಡ್ಯೂರಿಂಗ್ ವಿಜಯನಗರ, ಪುಟ 129.

ಅಪರಾಧಗಳನ್ನು ನಿರ್ಣಯಿಸುವ ಪ್ರಾಚೀನ ವಿಧಾನಗಳಲ್ಲಿ 'ದಿವ್ಯ' ಎಂಬುದೂ ಒಂದು. ಅಪರಾಧ ನಿರ್ಣಯಕ್ಕೆ ಮಾನುಷವಾದ ಸಾಕ್ಷಿ ಯಾವುದು ಇಲ್ಲದಿರುವಾಗ ದೈವವನ್ನು ಆಶ್ರಯಿಸುತ್ತಿದ್ದರು. ಆದ್ದರಿಂದಲೇ ಅದನ್ನು ದಿವ್ಯವೆಂದು ಕರೆಯುತ್ತಿದ್ದರು. ಇದನ್ನು ಇಂಗ್ಲೀಷಿನಲ್ಲಿ 'ಆರ್ಡಿಯಲ್' ಎಂದು ಕರೆಯುತ್ತಾರೆ. ಆರ್ಡಿಯಲ್ ಪದಕ್ಕೆ '(ಭಗವಂತನ) ತೀರ್ಪು' ಎಂಬುದು ಮೂಲಾರ್ಥ, ಹೆಚ್ಚು ಕಡಿಮೆ ಪ್ರಪಂಚದಾದ್ಯಂತ ಈ ಸಂಪ್ರದಾಯವು ಸಾವಿರಾರು ವರ್ಷಗಳಿಂದ ಬೆಳೆದುಕೊಂಡು ಬಂದಿದೆ. ಅಪರಾಧ ನಿರ್ಣಯದಲ್ಲಿ ದಿವ್ಯವು ಮೊದಲ ಹೆಜ್ಜೆಯಲ್ಲ, ಕೊನೆಯ ಪ್ರಯತ್ನ. ಇದು ವಿಶೇಷವಾಗಿ ಆಫ್ರಿಕನ್ ಜನಾಂಗಗಳಲ್ಲಿ, ಭಾರತದಲ್ಲಿ ಮತ್ತು ಟ್ಯೂಟೋನಿಕ್ ಜನಾಂಗಗಳಲ್ಲಿ ಪ್ರಚಾರದಲ್ಲಿತ್ತು. ಈಗಲೂ ಅವಶೇಷ ರೂಪವಾಗಿ ಉಳಿದುಕೊಂಡು ಬಂದಿದೆ.........

ಭರತ ಖಂಡದಲ್ಲಿ ದಿವ್ಯವನ್ನು ಸ್ಮೃತಿಗಳೂ, ನ್ಯಾಯ ಗ್ರಂಥಗಳೂ ಮಾನ್ಯ ಮಾಡಿವೆ . . . . . ದಿವ್ಯಗಳನ್ನು ನಡೆಯಿಸಲು ಬೇಕಾದಷ್ಟು ನಿಯಮಗಳನ್ನು ಹಾಕಿದ್ದಾರೆ. ಯಾರಿಗೆ ಯಾವ ರೀತಿಯ ದಿವ್ಯ, ಯಾವ ಕಾಲದಲ್ಲಿ ನಡೆಯಿಸಬೇಕು? 'ದಿವ್ಯವನ್ನು ನಡೆಯಿಸುವಾಗ ವಹಿಸಬೇಕಾದ ಎಚ್ಚರಿಕೆಗಳು–ಈ ವಿಷಯದಲ್ಲಿ ಸಾಕಷ್ಟು ಭಿನ್ನಭಿಪ್ರಾಯಗಳಿವೆ. ದಿವ್ಯವನ್ನು ನಡೆಯಿಸುವ ನ್ಯಾಯಾಧಿಪತಿ ಮತ್ತು ದಿವ್ಯಕ್ಕೆ ಗುರಿಯಾಗಿರುವ 'ಶೋಧ್ಯ' ರಿಬ್ಬರೂ ಹಿಂದಿನ ದಿನ ಉಪಾವಾಸವಿದ್ದು ಮಾರನೆಯ ದಿನ ಪ್ರಾತಃಕಾಲ ಸ್ನಾನಮಾಡಬೇಕು. 'ಶೋಧ್ಯ'ನು ಒದ್ದೆಬಟ್ಟೆಯಲ್ಲಿರಬೇಕು, ದೇವತಾ ಪೂಜೆಯ ನಂತರ ನ್ಯಾಯಾಧಿಪತಿಯು ದೈವದ ಆವಾಹನೆ ಮಾಡಬೇಕು. ಪೂಜೆಯ ವಿಧಾನಗಳು ಮತ್ತು ಆವಾಹನೆಗಳಲ್ಲಿಯೂ ಬೇಕಾದಷ್ಟು ವಿವರಗಳಿವೆ. ಇವೆಲ್ಲವೂ ಮುಗಿದ ಬಳಿಕ ದಿವ್ಯವು ನಡೆಯುತ್ತದೆ.

ಎಂ. ಚಿದಾನಂದಮೂರ್ತಿ

ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ–197

ಕೆ. ಕೆಂಪೇಗೌಡ

ದ್ರಾವಿಡ ಭಾಷೆಗಳಲ್ಲಿ ಆಗಮಗಳು

ನಾಮ ಪದಗಳಿಗೆ ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಬೇರೆಬೇರೆ ಪದಗಳನ್ನು ರಚಿಸಿಕೊಳ್ಳಲು ಹೊರಟಾಗ ಅವುಗಳ ನಡುವೆ ಕೆಲವು ಹೊಸ ಹೊಸ ಅವಯವಗಳು ಬಂದು ಸೇರಿಕೊಂಡಿರುವುದು ಗೋಚರಿಸುತ್ತವೆ. ಇಂತಹ ಅವಯವಗಳನ್ನೇ "ಆಗಮಗಳು" ಎನ್ನುವರು. ಈ ಕೆಳಗಿನ ಉದಾಹರಣೆಗಳನ್ನು ಗಮನಿಸಿದಾಗ ಇವುಗಳ ವಿಚಾರವು ಸ್ಪಷ್ಟವಾಗುವುದು.

ಮರ + ಅಲ್ಲಿ = ಮರದಲ್ಲಿ = ಮರ + ದ್ + ಅಲ್ಲಿ
ಮನೆ + ಅನ್ನು = ಮನೆಯನ್ನು = ಮನೆ + ಯ್ + ಅನ್ನು
ಮಗು + ಗೆ = ಮಗುವಿಗೆ = ಮಗು + ವ್ + ಇಗೆ
ಹುಡುಗ + ಅ = ಹುಡುಗನ = ಹುಡುಗ + ನ್ + ಅ

ಈ ಮೇಲೆ ಕೊಟ್ಟಿರುವ ಬೇರೆ ಬೇರೆ ಪದ ರಚನೆಗಳನ್ನು ಗಮನಿಸಿದಾಗ ಇವುಗಳಲ್ಲಿ ನಾಮಪದಗಳು ಮತ್ತು ವಿಭಕ್ತಿ ಪ್ರತ್ಯಯಗಳ ನಡುವೆ ಕ್ರಮವಾಗಿ—ದ್—,—ಯ್—,—ವ್—,—ನ್— ಎಂಬ ಬೇರೆ ಬೇರೆ ಹೊಸ ಹೊಸ ಅವಯವಗಳು ಬಂದು ಸೇರಿಕೊಂಡಿವೆ. ಅವುಗಳ ಮೂಲ ರೂಪಗಳು ಕ್ರಮವಾಗಿ ಮರದ್—, ಮನೆಯ್—, ಮಗುವ್—, ಹುಡುಗನ್—, ಎಂದು ವಿಸ್ತೃತಗೊಳ್ಳಲು ಸಹಾಯಕವಾಗಿವೆ. ಈ ಬೇರೆ ಬೇರೆ ಮೂಲ ರೂಪಗಳ ಅಂತ್ಯದಲ್ಲಿ ಕಂಡುಬರುವ ಅಂತಹ ಅವಯವಗಳನ್ನೇ ಕೆಲವು ವಿದ್ವಾಂಸರು "ಆಗಮಗಳು" ಎನ್ನುವರು. ಇಂತಹ ಆಗಮಗಳು ಅಂತಹ ಪದರಚನೆಗಳಿಗೆ ಅತ್ಯಾವಶ್ಯಕ. ಇವುಗಳ ಸಹಾಯವಿಲ್ಲದೆ ಅಂತಹ ಯಾವ ಅರ್ಥ ಪೂರ್ಣವಾದ ಪದಗಳನ್ನು ರಚಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಂತಹ ಆಗಮಗಳು ಬೇರೆ ಬೇರೆ ದ್ರಾವಿಡ ಭಾಷೆಗಳ ಬೇರೆ ಬೇರೆ ಪದರಚನೆಗಳಲ್ಲಿ ವಿಶೇಷವಾಗಿ ಗೋಚರಿಸುತ್ತವೆ.

ನಾಮ ಪದಗಳಿಗೆ ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಬೇರೆ ಬೇರೆ ಪದಗಳನ್ನು ಈ ರೀತಿ ರಚಿಸಿಕೊಳ್ಳುವಂತೆಯೇ ಸರ್ವನಾಮಗಳು, ಗುಣವಾಚಕಗಳು ಮತ್ತು ಸಂಖ್ಯಾವಾಚಕಗಳಿಗೂ ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಬೇರೆ ಬೇರೆ ಅರ್ಥವತ್ತಾದ ಪದರಚನೆಗಳನ್ನು ರಚಿಸಿಕೊಳ್ಳಬಹುದಾಗಿದೆ. ಇಂತಹ ಸಂದರ್ಭಗಳಲ್ಲಿ ಅವುಗಳ

ನಡುವೆ ಕೆಲವು ಅಂತಹ ಹೊಸ ಹೊಸ ಅವಯುವಗಳು ಅಥವಾ ಆಗಮಗಳು ಬಂದು ಸೇರಿಕೊಳ್ಳುತ್ತವೆ ; ಇಲ್ಲವೇ ಅವು ಅವುಗಳ ಮೂಲ ರೂಪದಲ್ಲಿಯೋ ಸೇರಿಕೊಂಡು ಅವು ಗಳ ಮೂಲರೂಪವು ಹೆಚ್ಚು ಪರಿವರ್ತನೆಗೊಳ್ಳಬಹುದು. ಆಗ ಅಂತಹ ಅವಯುವಗಳನ್ನು ಅವುಗಳ ಮೂಲ ರೂಪಗಳಿಂದ ಅಷ್ಟೊಂದು ಸುಲಭವಾಗಿ ವಿಭಜಿಸಿ, ವಿವರಿಸಿ ತೋರಿಸಲು ಬರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಅವುಗಳ ಮೂಲ ರೂಪವನ್ನೇ ಅವುಗಳ ರೂಪ ಗಳನ್ನಾಗಿ ಪರಿಗಣಿಸಿಕೊಳ್ಳಬೇಕಾಗಬಹುದು. ಇಂತಹ ಮೂಲ ರೂಪಗಳನ್ನೇ ಕೆಲವು ವಿದ್ವಾಂಸರು "ವಿಭಕ್ತಿ (ಮೂಲ) ರೂಪಗಳು" ಎನ್ನುವರು. ಕೆಂಪ್—, ಕೆಂಚ್—. ಕೆಂದ್—, ಕೆಂಗ್—, ಕೆಂಟ್—, ಎನ್ನ್—, ನನ್ನ್—, ತನ್ನ್—, ನಿನ್ನ್—, ನಿನ್—, ಒಬ್ಬ್—, ಒಂದ್— ಓರ್— ಇರ್— ಇಪ್ಪ್— ಇನ್ನ್— ಮುಂತಾ ದುವುಗಳನ್ನು ಅವುಗಳ ವಿಭಕ್ತಿ (ಮೂಲ) ರೂಪಗಳಿಗೆ ಉದಾಹರಿಸಬಹುದಾಗಿವೆ. ಈ ಬೇರೆ ಬೇರೆ ನಾಮಪದ, ಗುಣವಾಚಕ, ಸಂಖ್ಯಾವಾಚಕ ಮತ್ತು ಸರ್ವನಾಮಗಳು ತಮ್ಮ ಪದರಚನೆಗಳಲ್ಲಿ ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳನ್ನು ತೆಗೆದುಕೊಂಡಾಗ ಅವು ತಮ್ಮಲ್ಲಿಯೇ ಕೆಲವು ವೇಳೆ ಪರಿವರ್ತನೆಗೊಂಡು ಅವೇ ಅವುಗಳ ಮೂಲ ರೂಪಗಳಾಗಿ ಗೋಚರಿಸುತ್ತವೆ. ಇಂತಹ ರಚನೆಗಳಲ್ಲಿ ಅಂತಹ ಆಗಮಗಳನ್ನು ನಿರ್ಧರಿಸಿ, ವಿಭಜಿಸಿ, ವಿವರಿಸಿಕೊಳ್ಳಲು ಕೆಲವು ವೇಳೆ ಸಾಧ್ಯವಾಗುವುದಿಲ್ಲ. ಇಂತಹ ಅನೇಕ ವಿಭಕ್ತಿ ಮೂಲ ರೂಪಗಳು ದ್ರಾವಿಡ ಭಾಷೆಗಳಲ್ಲಿ ವಿಶೇಷವಾಗಿ ಗೋಚರಿಸುತ್ತವೆ ಎನ್ನಬಹುದು.

ನಾಮಪದಗಳು ಮತ್ತು ವಿಭಕ್ತಿ ಪ್ರತ್ಯಯಗಳ ನಡುವೆ ಅವುಗಳ ಪದರಚನೆಗಳಲ್ಲಿ ಗೋಚರವಾಗುವ ಅಂತಹ ಅವಯುವಗಳನ್ನು ಕೆಲವು ವಿದ್ವಾಂಸರು ಬೇರೆ ಬೇರೆ ಹೆಸರು ಗಳಿಂದ ವಿವರಿಸಿಕೊಂಡಿದ್ದಾರೆ. ಇಂತಹ ಅವಯುವಗಳನ್ನು ರಾಬರ್ಟ್ ಕಾಲ್ಡ್‌ವೆಲ್, ಕೆ. ವಿ. ಸುಬ್ಬಯ್ಯ, ಎಲ್. ವಿ. ರಾಮಸ್ವಾಮಿ ಅಯ್ಯರ್ ಮುಂತಾದವರು ಆಗಮಗಳು ಎಂದು ಹೆಸರಿಸಿಕೊಂಡರೆ, ಕೆಲವು ಆಧುನಿಕ ಭಾಷಾ ವಿಜ್ಞಾನಿಗಳು ಇವನ್ನೇ ವಿಸ್ತೃತಾವ ಯವಗಳು ಎಂದೂ, ಶ್ಲಿಷ್ಟಯೋಗಾತ್ಮಕಾವಯವಗಳು ಎಂದೂ, ರಿಕ್ತ ಆಕೃತಿಗಳು ಎಂದೂ, ಸಂಬಂಧ ಸೂಚಕಾವಯುವಗಳು ಎಂದೂ ಕರೆದುಕೊಂಡಿದ್ದಾರೆ.

ನಾಮಪದಗಳ, ಸರ್ವನಾಮಗಳ, ಗುಣವಾಚಕಗಳ, ಸಂಖ್ಯಾವಾಚಕಗಳ ಮತ್ತು ವಿಭಕ್ತಿ ಪ್ರತ್ಯಯಗಳ ನಡುವೆ ಅವುಗಳ ಪದರಚನೆಗಳಲ್ಲಿ ಇಂತಹ ಕೆಲವು ಆಗಮಗಳು ಕಾಣಿಸಿಕೊಳ್ಳುವುದು ದ್ರಾವಿಡ ಭಾಷೆಗಳಲ್ಲಿ ಸರ್ವೇ ಸಾಮಾನ್ಯ. ಇಂತಹ ಕೆಲವು ಸಂದರ್ಭಗಳಲ್ಲಿ ಅಂತಹ ಆಗಮಗಳು ಅವುಗಳ ಮೂಲ ರೂಪದಲ್ಲಿಯೇ ಸೇರಿಹೋಗ ಬಹುದು ಇಲ್ಲವೆ ಅವುಗಳ ಅಂತ್ಯದಲ್ಲಿ ಉಳಿಯಬಹುದು. ಇಂತಹ ಆಗಮಗಳು ಕೆಲವು ವೇಳೆ ಅವುಗಳ ಮೂಲರೂಪಗಳು ಹೆಚ್ಚು ಪರಿವರ್ತನೆಗೊಳ್ಳುವಂತೆ ಸಹಾಯಕವಾಗಿದ್ದರೆ ಮತ್ತೆ ಕೆಲವು ವೇಳೆ ಇವು ಅಂತಹ ಮೂಲ ರೂಪಗಳ ಅಂತ್ಯದಲ್ಲಿ ಉಳಿದುಕೊಳ್ಳುವುದ ರಿಂದ ಅವುಗಳ ಮೂಲದಲ್ಲಿ ಅಂತಹ ಹೆಚ್ಚಿನ ವ್ಯತ್ಯಾಸ ಕಾಣಿಸುವುದಿಲ್ಲ.

ದ್ರಾವಿಡ ಭಾಷೆಗಳಲ್ಲಿ ನಾಮಪದಗಳ ಮತ್ತು ವಿಭಕ್ತಿ ಪ್ರತ್ಯಯಗಳ ನಡುವೆ ಅವು

ಗಳ ಪದರಚನೆಗಳಲ್ಲಿ ಹೀಗೆ ಕಾಣಿಸಿಕೊಳ್ಳುವ ಅವಯವಗಳು ಅವುಗಳ ಮೂಲ ರೂಪದ ಅಂತ್ಯ ಮತ್ತು ವಿಭಕ್ತಿ ಪ್ರತ್ಯಯದ ಆದಿಯಲ್ಲಿ ಕಂಡುಬರುವ ಸ್ವರ ಅಥವಾ ವ್ಯಂಜನ ಧ್ವನಿಗಳಿಗೆ ಅನುಗುಣವಾಗಿ ವಿಕಾಸಗೊಳ್ಳುತ್ತವೆ. ಇವು ಅವುಗಳಿಗೆ ಸ್ವರಾಗಮಗಳಾಗಿರಬಹುದು, ಅಥವಾ ವ್ಯಂಜನಾಗಮಗಳಾಗಿರಬಹುದು. ಇವು ಆಯಾ ಪದ ರಚನೆಯ ಪರಿಸರಕ್ಕೆ ತಕ್ಕ ಆಗಮಗಳಾಗಿ ಕಾಣಿಸಿಕೊಂಡರೆ ಆಶ್ಚರ್ಯವೇನಲ್ಲ. ಇಂತಹ ಯಾವ ಆಗಮಗಳೂ ಅವುಗಳ ಅರ್ಥ ವ್ಯತ್ಯಾಸಕ್ಕೆ ಕಾರಣವಾಗಲಾರವು. ಅಲ್ಲದೆ ಇವಕ್ಕೆ ಅಂತಹ ಯಾವ ಅರ್ಥವೂ ಇರುವುದಿಲ್ಲ. ಇಂತಹ ಆಗಮಗಳಿಗೆ ಅಂತಹ ಯಾವ ಬಗೆಯ ಅರ್ಥವು ಇಲ್ಲದಿರುವ ಕಾರಣದಿಂದಲೇ ಇವನ್ನು ಕೆಲವರು "ರಿಕ್ತ ಆಕೃತಿಗಳು" ಎಂದು ಕರೆಯುತ್ತಿದ್ದಾರೆ. ಮತ್ತೆ ಕೆಲವರು ಇವು ಮೂಲ ರೂಪ ಮತ್ತು ಪ್ರತ್ಯಯಗಳಿಗೆ ನೇರವಾದ ಸಂಬಂಧವನ್ನು ಕೂಡಿಸಬಲ್ಲ ಕೊಂಡಿಯಂತಹ ಅವಯವಗಳು ಆಗಿರುವುದರಿಂದಲೇ ಇವನ್ನು ಸಂಬಂಧ ಸೂಚಕಾವಯವಗಳು ಎಂತಲೂ ಕರೆಯುವರು. ಇವುಗಳಿಗೆ ಅಂತಹ ಯಾವ ಅರ್ಥವಿಲ್ಲದಿದ್ದರೂ ಅರ್ಥಪೂರ್ಣ ಪದರಚನೆಗಳಿಗೆ ಇವು ಬಹಳ ಮುಖ್ಯ. ಇವುಗಳ ಸಹಾಯವಿಲ್ಲದೆ ಅರ್ಥವತ್ತಾದ ಅಂತಹ ಪದಗಳನ್ನು ರಚಿಸಿಕೊಳ್ಳಲು ಕಷ್ಟವಾಗುವುದು. ಈ ಕಾರಣದಿಂದ ಇಂತಹ ಆಗಮಗಳ ಪಾತ್ರ ಅಂತಹ ಪದರಚನೆಗಳಲ್ಲಿ ಹೆಚ್ಚು ಸಹಾಯಕಾರಿ ಎನ್ನಬಹುದಾಗಿದೆ.

ಪದರಚನೆಗಳಲ್ಲಿ ಆಗಮಗಳು ರಚನೆಯಿಂದ ರಚನೆಗೆ ಬೇರೆ ಬೇರೆಯಾಗಿರುತ್ತವೆ. ಅಲ್ಲದೆ ಅವು ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿರುತ್ತವೆ. ಇವು ಆಯಾ ಭಾಷೆಯ ಪದರಚನೆಗಳಿಗೆ ಅನುಗುಣವಾಗಿ ರೂಪುಗೊಂಡಿರುತ್ತವೆ. ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಅಂತಹ ಆಗಮಗಳನ್ನು ಒಂದು ಪಟ್ಟಿಮಾಡಿ ಅವುಗಳನ್ನು ಪೂರ್ಣವಾಗಿ ಪರಿಶೀಲಿಸಲು ಹೊರಟಾಗ ಮಾತ್ರ ಅವುಗಳ ಸ್ವರೂಪವು ಸ್ಪಷ್ಟವಾಗಿ ಗೋಚರವಾಗುವುದು. ಇಂತಹ ಪಟ್ಟಿಯ ಸಹಾಯದಿಂದ ಅವು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಹೇಗೆ ಬೆಳೆದು ಬಂದಿವೆ ಎಂಬುವನ್ನು ತಿಳಿಯಬಹುದಲ್ಲದೆ ಅವುಗಳ ಮೂಲ ದ್ರಾವಿಡ ಅವಯವಗಳನ್ನು ಪುನರ್ರಚಿಸಿ ತೋರಿಸಬಹುದು. ಹೀಗೆ ಪುನರ್ರಚಿಸಿಕೊಂಡ ಮೂಲ ದ್ರಾವಿಡ ಅವಯವಗಳನ್ನು ಆಧಾರವಾಗಿಟ್ಟುಕೊಂಡು ಅವು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಕಾಲಕಾಲಕ್ಕೆ ಹೇಗೆ ಪರಿವರ್ತನೆಗೊಂಡು ಬೆಳೆದುಬಂದಿವೆ ಎಂಬುದನ್ನು ವಿವರಿಸಿ ತೋರಿಸಬಹುದಾದ ಅವಕಾಶಗಳಿವೆ.

ಆಧುನಿಕ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಇಂತಹ ಆಗಮಗಳನ್ನು ಕೆಲವರು ಆಕೃತಿ ಧ್ವನಿಮಾ ವಿಜ್ಞಾನದಲ್ಲಿಯೇ ಸೇರಿಸಿಕೊಂಡಿದ್ದರೆ ಮತ್ತೆ ಕೆಲವು ವ್ಯಾಕರಣಕಾರರು ಇವನ್ನು ಸಂಧಿ ಮತ್ತು ಸಮಾಸಗಳಲ್ಲಿ ಸೇರಿಸಿಕೊಂಡಿದ್ದಾರೆ. ಇನ್ನೂ ಕೆಲವರು ಇವನ್ನು ಪ್ರತ್ಯೇಕವಾಗಿಯೂ ಅಭ್ಯಸಿಸಿದ್ದಾರೆ. ದ್ರಾವಿಡ ಭಾಷೆಗಳ ಪದರಚನೆಗಳಲ್ಲಿ ಎರಡು ಸಮಾನ ಸ್ವರಗಳು ಇಲ್ಲವೇ ಎರಡು ಅಸಮಾನ ಸ್ವರಗಳು ಸಾಮಾನ್ಯವಾಗಿ ಪರಸ್ಪರ ಕೂಡಿ ಪದರಚನೆಯಾಗುವುದಿಲ್ಲ. ಆದ ಕಾರಣ ಇಂತಹ ಎರಡು ಸ್ವರಗಳ ನಡುವೆ

ಅಂತಹ ಕೆಲವು ವ್ಯಂಜನಾಗಮಗಳ ಅವಶ್ಯಕತೆ ಕಂಡು ಬರುವುದು. ಇದೇ ರೀತಿ ಮತ್ತೆ ಕೆಲವು ವೇಳೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳ ನಡುವೆ ಕೆಲವು ಸ್ವರಾಗಮಗಳ ಅವಶ್ಯಕತೆಯೂ ಕಾಣಿಸಿಕೊಳ್ಳುತ್ತವೆ. ಹೀಗೆ ಪದರಚನೆಗಳಲ್ಲಿ ಅವುಗಳ ಪರಿಸರಕ್ಕೆ ತಕ್ಕಂತೆ ಕೆಲವು ಸ್ವರ ಅಥವಾ ವ್ಯಂಜನ ಆಗಮಗಳು ಕಾಣಿಸಿಕೊಳ್ಳುವುದು ಕೆಲವು ಭಾಷೆಗಳಲ್ಲಿ ಸರ್ವೇ ಸಾಮಾನ್ಯ ಎನ್ನಬಹುದು.

ತಮಿಳು :

—ಅನ್—, ಉದಾ :
ಏಳನ್ನೈ (ಏಳನೆಯ) ಏಳ್+ಅನ್+ಅಯ್
ಅತನಾಲ್ (ಅದರಿಂದ) ಅತ್+ಅನ್+ಆಲ್
ಒಂನ್ರನ್ನೈ (ಒಂದರ) ಒನ್ರ್+ಅನ್+ಅಯ್
—ಅರ್—,
ಅವರ್‍ರುಳ್ (ಅವರಲ್ಲಿ) ಅವ್+ಅರ್+ಉಳ್
ಇವರ್‍ರುಳ್ (ಇವರಲ್ಲಿ) ಇವ್+ಅರ್+ಉಳ್
—ಅತ್—,
ಕಲತ್ತಿಲ್ (ಪಾತ್ರೆಯಲ್ಲಿ) ಕಲವ್+ಅತ್ತ್+ಇಲ್
ಜನತ್ತಾಲ್ (ಕೋಪದಿಂದ) ಜನಮ್+ಅತ್ತ್+ಆಲ್
—ತ್ತ್—,
ವೇಳತ್ತೈ (ಗಂಡು ಆನೆಯನ್ನು) ವೇಳಮ್+ತ್ತ್+ಅಯ್

ತಮಿಳು ಭಾಷೆಯಲ್ಲಿ —ಅತ್ತ್— ಮತ್ತು —ತ್ತ್— ಎಂಬ ಆಗಮಗಳು ಪರಸ್ಪರ ಸ್ವಚ್ಛಂದರೂಪಗಳಾಗಿ ಬಳಕೆಯಲ್ಲಿವೆ ಎನ್ನಬಹುದು.

ಮಲೆಯಾಳಂ :

—ತ್ತ್— ಉದಾ :
ಕಲತ್ತೈ (ಪಾತ್ರೆಯನ್ನು) ಕಲವ್+ತ್ತ್+ಅಯ್
ತೋಟ್ಟತ್ತಾಲ್ (ತೋಟದಿಂದ) ತೋಟ್ಟ್+ತ್ತ್+ಆಲ್
—ಅನ್—,/—ಇನ್—
ಇತನ್ನೈ (ಇದನ್ನು) ಇತ್+ಅನ್+ಅಯ್
ಅತನ್ನೈ (ಅದನ್ನು) ಅತ್+ಅನ್+ಅಯ್
ವಿಳಕ್ಕಿ+ನುಕ್ಕು (ಬೆಳಕಿಗೆ) ವಿಳಕ್ಕ್+ಇನ್+ಉಕ್ಕು

ಮಲೆಯಾಳಂ ಭಾಷೆಯಲ್ಲಿ —ಅನ್— ಮತ್ತು —ಇನ್— ಎಂಬ ಆಗಮಗಳು ಸ್ವಚ್ಛಂದರೂಪಗಳಾಗಿ ಬಳಕೆಯಲ್ಲಿವೆ.

—ಅರ್—/—ಇರ್—/—ರ್—

ಇವರ್‍ರಾಲ್ (ಇವರಿಂದ) ಇವ್+ಅರ್‍+ಆಲ್
ಅವರ್‍ರಾಲ್ (ಅವರಿಂದ) ಅವ್+ಅರ್‍+ಆಲ್
ಅವರ್‍ರೈ (ಅವರನ್ನು) ಅವ+ರ್‍+ಅಯ್
ಇವಿರ್‍ರೈ (ಇವರನ್ನು) ಇವ್+ಇರ್‍+ಅಯ್

ಕೋತ :

—ತ್—, ಉದಾ :
ಮರ್‌ತಾರ್ (ಮರದಿಂದ) ಮರ್+ತ್+ಆರ್
ಮರ್ತ್‌ನ್ (ಮರವನ್ನು) ಮರ್+ತ್+ಅನ್
ವೊಲವ್ತ್‌ಕ್ (ವೊಲಕ್ಕೆ) ವೊಲವ್+ತ್+ಕ್
—ನ್—,
ಎದ್ನಾರ್ (ಯಾವುದರಿಂದ) ಎದ್+ನ್+ಆರ್
ಅದ್ನೋಡ್ (ಅದರೊಡನೆ) ಅದ್+ನ್+ಓಡ್

ತೊದ :

—ತ್—, ಉದಾ :
ಮೇಣ್ತ್‌ಕ್ (ಮರಕ್ಕೆ) ಮೇಣ್+ತ್+ಕ್
ಕೊಳ್ತ್‌ನ್ (ಕಣವನ್ನು) ಕೊಳ್+ತ್+ನ್
—ನ್—,
ಇರ್ನಾಲ್ (ಎಮ್ಮೆಯಿಂದ) ಇರ್+ನ್+ಆಲ್

ಕೊಡಗು :

—ತ್—, ಉದಾ :
ಮರತೊಂಡಿ (ಮರದಿಂದ) ಮರ+ತ್+ಒಂಡಿ
ಮರತ್ರ (ಮರದಲ್ಲಿ) ಮರ+ತ್+ರ
—ಇನ್—,
ಅದಿನ (ಅದನ್ನು) ಅದ್+ಇನ್+ಅ
ಇದಿನ (ಇದನ್ನು) ಇದ್+ಇನ್+ಅ
ಅದಿಂಗು (ಅದಕ್ಕೆ) ಅದ್+ಇಙ್+ಗು
ಅದಿಂಡ (ಅದರ) ಅದ್+ಇಣ್+ಡ
—ನ್—,
ಊರ್ನ (ಊರನ್ನು) ಊರ್+ನ್+ಅ

ಮೋಜ್‌ನ (ಮೋಜನ್ನು) ಮೋಜ್+ನ್+ಅ
ಊರ್‌ನೊಂಡಿ (ಊರಿನಿಂದ) ಊರ್+ನ್+ಒಂಡಿ

ಕೊಡಗು ಭಾಷೆಯಲ್ಲಿ —ಇನ್— ಮತ್ತು —ನ್— ಎಂಬ ಆಗಮಗಳು ಪರಸ್ಪರ ಸ್ವಚ್ಛಂದ ರೂಪಗಳಾಗಿ ಬಳಕೆಯಲ್ಲಿವೆ.

—ಅನ್—,
ಎಟ್ಟ್‌ನ (ಎಂಟನ್ನು) ಎಟ್ಟ್+ಅನ್+ಅ
ಎಟ್ಟ್ಯಾಂಗು (ಎಂಟಕ್ಕೆ) ಎಟ್ಟ್+ಅನ್+ಗು

ಕನ್ನಡ :

—ದ್—, ಉದಾ :
ಮರದ ಮರ+ದ್+ಅ
ಮರದಿಂದ ಮರ+ದ್+ಇಂದ
—ಅರ್—,
ಅದರ ಅದ್+ಅರ್+ಅ
ಇದರ ಇದ್+ಅರ್+ಅ
—ನ್—,
ರಾಜನ ರಾಜ+ನ್+ಅ
ಹುಡುಗನ ಹುಡುಗ+ನ್+ಅ
—ಇನ್—/—ಇ—,
ಮಗಳಿಂಗೆ ಮಗಳ್+ಇನ್+ಗೆ
ಮಗಳಿಗೆ ಮಗಳ್+ಇ+ಗೆ
—ಯ್—,
ಮನೆಯನ್ನು ಮನೆ+ಯ್+ಅನ್ನು
ಕೆರೆಯನ್ನು ಕೆರೆ+ಯ್+ಅನ್ನು
—ವ್—,
ಮಗುವಿಗೆ ಮಗು+ವ್+ಇಗೆ
ಕರುವಿಗೆ ಕರು+ವ್+ಇಗೆ

ಹಳಗನ್ನಡ ಭಾಷೆಯಲ್ಲಿ —ಉವ್— ಮತ್ತು —ರ್‍— ಎಂಬ ಆಗಮಗಳಿರುವುದು ಗೋಚರಿಸುತ್ತವೆ ; ಆದರೆ ಇವು ಹೊಸಗನ್ನಡದಲ್ಲಿ ಬಳಕೆಯಲ್ಲಿಲ್ಲ.

ಬಡಗ :

—ನ್—, ಉದಾ :

ಆದುನ (ಅದನ್ನು/ಅದರ) ಅದು+ನ್+ಅ
ಇದುನ (ಇದನ್ನು/ಇದರ) ಇದು+ನ್+ಅ
—ರ್—,
ಅವ್ಕರ (ಅವರನ್ನು) ಅವ್ಕ್+ರ್+ಅ
ಇವ್ಕರ (ಇವರನ್ನು) ಇವ್ಕ್+ರ್+ಅ
ಅವ್‌ಕ್ರೆಂದ (ಅವರಿಂದ) ಅವ್ಕ್+ರ್+ಎಂದ
—ದ್—,
ಪೇಪರ್‌ದೆಂದ (ಪೇಪರಿನಿಂದ) ಪೇಪರ್+ದ್+ಎಂದ
ಮರದೋ (ಮರದಲ್ಲಿ) ಮರ+ದ್+ಓ

ತುಳು :

—ತ್—/—ದ್—, ಉದಾ :
ಪೂತ (ಹೂವಿನ) ಪೂ+ತ್+ಅ
ಕುರಿತ (ಕುರಿಯ) ಕುರಿ+ತ್+ಅ
ಕಂಜಿದ (ಕರುವಿನ) ಕಂಜಿ+ದ್+ಅ
ಬೊಳ್ಪುದ (ಬೆಳಕಿನ) ಬೊಳ್ಪು+ದ್+ಅ
—ನ್—/—ಏನ್—,
ಮುಗಳ್ನ (ಮಗಳ) ಮಗಳ್+ನ್+ಅ
ಗುರುನ (ಗುರುವಿನ) ಗುರು+ನ್+ಅ
ಪಿಲಿಕ್ಳೇನ (ಹುಲಿಗಳ) ಪಿಲಿಕ್ಳ್+ಏನ್+ಅ
ಆಕ್ಳೇನ (ಹಸುಗಳ) ಆಕ್ಳ್+ಏನ್+ಅ
—ಆ—/—ಅ—,
ಇಂಬ್ಯಾಗು (ಇವನಿಗೆ) ಇಂಬ್ಯ್+ಆ+ಗು
ಆಯಾಗು (ಅವನಿಗೆ) ಆಯ್+ಆ+ಗು
—ಎ—,
ಮೋಜಿಳೆಗು (ಮೋಜುಗಳಿಗೆ) ಮೋಜಿಳ್+ಎ+ಗು
ಮೋಜಿಳೆಡು (ಮೋಜುಗಳಲ್ಲಿ) ಮೋಜಿಳ್+ಎ+ಡು

ತೆಲುಗು :

—ನ—/—ನ್—, ಉದಾ :
ಗುರ್ರಮ್ಮುನಕು (ಕುದುರೆಗೆ) ಗುರ್ರಮ್ಮು+ನ+ಕು
ಗುರ್ರಮ್ಮುನಂಡ (ಕುದುರೆಯಿಂದ) ಗುರ್ರಮ್ಮು+ನ್+ಅಂಡ

ಬುನಾಕು (ಸಹಾಯಕ್ಕೆ) ಬು+ನಾ+ಕು

ತೆಲುಗು ಭಾಷೆಯಲ್ಲಿ —ನ್—, —ನ—, —ನಾ— ಎಂಬ ಆಗಮಗಳು ಪರಸ್ಪರ ಸ್ವಚ್ಛಂದ ರೂಪಗಳಾಗಿ ಬಳಕೆಯಲ್ಲಿವೆ.

—ಇ—,

ಕಾಲಿಕಿನ್ (ಕಾಲಿಗೆ) ಕಾಲ್+ಇ+ಕಿನ್

ಚೇನಿಕಿನ್ (ಹೊಲಕ್ಕೆ) ಚೇನ್+ಇ+ಕಿನ್ ~
ಚೇನು+ಇ+ಕಿನ್

—ಟಿ—,

ಏಟಿ (ನದಿ—) ಏರು— (ವಿಭಕ್ತಿ ಮೂಲ ರೂಪಗಳು)

ಗೂಟಿ (ಗೂಡು—) ಗೂಡು—

ಕಾಂಟಿ (ಕಣ್ಣು—) ಕನ್ನು—

—ಇ (ಙ್) ಟಿ—,

ನಾಲುಗಿಂಟಿ—(ನಾಲ್ಕು—) ನಾಲ್ಗು—(ವಿಭಕ್ತಿ ಮೂಲ ರೂಪಗಳು)

ವೇಯಿಂಟಿ—(ಸಾವಿರ—) ವೇಯಿ—

—ಅ—,

ತಮ್ಮುಲಕು (ತಮ್ಮನಿಗೆ) ತಮ್ಮುಲ್+ಅ+ಕು

ಗುರ್ರಮ್ಮುಲಕು (ಕುದುರೆಗೆ) ಗುರ್ರಮ್ಮುಲ್+ಅ+ಕು

ಗೋಂಡಿ :

—ದ್—, ಉದಾ :

ಕೊರ್‌ದಾನ್ (ಹುಂಜನ್ನು) ಕೊರ್+ದ್+ಆನ್

ಸರಿದೇ (ದಾರಿಯಲ್ಲಿ) ಸರಿ+ದ್+ಏ

ಪಾದೇ (ಹಾಲಿನಲ್ಲಿ) ಪಾ+ದ್+ಏ

—ತ್—,

ಕೋಂದಾತೂನ್ (ಹೋರಿಯನ್ನು) ಕೋಂದಾ+ತ್+ಊನ್

ರೋನ್‌ತಾಲ್ (ಮನೆಯಿಂದ) ರೋನ್+ತ್+ಆಲ್

—ನ್—,

ಮರೀನ್ (ಮರಿಯನ್ನು) ಮರೀ+ನ್+∅

ಸಡೇನ (ಅಳಿಯನ) ಸಡೇ+ನ್+∅ ~
ಸಡೇ+ನ್+ಅ

ಕಾಕಾನ್ (ಚಿಕ್ಕಪ್ಪನನ್ನು) ಕಾಕಾ+ನ್+∅

ಕೋಯ :

—ದ್—, ಉದಾ :
ಪಾವ್‌ದಿನ್ (ಹಾವನ್ನು) ಪಾವ್ + ದ್ + ಇನ್
ಕೈದೆ (ಕೈಯಲ್ಲಿ) ಕೈ + ದ್ + ಎ
ಕೆವ್‌ದೆ (ಕಿವಿಯಲ್ಲಿ) ಕೆವ್ + ದ್ + ಎ
—ತ್—/—ತ್ತ—,
ಕೋನ್‌ತಿನ್ (ಹೋರಿಯನ್ನು) ಕೋನ್ + ತ್ + ಇನ್
ಎದ್ದಿತೆ (ಸೂರ್ಯನಲ್ಲಿ) ಎದ್ದಿ + ತ್ + ಎ
ಬಜ್ಜಿಳ್‌ತೆ (ಬಲೆಯಲ್ಲಿ) ಬಜ್ಜಿಳ್ + ತ್ + ಎ
—ನ್—/—ಇನ್—,
ಮರೀನ್ (ಮಗನನ್ನು) ಮರೀ + ನ್ + ∅
ಯಯಾನ್ (ತಂದೆಯನ್ನು) ಯಯಾ + ನ್ + ∅
ಗೂಡಿನಿ (ಗೂಡಿನಲ್ಲಿ) ಗೂಡ್ + ಇನ್ + ಇ
ಏರ್ವಿನಿ (ಕೆರೆಯಲ್ಲಿ) ಏರ್ವ್ + ಇನ್ + ಇ

ಕೊಂಡ :

—ತಿ—/—ದಿ—/—ತ್—, ಉದಾ :
ಆಯ್‌ಲ್ದಿ—(ವಿಭಕ್ತಿ ರೂಪ) ಆಯ್ಲಿ=(ಹುಡುಗಿ)
ನೊರೆಸ್ತಿ—(ವಿಭಕ್ತಿ ರೂಪ) ನೊರೆಸ್ (ಹುಲಿ)
ಕುಡವ್‌ತನ್ (ಕೊಡಲಿಯಿಂದ) ಕುಡವ್ + ತ್ + ಅನ್
ಮರವ್‌ತನ್ (ಮರದಿಂದ) ಮರವ್ + ತ್ + ಅನ್
—ಅ—,
ಆಯ್ಲಿಕ—(ವಿಭಕ್ತಿ ರೂಪ) ಆಯ್ಲಿಕ್—ಹುಡುಗಿಯರು
ನೊರೆಸ್ಕು—(ವಿಭಕ್ತಿ ರೂಪ) ನೊರೆಸ್ಕು—(ಹುಲಿಗಳು)
—ಇ—,
ಅನಗಿರಿ—(ವಿಭಕ್ತಿ ರೂಪ) ಅನಗಿರ್(ಅಣ್ಣಂದಿರು)
ಬುಬರಿ—(ವಿಭಕ್ತಿ ರೂಪ) ಬುಬರ್(ತಂದೆತಾಯಿಯರು)
—ಅನಿ—,
ಅದನಿ—(ವಿಭಕ್ತಿ ರೂಪ) ಅದನಿ(ಆ ಹೆಂಗಸು)
ಇದನಿ—(ವಿಭಕ್ತಿ ರೂಪ) ಇದನಿ(ಈ ಹೆಂಗಸು)

ಕುಯಿ :

—ನ್—/—ನಿ—/—ಜ್—, ಉದಾ :
ಅಜಂಗಿ(ತಾಯಿಗೆ) ಅಜ+ಜ್+ಗಿ
ಅಜಸ್ಕಂಗಿ(ತಾಯಂದಿರಿಗೆ) ಅಜಸ್ಕ್+ಜ್+ಗಿ
ಅಜನಿ(ಇ)(ತಾಯಿಯನ್ನು) ಅಜ+ನ್+ಇ ~
ಅಜ+ನಿ+ಇ

—ಇ—,
ಆಬರಿ(ಇ) (ತಂದೆಯಂದಿರನ್ನು)
ಆಬರ್+ಇ+ಇ
ಆಬರಿಕಿ(ತಂದೆಯಂದಿರಿಗೆ) ಆಬರ್+ಇ+ಕಿ
ನೆಗನಿಕಿ(ಒಳ್ಳೆಯ ಮನುಷ್ಯನಿಗೆ) ನೆಗನ್+ಇ+ಕಿ
—ತಿನ್—,
ಕೋರುತಿಂಗಿ(ಎಮ್ಮೆಗೆ) ಕೋರು+ತಿನ್+ಗಿ
ಕೋರ್ಕತಿಂಗಿ(ಎಮ್ಮೆಗೆ) ಕೋರ್ಕ+ತಿನ್+ಗಿ
—ಅಡಿನ್—/—ಅಡಿನಿ—,
ಎಸ್ತಡಿನಿ(ಯಾವ ಹೆಂಗಸರ) ಎಸ್ತ್+ಅಡಿನ್+ಇ
ಎಸ್ತಡಿನಿಗಿ(ಯಾವ ಹೆಂಗಸರಿಗೆ) ಎಸ್ತ್+ಅಡಿನಿ+ಗಿ
—ಅಡಿ—,
ಈರಡಿಕಿ(ಇದಕ್ಕೆ) ಈರ್+ಅಡಿ+ಕಿ
ಈವಡಿಕಿ(ಇವುಗಳಿಗೆ) ಈವ್+ಅಡಿ+ಕಿ

ಕುವಿ :

—ನ್—/—ನ—, ಉದಾ :
ಆಯನಕಿ(ಹೆಂಗಸಿಗೆ) ಆಯ+ನ+ಕಿ
ಆಯನಿ(ಹೆಂಗಸನ್ನು) ಆಯ+ನ್+ಇ
—ಣ್—/—ಣ—,
ಹನಣಕಿ(ಹೊಗಳುವವಳಿಗೆ) ಹನ+ಣ+ಕಿ
ಕಡ್ಡಣನಿ(ನದಿಗಳನ್ನು) ಕಡ್ಡಣ+ನ್+ಇ
—ತ್—/—ತ—,
ಕಡ್ಡತಕಿ(ನದಿಗೆ) ಕಡ್ಡ+ತ+ಕಿ
ಕಡ್ಡತಿ(ನದಿಯು) ಕಡ್ಡ+ತ್+ಇ

ಕಡ್ಡತ(ನದಿಯಲ್ಲಿ) ಕಡ್ಡ+ತ್+ಅ

—?—,

ಕೊಕರ?ಇ(ಹುಡುಗರನ್ನು) ಕೊಕರ+?+ಇ

ವೆಡ್ಡಹ?ಇ(ಮರಗಳನ್ನು) ವೆಡ್ಡಹ+?+ಇ

ಪೆಂಗೋ :

—ತ್—, ಉದಾ :

ಮಾಲ್ತಿನ್(ಮಾಲೆಯನ್ನು) ಮಾಲ್+ತ್+ಇನ್

ಮಾಲ್ತೊ(ಮಾಲೆಯಲ್ಲಿ) ಮಾಲ್+ತ್+ಒ

ಮಾಲ್ತನ್(ಮಾಲೆಯಿಂದ) ಮಾಲ್+ತ್+ಅನ್

—ದ್—,

ಕಾಲ್‌ದನ್(ಕಾಲಿನಿಂದ) ಕಾಲ್+ದ್+ಅನ್ ~ಅಜ್

ಕಾಲ್‌ದಿ(ಕಾಲಿನ) ಕಾಲ್+ದ್+ಇ

ಕಾಲ್‌ದೊ(ಕಾಲಿನಲ್ಲಿ) ಕಾಲ್+ದ್+ಒ

—ನ್—,

ಕೆಯ್‌ಕುನಿ (ಕೈಗಳನ್ನು) ಕೆಯ್‌ಕು+ನ್+ಇ

—ಅಲ್—,

ಎದಲಿಂಗ್ (ಇದನ್ನು) ಎದ್+ಅಲ್+ಇಂಗ್

ಎಂದಲಿಂಗ್ (ಇವನ್ನು, ಇವುಗಳಿಗೆ) ಎಂದ್+ಅಲ್+ಇಂಗ್

—ಕ್—,

ಕೆಯ್‌ಕುಕನ್ (ಕೈಗಳಿಗೆ) ಕೆಯ್‌ಕು+ಕ್+ಅನ್

ಆಚ್ಕುಕನ್ (ಹೆಂಗಸರಿಗೆ) ಆಚ್ಕು+ಕ್+ಅನ್

ನಾಯ್ಕಿ :

—ನ್—, ಉದಾ :

ತೋಲೆಲ್‌ನುನ್ (ಅಣ್ಣನನ್ನು) ತೋಲೆಲ್+ನ್+ಉನ್

ಬಾಯ್‌ನುನ್ (ಹೆಂಗಸನ್ನು) ಬಾಯ್+ನ್+ಉನ್

—ತ್—,

ಕೀತುನ್ (ಕೈಯಲ್ಲಿ) ಕೀ+ತ್+ಉನ್

ಊರ್‌ತ(ಊರಿನ) ಊರ್+ತ್+ಉನ್

—ಕ್—,
ಅನೆಕೆಲ್ (ನನ್ನ ಕಡೆಗೆ) ಅನೆ+ಕ್+ಎಲ್
ಅಪಡೆಕೆಲ್ (ಮನೆಯ ಕಡೆಗೆ) ಅಪಡೆ+ಕ್+ಎಲ್

ಪರ್ಜಿ :

—ತ್—,
ಮೆರ್ತೊ (ಮರವನ್ನು) ಮೆರ್+ತ್+ಒ
ಬೊಲುಬ್‌ತ (ಊರಿನ) ಬೊಲುಬ್+ತ್+ಅ
ಮೆರ್ತಿ (ಮರದಲ್ಲಿ) ಮೆರ್+ತ್+ಇ
—ಕ್—,
ಚೊಪ್ಲೆಕೆಲ್ (ಮನೆಯಲ್ಲಿ) ಚೊಪ್ಲೆ+ಕ್+ಎಲ್
ವಾಯಿಕೆಲ್ (ಹೊಲದಲ್ಲಿ) ವಾಯಿ+ಕ್+ಎಲ್

ಗದಬ :

—ತ್—, ಉದಾ :
ಪೊಲುಬ್‌ತಿನ್ (ಊರಿನ) ಪೊಲುಬ್+ತ್+ಇನ್
ತೊರುತ್‌ನಾಲ್ (ಹಗ್ಗದಿಂದ) ತೊರು+ತ್+ನಾಲ್
ಕರ್ಸ್ಪಿತ್‌ನಾಲ್ (ಕೋಲಿನಿಂದ) ಕರ್ಸ್ಪಿ+ತ್+ನಾಲ್

ಕುರುಖ್ :

—ಇ—/—ಇನ್—, ಉದಾ :
ಆದಿನು(ಅದರಲ್ಲಿ) ಆದ್+ಇ+ನು
ಆದಿತಿ(ಅದರಿಂದ) ಆದ್+ಇ+ತಿ
ಆದಿಂತಿ(ಅದರಿಂದ) ಆದ್+ಇನ್+ತಿ
—ಗ್—/—ಕ್—,
ನೇಕ್ನು(ಯಾರಲ್ಲಿ) ನೇ+ಕ್+ನು
ತಂಗನ್(ಅವನನ್ನು) ತನ್+ಗ್+ಅನ್
ನೇಕಾಗೆ(ಯಾರಿಗೆ) ನೇ+ಕ್+ಆ+ಗೆ
—ಆ—,
ನೀಮಾಗೆ(ನಿಮಗೆ) ನೀಮ್+ಆ+ಗೆ
ಎಮ್‌ಗಾಗೆ(ನನಗೆ) ಎಮ್+ಗ್+ಆ+ಗೆ
ತಂಗಾಗೆ(ಅವಳಿಗೆ) ತನ್+ಗ್+ಆ+ಗೆ

ಮಲ್ತೊ :

—ಇ—, ಉದಾ :
ಮನಿಕ್(ಮರಕ್ಕೆ) ಮನ್+ಇ+ಕ್
ಆಥಿಕ್(ಅದಕ್ಕೆ) ಆಥ್+ಇ+ಕ್
ಆಥಿನೊ(ಅದರಲ್ಲಿ) ಆಥ್+ಇ+ನೊ
—ಗ್—/—ಕ್—,
ನೇಕೆನ್(ಯಾರನ್ನು) ನೇ+ಕ್+ಎನ್
ನೇಕೆ(ಯಾರಿಗೆ) ನೇ+ಕ್+ಎ
ನೇಕೆನೊ(ಯಾರಲ್ಲಿ) ನೇ+ಕ್+ಎನೊ ~
ನೇ+ಗ್+ಎನೊ

ಬ್ರಹೂಈ :

—ಅ—, ಉದಾ :
ಮಾರನಾ(ಮಗನ) ಮಾರ್+ಅ+ನಾ
ಮಾರತೊ(ಮಗನೂ) ಮಾರ್+ಅ+ತೊ
—ಎ—,
ಖರಾಸ್ತೆತೊ(ಹೋರಿಗಳೂ) ಖರಾಸ್ತ್+ಎ+ತೊ
ಖರಾಸ್ತೆಆಟ್(ಹೋರಿಗಳಿಂದ) ಖರಾಸ್ತ್+ಎ+ಆಟ್
ನನೆಆಇ(ನಮ್ಮಲ್ಲಿ) ನನ್+ಎ+ಆಇ
—ಘ್—,
ಲುಮ್ಮಘಾನ್(ತಾಯಿಯಿಂದ) ಲುಮ್ಮ+ಘ್+ಆನ್
ಲುಮ್ಮಘಾಇ(ತಾಯಿಯಲ್ಲಿ) ಲುಮ್ಮ+ಘ್+ಆಇ
ಊರಾಘಾನ್(ಊರಿನಿಂದ) ಊರಾ+ಘ್+ಆನ್

ಈ ಮೇಲೆ ಸಂಗ್ರಹಿಸಿರುವ ಬೇರೆ ಬೇರೆ ದ್ರಾವಿಡ ಭಾಷೆಗಳ ಬೇರೆ ಬೇರೆ ಆಗಮಗಳನ್ನು ಪಟ್ಟಿಮಾಡಿ ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವುಗಳಲ್ಲಿ ಕೆಲವು ಸಮಾನ ಅವಯವಗಳು ಇರುವುದು ಗೋಚರಿಸುತ್ತದೆ. ಇವುಗಳಲ್ಲಿ ಸಮಾನತೆ ಇದೆಯಾದರೂ ಇವು ಬೇರೆ ಬೇರೆ ಪರಿಸರಗಳ ಪ್ರಭಾವದಿಂದ ಬೇರೆ ಬೇರೆ ರೀತಿಯಲ್ಲಿ ಪರಿವರ್ತನೆ ಗೊಂಡಿವೆ. ಇವುಗಳಲ್ಲಿ ಕಂಡುಬರುವ ಅಂತಹ ಸಮಾನ ಅವಯವಗಳನ್ನು ಅವುಗಳ ಸಾಮ್ಯಗಳನ್ನು ಆಧರಿಸಿ ಅವನ್ನು ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದ ಅವಕಾಶಗಳಿವೆ. ಇವುಗಳಿಂದ ಅವುಗಳ ಮೂಲ ದ್ರಾವಿಡ ಆಗಮಗಳನ್ನು ಪುನರ್ರಚಿಸಿ ಕೊಳ್ಳಲು ಸುಲಭವಾಗುವುದು.

*—ಅನ್—	*—ಇನ್—	*—ಅ—
—ಅನ್—	—ಇನ್—	—ಅ—
—ಅನ್—	—ನ್—	—ಅ—
—ನ್—	—ನ—	—ಇ—
—ಣ್—	—ನಿ—	—ಎ—
—ಅನಿ—	—ಣ—	—ಏ—
*—ತ್ತ್—	*—ಅರ್ರ್—	*—ಕ್—
—ತ್ತ್—	—ಅರ್ರ್—	—ಕ್—
—ಅತ್ತು—	—ಅರ್—	—ಗ್—
—ಅತ್ತ್—	—ರ್ರ್—	—ಘ್—
—ತ್—	—ರ್—	—?—
—ದ್—	—ಅಲ್—	
—ತ—	—ಲ್—	
—ದಿ—	—ಅಡಿ—	
—ತಿ—	—ಅಡಿನ್—	
—ತಿನ್—	—ಅಡಿನಿ—	
—ಟಿ—		
—ಇಂಟಿ—		

ದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಎಲ್ಲಾ ಆಗಮಗಳನ್ನು ಪಟ್ಟಿಮಾಡಿ ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವು ಬೇರೆ ಬೇರೆ ಮೂಲಗಳಿಂದ ಹುಟ್ಟಿ ಬೆಳೆದು ಬಂದ ಆಗಮಗಳಾಗಿ ಗೋಚರಿಸುತ್ತವೆ. ಅಲ್ಲದೆ ಇವುಗಳಲ್ಲಿ ಕೆಲವು ಪರಸ್ಪರ ಒಂದೇ ಮೂಲದಿಂದ ಹುಟ್ಟಿ ಬೆಳೆದು ಬಂದಿರಬಹುದಾದ ಸಾಧ್ಯತೆಗಳೂ ಇವೆ. ಆ ಕಾರಣ ಯಾವ ಯಾವ ಆಗಮಗಳು ಪರಸ್ಪರ ಒಂದೇ ಮೂಲದಿಂದ ಹುಟ್ಟಿಬಂದಿವೆಯೋ ಅಂತಹ ಆಗಮಗಳನ್ನು ಬೇರೆ ಬೇರೆ ಪಟ್ಟಿಮಾಡಿ ಅವುಗಳಲ್ಲಿ *—ಅನ್, *— ಇನ್—*,—ಅ—* —ತ್—, *—ರ್—*—ಕ್— ಎಂಬ ಆಗಮಗಳನ್ನು ಕೆಲವು ವಿದ್ವಾಂಸರು ಮೂಲ ದ್ರಾವಿಡವಿರಬಹುದೆಂದು ಭಾವಿಸಿ ಪುನರ್ರಚಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಹೀಗೆ ಪುನರಚಿಸಿಕೊಂಡ ಆಗಮಗಳು ಪೂರ್ವದ್ರಾವಿಡ ಭಾಷೆಯಲ್ಲಿ ಇದ್ದುವೇ ಅಥವಾ ಇಲ್ಲವೇ ಎಂಬುದರ ಬಗ್ಗೆ ವಿದ್ವಾಂಸರು ನಾನಾ ರೀತಿಯಲ್ಲಿ ಚರ್ಚಿಸಿ ವಿವೇಚಿಸಿದ್ದಾರೆ. ಆದರೂ ಈ ದಿಕ್ಕಿನಲ್ಲಿ ಯಾವ ಒಮ್ಮತವನ್ನು ಕಾಣಲು ಬರುವುದಿಲ್ಲ. ಈ ಬೇರೆ ಬೇರೆ ಆಗಮಗಳು ಬೇರೆ ಬೇರೆ ದ್ರಾವಿಡಭಾಷೆಗಳಲ್ಲಿ ಹೇಗೆ ಪರಿವರ್ತನೆಗೊಂಡು ಬಳಕೆಗೆ ಬಂದಿವೆ ಎಂಬುದರ ಬಗ್ಗೆಯೂ ವಿದ್ವಾಂಸರು ನಾನಾ ರೀತಿಯಲ್ಲಿ ವಿವರಿಸಿ ತೋರಿಸಿದ್ದಾರೆ.

ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿ —ಅನ್— ಎಂಬ ಆಗಮವಿದೆ. ಇದು ಕೊಡಗು ಭಾಷೆಯಲ್ಲಿ —ಉನ್— ಆಗಿ ಪರಿವರ್ತನೆಗೊಂಡಿದೆ. ಕೋತ, ತೊದ, ಕೊಡಗು, ಕನ್ನಡ, ಬಡಗ, ತೆಲುಗು, ಗೋಂಡಿ, ತುಳು, ನಾಯ್ಕಿ, ಪರ್ಜಿ, ಗದಬ, ಕುಯಿ, ಕುವಿ, ಕೋಯ, ಪೆಂಗೋ ಮುಂತಾದ ಭಾಷೆಗಳಲ್ಲಿ —ನ್— ಎಂಬ ಆಗಮವು ಬಳಕೆಯಲ್ಲಿದೆ. ಇದು —ಅನ್— ಎಂಬುದರ ಆದಿಯ ಸ್ವರವು ಲೋಪಗೊಂಡು ಅದರ ವ್ಯಂಜನ ಮಾತ್ರ ಕೆಲವು ಭಾಷೆಗಳಲ್ಲಿ ಉಳಿದುಕೊಂಡಿದೆ ಎಂದು ಕೆಲವರು ಭಾವಿಸಿದರೆ ಮತ್ತೆ ಕೆಲವರು ಈ —ನ್— ಎಂಬ ಆಗಮವು ತಮಿಳು, ಮಲೆಯಾಳಂ, ಕನ್ನಡ, ಮತ್ತು ಕೋಯ ಭಾಷೆಗಳಲ್ಲಿ ಕಂಡುಬರುವ —ಇನ್— ಎಂಬುದರ ಆದಿಯ ಸ್ವರವು ಲೋಪಗೊಂಡು ವಿಕಾಸಗೊಂಡಿರಬಹುದೆಂದು ಊಹಿಸಿದ್ದಾರೆ. ಹೀಗಾಗಿ ಈ ದಿಕ್ಕಿನಲ್ಲಿ ಯಾವ ಬಗೆಯ ಒಮ್ಮತವನ್ನು ಕಾಣಲು ಬರುವುದಿಲ್ಲ.

ತಮಿಳು, ಮಲೆಯಾಳಂ, ಕನ್ನಡ, ಕೋಯ ಮುಂತಾದ ಭಾಷೆಗಳಲ್ಲಿ —ಅನ್— ಮತ್ತು —ಇನ್— ಎಂಬ ಆಗಮಗಳಿರುವುದು ಗೋಚರಿಸುತ್ತದೆ. ಇವು ಪರಸ್ಪರ ಒಂದೇ ಮೂಲದಿಂದ ಹುಟ್ಟಿ ಬೆಳೆದು ಬಂದ ಆಗಮಗಳಿರಬಹುದು. ಆದರೆ ಈ ದಿಕ್ಕಿನಲ್ಲಿ ವಿದ್ವಾಂಸರಲ್ಲಿ ಸಾಕಷ್ಟು ಮತ ಭೇದಗಳಿವೆ. ಈ ಆಗಮಗಳು ತೆಲುಗು, ಕುಯಿ, ಕುವಿ, ಕೋಯ, ಮುಂತಾದ ಭಾಷೆಗಳಲ್ಲಿ ಅವುಗಳ ವರ್ಣವ್ಯತ್ಯಯ ತತ್ವದ ಫಲದಿಂದಾಗಿ —ನಿ— —ನ— ಆಗಿ ಪರಿವರ್ತನೆಗೊಂಡಿದ್ದರೆ, ಅದು ಕೊಂಡ ಮತ್ತು ಗೋಂಡಿ ಭಾಷೆಗಳಲ್ಲಿ —ಣ— ಮತ್ತು —ಣ್— ಆಗಿ ಪರಿವರ್ತನೆಗೊಂಡಿರುವುದನ್ನು ಕಾಣಬಹುದು.

ತಮಿಳು, ಮಲೆಯಾಳಂ, ಕನ್ನಡ, ಮುಂತಾದ ಭಾಷೆಗಳಲ್ಲಿ ಕಂಡುಬರುವ —ಇನ್— ಎಂಬ ಆಗಮದ ಅಂತ್ಯದ ಅನುನಾಸಿಕ ವ್ಯಂಜನವು ಲೋಪಗೊಂಡು ಅದು ಕುರುಖ್, ಮಲ್ತೊ, ತೆಲುಗು, ಕೊಂಡ, ಕುಯಿ, ಕನ್ನಡ ಮುಂತಾದ ಭಾಷೆಗಳಲ್ಲಿ ಅದರ —ಇ— ಸ್ವರ ಮಾತ್ರ ಉಳಿದುಕೊಂಡಿದ್ದರೆ ಇದು ಬ್ರಹೂಈ ಮತ್ತು ತುಳುಭಾಷೆಗಳಲ್ಲಿ —ಎ— ಆಗಿ ಪರಿವರ್ತನೆಗೊಂಡಿದೆ. ಇದೇ ರೀತಿ ತಮಿಳು, ಮಲೆಯಾಳಂ ಭಾಷೆಗಳಲ್ಲಿ ಕಂಡುಬರುವ —ಅನ್— ಎಂಬ ಆಗಮದ ಅನುನಾಸಿಕ ವ್ಯಂಜನವು ಲೋಪಗೊಂಡು ಕೆಲವು ದ್ರಾವಿಡ ಭಾಷೆಗಳಲ್ಲಿ ಅದರ —ಅ— ಸ್ವರ ಮಾತ್ರ ಉಳಿದುಕೊಂಡಿದೆ. ಇದು ಕೆಲವು ಭಾಷೆಗಳಲ್ಲಿ ದೀರ್ಘಸ್ವರವಾಗಿಯೂ ಬಳಕೆಯಲ್ಲಿದೆ. ಹೀಗೆ ಈ ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಸ್ವರಾಗಮಗಳು —ಇನ್— ಇಲ್ಲವೆ —ಅನ್— ಎಂಬ ಆಗಮಗಳ ಅಂತ್ಯದ ವ್ಯಂಜನವು ಲೋಪಗೊಂಡು ಕಾಣಿಸಿಕೊಂಡಿರಬಹುದೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿ ಕಂಡುಬರುವ —ತ್ತ್— ಎಂಬ ಆಗಮವು ಕೆಲವು ಭಾಷೆಗಳಲ್ಲಿ —ಅತ್ತ್— ಆಗಿಯೂ ಇನ್ನೂ ಕೆಲವು ಭಾಷೆಗಳಲ್ಲಿ —ಅತ್ತು— ಆಗಿಯೂ ಪರಿವರ್ತನೆಗೊಂಡು ಬಳಕೆಯಲ್ಲಿದ್ದರೆ ಕೋತ, ತೊದ, ಕೊಡಗು, ಕನ್ನಡ, ಗೋಂಡಿ, ತುಳು, ಕೋಯ, ಕೊಲಾಮಿ, ನಾಯ್ಕಿ, ಪರ್ಜಿ, ಗದಬ, ಪೆಂಗೋ

ಮುಂತಾದ ಭಾಷೆಗಳಲ್ಲಿ —ದ್— ಆಗಿ ಪರಿವರ್ತನೆಗೊಂಡಿದ್ದರೆ, ಇದಕ್ಕೆ ಬೇರೆ ಬೇರೆ ಸ್ವರಗಳು ಸೇರಿಕೊಂಡು ಅದು ಕುವಿ, ಕೊಂಡ, ಗೋಂಡಿ ಮುಂತಾದ ಭಾಷೆಗಳಲ್ಲಿ —ತ— —ದಿ— —ದ— —ತಿ— ಆಗಿ ಪರಿವರ್ತನೆಗೊಂಡು ಬಳಕೆಯಲ್ಲಿರುವುದನ್ನು ಕಾಣಬಹುದಾಗಿದೆ.

ತಮಿಳು, ಮಲಿಯಾಳಂ, ಕನ್ನಡ, ಬಡಗ ಮುಂತಾದ ಭಾಷೆಗಳಲ್ಲಿ —ರ್‍ರ್—, —ಅರ್‍ರ್— ಮತ್ತು —ರ್— ಎಂಬ ಆಗಮಗಳಿರುವುದು ಗೋಚರಿಸುತ್ತದೆ. ಇವು ಪರಸ್ಪರ ಒಂದೇ ಮೂಲದಿಂದ ಹುಟ್ಟಿ ಬೆಳೆದುಬಂದಂತಹ ಅವಯವಗಳು. ಇವುಗಳಲ್ಲಿ ಕಂಡುಬರುವ —ಅರ್‍ರ್— ಎಂಬ ಆಗಮದ ಆದಿಸ್ವರವು ಲೋಪಗೊಂಡು ಕೆಲವು ಭಾಷೆಗಳಲ್ಲಿ —ರ್‍ರ್— ಎಂಬ ಅವಯವವು ಉಳಿದುಕೊಂಡಿದ್ದರೆ, ಇದರಲ್ಲಿ ಕಂಡುಬರುವ 'ರ್‍ರ್' ಎಂಬ ದ್ವಿತ್ವವ್ಯಂಜನದ ಒಂದು 'ರ್'ವು ಲೋಪಗೊಂಡು ಕೆಲವು ಭಾಷೆಗಳಲ್ಲಿ —ರ್— ಆಗಿ ಪರಿವರ್ತನೆಗೊಂಡಿದೆ. ಇದೇ ರೀತಿ ಕನ್ನಡ ಭಾಷೆಯಲ್ಲಿ ಕಂಡುಬರುವ —ಯ್— ಮತ್ತು —ವ್— ಎಂಬ ಆಗಮಗಳು ಕೂಡ ಬೇರೆ ಬೇರೆ ವ್ಯಂಜನ ಅಥವಾ ಸ್ವರಗಳ ಮೂಲದಿಂದ ಹುಟ್ಟಿ ಬೆಳೆದುಬಂದಿರಬಹುದೆಂದು ಊಹಿಸಿದ್ದಾರೆ.

ಪರ್ಜಿ, ಕುರುಖ್, ಪೆಂಗೋ ಮುಂತಾದ ಭಾಷೆಗಳಲ್ಲಿ ಕಂಡುಬರುವ —ಕ್— ಎಂಬ ಆಗಮವು ಕುರುಖ್, ಮಾಲ್ತೊ ಮುಂತಾದ ಭಾಷೆಗಳಲ್ಲಿ —ಗ್— ಆಗಿ ಪರಿವರ್ತನೆಗೊಂಡಿದ್ದರೆ ಬ್ರಹೂಈ ಭಾಷೆಯಲ್ಲಿ ಅದೇ —ಫ್— ಆಗಿ ಪರಿವರ್ತನೆಗೊಂಡಿದೆ. ಹೀಗೆ ಬೇರೆ ಬೇರೆ ಆಗಮಗಳು ಬೆಳೆದುಬಂದು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಬಳಕೆಯಲ್ಲಿವೆ ಎನ್ನಬಹುದು. ಇವು ಆಯಾಪದರಚನೆಗಳ ಪರಿಸರಕ್ಕೆ ತಕ್ಕಂತೆ ರೂಪುಗೊಂಡಿವೆ. ಅಲ್ಲದೆ ಅವು ಆಯಾ ಧ್ವನಿಗಳಿಗೆ ಅನುಗುಣವಾಗಿ ಪರಿವರ್ತನೆಗೊಂಡಿರುತ್ತವೆ. ಆದಕಾರಣ ಈ ಆಗಮಗಳ ಬಗ್ಗೆ ಯಾರೂ ಖಚಿತವಾಗಿ ಏನನ್ನೂ ಹೇಳಲಾರರು. ಅಲ್ಲದೇ ಅವು ಬೆಳೆದು ಬಂದ ವಿಧಾನದಲ್ಲಿಯೂ ವಿದ್ವಾಂಸರಲ್ಲಿ ಸಾಕಷ್ಟು ಮತ ಭೇದಗಳಿವೆ ಎನ್ನಬಹುದು.

ಎಂ. ಬಿ. ಮಂಜುನಾಥಾಚಾರ್

ಪ್ರಾಚೀನ ಕಾಲದಲ್ಲಿ ಶಿಕ್ಷಕರಿಗೆ ಇದ್ದ ಸ್ಥಾನ

ಗುರುರ್ದೇವೋ ಮಹಾದೇವೋ ಗುರುರ್ದೇವಃ ಸದಾಶಿವಃ |
ಗುರುರ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ||

ಮೇಲಿನ ವೇದೋಕ್ತಿಯಂತೆ ಪುರಾಣಗಳ ಕಾಲದಿಂದಲೂ ಗುರುಗಳಿಗೆ ಉನ್ನತವಾದ ಸ್ಥಾನವಿತ್ತು ಎಂಬುದನ್ನು ಈಗ ನಮಗೆ ಉಪಲಬ್ಧವಿರುವ ರಾಮಾಯಣ, ಮಹಾಭಾರತದಂತಹ ಮಹಾಗ್ರಂಥಗಳಿಂದ ತಿಳಿದು ಬಂದಿದೆ. ಪ್ರಾಚೀನ ಕಾಲದಿಂದಲೂ "ಗುರು" "ಆಚಾರ್ಯ" ಎಂಬ ಮಹತ್ತರ ಬೆಲೆ ಬಾಳುವ ಹೆಸರಿನಿಂದ ಶಿಕ್ಷಕರು ಸಂಬೋಧಿಸಲ್ಪಡುತ್ತಿದ್ದರು. ಗುರು ಎಂದರೆ ವಿದ್ಯಾರ್ಥಿಯಲ್ಲಿರುವ ಅಂಧಕಾರವನ್ನು ತೊಡೆದು ಹಾಕಿ, ಉತ್ತಮಮಾರ್ಗದಲ್ಲಿ ಕೊಂಡೊಯ್ಯುವುದು ಎಂಬುದಾಗಿ ಅರ್ಥವನ್ನು ಕಲ್ಪಿಸಬಹುದು. "ಗುರು" ಎಂಬ ಹೆಸರನ್ನು ಕೊಡುವಾಗ ಬಹಳ ಯೋಚಿಸಿ, ಅತ್ಯಂತ ಚಮತ್ಕಾರಯುತವಾಗಿ ಹೆಸರನ್ನು ಕೊಟ್ಟಿದ್ದಾರೆ ಎಂದು ನನ್ನ ಭಾವನೆ. ಅದು ಹೇಗೆಂದರೆ ನವಗ್ರಹಗಳಲ್ಲಿ ಗುರು ಗ್ರಹವು ಅತ್ಯಂತ ದೊಡ್ಡದು ಮತ್ತು ಭಾರವಾದದ್ದು. ಆ ಗ್ರಹವು ಆಕಸ್ಮಿಕವಾಗಿ ಟೊಳ್ಳಾಗಿದ್ದರೆ ಉಳಿದ ಎಂಟು ಗ್ರಹಗಳನ್ನೂ ಒಳಗೆ ತುಂಬಬಹುದು. ಅಂದರೆ ಪ್ರಾಚೀನ ಕಾಲದ ಗುರುಗಳು ಅಷ್ಟು ತೂಕವುಳ್ಳವರಾಗಿದ್ದರು ಎಂದರ್ಥ, ಅಂದರೆ ಕೇವಲ ದೈಹಿಕ ತೂಕಮಾತ್ರವಲ್ಲ. ಮಾನಸಿಕವಾಗಿ, ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ಹೀಗೆ ಎಲ್ಲಾ ರಂಗಗಳಲ್ಲಿಯೂ ಮೇಲುಗೈ ಪಡೆದಿದ್ದರು. ಹಿಂದಿನ ಕಾಲದಲ್ಲಿ ಗುರುಗಳು ತಪೋವನಗಳಲ್ಲಿ ಕಠಿಣವಾದ ಜಪ ತಪಗಳನ್ನು ಆಚರಿಸಿಕೊಂಡು, ಸದಾ ಭಗವಂತನ ನಾಮಃಸ್ಮರಣೆಯನ್ನು ಮಾಡಿಕೊಂಡು ಸೀಮಿತ ಸಂಖ್ಯೆಯ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯೆಯನ್ನು ಕಲಿಸುತ್ತಿದ್ದರು.

ಹಿಂದೆ ಗುರುಗಳೇ ಪಠ್ಯ ವಿಷಯವಾಗಿದ್ದರು. ಅಂದರೆ ಅವರು ಹೇಳಿಕೊಡುವ ವಿದ್ಯೆ, ಅವರ ಅನುಭವದ ನುಡಿಗಳು ಮುಂತಾದವುಗಳನ್ನು ಅನುಸರಿಸುವುದೇ ವಿದ್ಯಾರ್ಥಿಗಳ ಕರ್ತವ್ಯವಾಗಿತ್ತು. ಶ್ಲೋಕಗಳ ರೂಪದಲ್ಲಿ ಗುರುಗಳು ವಿದ್ಯೆಯನ್ನು ಹೇಳಿಕೊಡುತ್ತಿದ್ದರು. ಅವುಗಳನ್ನು ಬಾಯಿಪಾಠದ ಮೂಲಕ ಕಲಿಯುತ್ತಿದ್ದರು. ಇದರಿಂದ ಸ್ಮರಣ ಶಕ್ತಿ ಅಭಿವೃದ್ಧಿಯಾಗುತ್ತಿತ್ತು. ವಿದ್ಯಾರ್ಥಿಗಳು ಏಕಾಗ್ರತೆಯಿಂದ ಪಾಠಗಳನ್ನು ಕಲಿಯು

ತ್ತಿದ್ದರು. ಇದಕ್ಕೆ ಪೋಷಕವಾಗಿ ನಾವು ಏಕಲವ್ಯ, ಆರುಣಿ, ಉಪಮನ್ಯು, ಅರ್ಜುನ ಮುಂತಾದ ಪುರಾಣ ಪ್ರಸಿದ್ಧ ವ್ಯಕ್ತಿಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಅವಧಿಯ ಪೂರ್ತಿ ಆಶ್ರಮದಲ್ಲಿಯೇ ಇದ್ದು ಗುರುಗಳ ಮನಸ್ಸು ತೃಪ್ತಿಯಾದ ಬಳಿಕ ವಿದ್ಯಾಭ್ಯಾಸವು ಪ್ರಾರಂಭವಾಗುತ್ತಿತ್ತು. ತಂದೆ ತಾಯಿಗಳು ತಮ್ಮ ಮಗನನ್ನು ಸರ್ವಸ್ವವೂ ನೀವೇ ಎಂದು ಗುರುಗಳಿಗೆ ಒಪ್ಪಿಸಿ ಬಿಡುತ್ತಿದ್ದರು. ಗುರುಗಳು ಬೆಳಿಗ್ಗೆ ಏಳುವುದಕ್ಕಿಂತ ಮೊದಲೇ ವಿದ್ಯಾರ್ಥಿಯು ಎದ್ದು, ಸ್ನಾನ ಸಂಧ್ಯಾದಿಗಳನ್ನು ಮುಗಿಸಿ, ಗುರುಗಳಿಗೆ ಪೂಜಾ ಕಾರ್ಯಗಳಲ್ಲಿ ನೆರವಾಗಿ, ಗುರು ಪತ್ನಿಗೆ ಕೆಲಸದಲ್ಲಿ ನೆರವಾಗಿ, ಆಶ್ರಮದ ದನಕರುಗಳನ್ನು ಮೇಯಿಸಿಕೊಂಡು ಬಂದು, ಗುರುಗಳು ಹೇಳಿ ಕೊಟ್ಟ ಪಾಠಗಳನ್ನು ಅಭ್ಯಾಸ ಮಾಡಿ, ಗುರುಗಳು ಮಲಗಿದ ನಂತರ ತಾನು ಮಲಗಬೇಕಾಗಿತ್ತು. ಹೀಗೆ ದಿನಚರಿ ಸಾಗುತ್ತಿತ್ತು. ವಿದ್ಯಾಭ್ಯಾಸದ ಅವಧಿಯಲ್ಲಿ ವೇದ ವೇದಾಂಗಗಳನ್ನು, ಪುರಾಣ ಉಪನಿಷತ್ತುಗಳನ್ನು, ವ್ಯಾಕರಣ ಸೂತ್ರಗಳನ್ನು, ಛಂದಸ್ಸು ಅಲಂಕಾರಗಳನ್ನು, ಶಸ್ತ್ರಾಸ್ತ್ರ ವಿದ್ಯೆಯನ್ನು ಅವರವರ ಯೋಗ್ಯತೆಗೆ ಅನುಸಾರವಾಗಿ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಕೊನೆಯಲ್ಲಿ ಗುರುಗಳು ವಿದ್ಯಾರ್ಥಿಯ ಸತ್ವವನ್ನು ಪರಿಶೀಲನೆ ಮಾಡಿ, ಮೌಲ್ಯಮಾಪನ ಮಾಡಿ ಅದರಲ್ಲಿ ಉತ್ತೀರ್ಣರಾದ ಬಳಿಕ ಅವರ ಮನೆಗೆ ಹೋಗಲು ಅಪ್ಪಣೆಯನ್ನು ಕೊಡುತ್ತಿದ್ದರು. ವಿದ್ಯಾರ್ಥಿಗಳು ಗುರುಗಳಿಗೆ ಭಕ್ತಿ, ವಿಶ್ವಾಸ, ಮರ್ಯಾದೆಗಳನ್ನು ಕೊಡುತ್ತಿದ್ದರು. ಭಯ, ಭಕ್ತಿಗಳಿಂದ ನಡೆದುಕೊಳ್ಳುತ್ತಿದ್ದರು. ಗುರುಗಳು ಹೇಳಿದ ಕೆಲಸವನ್ನು ಶಿರಸಾ ವಹಿಸಿ ತಪ್ಪದೆ ಮಾಡುತ್ತಿದ್ದರು. "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂಬಂತೆ ಸರ್ವವನ್ನೂ ಸಮರ್ಪಣೆ ಮಾಡುತ್ತಿದ್ದರು. ರಾಜಕುಮಾರರೂ ತಮ್ಮ ಸುಖ ಭೋಗಾದಿಗಳನ್ನು ಬಿಟ್ಟು ಗುರುಗಳ ಬಳಿ ವಿದ್ಯೆಯನ್ನು ಕಲಿಯಲು ಬರುತ್ತಿದ್ದರು. ಕೊನೆಯಲ್ಲಿ ಶಿಷ್ಯರು ತಮ್ಮ ಯೋಗ್ಯತೆಗೆ ಅನುಸಾರವಾಗಿ "ಗುರು ದಕ್ಷಿಣೆ"ಯನ್ನು ಸಲ್ಲಿಸುತ್ತಿದ್ದರು. ಕೊನೆಯಲ್ಲಿ ಗುರುಗಳು ಹಿತವಚನಗಳನ್ನು ನೀಡಿ, ಹೋಗಲು ಅಪ್ಪಣೆಯನ್ನು ಕೊಡುತ್ತಿದ್ದರು,

ಗುರುಗಳ ಅಪ್ಪಣೆಯಾದ ಬಳಿಕ ವಿದ್ಯಾರ್ಥಿಗಳು ದೇಶ ಸಂಚಾರ ಮಾಡಿ, ತಾವು ಕಲಿತಂತಹ ವಿದ್ಯೆಗಳನ್ನು ಒಳ್ಳೆಯ ಕಾರ್ಯಗಳಿಗೆ ವಿನಿಯೋಗಿಸಿ ರಾಜರ ಮನ್ನಣೆಯನ್ನೂ ಮತ್ತು ಜನರ ಮನ್ನಣೆಯನ್ನು ಗಳಿಸಿ ಉತ್ತಮ ಜೀವನವನ್ನು ನಿರ್ವಹಿಸುತ್ತಿದ್ದರು. ಆದರೆ ಆ ವಿದ್ಯೆಯನ್ನು ದುರ್ವಿನಿಯೋಗ ಮಾಡಿ ಹಾನಿಗೊಳಗಾದವರ ಹೆಸರುಗಳೂ ಪುರಾಣಗಳಲ್ಲಿ ಕಂಡುಬರುತ್ತವೆ; ಅಂತಹವರು ಅಪರೂಪ. ಗುರುಗಳು ತಪೋಧನರಾಗಿರುತ್ತಿದ್ದರು. ಅವರು ಪಾರಮಾರ್ಥಿಕವಾಗಿ ಹೆಚ್ಚು ಚಿಂತಿಸುತ್ತಿದ್ದರು. ಲೋಕದ ಹಿತವನ್ನು ತಮ್ಮ ದೃಷ್ಟಿಯಲ್ಲಿ ಇಟ್ಟುಕೊಂಡು ಯಜ್ಞ ಯಾಗಾದಿಗಳನ್ನು ಮಾಡುತ್ತಿದ್ದರು. ಇದರಿಂದ ರಾಜ ಮಹಾರಾಜರುಗಳು ಇಂತಹ ಋಷಿಗಳಿಗೆ ದಾನ ದತ್ತಿಗಳನ್ನು ನೀಡುತ್ತಿದ್ದರು. ಕೆಲವು ಋಷಿಗಳು ಸಹ ಗುರುಗಳಾಗಿರುವ ಸಂದರ್ಭವನ್ನು ನಾವು ಪುರಾಣಗಳಲ್ಲಿ ಕಾಣುತ್ತೇವೆ. ಕೆಲವು ಋಷಿಗಳು ರಾಜನನ್ನೂ ಸಹ ನಿಯಂತ್ರಿಸುವ ಶಕ್ತಿಯನ್ನು

ಪಡೆದಿದ್ದರು. ಇದಕ್ಕೆ ಉದಾಹರಣೆಯಾಗಿ ವಿಶ್ವಾಮಿತ್ರ, ವಸಿಷ್ಠ ಮುಂತಾದವರನ್ನು ತೆಗೆದುಕೊಳ್ಳಬಹುದು. ಕೆಲವು ಋಷಿಗಳು ಹತ್ತು ಸಾವಿರ ವಿದ್ಯಾರ್ಥಿಗಳನ್ನು ಸಾಕಿ, ಸಲಹಿ ವಿದ್ಯಾಭ್ಯಾಸವನ್ನು ನೀಡುವ ಸಾಮರ್ಥ್ಯವನ್ನು ಪಡೆದಿದ್ದ ನಿದರ್ಶನಗಳನ್ನು ಧೌಮ್ಯ ಋಷಿಗಳ ಉದಾಹರಣೆಯಿಂದ ತಿಳಿಯಬಹುದು. ಅಂದರೆ ಪ್ರಾಚೀನ ಕಾಲ ದಿಂದಲೂ ಸಹ ಗುರುಗಳಿಗೆ ಉತ್ತಮವಾದ ಸ್ಥಾನವನ್ನು ನೀಡಲಾಗಿತ್ತು. ತಮ್ಮ ತಪೋಬಲದಿಂದ ಹಿಂದೆ ನಡೆದ ಮತ್ತು ಮುಂದೆ ನಡೆಯುವ ಘಟನೆಗಳನ್ನು ಮೊದಲೇ ತಿಳಿದು, ಅದಕ್ಕೆ ಪರಿಹಾರಗಳನ್ನು ಸಹ ಸೂಚಿಸುತ್ತಿದ್ದರು. ಉನ್ನತ ವಿಚಾರಗಳನ್ನೇ ಹುಡುಕುತ್ತಿದ್ದರು. ನಿರಂತರ ಅಧ್ಯಯನಶೀಲರಾಗಿದ್ದರು. ಸರಳ ಜೀವಿಗಳಾಗಿದ್ದರು. ಇಂತಹ ಆಶ್ರಮಗಳಲ್ಲಿ ಪ್ರಾಣಿಗಳು ತಮ್ಮ ನಿಜ ವೈರವನ್ನು ಮರೆತು ಶಾಂತಿಯಿಂದ ಇರುತ್ತಿದ್ದವು. ಉತ್ತಮವಾದ ಪರಿಸರವಿರುತ್ತಿತ್ತು. ಇಂತಹ ಮಹಿಮಾನ್ವಿತ ಗುರು ಗಳನ್ನು "ಆಚಾರ್ಯ ದೇವೋ ಭವ", "ಗುರುದೇವೋ ಭವ" ಎಂದು ಕರೆದಿರು ವುದರಲ್ಲಿ ಎಳ್ಳಷ್ಟೂ ಆಶ್ಚರ್ಯವಿಲ್ಲ.

ಆಧುನಿಕ ಕಾಲದಲ್ಲಿ ಶಿಕ್ಷಕರ ಪರಿಸ್ಥಿತಿ :

ಇದು ವೈಜ್ಞಾನಿಕ ಯುಗ, ನಾಗರಿಕವಾಗಿ ಮುಂದುವರೆದಿರುವ ಯುಗ. "ಶಿಕ್ಷಣವು ನಿಂತ ನೀರಲ್ಲ ; ಇದು ನಿರಂತರವೂ ಹರಿಯುತ್ತಿರುವ ನೀರಿದ್ದಂತೆ". ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ ಶಿಕ್ಷಣದ ಗುರಿಗಳು ಬದಲಾಗುತ್ತಿರುತ್ತವೆ. ಪ್ರಾಚೀನ ಕಾಲದಲ್ಲಿ ಆಧ್ಯಾತ್ಮಿಕ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದರು. ಈಗಿನ ಶಿಕ್ಷಣದ ಗುರಿಗಳಿಗೂ ಮತ್ತು ಪ್ರಾಚೀನ ಕಾಲದ ಶಿಕ್ಷಣದ ಗುರಿಗಳಿಗೂ ಅಜಗಜಾಂತರ ವಾದ ವ್ಯತ್ಯಾಸವಿದೆ. ಇಂದಿನ ಸಮಾಜದಲ್ಲಿ ಶಿಕ್ಷಕರಿಗೆ ಯೋಗ್ಯ ಸ್ಥಾನವು ದೊರಕುತ್ತಿಲ್ಲ. ಶಿಕ್ಷಕರನ್ನು ಏಕವಚನದಲ್ಲಿಯೇ ಮಾತನಾಡಿಸುವ ಮಟ್ಟಕ್ಕೂ ಜನತೆಯು ಇಳಿದಿದೆ. ಇದೊಂದು ಶಿಕ್ಷಕರಾದ ನಮ್ಮೆಲ್ಲರಿಗೂ ಅಪಮಾನದ ಸಂಗತಿ. ಹೀಗೆ ಆಗಲು ಕಾರಣ ವೇನಾದರೂ ಇದೆಯೇ ? ಎಂದು ನಮ್ಮನ್ನೇ ನಾವು ಪ್ರಶ್ನೆಯನ್ನು ಹಾಕಿಕೊಂಡಾಗ, ಕೆಲವು ವಿಷಯಗಳಲ್ಲಿ ಶಿಕ್ಷಕರು ಹಿಂದುಳಿದಿರುವುದು ಸಮಗೇ ವೇದ್ಯವಾಗುತ್ತದೆ. ಉಪ ದೇಶವನ್ನು ನಾವು ಇತರರಿಗೆ ಮಾಡಬಹುದು. ಆದರೆ ಅದರಂತೆ ನಾವು ಅನುಸರಿಸು ತ್ತಿದ್ದೇವೆಯೇ ? ಎಂಬ ವಿಷಯವನ್ನು ಪ್ರಸ್ತಾಪ ಮಾಡಿದಾಗ ಅದಕ್ಕೆ ಸಮರ್ಪಕವಾದ ಉತ್ತರವು ಬರುವುದಿಲ್ಲ. ನಮ್ಮನ್ನು ನಾವು ಅರಿತುಕೊಳ್ಳಬೇಕು, ನಾವು ಅಂತರಾವ ಲೋಕನ ಮಾಡಿಕೊಳ್ಳಬೇಕು, ಇದೇ ಮನುಷ್ಯತ್ವ ಎಂಬುದಾಗಿ ನಮ್ಮ ಹಿಂದೂ ಧರ್ಮವೇ ಸಾರುತ್ತಿದೆ. ಆದ್ದರಿಂದ ನಮ್ಮ ವೃತ್ತಿಯಲ್ಲಿ ನಾವು ಏನಾದರೂ ತಪ್ಪು ಮಾಡುತ್ತಿದ್ದೇವೆಯೇ ? ಹಾಗೇನಾದರೂ ತಪ್ಪುಗಳು ಕಂಡುಬಂದರೆ ಅವುಗಳು ಯಾವುವು ಎಂಬುದನ್ನು ಕಂಡುಹಿಡಿದುಕೊಂಡು, ಅವುಗಳನ್ನು ನಾವು ಹೇಗೆ ಸುಧಾರಿಸಿಕೊಂಡು ನಮ್ಮ ವೃತ್ತಿಯಲ್ಲಿ ಮುನ್ನಡೆದು ಪ್ರಗತಿ ಸಾಧಿಸಬೇಕು ಎಂಬುದನ್ನು ನಾವು ಅರಿತು

ಕೊಳ್ಳಬೇಕು. ವೈದ್ಯರು ಹೇಗೆ ರೋಗಿಗಳನ್ನು ಪರೀಕ್ಷಿಸಿ ಅನಂತರ ರೋಗಕ್ಕೆ ಸೂಕ್ತವಾದ ಚಿಕಿತ್ಸೆಯನ್ನು ಮಾಡುವರೋ ಹಾಗೆಯೇ ಶಿಕ್ಷಕರೂ ಸಹ ತಮ್ಮ ದೋಷಗಳನ್ನು ತಾವೇ ಕಂಡುಕೊಂಡು ಅವುಗಳನ್ನು ಸುಧಾರಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು.

ಇಂದು ಕೆಲವು ಶಿಕ್ಷಕರಲ್ಲಿ ಕಂಡುಬರುತ್ತಿರುವ ದೋಷಗಳು

ಈ ಕೆಳಕಂಡ ವಿಷಯಗಳು ಎಲ್ಲಾ ಶಿಕ್ಷಕರಿಗೂ ಅನ್ವಯವಾಗುವುದಿಲ್ಲ. ತಪ್ಪುಗಳು ತಪ್ಪು ಮಾಡಿದವರಿಗೆ ಮಾತ್ರ ತಿಳಿಯುತ್ತವೆ. "ಕುಂಬಳಕಾಯಿ ಕಳ್ಳ ಎಂದರೆ ಹೆಗಲನ್ನು ಮುಟ್ಟಿಕೊಂಡ" ಎಂಬಂತಾಗುತ್ತದೆ. ಅನೇಕ ಶಿಕ್ಷಕರು ತಮ್ಮ ಕಠಿಣ ಶ್ರಮದಿಂದ, ಪ್ರಗತಿ ಪಥದಲ್ಲಿ ನಡೆದು ಯೋಗ್ಯ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಅವರಿಗೆ ಈ ವಿಷಯಗಳು ಅನ್ವಯಿಸುವುದಿಲ್ಲ.

೧) ಕೆಲವು ಶಿಕ್ಷಕರು ತಮ್ಮ ತರಬೇತಿಯ ಅವಧಿಯಲ್ಲಿ ಕಲಿತಿರುವುದೇ ಸಾಕು, ಎಲ್ಲವನ್ನೂ ತಿಳಿದಿದ್ದೇವೆ, ಇನ್ನು ಮುಂದೆ ಓದುವುದೇ ಬೇಕಿಲ್ಲ ಎಂಬ ಸಂಕುಚಿತವಾದ ಮನೋಭಾವವುಳ್ಳವರಾಗಿರುತ್ತಾರೆ.

೨) ಜೀವನದಲ್ಲಿ ಯಾವುದೇ ಉದ್ಯೋಗವೂ ದೊರೆಯದೆ ಶಿಕ್ಷಕ ವೃತ್ತಿಯು ದೊರೆತ ವ್ಯಕ್ತಿಯು ಈ ವೃತ್ತಿಯಲ್ಲಿ ಸಮರ್ಪಕವಾಗಿ ಕೆಲಸವನ್ನು ನಿರ್ವಹಿಸುವುದಿಲ್ಲ.

೩) ಶಾಲೆಗೆ ತಡವಾಗಿ ಬರುವುದು, ಶಾಲೆಯಿಂದ ಬೇಗ ಹೋಗುವುದು ಈ ಮನೋಭಾವವುಳ್ಳ ಶಿಕ್ಷಕರಿಂದ ಶಾಲೆಯಲ್ಲಿ ಶಿಸ್ತನ್ನು ಕಾಯ್ದುಕೊಳ್ಳಲು ಸಾಧ್ಯವಾಗುವುದಿಲ್ಲ.

೪) ಪಾಠ ಪ್ರವಚನಗಳ ಕಡೆಗೆ ಗಮನ ಕೊಡದೆ, ಸಹಪಠ್ಯ ಚಟುವಟಿಕೆಗಳ ಕಡೆಗೂ ಗಮನ ಕೊಡದೆ ಇತರೆ ವೈಯುಕ್ತಿಕ ಚಟುವಟಿಕೆಗಳಲ್ಲಿ ತೊಡಗುತ್ತಾರೆ.

೫) ಮುಖ್ಯೋಪಾಧ್ಯಾಯರೊಡನೆ ಮತ್ತು ಸಹೋದ್ಯೋಗಿಗಳೊಡನೆ ಮಧುರ ಸಂಬಂಧವು ಇರದ ಶಾಲೆಗಳಲ್ಲಿ ಪಾಠ ಪ್ರವಚನಗಳ ಬದಲಾಗಿ ಕುರುಕ್ಷೇತ್ರ ಸದೃಶವಾದ ಜಗಳಗಳು ನಡೆಯುತ್ತವೆ.

೬) ಸಮಾಜದೊಡನೆ ಮತ್ತು ಪೋಷಕರೊಡನೆ ಮಧುರವಾದ ಸಂಬಂಧವನ್ನು ಇಟ್ಟುಕೊಂಡಿರುವುದಿಲ್ಲ. ಆದ್ದರಿಂದ ಶಾಲೆಗೆ ಬೇಕಾದ ಸವಲತ್ತುಗಳು ದೊರೆಯದೆ ಶಾಲೆಯೇ ಬೇರೆಯಾಗಿ ಶಿಕ್ಷಣದ ಪ್ರಗತಿಯು ಕುಂಠಿತವಾಗುತ್ತದೆ.

೭) ಕೆಲವು ಶಿಕ್ಷಕರು ಶೀಘ್ರಕೋಪಿಗಳಿರುತ್ತಾರೆ. ಇವರಿಗೆ ಕೋಪ ಬಂದಾಗ ಮಕ್ಕಳ ಮನಃಶಾಸ್ತ್ರವು ಇವರ ಮನಸ್ಸಿನಲ್ಲಿ ಇರುವುದಿಲ್ಲ. ಇಂತಹ ಶಿಕ್ಷಕರನ್ನು ಕಂಡರೆ ಮಕ್ಕಳು ಭೀತಿಯಿಂದ ವರ್ತಿಸುವರು. ತಮಗೆ ಬಂದ ಸಮಸ್ಯಾತ್ಮಕ ಪ್ರಶ್ನೆಗಳನ್ನು ಉಪಾಧ್ಯಾಯರೊಂದಿಗೆ ಮಕ್ಕಳು ಕೇಳುವುದಿಲ್ಲ. ಹೀಗೆ ಸಮಸ್ಯೆಯುಳ್ಳ ಮಕ್ಕಳು ದೇಶಕ್ಕೇ ಒಂದು ಸಮಸ್ಯೆಯಾಗುತ್ತಾರೆ.

೮) ಉನ್ನತ ಪ್ರತಿಭೆಯುಳ್ಳ ವಿದ್ಯಾರ್ಥಿಗಳು ಶಿಕ್ಷಕರಿಗೇ ಸಮಸ್ಯೆಯಾಗುತ್ತಾರೆ. ಏಕೆಂದರೆ ಕೆಲವು ಉಪಾಧ್ಯಾಯರಿಗೆ ವಿಷಯ ಜ್ಞಾನವು ಹೆಚ್ಚಾಗಿರುವುದಿಲ್ಲ. ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ಮಾಡುವ ತಾಳ್ಮೆಯು ಸಹ ಶಿಕ್ಷಕರಿಗೆ ಇರುವುದಿಲ್ಲ. ಬೆಳೆಯುವ ಸಸಿಯನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುತ್ತಾರೆ.

೯) ಕೆಲವು ಶಿಕ್ಷಕರು ವಿವಿಧ ರೀತಿಯ ದುಶ್ಚಟಗಳನ್ನು ಅಭ್ಯಾಸ ಮಾಡಿರುತ್ತಾರೆ. ಶಿಕ್ಷಕರ ವರ್ತನೆಯನ್ನನುಸರಿಸಿ ಮಕ್ಕಳು ಅನುಕರಣೆಯಿಂದ ಕಲಿಯುವುದರಿಂದ ಇಂತಹ ವ್ಯಕ್ತಿತ್ವವುಳ್ಳ ಶಿಕ್ಷಕರಿಂದ ಮಕ್ಕಳಲ್ಲಿ ಉದಾತ್ತವಾದ ಗುಣಗಳನ್ನು ಬೆಳೆಸಲು ಸಾಧ್ಯವಾಗುವುದಿಲ್ಲ.

೧೦) ಮಕ್ಕಳನ್ನು ಪಾಠದ ಕಡೆ ಸೆಳೆದುಕೊಳ್ಳುವ ಶಕ್ತಿಯು ಇರುವುದಿಲ್ಲ. ಉತ್ತಮವಾದ ಬೋಧನಾ ಕೌಶಲ್ಯಗಳನ್ನು ಹೊಂದಿರುವುದಿಲ್ಲ.

೧೧) ಪಾಠೋಪಕರಣಗಳನ್ನು ಸೂಕ್ತವಾಗಿ ಬಳಸಿ ಪಾಠವನ್ನು ಮಾಡುವ ಅಭ್ಯಾಸವಿರುವುದಿಲ್ಲ. ಚಿತ್ರಕಲೆಯ ಗಂಧವೇ ಗೊತ್ತಿರುವುದಿಲ್ಲ.

೧೨) ಕೆಲವು ಶಿಕ್ಷಕರು ಶಾಲೆಯಲ್ಲಿ ಚಿಕ್ಕ ಮಕ್ಕಳ ಮನಸ್ಸಿನ ಮೇಲೆ ಜಾತೀಯತೆಯ ಬೀಜವನ್ನು ಬಿತ್ತುವರು. ಇದು ಮುಂದೆ ಅನರ್ಥಕಾರಿಯಾಗುವ ಸಂಭವವುಂಟು.

೧೩) ಕೆಲವು ಶಿಕ್ಷಕರು ಶಾಲೆಯ ವಸ್ತುಗಳನ್ನು ದುರ್ವಿನಿಯೋಗ ಮಾಡುತ್ತಾರೆ. ಇದರಿಂದ ಇರುವ ವಸ್ತುಗಳೇ ಇಲ್ಲವಾಗುತ್ತವೆ.

೧೪) ಕೆಲವು ಶಾಲೆಗಳಲ್ಲಿ ಪ್ರಾರಂಭಕ್ಕೆ ಪ್ರಾರ್ಥನೆಯನ್ನೇ ಮಾಡಿಸುವುದಿಲ್ಲ. ಇಂತಹ ಸೋಮಾರಿಗಳೂ ಶಿಕ್ಷಕ ವರ್ಗದಲ್ಲಿ ಇದ್ದಾರೆ. ಇದು ಒಂದು ಮಹಾದೋಷ.

ಶಿಕ್ಷಕ ವೃತ್ತಿಯಲ್ಲಿ ಪ್ರಗತಿ ಸಾಧಿಸುವ ಮಾರ್ಗ.

ಶಿಕ್ಷಕ ವೃತ್ತಿಯು ಪವಿತ್ರವಾದ ವೃತ್ತಿ ಹಾಗೂ ಅಷ್ಟೇ ಕಠಿಣವಾದ ವೃತ್ತಿ ಎಂದು ಅನುಭವಿಕರಾದ ಉಪಾಧ್ಯಾಯರ ಅಭಿಪ್ರಾಯವಾಗಿದೆ. ವಿದ್ಯೆಯು ಸಾಧಕನ ಸೊತ್ತೇ

ಹೊರತು ಸೋಮಾರಿಯ ಸೊತ್ತಲ್ಲ. ಶಿಕ್ಷಕರ ವೃತ್ತಿಯಲ್ಲಿ ಪ್ರಗತಿಯನ್ನು ಸಾಧಿಸಬೇಕಾದರೆ ನಿರಂತರ ಸಾಧನೆಯೇ ಮೂಲ ಮಂತ್ರ. "ಸಾಧನೆಗಿಂತ ಅಸಾಧ್ಯವಾದುದು ಯಾವುದೂ ಇಲ್ಲ. ನಿರಂತರ ಸಾಧನೆಯಿಂದ ಏನನ್ನು ಬೇಕಾದರೂ ಸಾಧಿಸಬಹುದು." ಶಿಕ್ಷಕರು ಶಾರದಾದೇವಿಯ ಉಪಾಸಕರಾಗಬೇಕು. ಅಂದರೆ ಅಧ್ಯಾಪಕರು ನಿರಂತರವೂ ಅಧ್ಯಯನ ಶೀಲರಾಗಬೇಕು. "ಕಾಯಕವೇ ಕೈಲಾಸ ; ಕೈ ಕೆಸರಾದರೆ ಬಾಯಿ ಮೊಸರು" ಎಂಬು ದನ್ನು ಮನದಲ್ಲಿಟ್ಟುಕೊಂಡಿರಬೇಕು. "ಶಿಕ್ಷಣವು ನಿರಂತರವೂ ಬದಲಾಗುತ್ತಿರುವ ಕ್ರಿಯೆ". ತರಬೇತಿಯ ಅವಧಿಯಲ್ಲಿ ಪಡೆದ ಜ್ಞಾನವೇ ಸಾಕು ಎಂಬ ಸಂಕುಚಿತವಾದ ಮನೋ ಭಾವವು ಶಿಕ್ಷಕರಿಗೆ ಬರಬಾರದು. ಈಗಿನ ವೈಜ್ಞಾನಿಕ ಪ್ರಪಂಚದಲ್ಲಿ ಕ್ಷಣ ಕ್ಷಣಕ್ಕೂ ಬದಲಾವಣೆಗಳಾಗುತ್ತಿರುತ್ತವೆ. ಈ ಬದಲಾವಣೆಗಳನ್ನು ತಿಳಿಯಬೇಕಾದರೆ ದಿನ ಪತ್ರಿಕೆ ಗಳು, ಮಾಸ ಪತ್ರಿಕೆಗಳು, ನಿಯತಕಾಲಿಕೆಗಳು, ಹೊಸ ಪ್ರಕಟಣೆಗಳು, ಇತ್ಯಾದಿಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. "ಜೀವನವೇ ಶಿಕ್ಷಣ ; ಶಿಕ್ಷಣವೇ ಜೀವನ" (Life is Education ; Education is Life) ಎಂಬ ತತ್ವವನ್ನು ಅಳವಡಿಸಿ ಕೊಳ್ಳಬೇಕು. ಓದಿದುದನ್ನು ಇತರರಿಗೆ ತಿಳಿಸಿ ಜ್ಞಾನವಂತರನ್ನಾಗಿ ಮಾಡುವ ಹಂಬಲವು ಶಿಕ್ಷಕರಿಗೆ ಬರಬೇಕು. ಹಿಂದಿನ ಕಾಲದ ಗುರುಗಳಿಗೂ ಮತ್ತು ಇಂದಿನ ಕಾಲದ ಉಪಾಧ್ಯಾಯರಿಗೂ ಅಜಗಜಾಂತರ ವ್ಯತ್ಯಾಸವಿದೆ. ಹೇಗೆಂದರೆ ಆಗಿನ ಗುರುಗಳು ತಪೋಧನರಾಗಿರುತ್ತಿದ್ದರು. ಆಜನ್ಮಬ್ರಹ್ಮಚಾರಿಗಳಾಗಿ ವಿದ್ಯೆಯನ್ನು ಗಳಿಸುತ್ತಿದ್ದರು. ಅಷ್ಟು ಜ್ಞಾಪಕಶಕ್ತಿ, ತಾಳ್ಮೆ, ಸಹನೆ ಇಂದಿನ ಶಿಕ್ಷಕರಿಗೆ ಇರಲಾರದು. ಯಾವುದೇ ವಿಷಯವನ್ನು ಮಕ್ಕಳಿಗೆ ತಿಳಿಸಬೇಕಾದರೆ ಆ ವಿಷಯದ ಬಗ್ಗೆ ಸಾಕಷ್ಟು ಪ್ರಭುತ್ವವು ಆ ಶಿಕ್ಷಕರಲ್ಲಿರಬೇಕು. "ಓದಿದಾ ಓದು ತಾ ಮೇದ ಕಬ್ಬಿನ ಸಿಪ್ಪೆಯಂತೆ" ಆಗಬಾರದು.

"ಖಡ್ಗಕ್ಕಿಂತ ಲೇಖನಿ ಹೆಚ್ಚು ಶಕ್ತಿಶಾಲಿ."

"ವೈದ್ಯನಿಗಿಂತಲೂ ಉಪಾಧ್ಯಾಯನೇ ಬಹಳ ಹಾನಿಕಾರಿಯಾಗಬಹುದು."

ಕತ್ತಿಗಿಂತಲೂ ಪೆನ್ನು ಅಪಾಯಕಾರಿ; ಹಾಗೆಯೇ ವೈದ್ಯನಿಗಿಂತಲೂ ಉಪಾಧ್ಯಾಯ ನು ಅಪಾಯಕಾರಿಯಾಗಬಹುದು ಹೇಗೆಂದರೆ ಒಬ್ಬ ವೈದ್ಯನು ತನ್ನ ಕೆಲಸದಲ್ಲಿ ನಿರಾಸಕ್ತಿ ಯನ್ನು ತೋರಿಸಿದರೆ ಆತ ಒಬ್ಬ ರೋಗಿಯನ್ನು ಸಾಯಿಸಬಹುದು. ಆದರೆ ಒಬ್ಬ ಉಪಾಧ್ಯಾಯ ತನ್ನ ವೃತ್ತಿಯಲ್ಲಿ ನಿರಾಸಕ್ತಿಯನ್ನು ತೋರಿಸಿದರೆ ಇಡೀ ಒಂದು ಪೀಳಿಗೆ ಯನ್ನೇ ನಾಶಮಾಡಿದಂತಾಗುತ್ತದೆ. ಈಗಲೂ ಕೆಲವರು ಶಿಕ್ಷಕರು ಇಡೀ ಹಳ್ಳಿಗೇ ಮಾರ್ಗದರ್ಶನವನ್ನು ಮಾಡುತ್ತಿದ್ದಾರೆ. ಶಿಕ್ಷಕರಿಗೂ ಸಮಸ್ಯೆಗಳಿರುತ್ತವೆ ; ಅವುಗಳನ್ನು ಪರಿಹರಿಸಲು ಪೋಷಕರೂ, ಸಮಾಜವೂ ಮತ್ತು ಸರ್ಕಾರವೂ ಪ್ರಯತ್ನಿಸಬೇಕು. ಶಿಕ್ಷಕರು ಸಹ ತಮ್ಮ ಸಮಸ್ಯೆಯನ್ನೇ ಮುಂದಿಟ್ಟುಕೊಂಡು ಮಕ್ಕಳ ಸರ್ವತೋಮುಖ ಅಭಿವೃದ್ಧಿಯನ್ನು ಕುಂಠಿತಗೊಳಿಸಬಾರದು. ಇಂದಿನ ಸಮಾಜದಲ್ಲಿ ಶಿಕ್ಷಕರ ಜವಾಬ್ದಾರಿಯು ಬಹಳ ಗುರುತರವಾಗಿದೆ. ಪಟ್ಟಣಗಳಲ್ಲಿ ಒಬ್ಬ ದುಡಿಯುವುದು ಸಾಕಾಗುವುದಿಲ್ಲವೆಂದು ಗಂಡಹೆಂಡತಿ ಇಬ್ಬರೂ ದುಡಿಯಲು ಹೋಗುತ್ತಾರೆ. ಇವರಿಬ್ಬರಿಗೂ ಜನಿಸಿದ ಮಗುವನ್ನು

ಸಾಕಲು ದಾದಿಯರನ್ನು ನೇಮಿಸುವರು ಅಥವಾ ಶಿಶುವಿಹಾರಕ್ಕೆ ಕಳುಹಿಸುತ್ತಾರೆ. ಅಂದರೆ ದಿನದ ಹೆಚ್ಚು ಕಾಲವನ್ನು ಮಗು ಶಾಲೆಯಲ್ಲಿ ಕಳೆಯುತ್ತದೆ. ಇದರಿಂದ ಉಪಾಧ್ಯಾಯರಿಗೂ ಮತ್ತು ಮಕ್ಕಳಿಗೂ ಮಧುರವಾದ ಬಾಂಧವ್ಯವು ಏರ್ಪಡಬೇಕು. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರು ಮಕ್ಕಳಲ್ಲಿ ನಮ್ಮ ಧಾರ್ಮಿಕ ಸಂಪ್ರದಾಯಗಳು, ಸಂಸ್ಕೃತಿಯ ಹಿರಿಮೆ, ಭಾಷಾಪ್ರಭುತ್ವ, ದೇಶಪ್ರೇಮ, ವಿಶ್ವಮಾನವತ್ವ ಮುಂತಾದುವುಗಳನ್ನು ಬೆಳೆಸುವುದು ಅತ್ಯಂತ ಅಗತ್ಯವೂ, ಅನಿವಾರ್ಯವೂ ಆಗಿದೆ.

ಮೂರನೇ ಮಹಾಯುದ್ಧವೇನಾದರೂ ಸಂಭವಿಸಿದರೆ ಇಡೀ ವಿಶ್ವವೇ ನಾಶ. ಇದನ್ನು ತಡೆಗಟ್ಟಲು, ನಾವೆಲ್ಲರೂ ಒಂದೇ ಪೃಥ್ವಿಯ ಮಕ್ಕಳು, ನಾವೆಲ್ಲರೂ ಒಂದೇ ಎಂಬ ಶಾಂತಿಯ ಮನೋಭಾವವುಳ್ಳ ಪ್ರಜೆಗಳನ್ನು ಸೃಷ್ಟಿಸಬೇಕು. ಅಮೇರಿಕಾಕ್ಕೆ ಸ್ವಾಮಿ ವಿವೇಕಾನಂದರು ಹೋಗಿದ್ದಾಗ, ಇವರನ್ನು ಅಪಮಾನ ಮಾಡುವುದಕ್ಕೋಸ್ಕರ ನಮ್ಮ ದೇಶದ ಧರ್ಮ ಗ್ರಂಥವಾದ ಭಗವದ್ಗೀತೆಯನ್ನು ಅತ್ಯಂತ ಕೆಳಗೆ ಇಟ್ಟು, ಉಳಿದ ಗ್ರಂಥಗಳನ್ನು ಮೇಲೆ ಇಟ್ಟು, ತೋರಿಸಿದರಂತೆ. ಆಗ ಸ್ವಾಮಿ ವಿವೇಕಾನಂದರು ತಕ್ಷಣ ಬಹಳ ಚಮತ್ಕಾರಯುತವಾದ ಉತ್ತರ ನೀಡಿದರಂತೆ. "ಹೌದು, ನೀವು ಇಟ್ಟಿರುವುದೇ ಸರಿ. ಹೇಗೆಂದರೆ ನಮ್ಮ ಹಿಂದೂ ಧರ್ಮವು ಬಹಳ ಪುರಾತನವಾದ ಧರ್ಮ. ನಮ್ಮ ಧರ್ಮದ ಆಧಾರದ ಮೇಲೆ ನಿಮ್ಮೆಲ್ಲರ ಧರ್ಮಗಳು ನಿಂತಿವೆ." ಮುಂದಕ್ಕೆ ಅವರು ಮಾತನಾಡಲಿಲ್ಲ. ಇಂತಹ ಅಮೋಘವಾದ ನಮ್ಮ ಹಿಂದೂ ಧರ್ಮದ ಸಂಸ್ಕೃತಿಯನ್ನು ಚಿಕ್ಕ ಮಕ್ಕಳಲ್ಲಿ ಮೂಡಿಸಬೇಕು.

ಭಾರತದ ರಾಷ್ಟ್ರಪತಿಯ ಹುದ್ದೆಯನ್ನು ಅಲಂಕರಿಸಿದ್ದ ಡಾ|| ರಾಧಾಕೃಷ್ಣನ್ ಅವರನ್ನು ವಿದೇಶಕ್ಕೆ ಹೋಗುವಾಗ ಇಂಗ್ಲಿಷ್ ಕಲಿಯಲು ಹೋಗುತ್ತೀರಾ ? ಎಂದು ಯಾರೋ ಪ್ರಶ್ನೆ ಮಾಡಿದರು. ಆಗ ರಾಧಾಕೃಷ್ಣನ್ ಹೇಳಿದರು : "ನಾನು ಇಂಗ್ಲಿಷ್ ಕಲಿಯಲು ಹೋಗುವುದಿಲ್ಲ ; ಇಂಗ್ಲಿಷ್ ಕಲಿಸಲು ಹೋಗುತ್ತೇನೆ." ಅಂದರೆ ಅವರಲ್ಲಿ ಭಾಷಾ ಸಾಮರ್ಥ್ಯವು ಎಷ್ಟಿತ್ತೆಂಬುದು ಇದರಿಂದ ನಮಗೆ ವ್ಯಕ್ತವಾಗುತ್ತದೆ.

ಶಿಕ್ಷಕ ವೃತ್ತಿಯಲ್ಲಿ ಪ್ರಗತಿ ಸಾಧಿಸಲು ಕೆಲವು ಸಲಹೆಗಳು

೧) ಶಿಕ್ಷಣದ ಗುರಿಗಳನ್ನು ಚೆನ್ನಾಗಿ ತಿಳಿದಿರಬೇಕು.

೨) ಮಕ್ಕಳ ಮನಃಶಾಸ್ತ್ರದ ಅರಿವು ಚೆನ್ನಾಗಿರಬೇಕು.

೩) ವಿಷಯದ ಮೇಲೆ ಪ್ರಭುತ್ವವಿರಬೇಕು. ಅಂದರೆ ಯಾವುದೇ ವಿಷಯವನ್ನು ಕುರಿತು ಸರಳವಾಗಿ, ನಿರರ್ಗಳವಾಗಿ ತಿಳಿಸುವ ಕುಶಲತೆಯೂ ಇರಬೇಕು.

೪) ಉತ್ತಮವಾಗಿ ಬೋಧಿಸುವ ಅಂದರೆ ಬೋಧನಾ ತಂತ್ರಗಳು, ಬೋಧನಾ ಸೂತ್ರಗಳು, ಬೋಧನಾ ಸಲಕರಣೆಗಳನ್ನು ಸಂದರ್ಭೋಚಿತವಾಗಿ ಬಳಸಿ ಮಕ್ಕಳನ್ನು ಆಕರ್ಷಿಸುವ ಕೌಶಲ್ಯವು ಶಿಕ್ಷಕರಲ್ಲಿರಬೇಕು.

೫) ಮುಖ್ಯೋಪಾಧ್ಯಾಯರೊಡನೆ ಮತ್ತು ಸಹೋದ್ಯೋಗಿಗಳೊಡನೆ ಮಧುರ ಬಾಂಧವ್ಯವು ಇರಬೇಕು.

೬] ಚಿತ್ರಕಲೆ, ದೈಹಿಕ ಶಿಕ್ಷಣ, ನೀತಿ ಶಿಕ್ಷಣ, ಸಂಗೀತ ಮತ್ತು ಇತರ ಸಹಪಠ್ಯ ಚಟುವಟಿಕೆಗಳನ್ನು ಏರ್ಪಡಿಸಿ, ಅವುಗಳಲ್ಲಿ ಭಾಗವಹಿಸುವಂತೆ ಮಕ್ಕಳನ್ನು ಪ್ರೇರೇಪಿಸಬೇಕು.

೭] ಸಮಾಜದೊಡನೆ, ಪೋಷಕರೊಡನೆ, ಸರ್ಕಾರಿ ಅಧಿಕಾರಿಗಳೊಡನೆ ಮಧುರವಾದ ಬಾಂಧವ್ಯವನ್ನು ಇಟ್ಟುಕೊಂಡು ಶಾಲೆಗೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಳ್ಳಬೇಕು.

೮] ಶಿಕ್ಷಕರು ದಕ್ಷರೂ, ಹಾಸ್ಯಪ್ರಜ್ಞೆಯುಳ್ಳವರೂ, ಹಸನ್ಮುಖಿಗಳೂ, ವಾಕ್ ಚತುರರೂ ಆಗಿರಬೇಕು.

೯] ಮಕ್ಕಳು ಶಿಕ್ಷಕರನ್ನೇ ಅನುಕರಿಸುವುದರಿಂದ ಶಿಕ್ಷಕರು ತಾವು ಸಚ್ಚಾರಿತ್ರ್ಯವುಳ್ಳವರಾಗಿರಬೇಕು.

೧೦] ಮಕ್ಕಳೊಡನೆ ಸೂಕ್ತವಾಗಿ ವರ್ತಿಸಿ, ಅವರ ಅನುಮಾನಗಳನ್ನು ಪರಿಹರಿಸಿ, ಸೂಕ್ತ ಮಾರ್ಗದರ್ಶನವನ್ನು ನೀಡಬೇಕು.

೧೧] ದಿನಪತ್ರಿಕೆಗಳು, ವಾರಪತ್ರಿಕೆಗಳು, ನಿಯತಕಾಲಿಕೆಗಳು, ಕರಪತ್ರಗಳು ಮತ್ತು ಉದ್ಗ್ರಂಥಗಳನ್ನು ಓದುವ ಅಭ್ಯಾಸ ಮಾಡಿಕೊಳ್ಳಬೇಕು.

೧೨] ಶಾಲೆಗಳನ್ನು ಆಕರ್ಷಣೀಯವಾಗಿಡಬೇಕು.

೧೩] ಮಕ್ಕಳಲ್ಲಿ ಅಂಚೆ ಚೀಟಿ ಸಂಗ್ರಹ, ಅಪೂರ್ವ ಚಿತ್ರಗಳ ಸಂಗ್ರಹ, ನಾಣ್ಯಗಳ ಸಂಗ್ರಹ, ಪ್ರಾಚ್ಯ ವಸ್ತುಗಳ ಸಂಗ್ರಹ ಮುಂತಾದ ಚಟುವಟಿಕೆಗಳನ್ನು ಮಾಡಿಸಬೇಕು.

೧೪) ಇಲಾಖೆಯವರು ಕಾಲಕಾಲಕ್ಕೆ ಏರ್ಪಡಿಸುವ ಸೇವಾಂತರ್ಗತ ಶಿಕ್ಷಣದ ತರಗತಿಗಳಲ್ಲಿ, ಕಾರ್ಯಾಗಾರ, ಗುಂಪು ಚರ್ಚೆಗಳಲ್ಲಿ ತಪ್ಪದೆ ಭಾಗವಹಿಸಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು.

೧೫) ಹೊಸ ವಿಷಯಗಳನ್ನು ಕಲಿಯುವಾಗ ಶಿಕ್ಷಕರು ವಿದ್ಯಾರ್ಥಿಯಂತೆ ವರ್ತಿಸಬೇಕು.

೧೬) ಪ್ರಕೃತಿಯಲ್ಲಿ ಸಿಕ್ಕುವ ಮತ್ತು ಕಡಿಮೆ ಬೆಲೆ ಬಾಳುವ ವಸ್ತುಗಳಿಂದ ಪಾಠೋಪಕರಣಗಳನ್ನು ಸ್ವತಃ ಸಿದ್ಧಮಾಡಿಕೊಂಡು ಪಾಠ ಬೋಧಿಸುವ ಕೌಶಲ್ಯವು ಶಿಕ್ಷಕರಿಗೆ ಇರಬೇಕು.

ಕೆಳದಿ ಗುಂಡಾಜೋಯಿಸ್

ಕೆಳದಿ ನೃಪವಿಜಯದಲ್ಲಿ ಚಿತ್ರದುರ್ಗದ ಪಾಳೆಯಗಾರರು*

ಕ್ರಿ. ಶ. 1565ರಲ್ಲಿ ವಿಜಯನಗರದ ಪತನಾನಂತರ ಕೆಳದಿ, ಮೈಸೂರು ಹಾಗೂ ಚಿತ್ರದುರ್ಗದ ಪಾಳೆಯಪಟ್ಟುಗಳು ಸ್ವತಂತ್ರವಾಗಿ ಅಸ್ತಿತ್ವಗೊಂಡು ಆಳಲಾರಂಭಿಸಿದವು. ಕೆಳದಿ ನಾಯಕರ ಹಾಗೂ ಚಿತ್ರದುರ್ಗ ಪಾಳೆಯಗಾರರ ನೆರೆಹೊರಿಕೆಯ ಬಾಂಧವ್ಯವನ್ನು ಕುರಿತು ಕೆಳದಿ ನೃಪ ವಿಜಯದಲ್ಲಿನ ಐತಿಹಾಸಿಕ ಸಂಗತಿಗಳು ಸಾಕಷ್ಟು ಬೆಳಕನ್ನು ನೀಡುತ್ತವೆ. ಚಿತ್ರದುರ್ಗದ ಪಾಳೆಯಗಾರರ ಸಂಗತಿಗಳನ್ನು 1924ರಲ್ಲಿ 'ಚಿತ್ರದುರ್ಗದ ಪಾಳೆಯಗಾರರು' ಕೃತಿಯ ಮುಖಾಂತರ ದಿ|| ಎಂ. ಎಸ್. ಪುಟ್ಟಣ್ಣನವರು ಅಧ್ಯಯನದ ಮೂಲಕ ಬಿಂಬಿಸಿದವರಲ್ಲಿ ಮೊಟ್ಟ ಮೊದಲಿಗರೆಂದು ಪರಿಗಣಿಸಬಹುದಾಗಿದೆ.[1]

ಐತಿಹಾಸಿಕ ಮೂಲ ಸಾಮುಗ್ರಿಗಳು

ಚಿತ್ರದುರ್ಗ ಹಾಗೂ ಕೆಳದಿಯ ಇತಿಹಾಸಕ್ಕೆ ಸಂಬಂಧಿಸಿದಂತೆ ಶಾಸನಗಳು (ಎಪಿಗ್ರಾಫಿಯಾ ಕರ್ನಾಟಿಕಾ), ಮೈಸೂರು ಪ್ರಾಚ್ಯ ಸಂಶೋಧನಾ ಇಲಾಖೆಯ ವರದಿಗಳು, ಕೆಳದಿ ನೃಪವಿಜಯ, ಚಿತ್ರದುರ್ಗದ ಪ್ರಾಚ್ಯ ಸಂಶೋಧನಾ ವಸ್ತುಸಂಗ್ರಹಾಲಯದ ಹಲವಾರು ಮಾಹಿತಿಗಳು, ಚಾರಿತ್ರಿಕ ದಾಖಲೆಗಳು, ಬಖೈರುಗಳು, ಪೂನಾದ ಪೇಷ್ವೆ ದಫ್ತರಗಳು, ಬರ್ಹಾನ್ಸ್ ಹಾಗೂ ಪೋರ್ಚುಗೀಸ್ ದಾಖಲೆಗಳು, ಚಿತ್ರದುರ್ಗ ಜಿಲ್ಲೆ ಹಾಗೂ ಹಯವದನರಾವ್‌ರವರ ಗೆಜೆಟೀರ್, ಹೈದರ್‌ನಾಮಾ, ಹಿಸ್ಟರಿ ಆಫ್ ಮೈಸೂರ್ ಮುಂತಾದುವು ಸಧ್ಯಕ್ಕೆ ಇತಿಹಾಸದ ಮೂಲ ಸಾಮುಗ್ರಿಗಳ ಸಾಲಿಗೆ ಸೇರಿವೆ.

---

* ಚಿತ್ರದುರ್ಗದ ಕಾಲೇಜಿನ ಇತಿಹಾಸ ಅಧ್ಯಾಪಕರಾಗಿದ್ದ ಡಾ। ಶ್ರೀನಿವಾಸ್‌ರವರು 1978ನೇ ಆಗಸ್ಟ 12, 13ರಂದು ಚಿತ್ರದುರ್ಗ ಇತಿಹಾಸವನ್ನು ಕುರಿತು ಒಂದು ವಿಚಾರ ಗೋಷ್ಠಿಯನ್ನು ಏರ್ಪಡಿಸಿ, ಈ ಪ್ರಬಂಧವನ್ನು ಸಾದರ ಪಡಿಸಲು ನನ್ನನ್ನು ಆಹ್ವಾನಿಸಿದ್ದರಿಂದ ಇದನ್ನು ಸಿದ್ಧಪಡಿಸಲಾಯಿತು.

ಈ ಮಾಲೆಯಲ್ಲಿ ಕೆಳದಿ ನೃಪ ವಿಜಯವು ಚಿತ್ರದುರ್ಗ ಪಾಳೆಯಗಾರರ ಸಂಗತಿಯನ್ನು ಪ್ರಸ್ತಾಪಿಸುವಲ್ಲಿ ಐತಿಹಾಸಿಕ ಮಾಹಿತಿಯನ್ನು ಒದಗಿಸಿ ಉಪಕರಿಸಿದೆ. ಕೆಳದಿ ಕವಿ ಲಿಂಗಣ್ಣನು ಸ್ವಲ್ಪ ಹೆಚ್ಚು-ಕಡಮೆ ಇವುಗಳನ್ನು ಸಪ್ರಮಾಣವಾಗಿ ಸಂಗ್ರಹಿಸಿ ಉಲ್ಲೇಖಿಸಿದ ರೀತಿ-ನೀತಿಗಳು ಗಮನಾರ್ಹವೆನಿಸಿವೆ.

ಈ ದಿಸೆಯಲ್ಲಿಯೇ ಡಾ. ಚಿಟ್ನೀಸ್‌ರವರ Keladi Polity, ಡಾ. ಸ್ವಾಮಿನಾಥನ್‌ರವರ Nayakas of Ikkeri, ದಿ|| ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಚಂದ್ರನಳ್ಳಿ ಹಾಗೂ ಹಲವು ಕಥನಗಳು.2 ಈ ಇತಿಹಾಸವನ್ನು ಕುರಿತು ಸಹಕಾರ ನೀಡುತ್ತವೆ.

ಕೆಳದಿ ನೃಪವಿಜಯದಲ್ಲಿನ ಉಲ್ಲೇಖಗಳು

ಕೆಳದಿ ನೃಪವಿಜಯದಲ್ಲಿ ಈ ಪಾಳೆಯಗಾರರ ಸಂಗತಿಗಳು ಕ್ರಿ.ಶ. 1514-46ರ ವರೆಗೆ ಆಳಿದ ಸದಾಶಿವನಾಯಕನಿಂದ ಆರಂಭಿಸಿ ಕ್ರಿ.ಶ. 1763ರ ಅಂತ್ಯದವರೆಗೂ ಉಲ್ಲೇಖನಗೊಂಡಿವೆ. ಇದಕ್ಕೆ ಪೂರಕವಾಗಿ ಜರಿಮಲೆ, ಸಂತೆಬೆನ್ನೂರು, ತರೀಕೆರೆ, ರಾಯದುರ್ಗ, ಹರಪನಹಳ್ಳಿ, ಸೀರ್ಯ (ಸಿರಾ), ಸವಣೂರು, ಬೇಲೂರು, ಮೈಸೂರು ಮುಂತಾದ ಅರಸರ ಸಂಗತಿಗಳೂ ಹಾಸು ಹೊಕ್ಕಾಗಿ ಕಾಣಿಸಿಕೊಳ್ಳುತ್ತವೆ. ಅಲ್ಪ ಸ್ವಲ್ಪ ಭಿನ್ನತೆಗಳಿದ್ದರೂ ಇವುಗಳನ್ನು ಒಂದು ಗೊತ್ತಾದ ಕ್ರಮದಲ್ಲಿ ಮಾರ್ಪಡಿಸಿಕೊಂಡು ಹೋಗಿರುವ ಕವಿ ಲಿಂಗಣ್ಣನ ಚಾಕಚಕ್ಯತೆಯು ನಿಜಕ್ಕೂ ಅಚ್ಚರಿ ಎನಿಸದೇ ಇರದು. ಕ್ರಿ.ಶ. 18ನೆಯ ಶತಮಾನದಲ್ಲಿಯೇ ರಚಿಸಿದ ಹಾಗೂ ಐತಿಹಾಸಿಕ ಪ್ರಜ್ಞೆಯನ್ನೊಳಗೊಂಡ ಕವಿ ಲಿಂಗಣ್ಣನ ಈ ಕೃತಿಯು ಅಧ್ಯಯನಶೀಲರಿಗೆ ಮನಮೆಚ್ಚುವಂತಹುದು. ಈ ಕಾರಣದಿಂದಲೇ ಮೂಲಸಾಮಗ್ರಿಯ ಸಾಲಿಗೆ ಸೇರಿದ ಈ ಕೃತಿಯು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿದೆ.

ಕ್ರಿ.ಶ. 1763-1804ರ ಮಧ್ಯಭಾಗದಲ್ಲಿ ಬೆಳಕು ಕಂಡ ಕೆಳದಿ ನೃಪ ವಿಜಯವು ಕೆಳದಿ ಸರಕಾರದ ವರದಿಯೋಪಾದಿಯಲ್ಲಿರುವ ಐತಿಹಾಸಿಕ ಪ್ರಾಮಾಣಿಕ ಗ್ರಂಥವೆಂಬುದನ್ನು ವಿದ್ವಾಂಸರೆಲ್ಲರೂ ಸಮರ್ಥಿಸಿದ್ದಾರೆ. ಇಲ್ಲಿ ಉಲ್ಲೇಖನಗೊಂಡ ಕೆಳದಿ ಹಾಗೂ ಚಿತ್ರದುರ್ಗದ ಪಾಳೆಯಗಾರರ ಚಾರಿತ್ರಿಕ ಅಂಶಗಳು ಅಧ್ಯಯನದಲ್ಲಿ ಅಷ್ಟೇ ಪ್ರಾಮಾಣಿಕವೆಂಬುದನ್ನೂ ವಿವೇಚಿಸಬಹುದಾಗಿದೆ. ಆಧುನಿಕ ಸಂಶೋಧನೆಯನ್ನು ಗಮನದಲ್ಲಿರಿಸಿಕೊಂಡು ಈ ಕೃತಿಯಲ್ಲಿ ಸೂಚ್ಯವಾಗಿ ಉಲ್ಲೇಖಿಸಿದ ಘಟನೆಗಳಲ್ಲಿ ಚಿತ್ರದುರ್ಗ ಹಾಗೂ ಕೆಳದಿ ಅರಸರ ಸಂಗತಿಗಳನ್ನು ಮಾತ್ರ ಸೀಮಿತವಾಗಿಟ್ಟುಕೊಂಡು ವಿಶ್ಲೇಷಿಸಲು ಯತ್ನಿಸಲಾಗಿದೆ.3

ಸದಾಶಿವನಾಯಕ [ಕ್ರಿ.ಶ. 1514-46]

ಕಂ || ಮತ್ತಮಾ ರಾಯರಿಂಗಂ

ತೆತ್ತಿಗನೆಂವೆನಿಸಿ ನಡೆಯದುರೆ ಮಾರ್ಮಲೆತಾ

ಮತ್ತಿಯ ತಿಮ್ಮಾಖ್ಯೆಯ ದು
ರ್ವೃತ್ತನ ನಿಗ್ರಹಿಸಿ ರಾಯರಂ ಮೆಚ್ಚಿಸಿದಂ ||

ಕೆ.ನೃ.ವಿ. (ದ್ವಿ.ಮು.) ಪು 36

ವಿಜಯನಗರದ ಅರಸರ ಅನುಮತಿಯ ಮೇರೆಗೆ 'ಮತ್ತಿಯ ತಿಮ್ಮಾಖ್ಯೆಯ ದುರ್ವೃತ್ತನ ನಿಗ್ರಹಿಸಿ ರಾಯರಂ ಮೆಚ್ಚಿಸಿದಂ' ಎಂದು ಹೇಳಿದ ಕಾಲವು ಎಂದರೆ ಮತ್ತಿ ತಿಮ್ಮಣ್ಣನ ಕಾಲವು ಕ್ರಿ.ಶ. 1556–1582 ಆಗುತ್ತದೆ.[4] ಕೆಳದಿ ಸದಾಶಿವನಾಯಕನ ಕಾಲವನ್ನು ವಿದ್ವಾಂಸರು ವಿವಿಧ ರೀತಿಯಲ್ಲಿ ತೌಲನಿಕವಾಗಿ ಚರ್ಚಿಸಿದ್ದಾರೆ.[5] ಇವುಗಳನ್ನು ಉಚಿತ ಸಂಶೋಧನೆಯಲ್ಲಿ ಒಪ್ಪಿಕೊಂಡಲ್ಲಿ ಈ ಅಂಶವನ್ನು ಪುಷ್ಟೀಕರಿಸಲು ಸಾಧ್ಯವಾಗುತ್ತದೆ. ಕರ್ನಾಟಕ ಇತಿಹಾಸದರ್ಶನ (ಪುಟ 468)ದಲ್ಲಿ ನಿರೂಪಿಸಿದಂತೆ ವಿಜಯನಗರದ ಅರಸರ ಗೌರವಾದರಗಳಿಗೆ ಮತ್ತಿ ತಿಮ್ಮಣ್ಣನು ಪಾತ್ರನಾಗಿದ್ದರೂ ಕೊನೆಗೊಮ್ಮೆ ನಾಯಕನು ಅದೇಕೋ ಚಕ್ರವರ್ತಿಯ ಕೋಪಕ್ಕೆ ಗುರಿಯಾಗಿ ವಿಜಯನಗರದಲ್ಲಿ ಬಂದಿಯಾದನು; ಹಾಗೂ ಅಂತ್ಯದಲ್ಲಿ ಸೆರೆಮನೆಯಲ್ಲಿಯೇ ಮೃತನಾದನು ಎಂಬ ಅಂಶವು ಇದನ್ನೇ ಸಮರ್ಥಿಸುತ್ತದೆ. ಈ ಕಾಲದಲ್ಲಿ (ಕ್ರಿ.ಶ. 1542–70) ಸದಾಶಿವರಾಯನು ವಿಜಯನಗರದಲ್ಲಿ ಚಕ್ರವರ್ತಿಯಾಗಿದ್ದು, ಅಳಿಯ ರಾಮರಾಯನು ರಾಜ್ಯಭಾರ ಮಾಡುತ್ತಿದ್ದುದು ಕಂಡುಬರುತ್ತದೆ. ಕೆಳದಿ ನೃಪವಿಜಯದಲ್ಲಿನ ದ್ವಿತೀಯಾಶ್ವಾಸದಲ್ಲಿನ

ವ|| ಮತ್ತಮದಲ್ಲದೊಂದವಸರದೊಳಾ ಸದಾಶಿವರಾಯನಾಯಕಂ ಕೃಷ್ಣರಾಯರಿಂ ಬೆಸಂಬಡೆದು ಘಟ್ಟವನಿಳಿದು ಪರಶುರಾಮ ಕ್ಷೇತ್ರಮಂ ಸಾರ್ದು—ಎಂದು ಹೇಳಿದ ಉಲ್ಲೇಖವು ಕ್ರಿ. ಶ. 1509–1529 ಆಗುತ್ತದೆ.

ಹಿರಿಯ ವೆಂಕಟಪ್ಪನಾಯಕ (ಕ್ರಿ.ಶ. 1583–1630)

ಕೆಳದಿ ನೃಪವಿಜಯದ ಪಂಚಮಾಶ್ವಾಸದಲ್ಲಿ–

ವ|| ಅದೆಂತೆಂದೊಡೆ ತರಿಕೆರೆಯ ಹಿರಿಯ ಹನುಮಪ್ಪನಾಯಕನ ಸುತರಿರ್ವರುಂ ತಂದೆ ಹಸುಗೆಗೆಯ್ದು ಕೊಟ್ಟಂತಿರದೆ ತಮ್ಮೊಳ್ ವಿವಾದಿಸಿ ಪೊಣರ್ದು ಕಿರಿಯಾತಂ ಕಡವೂರಂ ತೆಗೆದುಕೊಳಲ್ ಪಿರಿಯಾತನಿಕ್ಕೇರಿಗೆ ಬಿನ್ನೈಸಿ ಕಳುಪಲ್ ಚಿಕ್ಕಕಲ್ಲಪ್ಪನೆಂಬ ದಳವಾಯ ಸಂಗಡಂ ಸೈನ್ಯಮಂ ಕೂಡಿಸಿ ಕಳುಪಲಾ ಚಿಕ್ಕಕುಮಾರಂ ಬೇಲೂರ ವೆಂಕಟಾದ್ರಿನಾಯಕರ್ ಮೈಸೂರವರ್ ಚಿಕ್ಕನಾಯಕನಹಳ್ಳಿಯವರ್ ಚಿಂತನಕಲ್ಲವರ್ ಸೀರೆದ ರಂಗಪ್ಪನಾಯಕರ್ ಮುಂತಾದವರ ಸೈನ್ಯಮಂ ಬರಿಸಿಕೊಂಡು ಹೇರಳ ಬಲವಂ ಮಾಡಿಕೊಂಡಿದಿರ್ಚಿ ನಿಲಲ್ ಪಿರಿಯ ಕುಮಾರಂ ನಿತ್ತರಿಸಿ ನಿಲಲಶಕ್ಯಮಾಗಿ ಮತ್ತಮಿಕ್ಕೇರಿಗೆ ಬಿನ್ನೈಸಿ ಕಳುಪಲಾಗಳಾ ವೆಂಕಟಪ್ಪನಾಯಕಂ ಸೈನ್ಯಸಹಿತಂ ಇಕ್ಕೇರಿಯಿಂ ತಾನೆ ತೆರಳ್ದೈತರಲಾಗಳಾ ಪಿರಿಯ ಕುಮಾರನೆಳ್ತಂದು ಗಂಗೂರೆಡೆಯೊಳ್ ಸಂಧಿಸಿ ಸೀಮೊಗೆ ಗಾಜನೂರು ಲಕ್ಕವಳ್ಳಿಯ ಸೀಮೆ ಕೋಂಟೆಗಳಂ ಕಾಣಿಕೆರೂಪಾಗಿತ್ತು

ಮರೆವುಗಲಭುಯುವಿತ್ತು ತುಂಗಭದ್ರಾನದಿಯನುತ್ತರಿಸಲಾವಾರ್ತೆಯುಂ ಕೇಳ್ದು ಕಿರಿಯ ಕುಮಾರನ ಸಹಾಯಕ್ಕೆ ಬಂದವರ್ ಧೈರ್ಯಂಗುಂದಿ ನಿತ್ತರಿಸಲಾರವೆ ಬಾಣಾನರಕ್ಕಾಗಿ ಪಲಾಯನಂಗೈಯಲಾಗಳಾ ವೆಂಕಟಪ್ಪನಾಯಕಂ ಹಿರಿಯ ಲಿಂಗಣನಾಯಕನೆಂಬ ದಳವಾಯ ಸಂಗಡಂ ಹೇರಳ ಬಲವಂ ತೆರಳ್ಚಿ ಕಳುಪಲಾತಂ ಕಡವೂರ ಕೋಟೆಯುಂ ವೇಷ್ಟೈಸಿ ತಳಿಸುರಂಗಗಳಂ ನಡೆಸಿ ತತ್ಕೋಟೆಯುಂ ತೆಗೆದುಕೊಳಲಾ ಕೋಟೆಯುಂ ಹಿರಿಯ ಕುಮಾರಂಗಿತ್ತು ಮನ್ನಿಸಿ ಮತ್ತಂ ಬಾಣಾವರಕ್ಕೈದುತಿರಲಾ ವಾರ್ತೆಯುಂ ಕೇಳ್ದತ್ಯಂತಭಯೋದ್ರೇಕದಿಂ ಚಿಕ್ಕಕುಮಾರನೆಳ್ತಂದು ಮರೆವುಗಲವರಿರ್ವರ ವಿವಾದಮಂ ತೀರ್ಚಿ ಮನಸ್ಸಂಕೋಚಮಂ ಪರಿಹರಿಸಿ ಬುದ್ಧಿಮಾರ್ಗಂಗಳಂ ತಿಳುಪಿ ಬಳಿಕ-ವರ್ಗಳಿಂದನೇಕ ದ್ರವ್ಯಾಭರಣಾಂಬರ ವಸ್ತುವಾಹನಾದಿಗಳಂ ಸಂಗ್ರಹಿಸಿ ಪರಮ ಪ್ರಖ್ಯಾತಿಯುಂ ಪಡೆದು ಮರಳ್ದನಂತುಮಲ್ಲದೆಯುಂ . . . .

ಕೆ.ನೃ.ವಿ. (ದ್ವಿ.ಮು.) ಪು. 73·

ಕಂ|| ವರರಾಯದುರ್ಗ ಬೇಲೂ
ರರಸರನೊಳಗೆನಿಸಿ ಹರಪುರಾಧೀಶ್ವರನಂ
ಪೊರೆದುರುತರ ಚಿಂತನಕ
ಲ್ಲೆರೆಯನನೆರ್ದೆಗೆಡಿಸಿ ಬಾಹುಬಲಮಂ ಮೆರೆದಂ ||

ಅದೇ—ಪು. 74

ಚಿತ್ರದುರ್ಗದ ಉಪನಾಮವೆನಿಸಿದ್ದ ಚಿಂತನಕಲ್ಲು ಈ ವೇಳೆಗೆ ಕ್ರಿ.ಶ. 1583-1630 ರೊಳಗೆ ಹಿರಿಯ ವೆಂಕಟಪ್ಪನಾಯಕನಿಂದ ಜಯಿಸಲ್ಪಟ್ಟಿರುವುದು ವ್ಯಕ್ತಪಡುತ್ತದೆ. ಚಿತ್ರದುರ್ಗದಲ್ಲಿ ಈ ಕಾಲದಲ್ಲಿ ಓಬಣ್ಣನಾಯಕನ ಮಗ ಕಸ್ತೂರಿ ರಂಗಪ್ಪ ನಾಯಕನಿದ್ದುದು ಕಂಡುಬರುತ್ತದೆ. (ಕ್ರಿ.ಶ. 1576-1633)[6]. ಕ್ರಿ.ಶ. 1629-30 ರಲ್ಲಿ ಪೋರ್ಚುಗೀಸ್ ವೈಸ್‌ರಾಯ್‌ಗೆ ಬರೆದ ಪತ್ರದ ಉಲ್ಲೇಖವೊಂದು ಈ ದಿಸೆಯಲ್ಲಿ ಗಮನಾರ್ಹ ಅಂಶವನ್ನು ಹೊರಗೆಡಹುತ್ತದೆಂಬುದಾಗಿ ಡಾ| ಸ್ವಾಮಿನಾಥನ್‌ರವರು ಹೇಳಿದ್ದಾರೆ. ಇವರ ಸಮರ್ಥನೆಯಂತೆ ಮಾಂಕೋಸ್-ಡು-ರೀನೋ ನಂ 12 ಅನೋ ಡೆ 1629ರ (Moncoes-do-Reino, No 12, Ano de 1629, Fol. 448-49: Ibid 481-482-Texts and Translation published in proceedings of the Indian Historical Records Commission, Vol XI, pp 107 ff) ಎಂಬ ಪೋರ್ಚುಗೀಸ್ ಚಾರಿತ್ರಿಕ ದಾಖಲೆಯು ಹಿರಿಯ ವೆಂಕಟಪ್ಪನಾಯಕನ ದಿಗ್ವಿಜಯವನ್ನು ಕಥಿಸುತ್ತದೆ.

ಕೆಳದಿ ನೃಪ ವಿಜಯದ ದಶಮಾಶ್ವಾಸದಲ್ಲಿ—

. . . . ಸುಬೇದಾರ ಸಿದ್ದಪ್ಪ ಕೋಹಿಳೆ ಲಿಂಗಪ್ಪ ಬೆಳ್ಳಾರೆ ಚೆನ್ನಪ್ಪಯ್ಯ . . (ಕೆ.ನೃ.ವಿ. ಪು. 154) . . ಹಾಗೆಯೇ ಅದೇ ಪುಟದ ಪದ್ಯ 14ರಲ್ಲಿ—

ಕೋಹಿಲೆಯ ಸಿದ್ದಪನ ಕೂ
ಡಾಹವನಿಸ್ಸೀಮಸುಭಟರಂ ತೆರಳಿಸಿ ಸ
ನ್ನಾಹದೊಳ್ಳೆದಿದ ಶತ್ರು
ವ್ಯೂಹವನಂಕದೊಳೆ ಸದೆದು ಮುರಿದೋಡಿಸುತುಂ ||

ಈ ಅಂಶಕ್ಕೆ ಪೂರಕವಾಗಿ ದಿ|| ಹುಲ್ಲೂರು ಶ್ರೀನಿವಾಸ ಜೋಯಿಸರು ಸಂಗ್ರಹಿಸಿದ ಹಿರೇ ಮದಕರಿನಾಯಕನ ತಾರಾವಳಿಯಲ್ಲಿರುವ ಭಾಗವೊಂದರಲ್ಲಿ ಕೋಹಿಲೆ ಲಿಂಗಪ್ಪನ ಸಂಗತಿಯೊಂದು ಪ್ರಸ್ತಾಪಿಸಿರುವುದು ಕಂಡುಬರುತ್ತದೆ.

ಹೊಯ್ದರು ತಲೆಯೆಂಬೊ ಸುದ್ಧಿಯನು ಕೇಳಿ |
ಬಿದರೂರು ದಳವಾಯಿ ರೋಹಿಲೆಯ ಲಿಂಗಣ್ಣ |
ಪಂಥದಲಿ ಪಡಾವು ಹಾಕುವನೆಂಬ ಧೀರಾ |
ವಂತಿನಲಿ ಹುಲಿಕೆರೆಗೆ ಇಳಿದ ಶೃಂಗಾರ || 15 ||
. . . .
ಗುಂಡು ಬಡಿದಿತು ರೋಹಿಲೆ ಲಿಂಗನ ಎದೆಗಾಗ |
ದಂಡು ಓಡಿತು ಬೆಂದು ಬಿಸಿಲೆದ್ದು ಬೇಗಾ || 19 ||[7]

ಇಮ್ಮಡಿ ಸೋಮಶೇಖರನಾಯಕ (ಕ್ರಿ.ಶ.1715–1740)

ಕಂ|| ದುರುಳ ವ್ಯೆಸೂರ ಮನ್ನೆಯ
ನುರುಮದವಂ ತವಿಸವೇಳ್ಕೆನುತ್ತಗ್ರಜನೊಳ್
ಗುರುವಪನಾಳೋಚನೆಯಂ
ವಿರಚಿಸಿ ತದ್ರಾಜಕಾರ್ಯಮಂ ಮಿಗೆ ತೊಡಗಲ್

ಬಲವತ್ಸಹಾಯವಿಲ್ಲದೆ
ನೆಲೆಗೊಳದೀಕಾರ್ಯಮಾ ಸಹಾಯಕೆ ತಮ್ಮಿಂ
ತೊಲಗದೆ ನಿಲ್ವೊಡವೊರ್ಮೆಗೆ
ಬಿಳಿಜೋಡಿಯ ಬರಮನಾಯಕನೆ ಮಿಗೆ ಪಾತ್ರಂ

ಎಂದಾಳೋಚನೆಯಂ ತಾಂ
ಕುಂದದೆ ನಿಶ್ಚಯಿಸಿ ರಾಯಸದ ಸೂರಪಗಾ
ಪೊಂದಿಗೆಯನೊರೆದು ಬೀಳ್ಕೊಡೆ
ಮುಂದಾಗಿರಲಾತನೈದಿ ಚಿಂತನಕಲ್ಲಂ

ಬರಮಣನಾಯಕನಂ ಕಂ
ಡೊರೆಯಲ್ಕೀ ರಾಜಕಾರ್ಯದಿರವನೊಡಂಬ

ಟ್ಟಿರುವವೊಲಂತಾಗಲ್ಕಿಂ
ದೊರೆಸುಲ್ ದಿಟವೆಂದು ಸೂರಪಂ ಒರೆದಟ್ಟಲ್

ಕುಟಿಲನೆಂದರಿಯದಾ ನುಡಿ
ದಿಟಮೆಂಬೀ ಒಗೆದು ನಂಬಿ ಗುರುವಪನಾಗಲ್
ಕಟಕಸಹಿತೈದಿ ಬೇಟೆಯ
ನಟನೆಯೊಳಂ ಕೊಂಡು ಚನ್ನಗಿರಿಗಡಿಬೆಡೆಯೊಳ್

ವ|| ಇಂತು ಬೇಟೆಗೊಂಡು ಮುಂತಣ ರಾಜಕಾರ್ಯ ವಿಷಯಂಗಳನೊರೆದಿದಕ್ಕೆ ನೀಂ ಸಹಾಯುಮಂ ವಿರಚಿಸಿದೆಯಾದೊಡೆ ಸೂರಯ್ಯನ ಕೂಡೊರೆದು ಕಳುಪಿದಂತೆ ನಿನ್ನ ಕಜ್ಜಂಗಳೇನಿರ್ದೊಡಂ ವಹಿಸಿ ನಡೆಸಿದಪೆವಾವ್ಪುದರಲ್ಲಿಯುಂ ನಾವಿರ್ವರುಮೇಕಮತರಾಗಿ ಮಾಯಾವಿಗಳ ಮದನಿವಾರಣಮಂ ಮಾಳ್ಪವೆಂದುಸಿರಲೀ ಮಂತ್ರಾಳೋಚನೆಯಂ ಕೇಳ್ದದಕ್ಕೆ ಮಾರುತ್ತರಂಗೊಡದಾ ಬರಮನಾಯಕನತ್ಯಂತದುರಾಸೆ ಪುಟ್ಟೆ ವಕ್ರೋಕ್ತಿ ಗಳಂ ನುಡಿದು ವಾಗ್ವಾದದಿಂ ಕೆಣಕಿ ಗಜಬಲಮಂ ಪುಟ್ಟಿಸಿ ಮುನ್ನಂ ಮಾಡಿದ ತಹಬಂದು ಕಟ್ಟುಗಳ್ ಮುರಿದುವೆಂಬ ಭಾವಮಂ ಮಾಡಿ ಮುನ್ನೊರೆದಂತಸಿಬಲದಿಂ ತನ್ನೆಡೆಗೈತಂದ ಗುರುವಪಮಂತ್ರಿಯಂ ವೇಷ್ಟೈಸವೇಳ್ಕೆಂದು ಯೋಚಿಪುದರೊಳ್ ಸಂಧಿ ವಿಸಂಚಿಸಲಾಗಳಾ ಅವನ ಕಪಟವೃತ್ತಿಯಂ ಗುರುವಪಮಂತ್ರಿಯರಿದಾಗಣವೇಳೆಯೊಳ ವನೇನೇನನವೇಕ್ಷಿಸಿ ನುಡಿದನವಕಂತಾಗಲಿಪೇತರ ಕಜ್ಜಮೆಂದೊಡಂಬಟ್ಟಾತನಾಗಿ ತತ್ಕಿ ರಾತಪತಿಯೊಳ್ ಮಧುರ ವಚನಮಂ ನುಡಿದಧಿಕಮಾದುಡುಗೊರೆವುಚಿತಗಳನಿತ್ತು ಪಿರಿದು ಮನ್ನಿಸಿ ಕಳುಹಿ ತಾಂ ಪಿಂದೆಗೆದು ಬಂದು ಕತಿಪಯ ದಿನಂಗಳ್ ಪೋಗಲೊಡನೆ

ಕಂ || ಧುರಧೀರಂ ಚಿಂತನಕ
ಲ್ಲೆರೆಯಂ ಬಿಳಿಜೋಡಿ ಬರಮನಾಯಕನೆಸೆವಾ
ಹರಪುರದರಸನ ಸುಪರಿ
ಸ್ತರಣಗಳಂ ಕೊಂಡು ದಾಳಿಯಿಡಲತಿಚಲದಿಂ

ವ|| ಪಿಂತೆ ಕ್ರಮದಿಂ ಚಿಂತನಕಲ್ಲುದುರ್ಗದ ಸಂಸ್ಥಾನಂ ಕಸ್ತೂರಿ ತಿಮ್ಮಪ್ಪ ನಾಯಕ ಸರ್ಜಪ್ಪನಾಯಕ ಹಿರಿಯ ಚಿಕ್ಕಣ್ಣನಾಯಕ ಹಿರಿಯ ಮೆದಕೆರೆನಾಯಕ ಮದಕೆರೆನಾಯಕ ಚಿಕ್ಕಣ್ಣನಾಯಕ ಮೆದಕೆರೆನಾಯಕ ರಂಗಪ್ಪನಾಯಕ ರಘುವಪ್ಪ ನಾಯಕ ರಂಗಪ್ಪನಾಯಕರೆಂಬವರಾಳ್ದರ್ ಆ ತರುವಾಯುಮಾದುರ್ಗವನಾಳುತಿರ್ದ ಬಿಳಿಜೋಡಿ ಬರಮನಾಯಕನತ್ಯಂತಗರ್ವೋದ್ರೇಕದಿನಾದಿಯೊಳುಚ್ಚಂಗಿಯೆಂಬ ಸ್ಥಳ ದೊಳಿರ್ದನಂತರಂ ಹರಪುರ (ಪ್ರತಿನಾಮ ಹರಪನಹಳ್ಳಿ) ಯೆಂಬ ಕೋಂಟೆಯಂ ಬಲಿಸಿ ಆ ಕೋಂಟೆಯೊಳಿರ್ದು ರಾಜ್ಯಂಗೆಯ್ದು ದಾದೆನಾಯಕ ರಂಗರಾಜಯ್ಯ ಹಿರಿಯಬಸಂತ ರಾಯ ಇಮ್ಮಡಿ ಬಸವಪ್ಪನಾಯಕ ಕೊಟ್ಟೂರಪ್ಪನಾಯಕ ಹಿರಿಯ ಬಸವಪ್ಪನಾಯಕ

ಕೊಟ್ಟೂರಪ್ಪನಾಯಕರೆಂಬಿವರಾಳ್ದನಂತರಂ ಬಸವಪ್ಪನಾಯಕನಾಳ್ದು ಬರುತ್ತಿರಲ್ (ಮುಂಪೇಳ್ದ ಚಿಂತನಕಲ್ಲು ಬರಮಣ್ಣನಾಯಕಂ) ಆ ಹರಪನಹಳ್ಳಿ ಬಸವಪ್ಪನಾಯಕನ ಪರಿಸ್ತರಣಗಳಂಕೊಂಡು ರಾಜ್ಯಂಗಳನಾಕ್ರಮಿಸುತ್ತುಂ ಮಿಕ್ಕು ಮೀರಿ ಕೈಗೆಯ್ಯುತ್ತುಂ ಬರಲಾ ಬರಮನಾಯಕನದಟನಾಂಪೊಡಶಕ್ಯಮಾಗಿ ಹರಪನಹಳ್ಳಿಯ ಬಾಗಳಿ ಬಸವಪ್ಪನಾಯಕಂ ದೈನ್ಯೋಕ್ತಿಯಿಂ ರಾಯಸಮಂ ಬರೆದು ಕಳುಪಿ ತಮ್ಮ ಸಂಸ್ಥಾನಮನುದ್ಧರಿಸವೇಳ್ಕೆಂದು ಪೇಳಿಸಲಂತಾಗಲೆಂದು ಗುರುವಪ್ಪಮಂತ್ರಿಯೊಡನಸಂಖ್ಯಾತಮಾದ ಸೈನ್ಯಮಂತೆರಳ್ಚಿ ಕಳುಹಿ ಯುದ್ಧರಂಗದೊಳಾ ಬರಮನಾಯಕನ ಪರಾಕ್ರಮಾತಿಶಯಮಂ ಮುರಿದಾಪರಿಸ್ತರಣಗಳಂ ಕೊಂಡು ಬಸವಪ್ಪನಾಯಕಂಗಿತ್ತು ಪರಮಪ್ರಖ್ಯಾತಿಯಂ ಪಡೆದಂತಿರುತ್ತಮಿರಲ್ ಮಗುಳ್ದಾ ಬರಮನಾಯಕಂ ಗುತ್ತಳದ ಹನುಮಂತಗೌಡಂ ಹಿಂದೂರಾಯರ ವಂಶೋದ್ಭವನಾದ ಸಿದ್ದೋಜಿ ಮುಂತಾದನರಂ ಸಹಾಯಕ್ಕೆ ಬರಿಸಿಕೊಂಡೈದಿ ರಣರಂಗಕಿದಿರ್ಚಿ ನಿಲಲಾಹವದೊಳಾ ಹನುಮಂತಗೌಡನಂ ಮಸೆಗಾಣಿಸಿಯನಂತರಂ

ಕಂ|| ಚಿಂತನಕಲ್ಲರಸನ ಮದ
ಮಂ ತಗ್ಗಿಸಿ ಧುರದೊಳಾಂತ ಸಿದ್ದೋಜಿಯು ಸ
ದ್ದಂತಿಯುಮಂ ಪಿಡಿದೊಪ್ಪುವ ೫
ಸಂತೆಯಬೆನ್ನೂರ ಕೋಂಟೆಯಂ ವಶಗೈದಂ

ವ|| ಇಂತು ಚಿಂತನಕಲ್ಲ ಬರಮನಾಯಕನ ಮದಮಂ ತಗ್ಗಿಸಿ ಸಂತೆಬೆನ್ನೂರ ಕೋಂಟೆಯಂ ಕೊಂಡು ಸುಖದಿಂ ರಾಜ್ಯವಾಳುತ್ತಿರಲಾ ಪ್ರಸ್ತಾವದೊಳ್

ಕಂ|| ಮರಳ್ದಾ ಬರಮಣನಾಯಕ
ನುರುಬೆಗೆ ನಿತ್ತರಿಸಲಮ್ಮದಳವಳಿದು ತರೀ
ಕೆರೆ ರಾಯದುರ್ಗದರಸರ್
ಮರೆವುಗೆ ಮನ್ನಿಸುತುಮಭಯಮಿತ್ತತಿದಯೆಯಿಂ

ಇಂತಭಯಮಿತ್ತಪರಿಮಿತ ಸೇನಾಸಮೂಹಮಂ ತೆರಳ್ಚಿ ಕಳುಹಿ ಬರಮನಾಯಕಂಗೆ ಸಹಾಯಮಾಗಿ ಬಂದ ದರದಾಖುಲ್ಲಿಯಂ ಯುದ್ಧದೊಳ್ ಪಿಂದೆಗೆಸಿ ತರಿಕೆರೆಯ ಸಂಸ್ಥಾನಮಂ ಕ್ರಮದಿಂ ಮುನ್ನಾಳ್ದ ಕಾಪಿನಾಯಕ ಬುಳ್ಳನಾಯಕ ಕೆಂಗಾನಾಯಕ ರಡ್ಡಿ ಹನುಮಪ್ಪನಾಯಕ ಕುಂಟ ಹನುಮಪ್ಪನಾಯಕ ಇಮ್ಮಡಿ ಹನುಮಪ್ಪನಾಯಕ ಸಿಚ್ಚ ಮದವಣಿಗ ಹನುಮಪ್ಪನಾಯಕ ಶರಜಾ ಹನುಮಪ್ಪನಾಯಕ ಸೀತಾರಾಮಪ್ಪನಾಯಕ ಪಟ್ಟಾಭಿರಾಮಪ್ಪನಾಯಕರೆಂಬಿವರಾಳ್ದನಂತರಮಾ ಸಂಸ್ಥಾನಮನಾಳುತಿರ್ದ ಹನುಮಪ್ಪನಾಯಕನುಮಂ ರಾಯದುರ್ಗದ ಸಂಸ್ಥಾನಮಂ ಕ್ರಮದಿಂ ಮುನ್ನಾಳ್ದವರನಂತರಮಾ ಸಂಸ್ಥಾನಂ ವಿಸ್ಖಲಿತಮಾಗುತ್ತಿರಲ್ ಸಹಾಯಮಾಗಿ ಬಂದದರರಸನುಮಂ

ಇಂತುಭಯ ಸಂಸ್ಥಾನಾಧಿಪತಿಗಳುಮಂ ಸ್ವಸ್ಥಾನಂಗಳೊಳ್ ನಿಲಿಸಿ ಪರಮ ಪ್ರಖ್ಯಾತಿಯಂ ಪಡೆದನಂತುಮಲ್ಲದೆಯುಂ

. ನೃ.ವಿ. (ದ್ವಿ.ಮು.) ಪು. 156 ff.

ಇದು ದಶಮಾಶ್ವಾಸದಲ್ಲಿದ್ದು ಕ್ರಿ.ಶ. 1715–40ರ ಕಾಲವಾಗಿರುತ್ತದೆ. ಇಲ್ಲಿ ಉಲ್ಲೇಖಿಸಿರುವ ಬರಮನಾಯಕನ ಸಂಗತಿಗಳು ತರೀಕೆರೆ, ಚಿತ್ರದುರ್ಗದ ಪಾಳೆಯಗಾರರ, ಹರಪನಹಳ್ಳಿಯ ಅರಸರ, ರಾಯದುರ್ಗವನ್ನು ಆಳಿದವರ (ಇದು ಅಸ್ಪಷ್ಟವಾಗಿದೆ) ಕ್ರಮಾಂತ ನಾಮಗಳು ಗಮನಾರ್ಹ ಸಂಗತಿಗಳಾಗಿವೆ. ಇವುಗಳ ಸೂಕ್ಷ್ಮ ಪರಿಶೀಲನೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಕಂಡುಬಂದರೂ ಸಂಗ್ರಾಹಕ ದೃಷ್ಟಿಯಿಂದ ಗೌಣವೆನಿಸಿವೆ; ಅಧ್ಯಯನ ಶೀಲತೆಯಲ್ಲಿ ಮೂಲಸಾಮಗ್ರಿಗಳನ್ನು ಒದಗಿಸುವಲ್ಲಿ ಉತ್ಕೃಷ್ಟ ಸಾಧನಗಳೆನಿಸಿವೆ.[9]

ಭರಮಣ್ಣನಾಯಕನ ಸಮರವಿಜಯವನ್ನು ಕುರಿತು ಚಿತ್ರದುರ್ಗ ಪಾಳೆಯಗಾರರ ಚರಿತ್ರೆಯಲ್ಲಿ ಚಿನ್ನದ ಮನೆಯವರ ಕೃತಿಯೊಂದನ್ನು ಹುಲ್ಲೂರು ಶ್ರೀನಿವಾಸಜೋಯಿಸರು ಸಂಗ್ರಹಿಸಿ ಪ್ರಕಟಿಸಿದ್ದಾರೆ. [ಶರಣ ಸಾಹಿತ್ಯ 1945] ಆದರಲ್ಲಿನ ಉಲ್ಲೇಖವೊಂದು—

ಕೆಳದಿಯರು ಹೊಳೆಯ ಹೊನ್ನೂರ ಮುತ್ತಿರಲಾಗ |
ಗೆಲಿದು ಪಾಚ್ಛನಿಗೆ ಕೊಟ್ಟ |
ಸಂಗರಕೆ ಧಿಟ್ಟ ವಾಸಿಯುಳ ಪಟ್ಟ || 15 ||[10]

ಹೀಗಿದ್ದು ಹೊಳೆಯಹೊನ್ನೂರಿನ ಸಂಗತಿಯ ಕುರಿತು ಕೆಳದಿ ನೃಪವಿಜಯದಲ್ಲಿ—

[ಅ] ಕಂ|| ಮಾಸೂರಂ ಮಲ್ಲೂರಂ
ಭಾಸುರವೆನಿಸಿರ್ಪ ಪೊಳೆಯ ಪೊನ್ನೂರಂ ಭೂ
ವಾಸನ ಸಂಕಣಭೂಪಂ
ಗಾಸಮಯುಮೊಳಿತ್ತು ಪೆರ್ಮೆಯಿಂ ಮನ್ನಿಸಿದಂ

ಕೆ.ನೃ.ವಿ. [ದ್ವಿ.ಮು.] ಪು. 40

[ಆ] ಕಂ|| ತುರುಕರ ಮೂಲಕವೆ ಕಿರಾ
ತರ ವಶಮಾಗಿರ್ಪ ಪೊಳೆಯ ಪೊನ್ನೂರ ಪರಿ
ಸ್ತರಣವನಾ ಸಂಕಣನೃಪ
ವರನಾತ್ಮಜನಾಜಿರಂಗದೊಳ್ ಸಾಧಿಸಿದಂ

ಅದೇ ಪು. 67

[ಅ] ಇಲ್ಲಿ ಉಕ್ತವಾದ ಅಂಶಗಳು ಕ್ರಿ.ಶ. 1546–59ರಲ್ಲಿ ಆಳಿದ ದೊಡ್ಡ ಸಂಕಣ್ಣನಾಯಕನ ಕುಮಾರರಿಗೆ ಹಾಲು ಬೆಣ್ಣೆಗಳಿಗಾಗಿ ವಿಜಯನಗರದ ಚಕ್ರವರ್ತಿಯು

ನೀಡಿದ ಪ್ರದೇಶವಾಗಿರುತ್ತದೆ. [೮] ಭಾಗವು ಕ್ರಿ.ಶ. 1583-1630ರಲ್ಲಿ ಆಳಿದ ಹಿರಿಯ ವೆಂಕಟಪ್ಪನಾಯಕನ ಕಾಲವಾಗಿದ್ದು ಅದೇ ಕೃತಿಯಲ್ಲಿ ನಿರೂಪಿಸಿದಂತೆ— ಇಂತಾ ವೆಂಕಟಪ್ಪನಾಯಕಂ ಹರಕಾಳಡೆಯಹಳ್ಳಿ ಪೊಳೆಯಪೊಸ್ನೂರ ಪರಿಸ್ತರಣ ಸೀವೆಗಳ ನಧೀನಮಂ ರಚಿಸಲ್—ಎಂಬುದಾಗಿ ಪುನರುಚ್ಚರಿಸಿರುವುದು ಸುಸ್ಪಷ್ಟವಾಗಿಯೇ ಇವೆ. ಭರಮಣ್ಣ ನಾಯಕನ ಕಾಲವು ಕ್ರಿ.ಶ. 1689-1719 ಆಗಿರುತ್ತದೆ. ಕ್ರಿ.ಶ. 1672-98 ಹಾಗೂ 1698-1715 ಲ್ಲಿ ಕ್ರಮವಾಗಿ ಆಳಿದ ಚೆನ್ನಮ್ಮಾಜಿ ಹಾಗೂ ಹಿರಿಯ ಬಸಪ್ಪನಾಯಕನ ಕಾಲದಲ್ಲಿ ಚಿತ್ರದುರ್ಗದವರ ಸಂಗತಿಯು ಕೆಳದಿ ನೃಪ ವಿಜಯದಲ್ಲಿ ಅಷ್ಟೇನೂ ಪ್ರಸ್ತಾಪಕ್ಕೆ ಬಂದಿರುವುದಿಲ್ಲ. ಇದನ್ನು ಗಮನಿಸಿದಲ್ಲಿ ಶ್ರೀ ಎಂ. ಜಿ. ವೆಂಕಟೇಶಯ್ಯನವರ 'ಚಿತ್ರದುರ್ಗದ ಪಾಳೆಯಗಾರರು' ಕೃತಿಯಲ್ಲಿ ಹೇಳಿದ ಕೆಳದಿ ಚೆನ್ನಮ್ಮಾಜಿಯು ಚಿತ್ರದುರ್ಗದ ಚಿಕ್ಕಣ್ಣನಾಯಕನಿಗೆ [ಕ್ರಿ.ಶ. 1678-1685] ಶಬನಿ ಕೃಷ್ಣಪ್ಪನ ಮುಖಾಂತರ ಸಂಬಂಧವನ್ನು ಸ್ಥಾಪಿಸಲು ಉದ್ಯುಗಿಸಿದುದು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಲು ಗಮನಾರ್ಹ ಅಂಶವಾಗಿದೆ.[11] ತರೀಕೆರೆ ರಾಜ್ಯದ ಮೇಲೆ ಒತ್ತುವರಿ ನಡೆಸಿದ ಚಿತ್ರದುರ್ಗದ ನಾಯಕನನ್ನು ಸೋಮಶೇಖರನು ಸೋಲಿಸಿದನು ಎಂಬುದಾಗಿ ಡಾ|| ಸೂರ್ಯನಾಥ ಕಾಮತ್‌ರು ಹೇಳಿದ್ದಾರೆ.[12] ಕ್ರಿ.ಶ. 1715-40ರಲ್ಲಿ ಆಳಿದ ಕಿರಿಯ ಸೋಮಶೇಖರನಾಯಕನು ವಾಸ್ತವವಾಗಿಯೇ ಯುದ್ಧದಲ್ಲಿ ಸಮರ್ಥನಿರುವುದನ್ನು ಐತಿಹಾಸಿಕ ಮೂಲ ಸಂಗತಿಗಳು ನಿರ್ದೇಶಿಸುತ್ತವೆ. ಈ ಕಾರಣಗಳಿಂದ ಇವುಗಳು ವಾಸ್ತವಾಂಶಕ್ಕೆ ಹತ್ತಿರವಾಗಿವೆ.

ಕಿರಿಯ ಬಸಪ್ಪನಾಯಕ [ಕ್ರಿ.ಶ. 1740-55]

ಭಾಗ ೧

ಚಂ|| ವೃ|| ಮದಮುಖಮುಖ್ಯರಾತನಿಕರಾಧಿಪಚಿಂತನಕಲ್ಲಧೀಶನಾ
ಮೆದಕೆರೆನಾಯಕಂ ಹರಪುರಾಧಿಪನಂ ಮುರಿದೊತ್ತಿ ಸಿಲ್ಪೊಡಾ
ಸ್ಪದಗಳನೀಯದಂತವನ ರಾಜ್ಯವನಾಕ್ರಮಿಸುತ್ತುಮಾಜಿರಂ
ಗದೊಳಿದಿರಾಂತುಪದ್ರವಗಳಂ ರಚಿಸುತ್ತಿರೆ ಶೌರ್ಯದೋಳ್ಗಿಯಿಂ

ಕಂ|| ಮೆದಕೆರೆನಾಯಕನುರವಣೆ
ಗಿದಿರಾಂಪೊಡಶಕ್ಯನಾಗಿ ಹರಪುರದರಸಂ
ಸದಯಬಸಪ್ಪನೃಪಂಗೀ
ಹದನಂ ಬಿನ್ನೈಸಿ ಕಳುಪಿ ಮರೆವುಗಲಾಗಲ್

ವ|| ಇಂತು ಹರಪುರಾಧಿಪನೆನಿಸ ಬಸಂತರಾಯಂ ಮೆದಕೆರೆನಾಯಕನದಟನಾಂಪೊಡಶಕ್ಯನಾಗಿ ನಿಮ್ಮ ಪುತ್ರವರ್ಗದ ಮನೆತನದವರೆನಿಸಿ ವರ್ತಿಸುತ್ತಿರ್ಪೆವು ಸಂಸ್ಥಾನವನುದ್ಧರಿಸವೇಳ್ಕೆಂದು ಲಿಖಿತ ಮುಖದಿಂ ಬಿನ್ನವಿಸಿ ಕಳುಪಲ್ ಕೇಳ್ದು ಸಿದ್ದೋಜಿ

ಯೊಡನನು ಸಂಧಾನಮಂ ರಚಿಸಿ ತತ್ಸೈನ್ಯಮಂ ಬರಿಸಿ ಸುಬೇದಾರ ಲಿಂಗಪ್ಪನೊಡನೆ ಅಸಂಖ್ಯಾತ ಸೇನಾಸಮೂಹಮಂ ತೆರಳ್ಚಿಸಿ ಕಳುಪಿ ತನ್ಮದಕೆರೆನಾಯಕನ ರಾಜ್ಯಮಂ ನಿಪಾತಸಂಗೆಯ್ಸಿದನಂತುಮಲ್ಲದೆಯುಂ

ಕೆ.ನೃ.ವಿ. ಪು. 173.

ಕೆಳದಿ ನೃಪ ವಿಜಯದಲ್ಲಿ ಹನ್ನೊಂದನೇ ಆಶ್ವಾಸವಲ್ಲಿ ಉಲ್ಲೇಖಿಸಿದ ಈ ಅಂಶವು ಕ್ರಿ.ಶ. 1740-55ರವರೆಗೆ ಆಳಿದ ಕಿರಿಯ ಬಸಪ್ಪನಾಯಕನ ಕಾಲದಲ್ಲಿ ನಡೆದ ಸಂಗತಿಯಾಗಿದೆ. ಈ ಕಾಲದಲ್ಲಿ ಎಂದರೆ ಕ್ರಿ.ಶ. 1690-1755ರಲ್ಲಿ ಚಿತ್ರದುರ್ಗದಲ್ಲಿ ರಂಗಪ್ಪನಾಯಕನ ಆಳ್ವಿಕೆ ವ್ಯಕ್ತಪಡುತ್ತದೆ.[13] ಕೆಳದಿ ಬಸಪ್ಪನಾಯಕನು ಹಿರೇ ಮದಕೆರಿನಾಯಕನ ಶತ್ರುರಾಜರಿಗೆ ಆಶ್ರಯದಾತನಾಗಿದ್ದನು. ಹರಪನಹಳ್ಳಿ, ಆನೆಗೊಂದಿ ಮತ್ತು ರಾಯದುರ್ಗದ ಪಾಳೆಯಗಾರರು ಬಸಪ್ಪನಾಯಕನ ಆಶ್ರಯ ಪಡೆದು ಚಿತ್ರದುರ್ಗ ಸಂಸ್ಥಾನಕ್ಕೆ ಸೇರಿದ ರಾಮಗಿರಿ ಕೋಟೆಯನ್ನು ಮುತ್ತಿದರು. ಬಸಪ್ಪನಾಯಕನು ಸೇನಾನಿ ರೋಹಿಲೆ ಲಿಂಗಪ್ಪನನ್ನು ಸಹಾಯಾರ್ಥವಾಗಿ ಕಳುಹಿಸಿದ್ದನು. ಮದಕೆರಿಯು ಇವರೆಲ್ಲರನ್ನೂ ಪರಾಭವಗೊಳಿಸಿ ರಾಮಗಿರಿಯನ್ನು ಪುನರಾಕ್ರಮಿಸಿದನು.

ಚಂ|| ಹೂ|| ಪದುಳಿಸಿ ಮಾಯಕೊಂಡದೆಡೆಯೊಳ್ ಬಹುಸೈನ್ಯಸಮೇತನಾಗುತು
ನ್ಮದದಿಸಿದಿರ್ಚಿ ಮಾರ್ಮಲೆತು . . . . . . ಒಳಪೊಕ್ಕು ಪೊರ್ದದಾ
ಮದಕೆರೆನಾಯಕಾಖ್ಯನೃಪನಂ ರಣದೊಳ್ ವಶಗೆಯ್ದು ಶಿಕ್ಷೆಗೆ
ಯ್ಸಿದ 14 ನಮರಾಳಿ ಮೆಚ್ಚಲದಟಂ ಬಸವೇಂದ್ರಭೂಮಿಪಂ

ವ|| ಇಂತು ಮದಕೆರೆನಾಯಕನಂ ಜಯಿಸಿದ ಮಹೋತ್ಸವಕಾಲದೊಳ್ ನಿಜ ಸೈನ್ಯಸಮೇತನಾಗುತ್ತುಮೆಳ್ತಂದು ಸಂದರ್ಶನಂಗೆಯ್ದ ಹರಪುರದರಸನಂ ಸನ್ಮಾನಿಸಿ ಗಜಾಶ್ವವಸ್ತ್ರಾಭರಣಾದಿಗಳನಿತ್ತು ಬಹಳ ಸಂತೋಷಂಬಡಿಸಿ ಕಳುಪಿ ರಾಜ್ಯಂಗೆಯ್ಯುತ್ತುಮಿರಲೊಂದವಸರದೊಳ್

ಕಂ|| ಮದಕೆರೆನಾಯಕನ ಸುತಂ
ಮದಮುಖ ಕಸ್ತೂರಿರಂಗನಾಯಕನೈತಂ
ದಿದಿರ್ಚಿಸಿ ಸಂತೆಯಬೆನ್ನೂ
ರದುಭುತಮಾಗಿರ್ಪ ಕೋಂಟೆಯಂ ವೇಢೈಸಲ್

ಕದನದೆ ಬಹಿರಾಯತಮೋ
ಹಿದಖಾನವಜೀರನದಟನುರೆ ಮುರಿದೊಡನಾ
ಮದಕೆರೆನಾಯಕಸುತನಂ 15
ಸದೆದೋಡಿಸಿ ಜಯವನಾಂತನಾ ಬಸವನೃಪಂ 16

ಮದಕರಿನಾಯಕನಿಗೂ ಹರಪನಹಳ್ಳಿ, ಸವಣೂರು ಮತ್ತು ಕೆಳದಿ ಅರಸರಿಗೂ ಘರ್ಷಣೆ ನಡೆಯಿತು. ಮರಾಠರ ಮೇಲೂ ಮದಕೆರಿಯು ಯುದ್ಧ ಸಾರಿದನು. ಯೂರೋಪಿನಿಂದ ಭರತ ಖಂಡಕ್ಕೆ ವ್ಯಾಪಾರಕ್ಕಾಗಿ ಆಗಮಿಸಿದ ವಿದೇಶೀಯರು ಈ ರಾಜರುಗಳ ಒಳಜಗಳದಲ್ಲಿ ಕೈಹಾಕುತ್ತಿದ್ದರು. ಮಾಯಕೊಂಡದ ಕಾಳಗದಲ್ಲಿ ಆರ್ಕಾಟಿನ ಉತ್ತರಾಧಿಕಾರಸ್ಥಾನಕ್ಕೆ ವಾರಸುದಾರನಾಗಿದ್ದ ಮಹಮ್ಮದಾಲಿಯ ಪಕ್ಷವನ್ನು ಇಂಗ್ಲೀಷರೂ, ಚಂದಾ ಸಾಹೇಬನ ಪಕ್ಷವನ್ನು ಫ್ರೆಂಚರೂ ವಹಿಸಿದರು. ಸಾತಾರೆಯಲ್ಲಿ ಆಗ ಮರಾಟೆಯವರ ಸೆರೆಯಾಳಾಗಿದ್ದ ಚಂದಾಸಾಹೇಬನು ಬಿಡುಗಡೆ ಹೊಂದಿ ಹಿಂತಿರುಗುತ್ತಿದ್ದನು. ಇವನನ್ನು ಮದಕರಿಯ ಪಕ್ಷವಹಿಸಲು ಕೆಳದಿ ಸೈನಿಕರು ಸೆರೆ ಹಿಡಿದರು. ಚಂದಾ ಸಾಹೇಬನ ಮಗ ರಾಜಾಸಾಹೇಬನು ಮಾಯಕೊಂಡದ ಬಳಿ ಮಡಿದನು.[17]

ಐತಿಹಾಸಿಕ ಮೂಲವೊಂದು ಭರಮಪ್ಪನಾಯಕನ ಕುಮಾರನೇ ಹಿರೀಮದಕೆರಿ ನಾಯಕನೆಂದೂ ಈತನು ಕ್ರಿ.ಶ. 1721ರಲ್ಲಿ ಪಟ್ಟವೇರಿದನೆಂದೂ ಉಲ್ಲೇಖಿಸುತ್ತದೆ. ಈತನ ಸಾವು ತಾ. 24-3-1748ರಲ್ಲಿ ಜರುಗಿತೆಂದು ಇನ್ನಿತರ ಮೂಲಗಳಿಂದ ವ್ಯಕ್ತ ಪಡುತ್ತದೆ. ಚಿತ್ರದುರ್ಗದ ಬಖೈರಿನಲ್ಲಿ ದಿ|| ಹುಲ್ಲೂರು ಶ್ರೀನಿವಾಸಜೋಯಿಸರು ಈತನ ಮರಣಕಾಲವು ತಾ|| 18-2-1749ರಲ್ಲಿ 11 ತಾಸಿನಲ್ಲಿ ಎಂದಿದ್ದಾರೆ.[18] ಕೆಳದಿ ನೃಪವಿಜಯದಲ್ಲಿಯೇ ಉಲ್ಲೇಖಿಸಿದಂತೆ [ಪ. 88 ಪು. 173] ಹರಪನಹಳ್ಳಿಯ ಸೋಮಶೇಖರನಾಯಕನ ದೆಸೆಯಿಂದ ಮದಕೆರೆನಾಯಕನಿಗೆ ಪರಾಭವವುಂಟಾಯಿತು. ಮೈಸೂರು ಪ್ರಾಚ್ಯಸಂಶೋಧನಾ ಇಲಾಖೆಯ 1944ನೇ ಸಾಲಿನ ವರದಿಯಲ್ಲಿ ಪ್ರಸ್ತಾಪಿಸಿದ 49ನೇ ಶಾಸನವು ಈ ನಿಟ್ಟಿನಲ್ಲಿ ಗಮನಾರ್ಹ ಅಂಶವನ್ನು ಹೊರಚೆಲ್ಲುತ್ತದೆ. ವಿಜಯದ ಸಂಕೇತವಾಗಿ ಕೆಳದಿ ಬಸಪ್ಪನು ಕೊಲ್ಲೂರು ಮೂಕಾಂಬಿಕಾ ದೇವಿಗೆ ಬೆಳ್ಳಿಯ ತಟ್ಟೆಯೊಂದನ್ನು ಅರ್ಪಿಸಿರುವುದು ಕಂಡುಬರುತ್ತದೆ.[19] ಕ್ರಿ.ಶ. 1747ರಲ್ಲಿ ಚಿತ್ರದುರ್ಗದವರು ಮರಾಠರ ರಘುಜಿ ಭೋಂಸ್ಲೆ ನೆರವಿನಿಂದ ಕೆಳದಿಯ ವಶವಾಗಿದ್ದ ಸಂತೆಬೆನ್ನೂರನ್ನು ಗೆಲ್ಲಲು ವಿಫಲಯತ್ನ ಮಾಡಿದರು.[20] ಬರ್ಹಾನ್ಸ್‌ರವರ 'ತುಝುಕ್-ಈ-ವಾಲಾಜಾಹಿ'ಯ ಉಲ್ಲೇಖಗಳು ಕೆಳದಿ ಮತ್ತು ಚಿತ್ರದುರ್ಗವನ್ನು ಕುರಿತು ಹಲವಾರು ಸಂಗತಿಗಳನ್ನು ವಿಶದೀಕರಿಸುತ್ತವೆ ಎಂಬುದಾಗಿ ಮದರಾಸಿನ ಡಾ|| ಸ್ವಾಮಿನಾಥನ್ ಹೇಳಿದ್ದಾರೆ. ತಿ. ತಾ. ಶರ್ಮರು ಸಂಪಾದಿಸಿದ 'ಹೈದರ್‌ನಾಮಾ' ದಲ್ಲಿ ಮಾಯಕೊಂಡ ಯುದ್ಧದ ಸಂಗತಿಯೂ ಪ್ರಸ್ತಾಪಿಸಲ್ಪಟ್ಟಿದೆ.[21]

ಕಿರಿಯ ಬಸಪ್ಪನಾಯಕ (ಕ್ರಿ. ಶ. 1740 - 55)

(ಭಾಗ ೨)

ವ|| ಇಂತು ಹೊದಿಗೆರೆ ನಂದಿಗಾವೆ ಮೊರನಂಜಿಯೆಂಬ ಕೋಂಟೆಗಳಂ ಸ್ವಾಧೀನಂಗೆಯ್ದಲೀ ವರ್ತಮಾನಮಂ.[22] ಕೇಳ್ದು ಪುತ್ತೆ ಸಿಂಗನೊಡನನುಸಂಧಾನಮಂ ರಚಿಸಿ

ರಘೋಜಿ ಭೌಸಲ್ಯಾ ಮುಂತಾದ ಪಟು ಪರಾಕ್ರಮಶಾಲಿಗಳಿಂ ಯುಕ್ತಮಾಸಂಖ್ಯಾತ ಸೇನಾ ಸಮೂಹಂ ವೆರಸತ್ಯಂತ ಗರ್ವೋತ್ಪ್ರೇಕದಿಂ ದಾಳಿಯಿಡುತ್ತಂ ತೆರಳ್ದುತ-ಮು ಸಂತೆ ಬೆನ್ನೂರ ಪರಿಸ್ತರಣಂ ವೇಷ್ಟಿಸಿ ತಳಿ ಸುರಂಗಗಳಂ ನಡೆಸುತಿರ್ಪ ತನ್ನಪೆಕೆರೆನಾಯಕನ ಪ್ರತಾಪಾತಿಶಯಮಂ ಮುರಿದು ಮುತ್ತಿಗೆಗೆಸಿ ಪಲಾಯನಂಗೊಳಿಸಿ ದುರ್ಗಮಂ ಪೊಗಿಸಿ ಭುಜಬಲಪರಾಕ್ರಮಾತಿಶಯಮಂ ಮೆರೆದನಂತುಮಲ್ಲದೆಯುಂ.

ಈ ಉಲ್ಲೇಖಗಳೂ ಕಿರಿಯ ಬಸಪ್ಪನಾಯಕನ ಕಾಲದ ಸಂಗತಿಯಾಗಿದ್ದು ಈ ಅರಸನಿಂದ ಮೆದಕೆರೆನಾಯಕನು ಪರಾಭವಗೊಂಡಿರುವುದು ವ್ಯಕ್ತಪಡುತ್ತದೆ.

ಕೆಳದಿ ಸಂಸ್ಥಾನದ ಅಂತ್ಯ

ಅದೇ ಕೆಳದಿ ನೃಪ ವಿಜಯದ – 'ಕ' ಪ್ರತಿಯಲ್ಲಿ ಮಾತ್ರ ಕೆಳಗಿನ ಈ ಅಂಶದ ಉಲ್ಲೇಖವಿದೆ.

ಶಕವರ್ಷ 1685ನೆಯ ಚಿತ್ರಭಾನು ಸಂವತ್ಸರದ ಮಾಘಶುದ್ಧ 9 ವರೆಗೆ ವರ್ಷ 5 ತಿಂಗಳು 5 ದಿನ 19 ಪರಿಯಂತ್ರ ಶಿವಭಕ್ತರ ಸಂಸ್ಥಾನ ಸಮಾಪ್ತಿ ಆ ತರುವಾಯ ಮ್ಲೇಂಚ್ಛರ ಹೈದರನವಾಬು ಶುಭಕೃತು ಸಂವತ್ಸರದ ಫಾಲ್ಗುಣ ಶುದ್ಧ 15 ವರೆಗೆ ವರ್ಷ 20 ತಿಂಗಳು 1 ದಿನ 6 ಪರಿಯಂತ್ರ ಶ್ರೀರಂಗಪಟ್ಟಣದ ರಾಜ ಆಳಿದ ಅನಂತರ ಮೈಸೂರವರಿಗೆ ಸೇರಿತು ಸಮಾಪ್ತ ಮಂಗಳ............

ಹಲವು ಚಾರಿತಿಕ ಸಂಗತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಮದಕರಿನಾಯಕನ ಪರಿಸ್ಥಿತಿ ಮುಂಚಿನಿಂದಲೂ ಶೋಚನೀಯವೆನಿಸಿತ್ತು ಎಂದು ಹೇಳಬಹುದಾಗಿದೆ. ಒಂದೆಡೆ ಮರಾಠರೂ ಇನ್ನೊಂದು ಕಡೆ ಹೈದರಾಲಿಯೂ ಇವನನ್ನು ಧ್ವಂಸ ಮಾಡಲು ಸದಾ ಹೊಂಚು ಕಾಯುತ್ತಿದ್ದರು. ರಾಯದುರ್ಗ ಮತ್ತು ಹರಪನ ಹಳ್ಳಿಯ ಪಾಳೆಯಗಾರರು ಈ ಮೊದಲೇ ಹೈದರಾಲಿಗೆ ಪಾದಾವನತರಾಗಿದ್ದರು. ಕ್ರಿ.ಶ. 1762ರಲ್ಲಿ ಹೈದರಾಲಿಯು ಮದಕರಿನಾಯಕನಿಗೆ ನಿರೂಪ ಕಳುಹಿಸಿ ತನಗೆ ಶರಣಾಗುವಂತೆ ಕೇಳಿದನು.[22] ಮದಕರಿನಾಯಕನಾದರೋ ಮೌನವಾಗಿದ್ದು ಕಾಲವಂಚನೆ ಮಾಡುತ್ತಾ ಬಂದನು. ಕೃದ್ಧನಾದ ಹೈದರಾಲಿಯು ಅಶ್ವಸೈನ್ಯದೊಂದಿಗೆ ಧಾವಿಸಿ ಬಂದು ಈ ನಾಯಕನ ಪ್ರಾಂತಗಳನ್ನು ನೆಲಸಮ ಮಾಡಿದನು. ಗತ್ಯಂತರವಿಲ್ಲದೆ ನಾಯಕನು ಸಂಧಿಗೊಪ್ಪಿ 2 ಲಕ್ಷ ರೂಪಾಯಿ ಪರಿಹಾರ ಧನವನ್ನು ವಾರ್ಷಿಕ ಪೊಗದಿಯನ್ನೂ ಸಲ್ಲಿಸಲು ಒಡಂಬಟ್ಟನು. ಇದೇ ಸಮಯದಲ್ಲಿ ಚೆನ್ನಬಸವಯ್ಯನೆಂಬುವನು ತಾನು ಕೆಳದಿ ರಾಜ್ಯಕ್ಕೆ ಹಕ್ಕುದಾರನೆಂದು ಹೇಳಿಕೊಂಡು ಸಾರುತ್ತಾ ಚಿತ್ರದುರ್ಗದ ನಾಯಕನ ಆಶ್ರಯ ಬೇಡಿದನು. ಸಂಪದೈಶ್ವರ್ಯ ಭರಿತವಾದ ಕೆಳದಿ ರಾಜ್ಯವನ್ನು ಕಬಳಿಸಲು ಏನಾದರೂ ನೆವಸಿಕ್ಕೀತೇ ಎಂದು ಕಾಯುತ್ತಿದ್ದ ಹೈದರಾಲಿಯು ಮದಕರಿನಾಯಕನ ಸಹಾಯದಿಂದ ಇದೇ ಸಮಯವನ್ನು ದುರುಪಯೋಗಪಡಿಸಿಕೊಂಡು ಕ್ರಿ.ಶ. 1763ರಲ್ಲಿ ಕೆಳದಿ ರಾಜ್ಯವನ್ನು ಸೂರೆಗೈದನು. ಹೈದರನು ಮೈಸೂರು ಹಾಗೂ ಚಿತ್ರದುರ್ಗದವರೊಂದಿಗೆ

ಒಟ್ಟಾಗಿ ಸೇರಿಕೊಂಡು ಬಿದನೂರಿನ ಮೇಲೆ ಅಭಿಯೋಗಕ್ಕೆ ಕಳುಹಿಸಿ ಅದನ್ನು ಕುಯುಕ್ತಿಯಿಂದ ಜಯಿಸಿದನು. ಮಾರ್ಗಶಿರ ಮಾಸದಲ್ಲಿ ಮದಕರಿನಾಯಕನು ಹೈದರಾಲಿಯನ್ನು ಭೇಟಿ ಮಾಡಿ ಕೆಳದಿ ಸಂಸ್ಥಾನವನ್ನು ಸಾಧಿಸಿ ಹೈದರಾಲಿಗೆ ವಶಪಡಿಸಿದ್ದರಿಂದ ಇವನ ಶೌರ್ಯಕ್ಕೆ ಮೆಚ್ಚಿದ ಖಾನನು ಈ ನಾಯಕನಿಗೆ ಹೋದಿಗ್ಗೆರೆ, ಸಂತೆಬೆನ್ನೂರುಗಳನ್ನು ಕೊಟ್ಟು, ಒಂದು ಆನೆ, ಕುದುರೆ ಹಾಗೂ ಪಚ್ಚೆ ಹಾಕಿದ ರತ್ನಹಾರಗಳನ್ನು ಉಡುಗೊರೆಯಾಗಿತ್ತನು.[23]

ಉಪಸಂಹಾರ

ಕೆಳದಿ ನೃಪವಿಜಯದಲ್ಲಿ ಕವಿ ಲಿಂಗಣ್ಣನು ಕೆಳದಿಯ ಅಂತ್ಯವನ್ನು ಕುರಿತು ಅಷ್ಟಾಗಿ ಪ್ರಸ್ತಾಪಿಸದಿರುವುದು ಕಂಡು ಬರುತ್ತದೆ. ಹೈದರ್‌ನಾಮಾ ಹಾಗೂ ಹುಲ್ಲೂರು ಶ್ರೀನಿವಾಸಜೋಯ್ಸರ ಸಂಶೋಧನೆಯ ಫಲವಾಗಿ ವಿಶಿಷ್ಟ ಅಂಶಗಳು ಈ ದಿಸೆಯಲ್ಲಿ ಕಂಡುಬಂದಿವೆ. ಕನ್ನಡ ರಾಜರ ಅಂತಃಕಲಹಗಳಿಂದ ಕನ್ನಡ ರಾಜ್ಯವಾದ ಕೆಳದಿಯು ಹೀಗೆ ಪರ್ಯಾವಸಾನ ಹೊಂದಿದುದು ದೌರ್ಭಾಗ್ಯವೇ ಸರಿ !

ಕೆಳದಿ ಹಾಗೂ ಚಿತ್ರದುರ್ಗ ಇತಿಹಾಸದ ತೌಲನಿಕ ಅಧ್ಯಯನದಲ್ಲಿ ಕೇವಲ ಒಂದೆರಡು ದೊರೆಗಳು ಮಾತ್ರ ಕಾದಾಟ ನಡೆಸಿರುವುದು ವ್ಯಕ್ತಪಡುತ್ತದೆ. ಕಿರಿಯ ಸೋಮಶೇಖರನಾಯಕ ಮತ್ತು ಬಸಪ್ಪನಾಯಕನ ಕಾಲಗಳಲ್ಲಿ ಮಾತ್ರ ಲಡಾಯಿ ನಡೆದಿರುವುದು ಸ್ಥಿರಪಡುತ್ತದೆ. ಕೆಳದಿ ಅರಸರು ಮದಕೆರೆನಾಯಕನ ಶತ್ರುಗಳಿಗೆ ಆಶ್ರಯ ನೀಡಿರುವುದು ಚಿತ್ರದುರ್ಗದರಸರಿಗೆ ಕಸಿವಿಸಿಯಾಗಿರಬಹುದು. ಈ ಕಾರಣ ದಿಂದಲೇ ಕೆಳದಿಯನ್ನು ಕಬಳಿಸಲು ಅವರೂ ಯೋಚಿಸಿರಬಹುದು. ಈ ದಿಸೆಯಲ್ಲಿ ಅಧ್ಯಯನ ನಡೆಸಲು ಸಾಕಷ್ಟು ಅವಕಾಶಗಳಿವೆ.[24]

ಕೆಳದಿ ಅರಸರು ದಾವಣಗೆರೆ ಹಾಗೂ ಚಿತ್ರದುರ್ಗ ಮಧ್ಯಭಾಗದಲ್ಲಿರುವ ಹೆಂಪನೂರಿನಲ್ಲಿ ದೇವಾಲಯವೊಂದನ್ನು ನಿರ್ಮಿಸಿರುವುದಾಗಿ ಉಕ್ತವಾಗಿದೆ.

ಮದಕರೆ ನಾಯಕನಿಗೆ ಹೈದರನ ಉಪಟಳವು ಈ ರಾಜ್ಯವು ಪೂರ್ಣ ಕೈ ಸೇರುವ ವರೆಗೂ ಇದ್ದೇ ಇತ್ತೆಂಬುದನ್ನು ಪೇಷ್ವೆ ದಫ್ತರದಲ್ಲಿನ ಚಾರಿತ್ರಿಕ ದಾಖಲೆಗಳು ವ್ಯಕ್ತ ಪಡಿಸುತ್ತವೆ. ಲೇಖನ ವಿಸ್ತಾರ ಭಯದಿಂದ ಅವುಗಳನ್ನು ಇಲ್ಲಿ ನಿರೂಪಿಸುವುದು ಅಸಾಧ್ಯವೆನಿಸಿದೆ. ಕೆಳದಿ ಶಿವಪ್ಪನಾಯಕ ಹಾಗೂ ಚೆನ್ನಮ್ಮಾಜಿಯ ಕಾಲದಲ್ಲಿ ಚಿತ್ರ ದುರ್ಗದ ಬಾಂಧವ್ಯನನ್ನು ಕುರಿತು ಸಾಕಷ್ಟು ಮೂಲ ಸಾಮಗ್ರಿಗಳು ಉಪಲಬ್ಧವಿರು ವಂತೆ ಕಂಡುಬರುವುದಿಲ್ಲ.[25]

ಅನುಬಂಧ

M.A.R. 1944 (Page 172)

49

On a silver plate in the same temple

ವಿಭ | ಸಂ | ಫಾಲ್ಗು | ಶು ೧೩ ಯು ಸ್ಥಿರವಾರ ಮದಕೆರಿಯ ನಂಮ ಫೌಜಿನವರು ಹೊಡದಲ್ಲಿ ಮ್ರುತವಾದ ಸ್ಕ್ರಂ | ಧಲಾದ್ಯಂತರು ಸಜರು ಮಾಡಿದ ಹಣವಿನಿಂದ | ಕೊಲ್ಲೂರಂಮನವರಿಗೆ | ಕೆಳದಿ ವೀರಭದ್ರನಾಯಕರ ಪುತ್ರರು ಬಸವಪ್ಪನಾಯಕರ ಭಕ್ತಿ |

NOTE

This record on a silver plate in the same temple also belongs to the reign of the Keladi Chief Basavappa Nayaka son of Virabhadra Nayaka. It records an important event during Basavappa Nayaka's reign—that he sent an army against Madakeri Nayaka (Palleyagar of Chitardroog.)

ಅಡಿ ಟಿಪ್ಪಣಿಗಳು

1. ಶ್ರೀ ಲಕ್ಷ್ಮಣ್ ತೆಲಗಾವಿಯವರು ಈ ಕುರಿತು ದಿ|| ಹುಲ್ಲೂರು ಶ್ರೀನಿವಾಸ ಜೋಯಿಸರು ದಿ|| ಪುಟ್ಟಣ್ಣನವರಿಗಿಂತಲೂ ಮೊದಲು ಈ ಇತಿಹಾಸ ರಚನೆಗೆ ಕೈಹಾಕಿದವರೆಂಬುದಾಗಿ ಹೇಳಿದ್ದಾರೆ. (ಚಂದ್ರವಳ್ಳಿ–ಪು. ೫೪, ಭಾಗ ೪)
2. ಶ್ರೀ ಎಂ. ಜಿ. ವೆಂಕಟೇಶಯ್ಯನವರ 'ಚಿತ್ರದುರ್ಗದ ಪಾಳೆಯಗಾರರು'– ಇದರಲ್ಲಿ ಕೆಳದಿ ಚೆನ್ನಮ್ಮಾಜಿಯ ಹಾಗೂ ಶಬನಿ ಕೃಷ್ಣಪ್ಪನ ಮುಖಾಂತರ ಚಿತ್ರದುರ್ಗದ ಚಿಕ್ಕಣ್ಣನಾಯಕನ ಸಂಬಂಧವನ್ನು ಬೆಳೆಸಲು ಪ್ರಯತ್ನಿಸಿದುದು ಮುಂತಾದ ಕಥನಗಳಿವೆ.
3. ಪೂನಾ ವಿಶ್ವವಿದ್ಯಾಲಯದ ಡಾ|| ಚಿಟ್ನೀಸ್‌ರವರ ಮಾರ್ಗದರ್ಶನದಲ್ಲಿ ಚಿತ್ರದುರ್ಗ ಪಾಳೆಯಗಾರರನ್ನು ಕುರಿತು ಮಹಾ ಪ್ರಬಂಧವೊಂದು ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಶ್ರೀ ಎಚ್. ಟಿ. ದೇಶಪಾಂಡೆರವರಿಂದ ಕೈಗೊಳ್ಳಲ್ಪಟ್ಟಿವೆಯೆಂದು ತಿಳಿದುಬರುತ್ತದೆ.
4. ದಿ|| ಎಂ. ಎಸ್. ಪುಟ್ಟಣ್ಣನವರ ಚಿತ್ರದುರ್ಗದ ಪಾಳೆಯಗಾರರು ಕೃತಿಯಲ್ಲಿ ಇದರ ಕಾಲಮಾನವು ಕ್ರಿ.ಶ. 1568–1589 ಎಂದಿರುತ್ತವೆ.
5. Vij. Sex. Cent. Com. Vol., 1544–1565
   Karnataka through the ages, 1544–1565
   Robert Sewel, 1560–1576
   Shama Shastry, 1545–1561

'ಕೆಳದಿ ಅರಸರ ಕಾಲ ನಿರ್ಣಯ' ಲೇಖನ ನೋಡಿರಿ, ಕರ್ನಾಟಕ ಭಾರತಿ ಸಂ. ೮. ಸಂ. 2 ಪು. 83, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

6. ಈ ಕಾಲಮಾನದಲ್ಲಿಯೂ ಭಿನ್ನ ಅಭಿಪ್ರಾಯಗಳಿವೆ. Mysore Gezetteer, H. Rao, vol. V, p. 1385. ಚಿತ್ರದುರ್ಗದ ಪಾಳೆಯಗಾರರು, ಗ್ರಂಥದಲ್ಲಿ ಈತನ ಕಾಲವನ್ನು ದಿ|| ಎಂ. ಎಸ್. ಪುಟ್ಟಣ್ಣನವರು ಕ್ರಿ.ಶ. 1593-1652 ಎಂದಿದ್ದಾರೆ.
ಚಿಂತನಕಲ್ಲು=ಚಿತ್ರದುರ್ಗ. (ಇ.ಸಂ.ಚ, ಅದೇ – ಪು. 51). ದಿ|| ಎಂ. ಎಸ್. ಪುಟ್ಟಣ್ಣನವರನ್ನು ಕುರಿತು ಪ್ರೊ|| ಹಾ.ಮಾ. ನಾಯಕರ ಮಾರ್ಗದರ್ಶನದಲ್ಲಿ ಶ್ರೀಮತಿ ಸುಜಾತಾರವರು ಮಹಾಪ್ರಬಂಧವನ್ನು ಸಿದ್ಧಪಡಿಸುತ್ತಿರುವುದಾಗಿ ತಿಳಿದುಬಂದಿದೆ.

7. ಇಲ್ಲಿ ಪ್ರಸ್ತಾಪಿಸಿದ ಬಿದರೂರು ದಳವಾಯಿ ರೋಹಿಲೆಯ ಲಿಂಗಣ್ಣ ಹಾಗೂ ಕೋಹಿಲೆಯ ಸಿದ್ದಪನಿಗೆ ಸಂಬಂಧವನ್ನು ಕಲ್ಪಿಸಬಹುದೇ ? ದಿ| ಹುಲ್ಲೂರು ಶ್ರೀನಿವಾಸಜೋಯ್ಸರ ಐತಿಹಾಸಿಕ ಲೇಖನಗಳು ಪು. 62-63.

8. 'ಕ' ಪ್ರತಿಯಲ್ಲಿ 'ಹೇವಿಳಂಬಿ ಸಂವತ್ಸರದ ಮಾಘ ಮಾಸದಲ್ಲು' ಎಂಬ ಪಾಠಾಂತರವಿದೆ.

9. ಕೆಳದಿ ನೃಪ ವಿಜಯ (ಗದ್ಯಾನುವಾದ), ಕ.ಸಾ.ಪ, 1977, ಪು 311 ಅನುಬಂಧ ನೋಡಿರಿ.

10. ದಿ|| ಹುಲ್ಲೂರು ಶ್ರೀನಿವಾಸಜೋಯಿಸರ ಐತಿಹಾಸಿಕ ಲೇಖನಗಳು ಪು. 52.

11. ಇದರ ಐತಿಹಾಸಿಕ ಸತ್ಯತೆಯ ವಿಮರ್ಶೆ ಅಗತ್ಯ.

12. ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಪು. 30.

13. Hayavadan Rao, Mysore Gezetteer, Vol V, p. 1385. ಈತನು ಕ್ರಿ.ಶ. 1660-1687 ರಲ್ಲಿ ಆಳಿದ ಮದಕೆರಿ ನಾಯಕನ ನಂತರ ಪಟ್ಟವೇರಿದವನು.

14. 'ಗ' ಪ್ರತಿಯಲ್ಲಿ 'ವಿಭವ ಸಂವತ್ಸರದ ಫಾಲ್ಗುಣ ಮಾಸದೊಳ್' ಎಂಬ ಪಾಠಾಂತರವಿದೆ.

15. ಈ ಭಾಗದಲ್ಲಿ 'ಮ' ಪ್ರತಿಯಲ್ಲಿ 'ಶುಕ್ಲ ಸಂವತ್ಸರದ ಜೇಷ್ಟ ಮಾಸದೊಳ್' ಎಂಬ ಪಾಠಾಂತರವಿದೆ.

16. ಚಿತ್ರದುರ್ಗದ ಗೆಜೆಟೀರ್‌ನಲ್ಲಿ ಕಸ್ತೂರಿ ರಂಗಪ್ಪನಾಯಕನ ನಿರ್ದಿಷ್ಟ ಕಾಲವನ್ನು ನಿರ್ದೇಶಿಸಿಲ್ಲವಾದ್ದರಿಂದ ಇದನ್ನು ಇಲ್ಲಿ ವ್ಯಕ್ತಪಡಿಸಿರುವುದು ಅಪ್ರಕೃತವಾಗಲಾರದು.

17. ಮಾಯಕೊಂಡ ಕಾಳಗದಲ್ಲಿ ಮಡಿದ ಕೆಲವು ಕುದುರೆಗಳ ಹಲ್ಲುಗಳು ಚಿತ್ರದುರ್ಗದ ವಸ್ತುಸಂಗ್ರಹಾಲಯದಲ್ಲಿರುವುದಾಗಿ ತಿಳಿದುಬಂದಿದೆ. (ಹು. ಶ್ರೀ. ಜೋ. ಲೇಖನಗಳು – ಪು. 100)
18. ಚಿತ್ರದುರ್ಗದ ಒಪ್ಪೆರು, ಸಂ : ಹು.ಶ್ರೀ.ಜೋ. ಪು. 53, ಚಂದ್ರವಳ್ಳಿ, ಪು. 82.
19. ಅನುಬಂಧ ನೋಡಿರಿ.
20. ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಡಾ|| ಸೂರ್ಯನಾಥ ಕಾಮತ್
21. ಚಾರಿತ್ರಿಕ ದಾಖಲೆಗಳು, ತಿ.ತಾ.ಶರ್ಮ, ಪು. 25, (ಕ.ಸಾ.ಪ. 1971)
22. ಮದಕರಿನಾಯಕ, ಎಚ್. ಎಸ್. ಪಾಂಡುರಂಗಜೋಯಿಸ್, ಚಿತ್ರದುರ್ಗ, ಭಾರತ ಭಾರತಿ ಪುಸ್ತಕ ಸಂಪದ 1973.
23. ಮದಕರಿರಾಜೇಂದ್ರ ದಂಡಕ, ಶ.ಸಂ. 1942, ಹು. ಶ್ರೀ. ಜೋ. ಐತಿಹಾಸಿಕ ಲೇಖನಗಳು, 1976, ಪು. 72.
24. ಅಡಿಟಿಪ್ಪಣಿ 4 ರಲ್ಲಿ ಹೇಳಿರುವುದನ್ನು ಪುನರುಚ್ಚರಿಸಬಹುದಾಗಿದೆ.
25. ಹು.ಶ್ರೀ.ಜೋ. ಐತಿಹಾಸಿಕ ಲೇಖನಗಳು–ಪು. 347. ಬಿದನೂರು ಶಿವಪ್ಪನಾಯಕ (ಪ್ರಜಾವಾಣಿ 1954), ಕನ್ನಡ ನಾಡಿನ ಊರುಗಳು ಪು. 418.

ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರೆದುದು)

31. ರೋಮ್‌ನ ಪ್ರವೇಶ

ಇದುವರೆಗೂ ನಾವು ನೋಡಿದ ಈ ನಾಗರಿಕತೆಗಳ ಬೆಳವಣಿಗೆಗಳಲ್ಲೆಲ್ಲಾ ಒಂದು ಬಗೆಯ ಸಾಮ್ಯವಿರುವುದನ್ನು ಓದುಗರು ಗಮನಿಸಿರಬಹುದು. ಇದು ಸ್ವಲ್ಪ ಆಶ್ಚರ್ಯವನ್ನುಂಟು ಮಾಡುತ್ತದೆ. ಏಕೆಂದರೆ ಇಂಡಿಯದ ವಾಯುವ್ಯ ಸರಹದ್ದಿನ ಪರ್ವತಗಳು25 ಮಧ್ಯ ಏಷ್ಯದ ಪರ್ವತಶ್ರೇಣಿ ಮತ್ತು ಇಂಡಿಯ ಒರ್ಮಗಳ ನಡುವೆ ಇರುವ ಬೆಟ್ಟಗಳನ್ನು ಅಂದಿನ ಕಾಲದಲ್ಲಿ ಸುಲಭವಾಗಿ ದಾಟಲು ಸಾಧ್ಯವಿರಲಿಲ್ಲವಾದುದರಿಂದ ಈ ಎಲ್ಲಾ ದೇಶಗಳ ನಡುವೆ ಅಂತಹ ಸಂಪರ್ಕವೇನೂ ಇರಲಿಲ್ಲ. ಮೊದಲು ಸಾವಿರಾರು ವರ್ಷಕಾಲ ಪ್ರಾಚೀನ ಪ್ರಪಂಚದ ಬೆಚ್ಚನೆಯ ಫಲವತ್ತಾದ ನದಿಕಣಿವೆಗಳಲ್ಲಿ ಹೆಲಿಯೊಲಿಥಿಕ್ ಸಂಸ್ಕೃತಿ ಹರಡಿತು. ದೇವಾಲಯಗಳು, ಅವುಗಳ ಬಲಿಸಂಪ್ರದಾಯಗಳು, ಅವುಗಳನ್ನು ನಡೆಸುತ್ತಿದ್ದ ಅರ್ಚಕ ರಾಜರು [Priest Kings] ಈ ಸಂಸ್ಕೃತಿಯ ಸಾಮಾಜಿಕ ರಚನೆಯ ಮುಖ್ಯ ಅಂಶಗಳು. ಮಾನವವರ್ಗದ ಪ್ರಮುಖ ಕುಲವೆಂದು ಹಿಂದೆ ತಿಳಿಸಿದ ಕಂದುವರ್ಣದ ಜನರು ಇದರ ಮೂಲ ಸ್ಥಾಪಕರಾಗಿದ್ದಿರಬೇಕು. ಬಳಿಕ ವರ್ಷದಲ್ಲಿ ಕೆಲಕಾಲ ಮಾತ್ರ ಸಸ್ಯವರ್ಗ ಬೆಳೆಯುತ್ತಿದ್ದ ಪ್ರದೇಶಗಳಿಂದ ಸಂಚಾರಿ ಜನರು ಬಂದು ಈ ಪ್ರಪ್ರಥಮ ನಾಗರಿಕರೊಡನೆ ಸೇರಿ ಹೋದರು. ಆಗ ಪ್ರಪ್ರಥಮ ನಾಗರಿಕತೆಯ ಲಕ್ಷಣಗಳು ಮುಚ್ಚಿಹೋದುವು. ಎಷ್ಟೋ ವೇಳೆ ಹಿಂದಿನ ಭಾಷೆ ಪೂರ್ತಿ ಮುಳುಗಿ ಹೋಯಿತು. ಹಳೆ ನಾಗರಿಕತೆ ಹಿಂದೆ ಬಿದ್ದಂತೆ ತೋರಿದರೂ ಈ ಮಿಲನದಿಂದ ಅದರ ಕೆಲವು ಅಂಶಗಳಿಗೆ ಮಾತ್ರ ಉತ್ತೇಜನ ದೊರೆಯಿತು. ಹೊಸಜನರಿಗೂ ಈ ಮಿಲನದಿಂದ ಅಭಿವೃದ್ಧಿಯಾಗಲು ಒಂದು ಬಗೆಯ ಪ್ರೋತ್ಸಾಹ ದೊರೆಯಿತು. ಒಟ್ಟಿನಲ್ಲಿ ಇದರ ಪರಿಣಾಮವಾಗಿ ಮೊದಲು ಎಲ್ಲೆಲ್ಲೂ ಒಂದೇ ವಿಧವಾಗಿದ್ದ ಹಳೆನಾಗರಿಕತೆ ಒಂದೊಂದೆಡೆ ಒಂದೊಂದು ರೂಪ ತಳೆಯಿತು. ಮೆಸಪೊಟೇಮಿಯದಲ್ಲಿ ಎಲಾಮೈಟರು ಮತ್ತು ಸೆಮೈಟರು, ಕೊನೆಗೆ ನಾರ್ಡಿಕ್ ಕುಲದ ಮೀಡರು ಪರ್ಷಿಯನ್ನರು, ಈಜಿಯನ್ ಪ್ರದೇಶದಲ್ಲಿ ಗ್ರೀಕರು, ಇಂಡಿಯದಲ್ಲಿ ಆರ್ಯರು ಈ ಹೊಸ ಚೈತನ್ಯವನ್ನು ತಂದಿತ್ತರು.

ಈಜಿಪ್ಟಿನಲ್ಲಿ ಮಾತ್ರ ಮೊದಲೇ ಬಹು ಆಳವಾಗಿ ಬೇರೂರಿದ್ದ ಪುರೋಹಿತ ಪ್ರಧಾನ ನಾಗರಿಕತೆಯುಲ್ಲಿ ಈ ಪ್ರಭಾವ ಅಷ್ಟು ದಟ್ಟವಾಗಿ ಸೇರಿಕೊಳ್ಳಲಿಲ್ಲ. ಚೀನದಲ್ಲಿ ಹೂಣರು ಮೇಲಿಂದ ಮೇಲೆ ದಂಡೆತ್ತಿ ಬಂದು ಅಲ್ಲಿಯ ಮೊದಲ ಜನರೊಡನೆ ಬೆರೆತು ಹೋದರು. ಗ್ರೀಸ್ ಮತ್ತು ಉತ್ತರ ಭಾರತದಲ್ಲಿ ಜನರು ಆರ್ಯನ್ ಪ್ರಭಾವಕ್ಕೊಳಗಾದರು. ಮೆಸಪೊಟೇಮಿಯದಲ್ಲಿ ಮೊದಲು ಸೆಮಿಟಿಕ್ ಬಳಿಕ ಆರ್ಯರ ಪ್ರಭಾವ ಬಂದಿತು. ಚೀನ ಸಂಪೂರ್ಣವಾಗಿ ಮಂಗೋಲ್ ಪ್ರಭಾವಕ್ಕೊಳಪಟ್ಟಿತು. ಹೀಗೆ ದಂಡೆತ್ತಿ ಬಂದ ಸಂಚಾರಿ ಜನರು ಮೊದಮೊದಲು ಇವೆಲ್ಲ ಕಡೆಗಳಲ್ಲೂ ಎಷ್ಟೆಷ್ಟನ್ನೋ ಹಾಳುಮಾಡಿರಬಹುದು; ಆದರೂ ಈ ಪ್ರಾಚೀನ ಸಂಸ್ಕೃತಿಗಳಲ್ಲಿ ತಲತಲಾಂತರಗಳಿಂದ ನಡೆದು ಬಂದಿದ್ದ ಹಳೆಯ ನಂಬಿಕೆಗಳನ್ನು ಬಿಚ್ಚು ಮನಸ್ಸಿನಿಂದ ವಿಮರ್ಶಿಸುವ ಒಂದು ನವೀನ ನೈತಿಕ ವಿವೇಚನೆಯ ಮನೋವೃತ್ತಿಯನ್ನು ಇವರು ತಂದಿತ್ತು ಕತ್ತಲುಗವಿಗಳಾಗಿದ್ದ ದೇವಸ್ಥಾನಗಳಲ್ಲಿ ಸೂರ್ಯರಶ್ಮಿ ಪ್ರವೇಶಿಸುವಂತೆ ಮಾಡಿದರು. ಇವರ ರಾಜರುಗಳೆಂದರೆ ದೇವತಾಂಶಸಂಭೂತರೆನಿಸಿಕೊಳ್ಳುತ್ತಿರಲಿಲ್ಲ, ಅಥವಾ ದೇವರ ಅರ್ಚಕರೂ ಆಗಿರುತ್ತಿರಲಿಲ್ಲ. ತಮ್ಮಲ್ಲಿಯೇ ಶಕ್ತರಾಗಿದ್ದ ಮುಂದಾಳುಗಳಿಗೆ ಇವರು ರಾಜ್ಯಪಟ್ಟ ಕಟ್ಟುತ್ತಿದ್ದರು.

ಕ್ರಿ.ಪೂ. 6ನೆ ಶತಮಾನದನಂತರ ಎಲ್ಲೆಡೆಯಲ್ಲಿಯೂ ಹಳೆಯ ಸಂಪ್ರದಾಯಗಳು ಕುಸಿದುಬಿದ್ದು ನೈತಿಕ ಮತ್ತು ಬೌದ್ಧಿಕ ಅನ್ವೇಷಣೆಯ ಹೊಸ ಚೈತನ್ಯವೊಂದು ಜಾಗೃತಿಗೊಂಡಿದ್ದನ್ನು ನಾವು ನೋಡುತ್ತೇವೆ. ಈ ಚೇತನ ಮುಂದೆ ಎಂದೂ ಸಂಪೂರ್ಣ ಸ್ತಬ್ಧವಾಗಲಿಲ್ಲ. ನೆಮ್ಮದಿಯಿಂದಿರುತ್ತಿದ್ದ ಅಧಿಕಾರಿ ವರ್ಗದವರು ಓದು ಬರಹ ಮತ್ತಿತರ ವಿದ್ಯೆಗಳನ್ನು ಹೆಚ್ಚು ಹೆಚ್ಚಾಗಿ ಕಲಿಯುತ್ತಾ ಹೋದರು. ಇದಕ್ಕೆ ಮುಂಚೆ ಪುರೋಹಿತ ವರ್ಗದವರು ಈ ವಿದ್ಯೆಗಳನ್ನು ಉಳಿದವರು ಯಾರೂ ಕಲಿಯದಂತೆ ರಹಸ್ಯವಾಗಿ ಕಾದಿಡುತ್ತಿದ್ದರು. ರಸ್ತೆಗಳು ಉತ್ತಮಗೊಂಡುದರಿಂದಲೂ ಕುದುರೆ ಸಾಮಾನ್ಯ ಬಳಕೆಗೆ ಬಂದುದರಿಂದಲೂ ಜನ ಹೆಚ್ಚು ಹೆಚ್ಚಾಗಿ ಪ್ರಯಾಣ ಮಾಡಲಾರಂಭಿಸಿದರು. ನಾಣ್ಯ ಚಲಾವಣೆ ಬಂದುದರಿಂದ ವ್ಯಾಪಾರವೂ ಸುಗಮವಾಯಿತು.

ಅತಿಪೂರ್ವ ದಿಕ್ಕಿನ ಚೀನದಿಂದ ಈಗ ನಮ್ಮ ದೃಷ್ಟಿಯನ್ನು ಪಶ್ಚಿಮ ಮೆಡಿಟರೇನಿಯನ್ ಪ್ರದೇಶಕ್ಕೆ ತಿರುಗಿಸೋಣ. ಮಾನವಚರಿತ್ರೆಯಲ್ಲಿ ಮಹೋನ್ನತ ಪಾತ್ರವಹಿಸಿದ ನಗರವೊಂದರ ಉದಯವನ್ನು ಇಲ್ಲಿ ನಾವು ಗಮನಿಸಬೇಕು; ಅದೇ ರೋಮ್.

ಇಲ್ಲಿಯವರೆಗೂ ನಾವು ಇಟಲಿಯ ಬಗೆಗೆ ಹೆಚ್ಚೇನನ್ನೂ ಹೇಳಿಲ್ಲ. ಕ್ರಿ.ಪೂ. 1000 ದವರೆಗೂ ಇದು ಬರಿ ಬೆಟ್ಟಗಾಡಿನ ಪ್ರದೇಶವಾಗಿದ್ದು ಇಲ್ಲಿ ಜನ ದಟ್ಟವಾಗಿ ನೆಲಸಿರಲಿಲ್ಲ. ಆರ್ಯರ ಭಾಷೆಗಳನ್ನಾಡುತ್ತಿದ್ದ ಜನರು ಉತ್ತರದಿಂದ ನುಗ್ಗಿ ಬಂದು ಅಲ್ಲಲ್ಲೇ ಸಣ್ಣ ಪಟ್ಟಣಗಳನ್ನು ಕಟ್ಟಿದ್ದರು. ಅತಿ ದಕ್ಷಿಣದಲ್ಲಿ ಗ್ರೀಕ್ ವಸಾಹತುಗಳಿದ್ದವು. ಪೀಸ್ಟಮ್ (Poestum)ನ ಭವ್ಯ ಅವಶೇಷಗಳನ್ನು ನೋಡಿದರೆ ಈ ಗ್ರೀಕ್ ವಸಾಹತುಗಳ ವೈಭವ ಘನತೆ ಎಷ್ಟಿತ್ತೆಂದು ಈಗಲೂ ಕಾಣಬಹುದು. ಈ ಪರ್ಯಾಯ

ದ್ವೀಪದ ಮಧ್ಯಭಾಗದಲ್ಲಿ ಎಟ್ರುಸ್ಕನ್ನರೆಂಬ ಪ್ರಾಯಶಃ ಈಜಿಯನ್ನರಿಗೆ ಸಂಬಂಧಿಸಿದ ಜನರಿದ್ದರು. ಇವರು ಆರ್ಯರಲ್ಲ. ಪ್ರಪಂಚದಲ್ಲಿ ಉಳಿದೆಲ್ಲ ದೇಶಗಳಲ್ಲೂ ಆರ್ಯರು ಉಳಿದ ಜನರನ್ನು ತಮ್ಮ ಅಧೀನರನ್ನಾಗಿ ಮಾಡಿಕೊಂಡಿದ್ದರೆ ಇಲ್ಲಿ ಮಾತ್ರ ಇದಕ್ಕೆ ಅಪವಾದವಾಗಿ ಎಟ್ರುಸ್ಕನ್ನರು ಆರ್ಯರನ್ನು ತಮ್ಮ ವಶಮಾಡಿಕೊಂಡಿದ್ದರು. ರೋಮ್ ಪಟ್ಟಣ ಚರಿತ್ರೆಯಲ್ಲಿ ಮೊಟ್ಟ ಮೊದಲ ಬಾರಿಗೆ ಟೈಬರ್ ನದಿಯ ಹಾಯ್ಗಡು ವೊಂದರ ಬಳಿ ಇದ್ದ ಪುಟ್ಟನೊಂದು ವಾಣಿಜ್ಯ ಕೇಂದ್ರವಾಗಿ ಕಾಣಿಸಿಕೊಳ್ಳುತ್ತದೆ. ಇಲ್ಲಿ ಲ್ಯಾಟಿನ್ ಭಾಷೆಯನ್ನಾಡುತ್ತಿದ್ದ ಆರ್ಯರ ಜನತೆಯನ್ನು ಎಟ್ರುಸ್ಕನ್ ರಾಜರು ಆಳುತ್ತಿದ್ದರು. ಹಳೆಯ ಆಧಾರಗಳು ರೋಮ್ ಕ್ರಿ.ಪೂ. 753ರಲ್ಲಿ ಸ್ಥಾಪಿತವಾಯಿತೆಂದು ಹೇಳುತ್ತವೆ. ಅಂದರೆ ಫಿನಿಷಿಯನ್ ಪಟ್ಟಣವಾದ ಕಾರ್ಥೇಜ್ ಸ್ಥಾಪನೆಯಾದುದು ಐವತ್ತು ವರ್ಷಗಳನಂತರ, ಮೊದಲ ಒಲಂಪಿಯಡ್ ನಡೆದ ಇಪ್ಪತ್ತು ಮೂರು ವರ್ಷಗಳ ನಂತರ. ಅಂದರೆ ರೋಮನ್ ಫೋರಂ ಇದ್ದಲ್ಲಿ ಇದಕ್ಕಿಂತ ಹಿಂದಿನ ಎಟ್ರುಸ್ಕನ್ ಗೋರಿಗಳನ್ನು ಅಗೆದು ತೆಗೆದಿದ್ದಾರೆ.

ಎಂದೆಂದೂ ಮರೆಯಲಾಗದ ಕ್ರಿ.ಪೂ. ಆರನೆ ಶತಮಾನದಲ್ಲಿ ಎಟ್ರುಸ್ಕನ್ ದೊರೆಗಳು ಪದಚ್ಯುತರಾದರು (ಕ್ರಿ.ಪೂ. 510). ರೋಮ್ ಶ್ರೀಮಂತ ಪ್ರಭುತ್ವ (Aristocracy) ಆಯಿತು. ಅಲ್ಲಿ ಪ್ಲೀಬಿಯನ್ನರೆಂದು ಕರೆಯುತ್ತಿದ್ದ ಕೆಳವರ್ಗದ ಜನರ ಮೇಲೆ ಪಾಟ್ರಿಷಿಯನ್ನರೆಂಬ ಶ್ರೀಮಂತ ವರ್ಗದವರು ಅಧಿಕಾರ ನಡೆಸುತ್ತಿದ್ದರು. ಇಲ್ಲಿಯ ಭಾಷೆ ಲ್ಯಾಟಿನ್ ಎನ್ನುವುದೊಂದನ್ನು ಬಿಟ್ಟರೆ ಈ ದೇಶ ಅನೇಕ ಗ್ರೀಕ್ ಪ್ರಭುತ್ವಗಳಂತೆಯೇ ಇತ್ತು.

ಸ್ವಾತಂತ್ರ್ಯ ಮತ್ತು ರಾಜ್ಯಭಾರದಲ್ಲಿ ಹಕ್ಕುಗಳನ್ನು ದೊರಕಿಸಿಕೊಳ್ಳುವುದಕ್ಕಾಗಿ ಪ್ಲೀಬಿಯನ್ನರು ದೀರ್ಘಕಾಲ ಆಗ್ರಹದಿಂದ ಸೆಣಸಿದರು. ಈ ಕಲಹ ಹಲವು ಶತಮಾನಗಳು ನಡೆಯಿತು. ಗ್ರೀಸಿನಲ್ಲೂ ಇಂತಹ ಒಳಕೋಟಿಗಳು ನಡೆದುದನ್ನು ನಾವು ಕಾಣಬಹುದು. ಗ್ರೀಕರು ಇದಕ್ಕೆ ಶ್ರೀಮಂತ ಪ್ರಭುತ್ವ (Aristocracy), ಪ್ರಜಾಪ್ರಭುತ್ವ (Democracy) ಗಳ ಕಲಹವೆನ್ನುತ್ತಿದ್ದರು. ಕಡೆಗೆ ಹಳೆಯ ಶ್ರೀಮಂತ ವಂಶಗಳವರು ಕಲ್ಪಿಸಿದ್ದ ಪ್ರತಿಬಂಧಕಗಳನ್ನು ಮುರಿದು ಅವರೊಡನೆ ಸರಿಸಮಾನರಂತೆ ಕಾರ್ಯ ನಡೆಸುವ ಸ್ಥಾನವನ್ನು ಪ್ಲೀಬಿಯನ್ನರು ಗಳಿಸಿದರು. ಹೀಗೆ ಪ್ರತ್ಯೇಕ ಮನೋಭಾವ ಅಳಿದ ಬಳಿಕ ಹೆಚ್ಚು ಹೆಚ್ಚಾಗಿ ಹೊರಗಿನ ಜನರಿಗೂ "ಪೌರತ್ವ" (Cityzenship) ವನ್ನು ಕೊಡಲು ಸಾಧ್ಯವಾಯಿತು. ಹೀಗೆ ಒಳಜಗಳ ನಡೆಯುತ್ತಿದ್ದ ಸಮಯದಲ್ಲಿಯೇ ಹೊರ ನಾಡುಗಳಲ್ಲಿಯೂ ರೋಮ್ ತನ್ನ ಪ್ರಾಬಲ್ಯವನ್ನು ವಿಸ್ತರಿಸಲು ಯತ್ನಿಸುತ್ತಿತ್ತು.

ಕ್ರಿ. ಪೂ. 5ನೆಯ ಶತಮಾನದಲ್ಲಿ ರೋಮನ್ ಪ್ರಭುತ್ವ ಹೊರಗೆ ಹರಡಲು ಮೊದಲಾಯಿತು. ಅದುವರೆಗೂ ರೋಮನ್ನರಿಗೆ ಎಟ್ರುಸ್ಕನ್ನರಿಗೆ ಯುದ್ಧ ನಡೆಯುತ್ತಿತ್ತು. ಸಾಮಾನ್ಯವಾಗಿ ಈ ಯುದ್ಧಗಳಲ್ಲೆಲ್ಲಾ ರೋಮನ್ನರಿಗೇನೂ ಜಯ ದೊರೆಯುತ್ತಿರ ಲಿಲ್ಲ. ರೋಮ್‌ನಿಂದ ಕೆಲವೇ ಮೈಲಿ ದೂರದಲ್ಲಿ ವೇಯಿ [Veei] ಎಂಬ ಎಟ್ರುಸ್ಕನ್

ದುರ್ಗವಿತ್ತಿತು. ಅದನ್ನು ಸ್ವಾಧೀನಪಡಿಸಿಕೊಳ್ಳಲು ರೋಮನ್ನರಿಗೆ ಬಹುಕಾಲ ಸಾಧ್ಯವಾಗಿರಲಿಲ್ಲ. ಕಡೆಗೆ ಕ್ರಿ.ಪೂ, 474ರಲ್ಲಿ ಎಟ್ರುಸ್ಕನ್ನರಿಗೆ ದುರ್ದೆಶೆ ಬಂದಿತು. ಸಿಸಿಲಿಯ ಸೈರಕ್ಯೂಸಿನಲ್ಲಿ ಅವರ ನೌಕಾಪಡೆಯನ್ನು ಗ್ರೀಕರು ನಾಶ ಮಾಡಿದರು. ಅದೇ ಸಮಯದಲ್ಲಿ ಉತ್ತರ ದಿಕ್ಕಿನಿಂದ ಗಾಲರೆಂಬ ನಾರ್ಡಿಕ್ ಧಾಳಿಕಾರರು ಅವರ ಮೇಲೆ ದಂಡೆತ್ತಿ ಬಂದರು. ಗಾಲರು ಮತ್ತು ರೋಮನ್ನರ ನಡುವೆ ಸಿಕ್ಕಿ ಬಿದ್ದು ಎಟ್ರುಸ್ಕನ್ನರು ನಿರ್ನಾಮವಾಗಿ ಹೋದರು. ಮುಂದೆಂದೂ ಚರಿತ್ರೆಯಲ್ಲಿ ಅವರ ಹೆಸರು ಕೇಳಬರುವುದಿಲ್ಲ. ವೆಯಿ (Veei) ರೋಮನ್ನರ ವಶವಾಯಿತು. ಕ್ರಿ.ಪೂ. 390 ರಲ್ಲಿ ಗಾಲರು ರೋಮಿನವರೆಗೆ ಬಂದು ರೋಮ್ ನಗರವನ್ನು ಕೊಳ್ಳೆ ಹೊಡೆದರು. ಆದರೂ "ಕ್ಯಾಪಿಟಲ್" ಅನ್ನು ಹಿಡಿಯಲು ಅವರಿಂದ ಆಗಲಿಲ್ಲ. ಒಂದು ರಾತ್ರಿ ಹಠಾತ್ತನೆ ರೋಮನ್ನರ ಮೇಲೆ ಬೀಳಬೇಕೆಂದು ಮಾಡಿದ ಪ್ರಯತ್ನ ಬಾತುಕೋಳಿಗಳು ಕೂಗಿಕೊಂಡಿದ್ದರಿಂದ ಬಯಲಾಗಿ ಹೋಯಿತು. ಧಾಳಿಕಾರರಿಗೆ ಹಣ ಕೊಟ್ಟು ರೋಮನ್ನರು ಪಟ್ಟಣವನ್ನುಳಿಸಿಕೊಂಡರು. ಗಾಲರು ಉತ್ತರ ಇಟಲಿಗೆ ಹಿಂತೆರಳಿದರು.

ಗಾಲರ ಧಾಳಿಯಿಂದ ರೋಮ್ ನಿರ್ಬಲವಾಗುವುದರ ಬದಲು ಮತ್ತೂ ಬಲಗೊಂಡಿತು. ಎಟ್ರುಸ್ಕನ್ನರನ್ನು ಸೋಲಿಸಿದ ಮೇಲೆ ರೋಂ ಪ್ರಭುತ್ವ ಆರ್ನೊಯಿಂದ ನೇಪಲ್ಸಿನವರೆಗೂ ಇಟಲಿಯುದ್ದಕ್ಕೂ ಹರಡಿತು. ಇಷ್ಟೆಲ್ಲಾ ನಡೆಯುತ್ತಿದ್ದಾಗಲೇ ಗ್ರೀಸ್ ಮ್ಯಾಸಿಡೋನಿಯಗಳಲ್ಲಿ ಫಿಲಿಪ್ ತನ್ನ ಪ್ರಾಬಲ್ಯವನ್ನು ಬೆಳೆಸಿದ್ದು, ಅಲೆಕ್ಸಾಂಡರ್ ತನ್ನ ಅದ್ಭುತ ದಂಡಯಾತ್ರೆ ನಡೆಸಿದ್ದು. ಅಲೆಕ್ಸಾಂಡರನ ಚಕ್ರಾಧಿಪತ್ಯ ಒಡೆದು ಹೋಗುವ ಹೊತ್ತಿಗಾಗಲೇ ರೋಮನ್ನರು ಪೂರ್ವದಿಕ್ಕಿನ ನಾಗರಿಕ ದೇಶಗಳಲ್ಲಿ ಹೆಸರು ಪಡೆದಿದ್ದರು.

ರೋಮ್ ಪ್ರಭುತ್ವದ ಉತ್ತರ ದಿಕ್ಕಿನಲ್ಲಿ ಗಾಲರಿದ್ದರು. ದಕ್ಷಿಣಕ್ಕೆ ಸಿಸಿಲಿಯಲ್ಲಿ ಮತ್ತು ಇಟಲಿ ಪರ್ಯಾಯ ದ್ವೀಪದ "ಹಿಮ್ಮಡಿ ಮತ್ತು ಕಾಲ್ಬೆರಳು"ಗಳ ಪ್ರದೇಶದಲ್ಲಿ (heel & toe of Italy) ವಿಶಾಲ ಗ್ರೀಸಿನ ವಸಾಹತುಗಳಿದ್ದುವು. ಗಾಲ್ ಜನರು ಬಲಿಷ್ಠರೂ ಯುದ್ಧಪ್ರಿಯರೂ ಆಗಿದ್ದುದರಿಂದ ರೋಮನ್ನರು ಉತ್ತರದ ಗಡಿಯನ್ನು ಕೋಟೆ ಕೊತ್ತಳಗಳನ್ನು ಕಟ್ಟಿಕೊಂಡು ಕಾಯ್ದುಕೊಂಡಿದ್ದರು. ಅದೇ ದಕ್ಷಿಣದ ಗ್ರೀಕ್ ಪಟ್ಟಣಗಳು (ಟಾರೆಂಟಮ್ ಅಂದರೆ ಟಾರಾಂಟೊ–Taranto–ಇವುಗಳಲ್ಲೆಲ್ಲಾ ಮುಖ್ಯವಾದುದು) ರೋಮನ್ನರನ್ನು ಕಂಡರೆ ಭಯಪಡುತ್ತಿದ್ದುವು ಮತ್ತು ಇವರನ್ನೆದುರಿಸಲು ಸಹಾಯ ಹುಡುಕುತ್ತಿದ್ದುವು.

ಅಲೆಕ್ಸಾಂಡರನ ಸಾಮ್ರಾಜ್ಯ ಒಡೆದು ಹೋದ ಮೇಲೆ ಆತನ ಸೇನಾಪತಿಗಳು ಮತ್ತು ಸಹಾಯಕರು ಅದನ್ನು ತಮ್ಮ ತಮ್ಮಲ್ಲೇ ಹಂಚಿಕೊಂಡದ್ದನ್ನು ಆಗಲೇ ನೋಡಿದೆವು. ಇವರಲ್ಲಿ ಅಲೆಕ್ಸಾಂಡರನ ನೆಂಟನಾದ ಪೈರಸ್ (Pyrrhus) ಎಂಬಾತನು ಎಪಿರಸ್ ಎಂಬಲ್ಲಿ ಬಂದು ನೆಲಸಿದನು. ಎಪಿರಸ್ ಇಟಲಿಯ ಹಿಮ್ಮಡಿಯ ಎದುರಿಗೆ ಏಡ್ರಿಯಾಟಿಕ್ ಸಮುದ್ರದ ಆಚೆ ಇದೆ. ಫಿಲಿಪ್ ಹಳೆಯ ಗ್ರೀಸ್‌ನಲ್ಲಿ ಮಾಡಿದಂತೆ

ತಾನು ಸಹ ವಿಶಾಲ ಗ್ರೀಸಿನಲ್ಲಿ ಟಾರೆಂಟಮ್, ಸೈರಕ್ಯೂಸ್ ಮತ್ತು ಅಲ್ಲಿಯ ಉಳಿದ ಪ್ರದೇಶಗಳನ್ನು ವಶಪಡಿಸಿಕೊಂಡು ಅಲ್ಲಿಯ ಅಧಿಪತಿಯಾಗಬೇಕೆಂದು ಈತನ ಮಹದಾಕಾಂಕ್ಷೆಯಾಗಿತ್ತು. ಅಂದಿನ ಕಾಲಕ್ಕೆ ಅತಿ ಉತ್ತಮವೆನಿಸಿಕೊಳ್ಳುತ್ತಿದ್ದ ಸೈನ್ಯ ಈತನ ಬಳಿ ಇದ್ದಿತು. ಉತ್ತಮವಾದ ಪದಾತಿದಳ, ಥೆಸಲಿಯ ಅಶ್ವದಳ – ಇದು ಮೂಲ ಮೆಸಿಡೋನಿಯನ್ ಅಶ್ವದಳದಷ್ಟೇ ಚೆನ್ನಾಗಿತ್ತು ಮತ್ತು ಯುದ್ಧ ಶಿಕ್ಷಣ ಪಡೆದ ಇಪ್ಪತ್ತು ಆನೆಗಳು ಈತನ ಬಳಿ ಇದ್ದುವು. ಇಟಲಿಯ ಮೇಲೆ ದಂಡೆತ್ತಿ ಹೋಗಿ ಈತನು ಹೆರಾಕ್ಲಿಯದಲ್ಲಿ (ಕ್ರಿ. ಪೂ. 280) ಮತ್ತು ಆಸ್ಕುಲಮ್‌ನಲ್ಲಿ [ಕ್ರಿ. ಪೂ. 279] ರೋಮನ್ನರನ್ನು ಪೂರ್ತಿ ಸೋಲಿಸಿ ಉತ್ತರ ದಿಕ್ಕಿಗೆ ಓಡಿಸಿ ಬಳಿಕ ಸಿಸಿಲಿಯನ್ನು ವಶಪಡಿಸಿಕೊಳ್ಳಲು ಹೊರಟನು.

ಆದರೆ ಈಗ ಅಂದಿನ ರೋಮನ್ನರಿಗಿಂತ ಬಹು ಪ್ರಬಲವಾದ ಶತ್ರುಗಳನ್ನು ಫೀನಿಷಿಯನ್ ವ್ಯಾಪಾರ ಕೇಂದ್ರವಾದ ಕಾರ್ಥೇಜಿನಲ್ಲಿ ಈತನು ಎದುರಿಸಬೇಕಾಯಿತು. ಕಾರ್ಥೇಜ್ ಅಂದಿನ ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಪಟ್ಟಣವಾಗಿತ್ತು. ಸಿಸಿಲಿ ಅಲ್ಲಿಗೆ ಬಹು ಹತ್ತಿರವಲ್ಲಿದ್ದುದರಿಂದ ಅಲ್ಲಿಯವರಿಗೆ ಈ ನೂತನ ಅಲೆಕ್ಸಾಂಡರ್ ಅದನ್ನು ವಶಮಾಡಿಕೊಳ್ಳುವುದು ಬೇಡವಾಯಿತು. ಅದೇ ಐವತ್ತು ವರ್ಷಗಳ ಹಿಂದೆ ತನ್ನ ನೆರೆಯದ್ದೇ ಆಗಿದ್ದ ಟೈರ್ ಪಟ್ಟಣಕ್ಕೇನಾಯಿತೆಂದು ಅವರಿಗೆ ಇನ್ನೂ ನೆನಪಿತ್ತು. ಆದುದರಿಂದ ಇವರು ರೋಮಿಗೆ ತನ್ನ ನೌಕೆಗಳನ್ನು ಕಳುಹಿಸಿ ರೋಮನ್ನರನ್ನು ಹೆದರಿಸಿಯೋ, ಹುರಿದುಂಬಿಸಿಯೋ, ಅಂತೂ ರೋಮ್ ಪೈರಸ್‌ನಿಗೆ ಸಮುದ್ರ ಮಾರ್ಗವಾಗಿ ಏನೂ ಸಹಾಯ ನೀಡದಂತೆ ಮಾಡಿದರು. ಪೈರಸ್ ತಿರುಗಿ ಹೊಸದಾಗಿ ರೋಮನ್ನರನ್ನೆದುರಿಸ ಬೇಕಾಯಿತು. ನೇಪಲ್ಸ್ ಮತ್ತು ರೋಮಿನ ನಡುವೆ ಬೆನ್ವೆಂಟಮ್ [Benventum] ಎಂಬಲ್ಲಿ ರೋಮನ್ ಪಾಳೆಯದ ಮೇಲೆ ಧಾಳಿ ಮಾಡಿದಾಗ ಈತನಿಗೆ ಭಾರಿ ಸೋಲಾಗಿ ಹಿಮ್ಮೆಟ್ಟ ಬೇಕಾಯಿತು.

ಇದ್ದಕ್ಕಿದ್ದಂತೆ ಎಪಿರಸ್ಸಿನಿಂದ ಕೆಟ್ಟಸುದ್ದಿ ಬಂತು. ಗಾಲರು ಅಲ್ಲಿ ದಂಡೆತ್ತಿ ಬಂದಿದ್ದರು. ರೋಮನ್ನರು ತಮ್ಮ ಉತ್ತರದ ಗಡಿಯನ್ನು ಎಚ್ಚರಿಕೆಯಿಂದ ಕಾಯ್ದುಕೊಂಡಿದ್ದರಿಂದ ಈ ಬಾರಿ ಅವರು ಇಟಲಿಯ ಮೇಲೆ ಧಾಳಿ ಮಾಡುವಂತಿರಲಿಲ್ಲ. ಈಗ ಸರ್ಬಿಯ ಮತ್ತು ಅಲ್ಬೇನಿಯ ಎಂದು ಕರೆಯುವ ಪ್ರದೇಶ [ಇದಕ್ಕೆ ಆಗ ಇಲ್ಲಿರಿಯ– Illyria– ಎನ್ನುತ್ತಿದ್ದರು]ದ ಮೂಲಕ ಎಪಿರಸ್ ಮತ್ತು ಮೆಸಿಡೋನಿಯ ಕಡೆ ಅವರು ಹೊರಟಿದ್ದರು. ಈಗ ಪೈರಸ್ಸಿಗೆ ರೋಮನ್ನರಿಂದ ಬಲವಾದ ಪೆಟ್ಟು ಬಿದ್ದಿತ್ತು. ಸಮುದ್ರದಲ್ಲಿ ಕಾರ್ಥೇಜಿನವರಿಂದ ಅಪಾಯವಾಗುವಂತಿತ್ತು. ಗಾಲರು ಸ್ವದೇಶವನ್ನು ಮುತ್ತಲಿದ್ದರು. ಕ್ರಿ. ಪೂ. 275ರಲ್ಲಿ ಪೈರಸ್ ತನ್ನ ಕನಸನ್ನು ಕೈ ಬಿಟ್ಟು ಸ್ವದೇಶಕ್ಕೆ ಹಿಂತಿರುಗಿದನು. ರೋಮಿನ ಅಧಿಕಾರ ಮೆಸ್ಸೀನಾ ಜಲಸಂಧಿಯವರೆಗೆ ಹರಡಿತು.

ಈ ಜಲಸಂಧಿಯ ಸಿಸಿಲಿ ತೀರದಲ್ಲಿ ಗ್ರೀಕ್ ಪಟ್ಟಣವಾದ ಮೆಸ್ಸೀನಾ ಇತ್ತು. ಕೆಲವು ಕಾಲದ ನಂತರ ಇದು ಕಡಲುಗಳ್ಳರ ತಂಡವೊಂದರ ವಶವಾಯಿತು. ಅನ್ನು

ಹೊತ್ತಿಗಾಗಲೇ ಸಿಸಿಲಿಯ ಮೇಲೆ ಅಧಿಕಾರ ನಡೆಸುತ್ತಾ ಸೈರಕ್ಯೂಸಿನವರೊಡನೆ ಮಿತ್ರರಾಗಿದ್ದ ಕಾರ್ಥೇಜಿನವರು ಕ್ರಿ. ಪೂ. 270ರಲ್ಲಿ ಈ ಕಳ್ಳರನ್ನು ಹತ್ತಿಕ್ಕಿ ಮೆಸ್ಸೀನಾದಲ್ಲಿ ತಮ್ಮ ಸೈನ್ಯದ ಠಾಣ್ಯವನ್ನಿಟ್ಟರು. ಸೋತು ಹೋದ ಕಡಲುಗಳ್ಳರು ರೋಮನ್ನರಿಗೆ ಈ ವಿಷಯ ಹೇಳಿಕೊಂಡರು. ರೋಮನ್ನರು ಅವರಿಗೆ ಸಹಾಯ ಮಾಡಲು ಒಪ್ಪಿಕೊಂಡರು. ಹೀಗೆ ಮೆಸ್ಸೀನಾ ಜಲಸಂಧಿಯ ಎರಡು ಪಾರ್ಶ್ವಗಳಲ್ಲಿ ಒಂದು ಕಡೆ ವ್ಯಾಪಾರವನ್ನೇ ಮುಖ್ಯವಾಗುಳ್ಳ ಕಾರ್ಥೇಜಿನವರು, ಮತ್ತೊಂದು ಕಡೆ ಆಕ್ರಮಣಕಾರಿ ಪ್ರವೃತ್ತಿಯ ಹೊಸದಾಗಿ ತಲೆಯೆತ್ತಿದ್ದ ರೋಮನ್ನರು ಪರಸ್ಪರ ಶತ್ರುಗಳಾಗಿ ನಿಂತರು.

32. ರೋಮ್ ಮತ್ತು ಕಾರ್ಥೇಜ್.

ಕ್ರಿ. ಪೂ. 264ರಲ್ಲಿ ರೋಮ್ ಮತ್ತು ಕಾರ್ಥೇಜುಗಳ ನಡುವೆ ಭಾರೀ ಹೋರಾಟ ಮೊದಲಾಯಿತು. ಹೀಗೆ ನಡೆದ ಯುದ್ಧಗಳಿಗೆ ಪ್ಯೂನಿಕ್ ಯುದ್ಧಗಳೆನ್ನುತ್ತಾರೆ. ಅದೇ ವರ್ಷ ಬಿಹಾರಿನಲ್ಲಿ ಅಶೋಕಚಕ್ರವರ್ತಿ ಪಟ್ಟಕ್ಕೆ ಬಂದಿದ್ದನು. ಷಿ – ಹ್ವಾಂಗ್‌ಬಿ ಇನ್ನೂ ಚಿಕ್ಕ ಹುಡುಗನಾಗಿದ್ದನು. ಅಲೆಕ್ಸಾಂಡ್ರಿಯದ ಮ್ಯೂಸಿಯಂ ಇನ್ನೂ ವಿಜ್ಞಾನ ಕಾರ್ಯವನ್ನು ನಡೆಸುತ್ತಿತ್ತು. ಅನಾಗರಿಕರಾದ ಗಾಲರು ಏಷ್ಯಾ ಮೈನರಿನ ಪರ್ಗಾಮಮಿನಿಂದ ಕಪ್ಪವನ್ನು ವಸೂಲು ಮಾಡುತ್ತಿದ್ದರು. ಪ್ರಪಂಚದ ವಿವಿಧ ಪ್ರದೇಶಗಳ ನಡುವೆ ಇನ್ನೂ ಅಂತಹ ಸಂಪರ್ಕವೇರ್ಪಟ್ಟಿರಲಿಲ್ಲ. ಸೆಮಿಟಿಕ್ ಜನರ ಕಟ್ಟಕಡೆಯ ಭದ್ರನೆಲೆಯಾಗಿದ್ದ ಕಾರ್ಥೇಜಿಗೂ, ಹೊಸ ಆರ್ಯರ ಪ್ರಭುತ್ವವಾಗಿದ್ದ ರೋಮಿಗೂ ಸ್ಪೇನ್, ಇಟಲಿ ಉತ್ತರಆಫ್ರಿಕಾ ಮತ್ತು ಪಶ್ಚಿಮ ಮೆಡಿಟರೇನಿಯನ್ ಪ್ರದೇಶಗಳಲ್ಲಿ ನೂರಐವತ್ತು ವರ್ಷಗಳು ನಡೆದ ಈ ಸಾವು ಬದುಕಿನ ಹೋರಾಟದ ಬಗೆಗೆ ಇನ್ನುಳಿದ ಪ್ರದೇಶಗಳಲ್ಲಿ ಬಹುಶಃ ಅಸ್ಪಷ್ಟವಾದ ಗಾಳಿಸುದ್ಧಿ ಹರಡಿದ್ದಿರಬಹುದಷ್ಟೇ ಹೊರತು ಹೆಚ್ಚೇನೂ ತಿಳಿದಂತೆ ಕಾಣುವುದಿಲ್ಲ.

ಆದರೆ ಈ ಸೆಣಸಾಟದ ಕುರುಹುಗಳು ಇನ್ನೂ ಈವರೆಗೂ ಪ್ರಪಂಚವನ್ನು ಕಲಕುತ್ತಿವೆ. ರೋಮ್ ಕಾರ್ಥೇಜನ್ನು ಪೂರ್ಣವಾಗಿ ಪರಾಜಯಗೊಳಿಸಿತು, ನಿಜ ಆದರೆ ಆರ್ಯನ್–ಸೆಮೈಟ್ ಎಂಬ ಈ ಪ್ರತಿಸ್ಪರ್ಧೆ ಇನ್ನೂ ಮುಂದೆ 'ಜೆಂಟೈಲ್–ಜ್ಯೂ' ಎಂದು ನಡೆದುಕೊಂಡೇ ಬಂದಿತು. ಈಗ ನಾವು ನೋಡಲಿರುವ ಚಾರಿತ್ರಿಕ ಘಟನೆಗಳ ಪರಿಣಾಮವಾದ ಅನೇಕ ವಕ್ರಮನೋಭಾವಗಳು ಇನ್ನೂ ಜೀವಂತವಾಗಿದ್ದುಕೊಂಡು ಇಂದಿನ ಪ್ರಪಂಚದ ಹೋರಾಟ ವಿವಾದಗಳ ಮೇಲೆ ಪ್ರಭಾವ ಬೀರುತ್ತಾ ಅವುಗಳನ್ನು ಮತ್ತೂ ತೊಡಕು ಮಾಡುತ್ತಿವೆ.

ಕ್ರಿ.ಪೂ. 264ರಲ್ಲಿ ಮೆಸ್ಸೀನಾದ ಕಡಲುಗಳ್ಳರ ಸಂಬಂಧವಾಗಿ ಮೊದಲನೆ ಪ್ಯೂನಿಕ್ ಯುದ್ಧ ನಡೆಯಿತು. ಮುಂದೆ ಈ ಹೋರಾಟ ಸಿಸಿಲಿಯಲ್ಲಿ ಸೈರಕ್ಯೂಸಿನ ಗ್ರೀಕ್ ದೊರೆಯ ಅಧೀನವಲ್ಲಿದ್ದ ಪ್ರದೇಶವನ್ನುಳಿದು ಮಿಕ್ಕ ಪ್ರದೇಶದ ಸಲುವಾಗಿ ನಡೆಯುತ್ತಾ ಹೋಯಿತು. ಮೊದಲು ಸಮುದ್ರದ ಹತೋಟಿ ಕಾರ್ಥೇಜಿನವರ ಕೈಯಲ್ಲಿದ್ದು ಅವರಿಗೆ

ಅನುಕೂಲವಾಗಿತ್ತು. ಅದುವರೆಗೂ ಯಾರೂ ನೋಡಿರದಷ್ಟು ದೊಡ್ಡದಾದ ಯುದ್ಧದ ಹಡಗುಗಳು ಅವರ ಬಳಿ ಇದ್ದುವು. ಕ್ವಿನ್ ಕ್ವಿರಿಮ್‌ಗಳೆಂದು (quin quirim) ಕರೆಯುತ್ತಿದ್ದ ಈ ಗ್ಯಾಲಿ ಹಡಗುಗಳಲ್ಲಿ ಐದು ಸಾಲು ಹುಟ್ಟು ಹಾಕುವಂತಿದ್ದು ಶತ್ರು ಹಡಗುಗಳನ್ನು ತಿವಿಯುವಂತಹ ಭಾರೀ ಮೂತಿ ಇರುತ್ತಿತ್ತು. .ಇದಕ್ಕೆ ಎರಡು ಶತಮಾನ ಗಳ ಹಿಂದೆ ಸಲಾಮಿಸ್ ಕದನದಲ್ಲಿ ಭಾಗವಹಿಸಿದ ಟ್ರೈರೀಮ್ (trireme) ಗಳೆಂಬ ಹಡಗುಗಳಲ್ಲಿ ಬರಿಯ ಮೂರು ಸಾಲು ಹುಟ್ಟು ಹಾಕಲು ಏರ್ಪಾಟಿರುತ್ತಿತ್ತಷ್ಟೆ. ಆದರೆ ರೋಮನ್ನರು ಮುಂಚೆ ತಮಗೆ ನೌಕಾಯಾನದ ಅನುಭವವಿಲ್ಲದಿದ್ದರೂ ಬಹು ಶ್ರಮವಹಿಸಿ ಕಾರ್ಥೇಜಿನವರನ್ನು ಹೇಗಾದರೂ ಮೀರಿಸಬೇಕೆಂದು ಮನಸ್ಸುಮಾಡಿದರು. ತಮ್ಮ ಹೊಸ ನೌಕಾ ಬಲದಲ್ಲಿ ಗ್ರೀಕ್ ನಾವಿಕರನ್ನು ನೇಮಿಸಿಕೊಂಡರು. ಕಾರ್ಥೇಜಿ ನವರು ನೌಕೆಗಳನ್ನು ನಡೆಸುವುದರಲ್ಲಿ ಬಹುಚತುರರಾಗಿದ್ದರು. ಇದಕ್ಕೆ ಪ್ರತಿಯಾಗಿ ರೋಮನ್ನರು ತಮ್ಮದೇ ಹೊಸ ಮಾದರಿಯ ಏರ್ಪಾಟು ಮಾಡಿಕೊಂಡರು. ರೋಮನ್ ಹಡಗುಗಳನ್ನು ತಿವಿದು, ಒಡೆದು ಅದರ ಹುಟ್ಟುಗಳನ್ನು ಕತ್ತರಿಸಲು ಕಾರ್ಥೇಜಿನ ಹಡಗು ಸಮೀಪಕ್ಕೆ ಬಂದೊಡನೆಯೇ ರೋಮನ್ನರು ಭಾರಿ ಭಾರಿ ಕಬ್ಬಿಣದ ಕೊಕ್ಕೆಗಳಿಂದ ಅವನ್ನು ಹಿಡಿದು ಹಾಕಿ ತಮ್ಮ ಹಡಗುಗಳಿಂದ ಅದಕ್ಕೆ ಹಲಗೆಗಳನ್ನು ಹಾಕುತ್ತಿದ್ದರು. ತಕ್ಷಣ ರೋಮನ್ ಸೈನಿಕರು ಈ ಹಲಗೆಗಳ ಮೇಲೆ ನಡೆದುಕೊಂಡು ಕಾರ್ಥೇಜಿನ ಹಡಗಿಗೆ ಹೋಗಿ ಅಲ್ಲಿನವರನ್ನು ಮುತ್ತಿಕೊಳ್ಳುತ್ತಿದ್ದರು. ಕ್ರಿ.ಪೂ. 260ರಲ್ಲಿ ಮೈಲೀ (Mylae)ಯಲ್ಲಿಯೂ ಕ್ರಿ.ಪೂ. 256ರಲ್ಲಿ ಎಕಾನಮಿಸ್‌ನಲ್ಲಿಯೂ ಕಾರ್ಥೇಜಿನವರು ಪೂರ್ಣ ಪರಾಜಯ ಹೊಂದಿದರು. ಮುಂದೆ ಕಾರ್ಥೇಜಿನ ಬಳಿ ರೋಮನ್ನರು ಬಂದಿಳಿಯುವುದನ್ನು ಹೇಗೋ ತಡೆಗಟ್ಟಿದರೂ ತಿರುಗಿ ಪಾನಿರ್ಮೊ ಬಳಿ ಇವರು ಸೋತುಹೋದರು. ನೂರನಾಲ್ಕು ಆನೆಗಳು ರೋಮನ್ನರ ವಶವಾಗಿ ರೋಮನ್ ಪೋರಂನಲ್ಲಿ ಹಿಂದೆಂದೂ ನಡೆಯದಿದ್ದಂತಹ ವಿಜಯೋತ್ಸವ ನಡೆಯಿತು. ಬಳಿಕ ರೋಮನ್ನರಿಗೇ ಎರಡುಬಾರಿ ಸೋಲಾದರೂ ತಿರುಗಿ ಅವರು ಚೇತರಿಸಿಕೊಂಡರು. ಕ್ರಿ.ಪೂ. 241ರಲ್ಲಿ ಈಗೇಷನ್ (Aegation) ದ್ವೀಪಗಳ ಬಳಿ ಕಳೆದುಳಿದ ಕಾರ್ಥೇಜಿನ ನೌಕಾದಳ ಸೋತುಹೋಗಿ ಕಾರ್ಥೇಜ್ ಶಾಂತಿಯಾಚನೆ ಮಾಡಿತು. ಸೈರಕ್ಯೂಸಿನ ಹಯರೊ ದೊರೆಯ ರಾಜ್ಯ ಹೊರತು ಉಳಿದ ಸಿಸಿಲಿ ದ್ವೀಪವೆಲ್ಲಾ ರೋಮನ್ನರ ಕೈಸೇರಿತು.

ಮುಂದೆ ಇಪ್ಪತ್ತೆರಡು ವರ್ಷಗಳ ಕಾಲ ಇವೆರಡು ರಾಜ್ಯಗಳೂ ಶಾಂತಿಯನ್ನು ಪಾಲಿಸಿದುವು. ಎರಡಕ್ಕೂ ಸ್ವದೇಶದಲ್ಲಿಯೇ ಸಾಕಷ್ಟು ತೊಂದರೆಗಳು ಬಂದೊದಗಿದ್ದುವು. ಇಟಲಿಯಲ್ಲಿ ಗಾಲರು ನುಗ್ಗಿ ಬಂದರು. ರೋಮ್ ಪಟ್ಟಣಕ್ಕೇ ಅಪಾಯ ಒದಗಿತು. ಈ ಸಂದರ್ಭದಲ್ಲಿ ರೋಮನ್ನರು ಅದೆಷ್ಟು ಧೈರ್ಯಗೆಟ್ಟರೆಂದರೆ ದೇವತೆಗಳಿಗೆ ನರಬಲಿಯನ್ನು ಸಹ ಕೊಟ್ಟರು. ಆದರೆ ಗಾಲರು ಟೆಲಾಮನ್ನಿನಲ್ಲಿ (Telamon) ಸೋತುಹೋದರು. ರೋಮನ್ ಸೈನ್ಯ ಆಲ್ಪ್ಸ್ ಪರ್ವತದವರೆಗೂ ಮುನ್ನಡೆಯಿತು. ಏಡ್ರಿಯಾಟಿಕ್

ತೀರದಲ್ಲಿ ಇಲ್ಲಿರಿಯಾದವರೆಗಿನ ನಾಡುಗಳು ಇವರ ವಶವಾದವು. ಕಾರ್ಥೇಜ್ ಸ್ವದೇಶದಲ್ಲಿ ಸಾರ್ಡಿನಿಯ ಮತ್ತು ಕಾರ್ಸಿಕಾಗಳಲ್ಲಿ ದಂಗೆಗಳನ್ನೆದುರಿಸಬೇಕಾಯಿತು. ರೋಮಿನಷ್ಟು ಚೈತನ್ಯ ಅದಕ್ಕೆ ಇರಲಿಲ್ಲ. ಇವುಗಳಿಂದ ಅದು ಅಷ್ಟು ಬೇಗ ಚೇತರಿಸಿಕೊಳ್ಳಲಾಗಲಿಲ್ಲ. ಕಟ್ಟ ಕಡೆಗೆ ರೋಮ್ ಇವೆರಡು ದ್ವೀಪಗಳನ್ನು ತಾನೇ ಆಕ್ರಮಿಸಿಕೊಂಡು ಬಿಟ್ಟಿತು. ಸಹಜವಾಗಿ ಇದು ಕಾರ್ಥೇಜಿನವರಿಗೆ ಸಹಿಸಲು ಶಕ್ಯವಾಗಲಿಲ್ಲ.

ಆಗ ಉತ್ತರದಲ್ಲಿ ಎಬ್ರೊ ನದಿಯವರೆಗೆ ಸ್ಪೇನ್ ಕಾರ್ಥೇಜಿನ ವಶದಲ್ಲಿತ್ತು. ಈ ನದಿಯನ್ನು ಅವರು ದಾಟಬಾರದೆಂದೂ, ಹಾಗೆ ದಾಟಿದರೆ ಅದು ರೋಮಿನ ಮೇಲೆ ಯುದ್ಧ ಘೋಷಿಸಿದಂತೆಯೇ ಎಂದೂ ರೋಮನ್ನರು ಅವರ ಮೇಲೆ ಪ್ರತಿಬಂಧ ಹೇರಿದ್ದರು. ಆದರೆ ಕ್ರಿ.ಪೂ. 218ರಲ್ಲಿ ರೋಮನ್ನರ ಆಕ್ರಮಣಗಳನ್ನು ಸಹಿಸಲಾರದೆ ಕೆರಳಿದ ಕಾರ್ಥೇಜಿನವರು ಹ್ಯಾನಿಬಾಲ್ ಎಂಬ ಯುವಕ ಸೇನಾಪತಿಯ ಮುಂದಾಳುತ್ವದಲ್ಲಿ ಈ ನದಿಯನ್ನು ದಾಟಿದರು. ಮಾನವ ಚರಿತ್ರೆಯಲ್ಲಿನ ಅತ್ಯಂತ ಬುದ್ಧಿವಂತ ಸೇನಾನಾಯಕರಲ್ಲಿ ಈತನು ಒಬ್ಬನು. ಸ್ಪೇನಿನಿಂದ ಆಲ್ಪ್ಸನ್ನು ದಾಟಿ ಇಟಲಿಗೆ ಇಳಿದು ಗಾಲರನ್ನು ರೋಮಿನ ಮೇಲೆ ಎತ್ತಿ ಕಟ್ಟಿ ಹದಿನೈದು ವರ್ಷಕಾಲ ಇಟಲಿಯಲ್ಲಿಯೇ ಈತನು ರೋಮನ್ನರ ಮೇಲೆ ಯುದ್ಧ ನಡೆಸಿದನು. ಹೀಗೆ ಎರಡನೆ ಪ್ಯೂನಿಕ್ ಯುದ್ಧ ಇಟಲಿಯಲ್ಲಿಯೇ ನಡೆಯಿತು. ಟ್ರಾಸಿಮೀನ್ ಸರೋವರ (Lake Trasimene) ಮತ್ತು ಕಾನ್ನೇ (Cannee)ಯಲ್ಲಿ ರೋಮನ್ನರಿಗೆ ದೊಡ್ಡ ಪರಾಜಯವಾಯಿತು. ಈತನನ್ನೆದುರಿಸಿದ ಪ್ರತಿರೋಮನ್ ಸೈನ್ಯವೂ ಸೋಲನ್ನೆದುರಿಸಬೇಕಾಯಿತು. ಆದರೆ ರೋಮನ್ ಸೈನ್ಯ ಒಂದು ಸಮುದ್ರ ಮಾರ್ಗವಾಗಿ ಮಾರ್ಸೇಲ್ಸಿಗೆ ಬಂದಿಳಿದು ಹ್ಯಾನಿಬಾಲನಿದ್ದಲ್ಲಿಂದ ಸ್ಪೇನಿಗೆ ಹೋಗುವ ದಾರಿಯನ್ನು ಅಡ್ಡಗಟ್ಟಿತು. ಮುತ್ತಿಗೆ ಹಾಕಲು ಬೇಕಾಗುವ ಸಲಕರಣೆಗಳು ಹ್ಯಾನಿಬಾಲನ ಹತ್ತಿರ ಇರಲಿಲ್ಲವಾದುದರಿಂದ ಈತನು ರೋಮ್ ಪಟ್ಟಣವನ್ನು ವಶಪಡಿಸಿಕೊಳ್ಳುವಂತೆಯೇ ಇರಲಿಲ್ಲ. ಇಷ್ಟು ಹೊತ್ತಿಗೆ ಕಾರ್ಥೇಜಿನಲ್ಲಿ ನ್ಯೂಮಿಡಿಯನ್ನರು ದಂಗೆಯೆದ್ದರು ಕಾರ್ಥೇಜನ್ನೇ ಕಾಪಾಡಿಕೊಳ್ಳಬೇಕಾದ ಸಂದರ್ಭ ಬಂದಿತು. ಹ್ಯಾನಿಬಾಲನು ಹಿಂತೆರಳಬೇಕಾಯಿತು. ರೋಮನ್ ಸೈನ್ಯವೊಂದು ಆಫ್ರಿಕದಲ್ಲಿ ಬಂದಿಳಿಯಿತು. ಕ್ರಿ.ಪೂ. 202ರಲ್ಲಿ ಕಾರ್ಥೇಜಿನ ಬಳಿ ನಡೆದ ಜಾಮಾ (Zama) ಕದನದಲ್ಲಿ ಹ್ಯಾನಿಬಾಲನು 'ಹಿರಿಯ ಸ್ಕಿಪಿಯೊ ಆಫ್ರಿಕಾನಸ್' (Scipio Africanus the Elder) ಕೈಯ್ಯಲ್ಲಿ ಮೊದಲ ಬಾರಿಗೆ ಸೋಲನ್ನನುಭವಿಸಿದನು. ಎರಡನೆ ಪ್ಯೂನಿಕ್ ಯುದ್ಧ ಮುಗಿಯಿತು. ಕಾರ್ಥೇಜ್ ಸೋಲೊಪ್ಪಿಕೊಂಡು ಸ್ಪೇನನ್ನೂ ತನ್ನ ಯುದ್ಧ ನೌಕಾಪಡೆಯನ್ನೂ ಮತ್ತು ಯುದ್ಧ ನಷ್ಟಕ್ಕೆ ಪರಿಹಾರವೆಂದು ಅಪಾರ ದ್ರವ್ಯವನ್ನೂ ರೋಮನ್ನರಿಗೆ ಕೊಟ್ಟಿತಲ್ಲದೆ ಹ್ಯಾನಿಬಾಲನನ್ನೂ ಅವರ ವಶಕ್ಕೆ ಒಪ್ಪಿಸಿಕೊಡುವೆನೆಂದು ಮಾತುಕೊಟ್ಟಿತು. ಹ್ಯಾನಿಬಾಲ್ ಹೇಗೋ ತಪ್ಪಿಸಿಕೊಂಡು ಏಷ್ಯಾಖಂಡಕ್ಕೆ ಓಡಿಹೋದನು. ಆದರೆ ಅಲ್ಲಿ

ಹೋದರೂ ಬೆಂಬತ್ತಿ ಬರುತ್ತಿದ್ದ ನಿರ್ದಯರಾದ ಶತ್ರುಗಳಕ್ಕೈಗೆ ಸಿಕ್ಕಿ ಬೀಳುವೆನೆಂದು ತೋರಿದಾಗ ಈತನು ವಿಷ ತಿಂದು ಪ್ರಾಣ ನೀಗಿದನು.

ಮುಂದೆ ಐವತ್ತಾರು ವರ್ಷಗಳು ರೋಮ್ ಮತ್ತು ಜರ್ಝರಿತವಾಗಿ ಹೋಗಿದ್ದ ಕಾರ್ಥೇಜ್ ಶಾಂತಿಯಿಂದಿದ್ದುವು. ಈ ಅವಕಾಶದಲ್ಲಿ ರೋಮನ್ನರು ಛಿದ್ರವಾಗಿ ಅವ್ಯವಸ್ಥೆಯಿಂದಿದ್ದ ಗ್ರೀಸನ್ನು ವಶಮಾಡಿಕೊಂಡು ಏಷ್ಯಾ ಮೈನರಿನ ಮೇಲೇರಿ ಹೋಗಿ ಮುಂದೆ ಸೆಲ್ಯೂಸಿಡ್ (Seleucid) ದೊರೆ ಮೂರನೆ ಆ್ಯಂಟಿಯೋಕಸ್ಸನನ್ನು ಲಿಡಿಯ ದೇಶದ ಮ್ಯಾಗ್ನೀಷಿಯ ಎಂಬಲ್ಲಿ ಸೋಲಿಸಿದರು. ಟಾಲೆಮಿ ವಂಶದವರ ಆಡಳಿತದಲ್ಲಿದ್ದ ಈಜಿಪ್ಟ್ ದೇಶವನ್ನೂ, ಪರ್ಗಾಮಮ್ ಮತ್ತಿತರ ಏಷ್ಯಾ ಮೈನರಿನ ಅನೇಕ ಸಣ್ಣ ರಾಜ್ಯಗಳನ್ನೂ ತನ್ನ ಮಿತ್ರ ರಾಜ್ಯಗಳೆಂದು ಘೋಷಿಸಿತು. ಈಗಿನ ಭಾಷೆಯಲ್ಲಿ ಹೇಳುವುದಾದರೆ ಇವುಗಳನ್ನು ರೋಮಿನ ಮಿತ್ರ ರಾಜ್ಯಗಳೆನ್ನುವುದಕ್ಕಿಂತ ರೋಮಿನ ಕೃಪಾಶ್ರಯದಲ್ಲಿದ್ದ ರಾಜ್ಯಗಳೆನ್ನಬಹುದು.

ಪರಾಜಯ ಹೊಂದಿ ನಿರ್ಬಲವಾಗಿ ಹೋಗಿದ್ದ ಕಾರ್ಥೇಜು ಈ ಕಾಲಾವಕಾಶದಲ್ಲಿ ನಿಧಾನವಾಗಿ ಚೇತರಿಸಿಕೊಳ್ಳುತ್ತಿತ್ತು. ರೋಮನ್ನರಿಗೆ ಇದನ್ನು ಕಂಡು ಸಂಶಯ ದ್ವೇಷಗಳು ಕೆರಳಿದುವು. ಯಾವುದೋ ಒಂದು ಕುಂಟುನೆಪ ಹಾಕಿಕೊಂಡು ಕ್ರಿ.ಪೂ. 149 ರಲ್ಲಿ ರೋಮ್ ತಿರುಗಿ ಕಾರ್ಥೇಜಿನ ಮೇಲೆ ಬಿತ್ತು. ಕಾರ್ಥೇಜ್ ಹಠದಿಂದ ಬಹಳ ಕಷ್ಟಪಟ್ಟು ಇವರನ್ನೆದುರಿಸಿತು. ಆದರೆ ದೀರ್ಘಕಾಲದ ಮುತ್ತಿಗೆಯ ನಂತರ ಕಾರ್ಥೇಜ್ ಪಟ್ಟಣ ರೋಮನ್ನರ ಪ್ರವೇಶಕ್ಕೆಡೆಗೊಡಲೇಬೇಕಾಯಿತು (ಕ್ರಿ.ಪೂ. 146). ಕಾರ್ಥೇಜಿನ ಬೀದಿಗಳಲ್ಲಿ ಆರು ದಿನ ಕಲಹ (ಇದಕ್ಕೆ ಕಗ್ಗೊಲೆ ಎನ್ನಬೇಕು) ನಡೆದು ರಕ್ತ ಪ್ರವಾಹವೇ ಹರಿಯಿತು. ಕಡೆಗೆ ಪಟ್ಟಣದ ಕಟ್ಟಕಡೆ ಆಶ್ರಯ (citadel) ಶರಣು ಹೋದಾಗ ಪಟ್ಟಣದಲ್ಲಿ ಮುಂಚೆ ಇದ್ದ ಎರಡು ಲಕ್ಷದ ಐವತ್ತು ಸಾವಿರ ಕಾರ್ಥೇಜಿನಿಯನ್ನರಲ್ಲಿ ಕೇವಲ ಐವತ್ತು ಸಾವಿರ ಜನ ಮಾತ್ರ ಜೀವದಿಂದ ಉಳಿದಿದ್ದರು. ರೋಮನ್ನರು ಇವರನ್ನೆಲ್ಲಾ ಗುಲಾಮರನ್ನಾಗಿ ಪಟ್ಟಣವನ್ನು ಸುಟ್ಟು ಪೂರ್ತಿ ನಾಶ ಮಾಡಿದರು. ಕರಿಕಾಗಿದ್ದ ಪಟ್ಟಣದ ಅವಶೇಷಗಳನ್ನು ಸಹ ಕೊಟ್ಟ ಕೊನೆಗೆ ಒಂದು ಬಗೆಯ ಸಾಂಕೇತಿಕ ವಿಧಿ ಎಂಬಂತೆ ನೇಗಿಲಿನಿಂದ ಉತ್ತು ಅಲ್ಲೆಲ್ಲಾ ಬಿತ್ತನೆ ಮಾಡಿದರು.

ಹೀಗೆ ಮೂರನೆ ಪ್ಯೂನಿಕ್ ಯುದ್ಧ ಮುಗಿಯಿತು. ಇದಕ್ಕೆ ಐದು ಶತಮಾನಗಳ ಹಿಂದೆ ಪ್ರಪಂಚದಲ್ಲಿ ವೈಭವದಿಂದ ಮೆರೆಯುತ್ತಿದ್ದ ಅನೇಕ ಸೆಮಿಟಿಕ್ ರಾಜ್ಯಗಳಲ್ಲಿ ಕೇವಲ ಒಂದೇ ಒಂದು ಸಣ್ಣ ರಾಜ್ಯ ಮಾತ್ರ ಈಗ ಸ್ವಾತಂತ್ರ್ಯವನ್ನುಳಿಸಿಕೊಂಡಿತ್ತು. ಅದೇ ಜ್ಯೂಡಿಯಾ. ಸೆಲ್ಯೂಸಿಡ್ ರಾಜರ ಕೈಸೇರಿದ್ದ ಇದು ಹೇಗೋ ಪರತಂತ್ರದಿಂದ ಪಾರಾಗಿ ತನ್ನವರೇ ಆದ ಮಾಕಾಬಿಯನ್ (Maccabean) ರಾಜರ ಆಧೀನದಲ್ಲಿದ್ದಿತು. ಇಷ್ಟು ಹೊತ್ತಿಗೆ ಬೈಬಲ್ ಹೆಚ್ಚು ಕಡಿಮೆ ಈಗಿರುವ ರೂಪಕ್ಕೆ ಬಂದಿತ್ತು. ಇಂದು ಯಹೂದ್ಯ ಮತದಲ್ಲಿ ನಾವು ಕಾಣುವ ವಿಶಿಷ್ಟ ಸಂಪ್ರದಾಯಗಳು ಆಗಲೇ ರೂಪುಗೊಳ್ಳುತ್ತಿದ್ದುವು. ಪ್ರಪಂಚದಲ್ಲೆಲ್ಲಾ ಹರಡಿ ಹೋಗಿದ್ದ ಕಾರ್ಥೇಜಿನಿಯನ್ನರೂ ಫಿನಿಷಿ

ಯನ್ನರೂ ಮತ್ತಿತರ ಅದೇ ಬಗೆಯ ಸೆಮಿಟಿಕ್ ಜನರೂ ಈಗ ಯೆಹೂದ್ಯ ಮತದತ್ತ ತಮ್ಮ ದೃಷ್ಟಿ ತಿರುಗಿಸಿದರು. ಇದೇನೂ ಆಶ್ಚರ್ಯವಲ್ಲ. ಇವರೆಲ್ಲರ ಭಾಷೆಗಳೂ ಹೀಬ್ರೂ ಭಾಷೆಯನ್ನು ಬಹುಮಟ್ಟಿಗೆ ಹೋಲುತ್ತಿದ್ದುವು. ಬೈಬಲ್ ಸಾಹಿತ್ಯ ಆಕರ್ಷಕವೂ ಉತ್ತೇಜಕವೂ ಆಗಿತ್ತು. ಪ್ರಪಂಚದ ವ್ಯಾಪಾರ, ಹಣಕಾಸಿನ ವ್ಯವಹಾರದ ಬಹು ಭಾಗ ಇನ್ನೂ ಸೆಮಿಟಿಕ್ ಜನರ ಕೈಯಲ್ಲೇ ಇತ್ತು. ಸೆಮಿಟಿಕ್ ಜನಾಂಗ ಮೇಲ್ನೋಟಕ್ಕೆ ಕಾಣದಂತೆ ಮುಳುಗಿ ಕೊಂಡಿತ್ತಷ್ಟೆ ಅಲ್ಲದೆ ಅದರ ಸ್ಥಾನ ಬೇರೆ ಯಾವ ಜನಾಂಗಕ್ಕೂ ಸಿಗಲಿಲ್ಲ.

ಜ್ಯೂಡಾಯಿಸಂನ ಕೇಂದ್ರವಲ್ಲದಿದ್ದರೂ ಜೆರೂಸಲೆಂ ಮೊದಲಿನಿಂದಲೂ ಸಾಂಕೇತಿಕವಾಗಿ ಅದರ ಮುಖ್ಯ ಸ್ಥಾನವಾಗಿದೆ. ಕ್ರಿ.ಪೂ. 65ರಲ್ಲಿ ರೋಮನ್ನರು ಮೊದಲ ಬಾರಿಗೆ ಇದನ್ನು ವಶಪಡಿಸಿಕೊಂಡರು. ಹಲವಾರು ವರ್ಷ ದಂಗೆಗಳು ಕಲಹಗಳು ನಡೆಯುತ್ತ ಆ ಕಡೆ ಸ್ವತಂತ್ರ ರಾಜ್ಯವೂ ಅಲ್ಲ, ಅಧೀನ ರಾಜ್ಯವೂ ಅಲ್ಲ ಎಂಬಂತೆ ಅಲ್ಲಿಯ ವ್ಯವಹಾರ ನಡೆದುಕೊಂಡು ಬಂದಿತು. ಕಡೆಗೆ ಕ್ರಿ.ಶ. 70ರಲ್ಲಿ ರೋಮನ್ನರು ಇದನ್ನು ಮುತ್ತಿಗೆ ಹಾಕಿ ಕಷ್ಟಪಟ್ಟು ವಶಮಾಡಿಕೊಂಡು ಅಲ್ಲಿಯ ದೇವಸ್ಥಾನವನ್ನು ನಾಶ ಮಾಡಿದರು. ಕ್ರಿ.ಶ. 132ರಲ್ಲಿ ಜನ ಮತ್ತೊಂದು ದಂಗೆಯೆದ್ದುದೇ ಕಾರಣವಾಗಿ ಈ ವಿನಾಶ ಕಾರ್ಯ ಸಂಪೂರ್ಣವಾಯಿತು. ಈಗ ಇರುವ ಜೆರುಸಲೆಂನ್ನು ಮುಂದೆ ರೋಮನ್ನರೇ ತಿರುಗಿ ಕಟ್ಟಿದರು. ಅಲ್ಲಿಯವರೆಗೂ ಮೊದಲು ದೇವಸ್ಥಾನವಿದ್ದಲ್ಲಿ ಜೂಪಿಟರ್ ಕ್ಯಾಪಿಟೋಲಿನಸ್ ಎಂಬ ರೋಮನ್ ದೇವರ ಮಂದಿರ ಇದ್ದಿತು ; ಯಹೂದ್ಯರು ಪಟ್ಟಣದಲ್ಲಿ ವಾಸ ಮಾಡಲು ಪ್ರತಿಬಂಧಕ ಇತ್ತು.

3 3·ರೋಂ ಸಾಮ್ರಾಜ್ಯದ ಬೆಳವಣಿಗೆ

ಕ್ರಿ.ಪೂ. ಎರಡನೆಯ ಮತ್ತು ಮೂರನೆಯ ಶತಮಾನಗಳಲ್ಲಿ ಮೇಲೆದ್ದು ಪಾಶ್ಚಿಮಾತ್ಯ ಪ್ರಪಂಚದ ಮೇಲೆ ಪ್ರಭಾವ ಬೀರಿದ ಈ ರೋಮನ್ ಸಾಮ್ರಾಜ್ಯ ಅಂದಿನವರೆಗೆ ನಾಗರಿಕ ಪ್ರಪಂಚ ಕಂಡಿದ್ದ ಉಳಿದೆಲ್ಲ ಸಾಮ್ರಾಜ್ಯಗಳಿಗಿಂತ ಬೇರೆಯಾಗಿತ್ತು. ಪ್ರಾರಂಭದಲ್ಲಿ ಇದು ರಾಜ ಪ್ರಭುತ್ವವಾಗಿರಲಿಲ್ಲ. ಯಾವನೊಬ್ಬ ವಿಜಯಶಾಲಿ ದೊರೆ ಇದನ್ನು ಸ್ಥಾಪಿಸಲಿಲ್ಲ. ಆದರೂ ಪ್ರಜಾಪ್ರಭುತ್ವ ಸ್ಥಾಪಿಸಿದ ಸಾಮ್ರಾಜ್ಯಗಳಲ್ಲಿ ಇದೇ ಮೊದಲನೆಯದಲ್ಲ. ಪೆರಿಕ್ಲಿಸನ ಕಾಲದ ಅಥೆನ್ಸ್, ಸಾಮಂತ ರಾಜ್ಯಗಳು ಮತ್ತು ಮಿತ್ರ ರಾಜ್ಯಗಳ ಸಮೂಹವೊಂದರ ಮೇಲೆ ಅಧಿಕಾರ ನಡೆಸುತ್ತಿತ್ತು. ರೋಮಿನೊಡನೆ ಸೆಣಸತೊಡಗಿದಾಗ ಕಾರ್ಥೇಜು, ಸಾರ್ಡಿನಿಯ, ಕಾರ್ಸಿಕಾ, ಮೊರಾಕೊ, ಅಲ್ಜಿಯರ್ಸ್, ಟ್ಯೂನಿಸ್, ಸ್ಪೇನ್ ಮತ್ತು ಸಿಸಿಲಿಗಳ ಬಹು ಭಾಗಗಳನ್ನು ಆಳುತ್ತಿತ್ತು. ಆದರೆ ಇವುಗಳಿಗೂ ರೋಮಿಗೂ ದೊಡ್ಡ ವ್ಯತ್ಯಾಸವಿತ್ತು. ಈ ಸಾಮ್ರಾಜ್ಯಗಳು ಬಹು ಬೇಗನೆ ಕೊನೆಗಂಡವು. ರೋಮ್ ಬಹು ದಿನ ಬಾಳಿ ಹೊಸ ಹೊಸ ಮಾರ್ಗಗಳಲ್ಲಿ ಅಭಿವೃದ್ಧಿ ಹೊಂದಿತು.

ಹಳೆಯ ಸಾಮ್ರಾಜ್ಯಗಳ ಕೇಂದ್ರಗಳಾಗಿದ್ದ ಈಜಿಪ್ಟ್, ಮೆಸಪೊಟೇಮಿಗಳ ನದಿ ಪ್ರದೇಶಗಳಿಗಿಂತ ಈ ಹೊಸ ಸಾಮ್ರಾಜ್ಯದ ಕೇಂದ್ರ ಬಹು ಪಶ್ಚಿಮಕ್ಕಿತ್ತು. ಈ ಕಾರಣ ವಾಗಿ ರೋಮ್ ಹೊಸ ಹೊಸ ಪ್ರದೇಶಗಳಿಗೆ ಮತ್ತು ಜನರಿಗೆ ನಾಗರಿಕತೆಯನ್ನು ತಂದುಕೊಟ್ಟಿತು. ಮೊದಲು ಮೊರಾಕೊ ಮತ್ತು ಸ್ಪೇನ್‌ಗಳವರೆಗೆ ಇದ್ದ ಇದು ಬಳಿಕ ವಾಯುವ್ಯ ದಿಕ್ಕಿಗೆ ಇಂದಿನ ಫ್ರಾನ್ಸ್, ಬೆಲ್ಜಿಯಂ, ಬ್ರಿಟನ್‌ಗಳವರೆಗೆ, ಈಶಾನ್ಯದಲ್ಲಿ ಇಂದಿನ ಹಂಗೆರಿ, ದಕ್ಷಿಣ ರಷ್ಯಗಳಿಗೆ ಹರಡಿತು. ಪರ್ಷಿಯ ಮತ್ತು ಮಧ್ಯ ಏಷ್ಯಗಳಲ್ಲಿ ಮಾತ್ರ ಇದರ ಅಧಿಕಾರ ಹೆಚ್ಚು ಕಾಲ ನಿಲ್ಲಲಿಲ್ಲ. ಏಕೆಂದರೆ ಅವು ರೋಮ್ ನಗರಕ್ಕೆ ಬಹುದೂರದಲ್ಲಿದ್ದುವು. ಹೀಗೆ ಇದರಲ್ಲಿ ಆರ್ಯರ ಭಾಷೆಗಳನ್ನಾಡುತ್ತಿದ್ದ ಹೊಸ ನಾರ್ಡಿಕ್ ಜನರು, ಹೆಚ್ಚು ಕಡಿಮೆ ಎಲ್ಲಾ ಗ್ರೀಕರು ಸೇರಿದರು. ಹಿಂದೆ ಆಗಿಹೋದ ಸಾಮ್ರಾಜ್ಯಗಳಲ್ಲಿದ್ದಷ್ಟು ಹ್ಯಾಮಿಟಿಕ್ ಮತ್ತು ಸೆಮಿಟಿಕ್ ಜನ ಇದರಲ್ಲಿರಲಿಲ್ಲ.

ಕೆಲವು ಶತಮಾನಗಳು ರೋಂ ಬೆಳೆಯುತ್ತಲೇ ಹೋಯಿತು. ಗ್ರೀಕ್ ಮತ್ತು ಪರ್ಷಿಯನ್ ಸಾಮ್ರಾಜ್ಯಗಳ ಮೇಲ್ಪಂಕ್ತಿಯನ್ನು ಇದು ಅನುಸರಿಸಲಿಲ್ಲ. ಪರ್ಷಿಯನ್ ಮತ್ತು ಮೀಡ್ ರಾಜರು ಕೇವಲ ಒಂದು ತಲೆಮಾರಿನಲ್ಲಿಯೇ ಸಂಪೂರ್ಣವಾಗಿ 'ಬೇಬಿಲಾನ್ನೈಸ್' ಆಗಿ ಹೋದರು. ಬೇಬಿಲಾನ್ ರಾಜನ ಕಿರೀಟವನ್ನು ಧರಿಸ ತೊಡಗಿದುದಲ್ಲದೆ ಅಲ್ಲಿಯ ದೇವಸ್ಥಾನಗಳು, ದೇವತೆಗಳು, ಅರ್ಚಕ ಪದವಿ ಎಲ್ಲವನ್ನೂ ಸ್ವೀಕರಿಸಿಬಿಟ್ಟರು. ಅಲೆಕ್ಸಾಂಡರ್ ಮತ್ತು ಆತನ ಉತ್ತರಾಧಿಕಾರಿಗಳೂ ತಮ್ಮ ಹೊಸ ಪ್ರಜೆಗಳೊಂದಿಗೆ ಬೆರೆಯಲು ಇದೇ ಸುಲಭ ಮಾರ್ಗವನ್ನನುಸರಿಸಿದರು. ಸೆಲ್ಯೂಸಿಡ್ ದೊರೆಗಳ ಆಸ್ಥಾನ ಮತ್ತು ಆಡಳಿತ ಕ್ರಮಗಳಿಗೂ ನೆಬುಚಾಡ್ನೆಜಾರನದಕ್ಕೂ ಹೆಚ್ಚು ವ್ಯತ್ಯಾಸ ಇರಲಿಲ್ಲ. ಟಾಲೆಮಿಗಳು ಈಜಿಪ್ಟಿನ್ ಫ್ಯಾರೋಗಳೇ ಆಗಿ ಹೋದರು. ಈ ಮುಂಚೆ ಸುಮೇರಿಯ ತನ್ನ ಮೇಲೆ ದಂಡೆತ್ತಿ ಬಂದ ಸೆಮಿಟಿಕ್‌ರನ್ನು ಹೇಗೆ ತನ್ನೊಳಗೆ ಸೇರಿಸಿಕೊಂಡುಬಿಟ್ಟಿತೋ ಹಾಗೆಯೇ ಈ ಸಂದರ್ಭದಲ್ಲಿಯೂ ಆಯಿತು. ರೋಮನ್ನ ರಾದರೋ ತಮ್ಮ ರಾಜಧಾನಿಯಿಂದ ಆಡಳಿತ ನಡೆಸುತ್ತಿದ್ದರು. ಕೆಲವು ಶತಮಾನಗಳು ತಮಗೆ ಸಹಜವಾದ ಆಡಳಿತ ನಿಯಮಗಳನ್ನನುಸರಿಸುತ್ತಿದ್ದರು. ಕ್ರಿ.ಶ. ಎರಡು ಅಥವಾ ಮೂರನೆ ಶತಮಾನದವರೆಗೂ ಇವರ ಮೇಲೆ ಪ್ರಭಾವ ಬೀರಿದ ಜನರೆಂದರೆ ಗ್ರೀಕರು ಮಾತ್ರ. ಇವರಿಗೂ ಗ್ರೀಕರಿಗೂ ಹೆಚ್ಚು ವ್ಯತ್ಯಾಸವೇನಿರಲಿಲ್ಲ. ಇಬ್ಬರೂ ಆರ್ಯರೇ. ಹೀಗೆ ಆರ್ಯರ ನಿಯಮಗಳಿಗನುಸಾರವಾಗಿ ಆಳಲ್ಪಟ್ಟ ಮೊಟ್ಟ ಮೊದಲನೆ ಸಾಮ್ರಾಜ್ಯ ವೆಂದರೆ ಇದೇ. ಮಾನವ ಚರಿತ್ರೆಯಲ್ಲಿ ಇದೊಂದು ಹೊಸ ಮಾದರಿ. ಬಹು ದೊಡ್ಡ ದಾದ ಆರ್ಯರ ಪ್ರಜಾಪ್ರಭುತ್ವವೆಂದು ಇದನ್ನು ಕರೆಯಬಹುದು. 'ಸುಗ್ಗಿಯ ದೇವತೆಯ ಗುಡಿಯ ಸುತ್ತ ಬೆಳೆದ ರಾಜಧಾನಿ, ಅದನ್ನು ಆಳುವ ವಿಜಯಶಾಲಿ ವ್ಯಕ್ತಿ' ಈ ಹಳೆಯ ವ್ಯವಸ್ಥೆಗೂ ಇದಕ್ಕೂ ಏನೂ ಸಾಮ್ಯ ಇರಲಿಲ್ಲ. ರೋಮಿನಲ್ಲೂ ಬೇಕಾದಷ್ಟು ದೇವತೆ ಗಳೂ ದೇವಾಲಯಗಳು ಇದ್ದರೂ ಗ್ರೀಕ್ ದೇವತೆಗಳಂತೆ ಇವರ ದೇವತೆಗಳೂ ಅರ್ಧ ಮಾನವರೇ ಎನಿಸುವ ಅಮರತ್ವವಿದ್ದ ಕುಲೀನ ವ್ಯಕ್ತಿಗಳಾಗಿದ್ದರು. ರೋಮನ್ನರೂ

ಬಲಿ ಕೊಡುತ್ತಿದ್ದರು, ಅತಿ ಕಷ್ಟಕ್ಕೊಳಗಾದಾಗ ನರಬಲಿ ಸಹ ಕೊಟ್ಟದ್ದುಂಟು. ಇವೆಲ್ಲವನ್ನು ಎಟ್ರುಸ್ಕನ್ನರಿಂದ ಕಲಿತಿದ್ದರೂ ಇರಬಹುದು. ಆದರೆ ರೋಮಿನ ಉಚ್ಛ್ರಾಯ ಸ್ಥಿತಿ ಕಳೆದು ಬಹುಕಾಲವಾಗುವವರೆಗೂ ಅಲ್ಲಿ ದೇವಾಲಯಕ್ಕಾಗಲೀ ದೇವಾಲಯದ ಅರ್ಚಕವರ್ಗಕ್ಕಾಗಲೀ ಏನೂ ಪ್ರಾಮುಖ್ಯತೆ ಬರಲಿಲ್ಲ.

ರೋಂ ಸಾಮ್ರಾಜ್ಯ ಬಿಟ್ಟಿನಲ್ಲಿ ಹುಚ್ಚು ಹೊಸದಾದೊಂದು ಕಾಡುಬಳ್ಳಿ ಹಬ್ಬಿದಂತೆ ಬೆಳೆಯಿತು. ಇದರ ಬೆಳವಣಿಗೆ ಯಾವುದೊಂದು ನಿಯಮಿತ ಯೋಜನೆಗೆ ಒಳಪಡಲಿಲ್ಲ. ಅಂತೂ ತಮಗೇ ಗೊತ್ತಿಲ್ಲದಂತೆ ರೋಮನ್ನರು ಒಂದು ಭಾರೀ ಆಡಳಿತ ಕ್ರಮ ಪ್ರಯೋಗದಲ್ಲಿ ಭಾಗವಹಿಸಿದರು. ಈ ಪ್ರಯೋಗ ಯಶಸ್ವಿಯಾಯಿತೆಂದು ಹೇಳುವಂತಿಲ್ಲ. ಕೊನೆಗೆ ಈ ಸಾಮ್ರಾಜ್ಯ ಪೂರ್ತಿಯಾಗಿ ಕುಸಿದು ಹೋಯಿತು. ಅವಕ್ಕೆ ಮುಂಚೆ ಪ್ರತಿ ಶತಮಾನದಲ್ಲಿಯು ಅದರ ರೂಪ ಮತ್ತು ಮಾರ್ಗ ಬದಲಾಗುತ್ತಲೇ ಹೋಯಿತು. ಇದು ಒಂದು ಶತಮಾನದಲ್ಲಿ ಬದಲಾಯಿಸಿದಷ್ಟು ಬಂಗಾಳ, ಮೆಸಪೊಟೇಮಿಯ ಮತ್ತು ಈಜಿಪ್ಟುಗಳು ಸಾವಿರ ವರ್ಷಗಳಲ್ಲಿ ಸಹ ಬದಲಾಯಿಸಲಿಲ್ಲ ; ರೂಪಾಂತರ ಹೊಂದುತ್ತಲೇ ಇದ್ದ ಇದು ಶಾಶ್ವತ ರೂಪವೊಂದನ್ನು ಪಡೆಯಲೇ ಇಲ್ಲ.

ಒಂದು ದೃಷ್ಟಿಯಿಂದ ನೋಡಿದರೆ ಈ ಪ್ರಯೋಗ ಯಶಸ್ವಿಯಾಗಲಿಲ್ಲವೆಂದರೂ ಮತ್ತೊಂದು ವಿಧದಲ್ಲಿ ಪ್ರಯೋಗ ಇನ್ನೂ ಮುಗಿದಿಲ್ಲವೆನ್ನಬೇಕು. ರೋಮನ್ನರು ಮೊಟ್ಟ ಮೊದಲು ಎದುರಿಸಿದ ರಾಜ್ಯಾಡಳಿತ ಸಮಸ್ಯೆಗಳನ್ನು ಬಿಡಿಸಲು ಯೂರೋಪ್ ಮತ್ತು ಅಮೇರಿಕಗಳಲ್ಲಿ ಇನ್ನೂ ಪ್ರಯತ್ನ ನಡೆಯುತ್ತಿದೆ.

ರೋಂ ಸಾಮ್ರಾಜ್ಯ ಇದ್ದಷ್ಟು ಕಾಲವೂ ಅಲ್ಲಿ ರಾಜಕೀಯವೊಂದರಲ್ಲಿಯೇ ಅಲ್ಲದೆ ಸಮಾಜ ರಚನೆ ಮತ್ತು ನೈತಿಕ ಭಾವನೆಗಳಲ್ಲೂ ಅನೇಕ ಮಾರ್ಪಾಡುಗಳು ಆಗುತ್ತಲೇ ಹೋದುವು. ಚರಿತ್ರೆಯನ್ನು ಓದುವವರೆಲ್ಲಾ ಇದನ್ನು ನೆನಪಿನಲ್ಲಿಡಬೇಕು. ರೋಂ ಸಾಮ್ರಾಜ್ಯ ಎಂದೊಡನೆಯೇ ಜನರು ಪರಿಪೂರ್ಣ, ಶಾಶ್ವತವೆನಿಸುವ ಉದಾತ್ತ ಚಿತ್ರವೊಂದನ್ನು ಕಲ್ಪಿಸಿಕೊಳ್ಳುತ್ತಾರೆ. ಮೆಕಾಲೆಯ "ಪ್ರಾಚೀನ ರೋಮಿನ ಕಥನ ಕವನಗಳು", "ಸೆನೇಟಸ್ ಪಾಪ್ಯುಲಸ್ಕ್ಯೂ ರೊಮಾನಸ್" (ರೋಮಿನ ಸೆನೆಟ್ ಮತ್ತು ಜನತೆ) ಹಿರಿಯ ಕೇಟೋ, ಸ್ಕಿಪಿಯೊಗಳು, ಜ್ಯೂಲಿಯಸ್ ಸೀಸರ್, ಡಯೋಕ್ಲೀಷಿಯನ್, ಕಾನ್‌ಸ್ಟಂಟೈನ್ ಮಹಾಶಯ, ರೋಮನ್ ವಿಜಯೋತ್ಸವಗಳು, ಮಹಾ ಭಾಷಣಗಳು, ಗ್ಲೇಡಿಯೇಟರುಗಳ ಕಾಳಗಗಳು, ಕ್ರಿಶ್ಚಿಯನ್ ಹುತಾತ್ಮರು— ಹೀಗೆ ವ್ಯಕ್ತಿಗಳು, ಘಟನೆಗಳು, ಲೇಖನಗಳು, ಗ್ರಂಥಗಳು ಮತ್ತು ಭಾವನೆಗಳು ಎಲ್ಲವರ ಸಂಮಿಶ್ರಣದಿಂದ ಒಂದು ಉನ್ನತ, ಕ್ರೂರ, ಗಂಭೀರ ಚಿತ್ರ ಸೃಷ್ಟಿಯಾಗುತ್ತದೆ. ಈ ಚಿತ್ರದ ಅಂಶಗಳೆಲ್ಲ ರೋಮ್ ಸಾಮ್ರಾಜ್ಯದ ಆಯುಷ್ಯದ ದೀರ್ಘ ಕಾಲಾವಧಿಯ ಬೇರೆಬೇರೆ ಬಿಂದುಗಳಿಂದ ಪಡೆದುವುಗಳು. ಕ್ರಿ.ಶ. 1066ರಲ್ಲಿ ಇಂಗ್ಲೆಂಡನ್ನು ಜಯಿಸಿದ ವಿಲಿಯಮ್ಮನ ಸಮಯದಿಂದ ಇಂದಿನವರೆಗೂ ಲಂಡನ್ ಅದೆಷ್ಟು ಬದಲಾಯಿಸಿದೆಯೋ ಅದಕ್ಕಿಂತ ಆಳವಾದ ಮಾರ್ಪಾಟುಗಳನ್ನು ಈ ಊಹಾ ಚಿತ್ರದ ರೋಮ್ ಒಳಗೊಂಡಿದೆ.

ರೋಮಿನ ಬೆಳೆವಣಿಗೆಯನ್ನು ನಾಲ್ಕು ಹಂತಗಳನ್ನಾಗಿ ವಿಭಾಗಿಸಬಹುದು. ಗಾಲರು ರೋಮನ್ನು ಲೂಟಿ ಮಾಡಿದಂದಿನಿಂದ (ಕ್ರಿ.ಪೂ. 390) ಮೊದಲನೆ ಪ್ಯೂನಿಕ್ ಯುದ್ಧದ ಅಂತ್ಯದವರೆಗೆ (ಕ್ರಿ.ಪೂ. 240) ಮೊದಲನೆ ಹಂತ. ಇದನ್ನು "ಸಮರೂಪ ಹೊಂದುತ್ತಿದ್ದ ಪ್ರಜಾಪ್ರಭುತ್ವದ ಹಂತ"ವೆನ್ನಬಹುದು. ಇದು ಬಹುಶಃ ರೋಮಿನ ಚರಿತ್ರೆಯಲ್ಲೇ ಅತ್ಯುದಾತ್ತ, ವೈಶಿಷ್ಟ್ಯಪೂರ್ಣ ಯುಗ; ಬಹು ಕಾಲದಿಂದಿದ್ದ ಪ್ಯಾಟ್ರಿಷಿಯನ್ ಮತ್ತು ಪ್ಲೀಬಿಯನ್ನರ ಕಲಹ ಆಗ ಮುಗಿಯುವುದರಲ್ಲಿತ್ತು. ಎಟ್ರುಸ್ಕನ್ನರ ಭಯ ನಿವಾರಣೆಯಾಗಿತ್ತು. ಅತಿ ಐಶ್ವರ್ಯ, ಅತಿ ಬಡತನ ಇನ್ನೂ ಇರಲಿಲ್ಲ. ಬಹುಜನರು ಸಾರ್ವಜನಿಕ ಸೇವೆಯಲ್ಲಿ ಮನಸ್ಸುಳ್ಳವರಾಗಿದ್ದರು. ಕ್ರಿ.ಶ. 1900ರ ಮೊದಲಿನ ದಕ್ಷಿಣ ಆಫ್ರಿಕದ ಬೋಯರ್ ಪ್ರಜಾಪ್ರಭುತ್ವ, ಅಥವಾ ಕ್ರಿ.ಶ. 1800 ರಿಂದ 1850ರ ವರೆಗಿನ ಅಮೆರಿಕ ಸಂಯುಕ್ತ ಸಂಸ್ಥಾನಗಳ ಉತ್ತರ ಸಂಸ್ಥಾನಗಳು ಇದ್ದಂತೆ ಇದೂ ಸ್ವತಂತ್ರರಾದ ರೈತರ ರಾಜ್ಯವಾಗಿತ್ತು. ಈ ಯುಗದ ಮೊದಲಲ್ಲಿ ಇದು ಪ್ರಾಯಶಃ ಇಪ್ಪತ್ತು ಚದರ ಮೈಲಿ ಸಹ ಇರಲಿಲ್ಲ. ತನ್ನಂತೆಯೇ ಇದ್ದ ಬಲಿಷ್ಟವಾದ ಸುತ್ತಮುತ್ತಲಿನ ರಾಜ್ಯಗಳೊಡನೆ ಹೋರಾಡಿದರೂ ಅವುಗಳನ್ನು ನಾಶಮಾಡಲೆಳಸದೆ ತನ್ನೊಡನೆ ಸೇರಿಸಿಕೊಳ್ಳಲು ಪ್ರಯತ್ನಿಸಿತು. ಅನೇಕ ಶತಮಾನ ಕಾಲ ಒಳಕಲಹಗಳನ್ನನುಭವಿಸಿದುದರಿಂದ ಇಲ್ಲಿಯ ಜನ ರಾಜಿಮಾಡಿಕೊಳ್ಳುವುದರಲ್ಲಿ ನಿಪುಣರಾಗಿದ್ದರು. ಸೋತು ಹೋದ ಪಟ್ಟಣಗಳಲ್ಲಿ ಕೆಲವು ಮತದಾನದ ಹಕ್ಕಿನ ಮೂಲಕ ರಾಜ್ಯಾಡಳಿತದಲ್ಲಿ ಭಾಗಪಡೆದು ರೋಮನ್ ನಗರಗಳಾಗಿ ಹೋದುವು. ಮತ್ತೆ ಕೆಲವು ಆಡಳಿತದಲ್ಲಿ ಸ್ವತಂತ್ರವಾಗಿದ್ದರೂ ರೋಮಿನಲ್ಲಿ ವ್ಯಾಪಾರಮಾಡುವ ಮತ್ತು ರೋಮನ್ನರೊಡನೆ ವಿವಾಹವಾಗುವ ಹಕ್ಕನ್ನು ಪಡೆದುವು. ಹೊಸದಾದ ಸೋತ ರಾಜ್ಯಗಳಲ್ಲಿ ಮುಖ್ಯ ಸ್ಥಾನಗಳಲ್ಲಿ ಪೂರ್ಣ ಪೌರತ್ವ ಪಡೆದ ಜನರ ಸೈನ್ಯ ಠಾಣ್ಯಗಳನ್ನೂ ಬೇರೆಬೇರೆ ವಿಧದ ಹಕ್ಕುಗಳನ್ನು ಪಡೆದ ವಸಾಹತುಗಳನ್ನೂ ಸ್ಥಾಪಿಸಲಾಯಿತು. ದೊಡ್ಡ ಭಾಟಾ ಮಾರ್ಗಗಳನ್ನೂ ಆಗಲೇ ರಚಿಸಿದರು. ಈ ಕಾರ್ಯನೀತಿಯ ಫಲವಾಗಿ ಇಟಲಿಯಷ್ಟೂ ಬಹುಬೇಗ ಲ್ಯಾಟಿನೈಸ್ ಆದುದರಲ್ಲಿ ಏನೂ ಆಶ್ಚರ್ಯವಿಲ್ಲ. ಕ್ರಿ.ಪೂ. 89ರಲ್ಲಿ ಇಟಲಿಯ ಸ್ವತಂತ್ರ ಜನರೆಲ್ಲರೂ ರೋಮಿನ ನಾಗರಿಕರಾದರು. ಕೊನೆಗೆ ಕಾನೂನು ರೀತ್ಯಾ ರೋಂ ಸಾಮ್ರಾಜ್ಯವೆಂದರೆ ಒಂದು ದೊಡ್ಡದಾಗಿ ಬೆಳೆಸಿದ ನಗರವಾಯಿತು. ಕ್ರಿ. ಶ. 212 ರಲ್ಲಿ ಈ ಸಾಮ್ರಾಜ್ಯದಲ್ಲಿದ್ದ ಪ್ರತಿಯೊಬ್ಬ ಸ್ವತಂತ್ರ ಮನುಷ್ಯನಿಗೂ ಪೌರತ್ವ ದೊರೆಯಿತು. ಅಂದರೆ ಇವರೆಲ್ಲ ರೋಮ್ ನಗರಕ್ಕೆ ಹೋಗಲು ಸಾಧ್ಯವಿದ್ದಲ್ಲಿ ಅಲ್ಲಿಯ ನಗರಸಭೆಯಲ್ಲಿ ಮತ ಕೊಡಬಹುದಾಗಿತ್ತು.

ಹೀಗೆ ಸುಲಭ ಸಾಧ್ಯವಿದ್ದಲ್ಲೆಲ್ಲಾ ನಗರಗಳ ಮತ್ತು ಇಡಿಯ ದೇಶಗಳ ಜನರಿಗೆಲ್ಲಾ ಪೌರತ್ವವನ್ನು ಕೊಡುವುದು ರೋಮ್ ಸಾಮ್ರಾಜ್ಯ ವಿಸ್ತರಣೆಯ ವಿಶೇಷ ತಂತ್ರವಾಗಿತ್ತು. ಹಿಂದೆ ಆಗುತ್ತಿದ್ದಂತೆ ದಂಡಯಾತ್ರೆ ನಡೆಸಿದ ಮೇಲೆ ವಿಜಯಿ ಜನರನ್ನು

ಪರಾಜಿತ ಜನಾಂಗ ತನ್ನಲ್ಲಿ ಸೇರಿಸಿಕೊಂಡು ಬಿಡುವ್ವವು. ಇಲ್ಲಿ ತಿರುಗುವುರುಗಾಗಿ ವಿಜಯಿ ರೋಮನ್ನರು ಪರಾಜಿತರನ್ನು ತಮ್ಮಲ್ಲಿ ಸೇರಿಸಿಕೊಂಡರು.

ಆದರೆ ಮೊದಲನೆ ಪ್ಯೂನಿಕ್ ಯುದ್ಧ ಮತ್ತು ಸಿಸಿಲಿಯ ಆಕ್ರಮಣದನಂತರ ಇದ ರೊಡನೆಯೇ ಮತ್ತೊಂದು ಕ್ರಿಯೆ ನಡೆಯುತೊಡಗಿತು. ಸಿಸಿಲಿಯನ್ನು ಗೆದ್ದು ತಂದ ಸ್ವತ್ತಿನಂತೆ ನಡೆಸಿಕೊಂಡರು. ಸಿಸಿಲಿಯು ರೋಮನ್ನರ ಸ್ಥಿರ ಆಸ್ತಿ ಎಂದು ಘೋಷಿಸ ಲಾಯಿತು. ಫಲವತ್ತಾದ ಭೂಮಿ ಮತ್ತು ಕಷ್ಟಪಟ್ಟು ದುಡಿಯುತ್ತಿದ್ದ ಜನರನ್ನುಳ್ಳ ಸಿಸಿಲಿಯನ್ನು ಹೀರಿ ರೋಮಿನ ಐಶ್ವರ್ಯವನ್ನು ಬೆಳೆಸಿದರು. ಐಶ್ವರ್ಯದ ಬಹುಭಾಗ ಪ್ಯಾಟ್ರಿಷಿಯನ್ನರಿಗೆ ಮತ್ತು ಪ್ಲೀಬಿಯನ್ನರಲ್ಲಿ ಪ್ರಭಾವಿಗಳಾಗಿದ್ದವರಿಗೆ ಸೇರಿತು. ಈ ಯುದ್ಧದಿಂದ ರೋಮಿಗೆ ಅನೇಕ ಗುಲಾಮರು ದೊರಕಿದರು. ಮೊದಲನೆ ಪ್ಯೂನಿಕ್ ಯುದ್ಧಕ್ಕೆ ಮುಂಚೆ ರೋಂ ಪ್ರಜಾಪ್ರಭುತ್ವದ ಜನತೆಯಲ್ಲಿ ಹೆಚ್ಚಾಗಿ ಪೌರತ್ವವಿದ್ದ ಕ್ಷೈತರೇ ಇದ್ದರು. ಸೈನ್ಯಕ್ಕೆ ಸೇರಿ ಯುದ್ಧ ಮಾಡುವುದು ಇವರ ಹಕ್ಕು ಹೊಣೆಗಾರಿಕೆ ಎರಡೂ ಆಗಿತ್ತು. ಇವರು ಯುದ್ಧದಲ್ಲಿ ತೊಡಗಿದ್ದಾಗ ಇವರ ಹೊಲ ಗದ್ದೆಗಳು ಸಾಲ ತೀರಿಸುವುದಕ್ಕೆ ಹೋಗಿ ಶ್ರೀಮಂತರು ದೊಡ್ಡ ಪ್ರಮಾಣದಲ್ಲಿ ಗುಲಾಮರಿಂದ ವ್ಯವಸಾಯ ನಡೆಸುವ ಪದ್ಧತಿ ಜಾರಿಗೆ ಬಂತು. ಈ ಸೈನಿಕರು ಹಿಂತಿರುಗಿ ತಮ್ಮದಾಗಿ ಉಳಿದಿದ್ದ ಜಮೀನಿನಲ್ಲಿ ವ್ಯವಸಾಯ ಮಾಡಲಾರಂಭಿಸಿದಾಗ ಸಿಸಿಲಿಯ ಜಮೀನುಗಳು ಮತ್ತು ಇಟಲಿಯ ಹೊಸ ಎಸ್ಟೇಟುಗಳೊಡನೆ ಸ್ಪರ್ಧಿಸಬೇಕಾಗಿ ಬಂತು. ಇವೆರಡು ಕಡೆಯೂ ಗುಲಾಮರಿಂದ ವ್ಯವಸಾಯ ನಡೆಸುತ್ತಿದ್ದರು. ಕಾಲ ಬದಲಾಯಿಸಿತ್ತು. ಸಿಸಿಲಿ ರೋಮಿನ ಕೈಯ್ಯಲ್ಲಿದ್ದದ್ದಷ್ಟೇ ಅಲ್ಲ, ಸಾಮಾನ್ಯ ಮನುಷ್ಯನು ಸಾಲಕೊಟ್ಟ ಧನಿಕ, ವ್ಯವಸಾಯದಲ್ಲಿ ತನ್ನೊಡನೆ ಸ್ಪರ್ಧಿಸುತ್ತಿದ್ದ ಧನಿಕರ ಕೈಗೆ ಸಿಕ್ಕಿ ಬಿದ್ದನು. ರೋಮ್ ತನ್ನ ಎರಡನೆ ಯುಗ, ಅತಿಲಾಭಾಕಾಂಕ್ಷಿ ಧನಿಕರ ಯುಗದಲ್ಲಿ ಕಾಲಿಟ್ಟಿತ್ತು.

ಇನ್ನೂರು ವರ್ಷಗಳ ಕಾಲ ರೋಮನ್ ಕ್ಷೈತ-ಸೈನಿಕರು ಸ್ವಾತಂತ್ರ್ಯಕ್ಕಾಗಿ, ಆಡಳಿತದಲ್ಲಿ ಹಕ್ಕು ಪಡೆಯುವುದಕ್ಕಾಗಿ ಹೋರಾಡಿದರು. ನೂರು ವರ್ಷ ಇವುಗಳನ್ನು ಪಡೆದು ಸಂತೋಷದಿಂದಿದ್ದರು. ಮೊದಲನೆ ಪ್ಯೂನಿಕ್ ಯುದ್ಧ ಇವರನ್ನು ನಿರ್ಬಲರ ನ್ನಾಗಿ ಮಾಡಿ ಈ ಎಲ್ಲಾ ಹಕ್ಕುಬಾಧ್ಯತೆಗಳನ್ನು ಕಸಿದುಕೊಂಡಿತು.

ಇಷ್ಟು ಹೊತ್ತಿಗೆ ಇವರ ಮತದಾನದ ಹಕ್ಕಿನಲ್ಲೂ ಏನೂ ಅರ್ಥ ಉಳಿದಿರಲಿಲ್ಲ. ರೋಮನ್ ಪ್ರಜಾಪ್ರಭುತ್ವದಲ್ಲಿ ಎರಡು ಆಡಳಿತ ಸಭೆಗಳಿದ್ದುವು. ಇವುಗಳಲ್ಲಿ ಸೆನೆಟಗೆ ಮೊದಲ ಸ್ಥಾನವಿತ್ತು. ಮೊದಲು ಇದರ ಸದಸ್ಯರೆಲ್ಲರೂ ಪ್ಯಾಟ್ರಿಷಿಯನ್ನರಾಗಿದ್ದರು. ಆ ಮೇಲೆ ಇವರಷ್ಟೇ ಅಲ್ಲದೆ ಎಲ್ಲಾ ತೆರದ ಪ್ರಮುಖ ವ್ಯಕ್ತಿಗಳೂ ಇದರ ಸದಸ್ಯರಾದರು. ಮೊದಲ ಬಾರಿ ಇವರನ್ನು ಪ್ರಬಲ ಅಧಿಕಾರಿಗಳಾದ ಕಾನ್ಸಲ್‌ಗಳು ಮತ್ತು ಸೆನ್ಸಾರ್ ಗಳಲ್ಲಿ ಕೆಲವರು ಆಹ್ವಾನಿಸಿದರು. ಬ್ರಿಟಿಷ್ ಶ್ರೀಮಂತರ ಸಭೆಯಂತೆ ಇನೂ ದೊಡ್ಡ ಜಮೀನುದಾರರುಗಳು, ಪ್ರಮುಖ ರಾಜಕೀಯ ವ್ಯಕ್ತಿಗಳು, ದೊಡ್ಡ ವರ್ತಕರು ಇಂತಹ ವರ ಒಂದು ಸಭೆ ಆಯಿತು. ಇಂದಿನ ಅಮೇರಿಕನ್ ಸೆನೆಟಗಿಂತ ಇದು ಶ್ರೀಮಂತರ ಸಭೆ

ಯನ್ನು ಹೋಲುತ್ತಿತ್ತು. ಪ್ಯೂನಿಕ್ ಯುದ್ಧಗಳಿಂದೀಚೆಗೆ ಮುನ್ನೂರು ವರ್ಷಗಳು ಇದು ರೋಮನ್ ರಾಜಕೀಯ ಪ್ರಪಂಚದ ಕೇಂದ್ರವಾಗಿತ್ತು. ಎರಡನೆಯ ಸಭೆಯೇ ಜನತಾ ಸಭೆ (Popular assembly). ಇದು ರೋಮಿನ ಪ್ರತಿಯೊಬ್ಬ ನಾಗರಿಕನೂ ಭಾಗವಹಿಸುವಂತಹ ಸಭೆಯೆನಿಸಿಕೊಂಡಿತ್ತು. ರೋಮ್ ಕೇವಲ 20 ಚದರ ಮೈಲಿ ವಿಸ್ತೀರ್ಣವಾಗಿದ್ದಾಗ ಇದು ಸಾಧ್ಯ ಎನ್ನಬಹುದಾಗಿತ್ತು. ರೋಮಿನ ಪೌರತ್ವ ಇಟಲಿಯ ಹೊರಗಿದ್ದ ಜನರಿಗೆ ಸಹ ದೊರಕಿದಾಗ ಇದು ಅಸಾಧ್ಯವಾಗಿ ಹೋಯಿತು. ಈ ಸಭೆಯ ಅಧಿವೇಶನಗಳನ್ನು ರೋಮ್ ಕೋಟೆಗೋಡೆಗಳ ಮೇಲಿನಿಂದ ತುತೂರಿ ಊದಿ ಘೋಷಿಸುತ್ತಿದ್ದರು. ಬರುಬರುತ್ತಾ ಇವುಗಳಲ್ಲಿ ರಾಜಕೀಯ ಹೌದಪ್ಪಗಳೂ ನಗರದ ಅಪ್ರಯೋಜಕರೇ ತುಂಬಿರುತ್ತಿದ್ದರು. ಕ್ರಿ. ಪೂ. ನಾಲ್ಕನೆ ಶತಮಾನದಲ್ಲಿ ಸೆನೆಟಿನ ಮೇಲೆ ಇದರ ಹಿಡಿತ ತಕ್ಕಮಟ್ಟಿಗೆ ಇದ್ದು ಸಾಮಾನ್ಯ ಮನುಷ್ಯನ ಅಹವಾಲುಗಳಿಗೆ ಕೇಳಿಕೆ ಇರುತ್ತಿತ್ತು. ಪ್ಯೂನಿಕ್ ಯುದ್ಧಗಳು ಮುಗಿಯುವ ಹೊತ್ತಿಗೆ ಇದು ಸೋತು ಹೋಗಿದ್ದ ಜನಶಕ್ತಿಯ ನಿಷ್ಪ್ರಯೋಜಕ ಅವಶೇಷವಾಗಿ ಹೋಗಿತ್ತು. ದೊಡ್ಡ ಮನುಷ್ಯರುಗಳ ಮೇಲೆ ಯಾವ ವಿಧವಾದ ಕಾನೂನು ಹಿಡಿತವೂ ಇರಲಿಲ್ಲ.

ಈಗ ಇರುವಂತಹ ಪ್ರತಿನಿಧಿ ಸರ್ಕಾರಗಳು ರೋಮನ್ ಪ್ರಜಾಪ್ರಭುತ್ವದಲ್ಲಿ ಯಾವ ಕಾಲದಲ್ಲಿಯೂ ಜಾರಿಗೆ ಬರಲೇ ಇಲ್ಲ. ಜನ ಸಾಮಾನ್ಯರ ಅಭಿಪ್ರಾಯವನ್ನು ಪ್ರಕಟಪಡಿಸಲು ಪ್ರತಿನಿಧಿಗಳನ್ನು ಆರಿಸಬಹುದೆಂಬ ಯೋಚನೆ ಯಾರಿಗೂ ಬರಲಿಲ್ಲ. ಇದು ಬಹುಮುಖ್ಯವಾದ ಅಂಶ. ಚರಿತ್ರೆಯನ್ನು ವ್ಯಾಸಂಗ ಮಾಡುವವರೆಲ್ಲರೂ ಇದನ್ನು ನೆನೆಪಿನಲ್ಲಿಡಬೇಕು. ರೋಮಿನ ಲೋಕಸಭೆಯು ಅಮೆರಿಕದ ಪ್ರತಿನಿಧಿ ಸಭೆಯ ಅಥವಾ ಬ್ರಿಟನ್ನಿನ ಹೌಸ್ ಆಫ್ ಕಾಮನ್ಸಿನ ಸಮಕ್ಕೆ ಯಾವಾಗಲೂ ಬರಲಿಲ್ಲ. ತಾತ್ತ್ವಿಕವಾಗಿ ನೋಡಿದರೆ ಪ್ರತಿಯೊಬ್ಬ ಪೌರನೂ ಇದರಲ್ಲಿ ಭಾಗವಹಿಸಬಹುದೆಂದಿತ್ತು. ನಿಜವಾಗಿ ಇದರಿಂದ ಏನೂ ಉಪಯೋಗವಿರಲಿಲ್ಲ.

ಎರಡನೆ ಪ್ಯೂನಿಕ್ ಯುದ್ಧ ಮುಗಿಯುವ ಹೊತ್ತಿಗೆ ರೋಂ ಸಾಮ್ರಾಜ್ಯದ ಸಾಮಾನ್ಯ ಪ್ರಜೆಗಳ ಸ್ಥಿತಿ ಬಹು ಶೋಚನೀಯವಾಗಿತ್ತು. ಅವರು ಅತಿ ಬಡವರಾಗಿದ್ದರು. ಅವರ ಹೊಲಗದ್ದೆಗಳು ಎಂದೋ ಅವರ ಕೈ ತಪ್ಪಿದ್ದುವು. ಏನಾದರೂ ಉದ್ಯಮಗಳಲ್ಲಿ ಕೈಹಾಕಬೇಕೆಂದರೆ ಶ್ರೀಮಂತರು ಅವೆಲ್ಲವನ್ನೂ ಗುಲಾಮರಿಂದ ಲಾಭದಾಯಕವಾಗಿ ನಡೆಸುತ್ತಿದ್ದರು. ಈ ಪರಿಸ್ಥಿತಿಯನ್ನು ಬದಲಾಯಿಸಲು ಸಾಮಾನ್ಯ ಪ್ರಜೆಗೆ ಯಾವ ರಾಜಕೀಯ ಬಲವೂ ಉಳಿದಿರಲಿಲ್ಲ. ಯಾವ ತೆರದ ರಾಜಕೀಯ ಉಪಾಯವೂ ಇಲ್ಲದ ಜನರಿಗೆ ಉಳಿದಿರುವುದು ಒಂದೇ ಮಾರ್ಗ, - ದಂಗೆಯೇಳುವುದು. ಕ್ರಿ. ಪೂ. ಎರಡು ಮತ್ತು ಒಂದನೆ ಶತಮಾನಗಳಲ್ಲಿ ರೋಮಿನ ಒಳರಾಜಕೀಯವೆಂದರೆ ನಿಷ್ಫಲವಾದ ದಂಗೆಗಳ ಕಥೆ. ದೊಡ್ಡ ಎಸ್ಟೇಟುಗಳನ್ನು ಒಡೆದು ಸ್ವತಂತ್ರ ರೈತನಿಗೆ ತಿರುಗಿ ಜಮೀನು ಕೊಡುವುದಕ್ಕೆ, ಆತನ ಸಾಲಗಳನ್ನು ಪೂರ್ತಿಯಾಗಿ ಅಥವಾ ಕೊನೆಪಕ್ಷ ಸಾಲದ ಸ್ವಲ್ಪ ಅಂಶವನ್ನು ವಜಾಮಾಡುವುದಕ್ಕೆ ಆ ಕಾಲದಲ್ಲಿ ನಡೆದ ಹೋರಾಟಗಳನ್ನು ಈ ಸಣ್ಣ

ಪುಸ್ತಕದಲ್ಲಿ ವರ್ಣಿಸಲಸಾಧ್ಯ. ಅದು ಅಂತರ್ಯುದ್ಧ ಮತ್ತು ದಂಗೆಗಳ ಕಾಲ. ಕ್ರಿ. ಪೂ. 73ರಲ್ಲಿ ಸ್ಪಾರ್ಟಾಕಸ್ಸನ ಮುಂದಾಳುತ್ವದಲ್ಲಿ ಇಟಲಿಯ ಗುಲಾಮರೆಲ್ಲಾ ದಂಗೆಯೆದ್ದರು. ಈ ದೊಡ್ಡ ದಂಗೆ ಮೊದಲೇ ತೊಂದರೆಯಲ್ಲಿದ್ದ ಇಟಲಿಯಲ್ಲಿ ಮತ್ತೂ ಕಷ್ಟ ಸಂಕಟಗಳಿಗೆಡೆಗೊಟ್ಟಿತು. ಈ ಗುಲಾಮರಲ್ಲಿ ಗ್ಲೇಡಿಯೇಟೋರಿಯಲ್ ಪ್ರದರ್ಶನಗಳಿಗೋಸ್ಕರ ತರಬೇತಾದವರಿದ್ದುದರಿಂದ ಈ ದಂಗೆ ಸ್ವಲ್ಪಮಟ್ಟಿಗೆ ಫಲಪ್ರದವಾಯಿತು. ಆರಿಹೋಗಿದೆಯೆಂದು ತಿಳಿದಿದ್ದ ವೆಸೂವಿಯಸ್ ಅಗ್ನಿಪರ್ವತದ ಬಾಯಿಯಲ್ಲಿ ಎರಡು ವರ್ಷಗಳು ಸ್ಪಾರ್ಟಾಕಸ್ ಶ್ರೀಮಂತರನ್ನು ಎದುರಿಸಿ ಕೊನೆಗೆ ಸೋತುಹೋದನು. ದಂಗೆಯಲ್ಲಿ ಭಾಗವಹಿಸಿದವರನ್ನು ಅತ್ಯಂತ ಕ್ರೌರ್ಯದಿಂದ ಶಿಕ್ಷಿಸಲಾಯಿತು. ಸ್ಪಾರ್ಟಾಕಸನ ಅನುಯಾಯಿಗಳಾದ ಆರು ಸಾವಿರ ಜನರನ್ನು ರೋಮಿನಿಂದ ದಕ್ಷಿಣಕ್ಕೆ ಹೋಗುವ ದೊಡ್ಡ ಛಾಟಾ ಮಾರ್ಗವಾದ ಲಿಪ್ಪಿಯನ್ ಮಾರ್ಗದ ಇಕ್ಕೆಲಗಳಲ್ಲೂ ಶಿಲುಬೆಗೇರಿಸಿದರು. (ಕ್ರಿ.ಪೂ. 71)

ತನ್ನನ್ನು ಕೆಳಗೆ ತಳ್ಳಿ ಹೀನಾಯಸ್ಥಿತಿಗೊಳಮಾಡಿದ ಈ ಶಕ್ತಿಗಳ ಮುಂದೆ ಸಾಮಾನ್ಯ ಪ್ರಜೆ ಏನೂ ಮಾಡಲಾಗಲಿಲ್ಲ. ಆದರೆ ಇವರನ್ನು ತುಳಿಯುತ್ತಿದ್ದ ಈ ದೊಡ್ಡ ಶ್ರೀಮಂತರುಗಳೇ ಇವರನ್ನು ಸೋಲಿಸುತ್ತಿದ್ದಾಗ ತಾವರಿಯುವಂತೆಯೇ ಮತ್ತೊಂದು ಪ್ರಬಲ ಶಕ್ತಿಯನ್ನು ಮುಂದಕ್ಕೆ ತರುತ್ತಿದ್ದರು. ಈ ಪ್ರಬಲಶಕ್ತಿ–ರೋಮನ್ ಸೈನ್ಯ–ಮುಂದೆ ಶ್ರೀಮಂತ ದರಿದ್ರರೆಲ್ಲರನ್ನೂ ತನ್ನ ಕೈಕೆಳಗೆ ತಂದುಕೊಂಡಿತು.

ಎರಡನೆ ಪ್ಯೂನಿಕ್ ಯುದ್ಧದ ಮುಂಚೆ ರೋಮನ್ ಸೈನ್ಯವೆಂದರೆ ಸ್ವತಂತ್ರರಾದ ರೈತರುಗಳನ್ನು ಕಡ್ಡಾಯವಾಗಿ ಸೇರಿಸಿಕೊಂಡು ರಚಿಸಿದುದಾಗಿತ್ತು. ಇವರು ತಮ್ಮ ಯೋಗ್ಯತಾನುಸಾರ ರಾವುತ ದಳದಲ್ಲಿ ಅಥವಾ ಪದಾತಿದಳದಲ್ಲಿ ಸೇರಿಕೊಳ್ಳುತ್ತಿದ್ದರು. ಸಮೀಪದಲ್ಲಿಯೇ ನಡೆವ ಯುದ್ಧಗಳಿಗೇನೋ ಇದು ಬಲು ಒಳ್ಳೆಯ ಸೈನ್ಯವಾಗಿದ್ದರೂ ದೇಶ ಬಿಟ್ಟು ಹೊರಗೆ ಹೋಗಿ ದೀರ್ಘಕಾಲ ತಾಳ್ಮೆಯಿಂದ ಹೋರಾಡಬೇಕಾದಾಗ ಈ ವ್ಯವಸ್ಥೆ ಅಷ್ಟು ಸರಿಹೋಗುತ್ತಿರಲಿಲ್ಲ. ಅಲ್ಲದೆ ಮುಂದೆ ಗುಲಾಮರ ಸಂಖ್ಯೆ ಹೆಚ್ಚಾಗಿ ದೊಡ್ಡ ಎಸ್ಟೇಟುಗಳು ಬಂದಾಗ ಇಂತಹ ಸ್ವತಂತ್ರ ಮನೋಭಾವದ ಧೀರ ರೈತರ ಸಂಖ್ಯೆ ಕಡಿಮೆಯಾಯಿತು. ಹೀಗಾಗಿ ಮೇರಿಯಸ್ ಎಂಬ ಜನಪ್ರಿಯನಾಯಕ ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತಂದನು. ಕಾರ್ಥೇಜು ಸೋತು ಹೋದ ಮೇಲೆ ಉತ್ತರ ಆಫ್ರಿಕದಲ್ಲಿ, ನ್ಯೂಮಿಡಿಯವೆಂಬ ಅರ್ಧ ನಾಗರಿಕ ರಾಜ್ಯವೊಂದು ಹುಟ್ಟಿಕೊಂಡಿತ್ತು. ಇದರ ರಾಜ ಜುಗರ್ಥನಿಗೂ ರೋಮಿಗೂ ಕಲಹ ಉಂಟಾಗಿ ಈತನನ್ನು ಸೋಲಿಸಲು ರೋಂ ಬಹು ಕಷ್ಟ ಪಡಬೇಕಾಯಿತು. ಜನತೆ ಅಸಮಾಧಾನಗೊಂಡುದರಿಂದ ಈ ಅಪಮಾನಕರ ಯುದ್ಧವನ್ನು ಗೆಲ್ಲಲೆಂದು ಮೇರಿಯಸ್ಸನನ್ನು ದಂಡಾಧಿಕಾರಿಯನ್ನಾಗಿ ಮಾಡಿದರು. ಈತನು ಸೈನಿಕರನ್ನು ಸಂಬಳ ಕೊಟ್ಟು ನೇಮಿಸಿ ಅವರಿಗೆ ಚೆನ್ನಾಗಿ ತರಬೇತು ಕೊಟ್ಟನು. ಕ್ರಿ.ಪೂ. 106 ರಲ್ಲಿ ಜುಗರ್ಥನನ್ನು ಸೆರೆಹಿಡಿದು ರೋಮಿಗೆ ತಂದರು. ತನ್ನ ಆಡಳಿತದ ಅವಧಿ ಮುಗಿದರೂ

ಮೇರಿಯಸ್ ಕಾನ್ಸಲ್ ಪದವಿಯನ್ನು ಬಿಟ್ಟು ಕೊಡಲಿಲ್ಲ. ಹೊಸ ಸೈನ್ಯ ಇವನ ಬೆಂಬಲವಾಗಿತ್ತು. ಇವನನ್ನು ಅಂಕೆಯಲ್ಲಿಡುವಂತಹವರು ಬೇರೆ ಯಾರೂ ಇರಲಿಲ್ಲ.

ಹೀಗೆ ಮೇರಿಯಸ್ಸನಿಂದ ರೋಮಿನ ಮೂರನೆಯ ಯುಗ – ಸೈನ್ಯಾಧಿಕಾರಿಗಳ ಪ್ರಭುತ್ವದ ಯುಗ–ಮೊದಲಾಯಿತು. ಅಂದಿನ ಮುಂದಾಳುಗಳೆಲ್ಲರೂ ವೇತನ ಕೊಟ್ಟು ಸೈನಿಕರನ್ನು ಪಡೆದು ತಮ್ಮ ತಮ್ಮದೇ ಸೈನ್ಯಗಳನ್ನು ಕಟ್ಟುತ್ತಿದ್ದರು. ಇಂತಹ ಸೈನ್ಯ ಗಳಲ್ಲಿ ಹೋರಾಟ ನಡೆದು ಗೆದ್ದ ಸೈನ್ಯದ ಒಡೆಯನು ರೋಮಿನ ಮುಖ್ಯಸ್ಥನಾಗಿದ್ದನು. ಮೇರಿಯಸ್ಸನ ಕೈಕೆಳಗೆ ಆಫ್ರಿಕದಲ್ಲಿ ಹೋರಾಡಿದ್ದ ಶ್ರೀಮಂತ ಮನೆತನದ ಸುಲ್ಲನು ಆತನನ್ನೇ ಎದುರಿಸಿ ನಿಂತನು. ಇವರಿಬ್ಬರೂ ತಮ್ಮ ತಮ್ಮ ರಾಜಕೀಯ ಪ್ರತಿಸ್ಪರ್ಧಿ ಗಳನ್ನು ನಿರ್ದಾಕ್ಷಿಣ್ಯವಾಗಿ ಕೊಂದು ಹಾಕಿದರು. ಬೇಕಾದಷ್ಟು ಕಗ್ಗೊಲೆ ನಡೆಯಿತು. ಎಷ್ಟೋ ಜನರನ್ನು ಗಡೀಪಾರು ಮಾಡಿದರು. ಸಾವಿರಗಟ್ಟಲೆ ಜನರಿಗೆ ಮರಣದಂಡನೆ ವಿಧಿಸಿ ಅವರ ಜಮೀನುಗಳನ್ನು ಮಾರಿಬಿಡುತ್ತಿದ್ದರು. ರಕ್ತಪಾತದಿಂದ ಕೂಡಿದ ಇವರ ಕಾದಾಟ ಮತ್ತು ಭೀಕರವಾದ ಸ್ಪಾರ್ಟಕಸ್ಸನ ದಂಗೆಯಾದ ಮೇಲೆ ಕೆಲವು ಕಾಲ ಲೂಸಲಸ್, ಪಾಂಪೆ ಮಹಾಶಯ, ಕ್ರಾಸಸ್ ಮತ್ತು ಜೂಲಿಯಸ್ ಸೀಸರ್ ಸೈನ್ಯ ನಾಯಕರಾಗಿ ಪ್ರಾಬಲ್ಯ ಪಡೆದರು. ಸ್ಪಾರ್ಟಕಸ್ಸನನ್ನು ಸೋಲಿಸಿದವನು ಕ್ರಾಸಸ್, ಲೂಸಲಸ್ ಏಷ್ಯಾ ಮೈನರನ್ನು ಜಯಿಸಿ ಅರ್ಮೆನಿಯದವರೆಗೂ ನುಗ್ಗಿ ಬೇಕಾದಷ್ಟು ಐಶ್ವರ್ಯವನ್ನು ಸಂಪಾದಿಸಿ ವಿಶ್ರಾಂತಿ ಜೀವನಕ್ಕೆ ತೆರಳಿದನು. ಕ್ರಾಸಸ್ ಇನ್ನೂ ಮುಂದೆ ನುಗ್ಗಿ ಪರ್ಷಿಯದ ಮೇಲೆ ದಂಡೆತ್ತಿ ಹೋದನು. ಆದರೆ ಪಾರ್ಥಿಯನ್ನರು ಈತನನ್ನು ಸೋಲಿಸಿ ಕೊಂದುಹಾಕಿದರು. ದೀರ್ಘಕಾಲ ಪ್ರತಿಸ್ಪರ್ಧೆ ನಡೆದ ನಂತರ ಕ್ರಿ. ಪೂ. 48 ರಲ್ಲಿ ಪಾಂಪೆಯನ್ನು ಜೂಲಿಯಸ್ ಸೀಸರ್ ಸೋಲಿಸಿದನು. ಈಜಿಪ್ಟಿನಲ್ಲಿ ಪಾಂಪೆಯ ಕೊಲೆಯಾಗಿ ಸೀಸರ್ ರೋಮನ್ ಪ್ರಪಂಚದ ಏಕಮಾತ್ರ ನಾಯಕನಾದನು.

ಜೂಲಿಯಸ್ ಸೀಸರನ ವ್ಯಕ್ತಿತ್ವ ಅಂತಹ ಪ್ರಮುಖವಾದುದಾಗಲೀ ಉದಾತ್ತ ವಾದುದಾಗಲೀ ಅಲ್ಲವಾದರೂ ಮಾನವವರ್ಗದ ಮನಸ್ಸಿನ ಮೇಲೆ ಇದರ ಪರಿಣಾಮ ಅತಿಯಾಗಿದೆ. ಈತನು ಒಂದು ಆದರ್ಶ ಪ್ರತೀಕವಾಗಿ ಹೋಗಿದ್ದಾನೆ. ಈತನು ಮುಖ್ಯ ವ್ಯಕ್ತಿ ಎನಿಸುವುದು ನಮಗೆ ಇಷ್ಟಕ್ಕೆ ಮಾತ್ರ. ರೋಮಿನ ಮುನ್ನಡೆಯಲ್ಲಿ ಈತನು ಅದರ ಮೂರನೆಯ ಮತ್ತು ನಾಲ್ಕನೆಯ ಯುಗಗಳಾದ “ಸೈನ್ಯಾಧಿಕಾರಿಗಳ ಯುಗ” ಮತ್ತು “ರೋಂ ಸಾಮ್ರಾಜ್ಯದ ಪ್ರಥಮಕಾಲ” ಗಳನ್ನು ವಿಂಗಡಿಸುವ ದಾರಿಗಲ್ಲು ಅಷ್ಟೇ. ಏಕೆಂದರೆ ಆಳವಾದ ರಾಜಕೀಯ ಮತ್ತು ಆರ್ಥಿಕ ಕ್ಷೋಭೆಗಳಾಗುತ್ತಿದ್ದರೂ ಒಳಕಲಹ ಗಳು ನಡೆಯುತ್ತಿದ್ದರೂ ಸಮಾಜ ಜೀವನ ಅಧೋಗತಿಗಿಳಿಯುತ್ತಿದ್ದರೂ ಇಷ್ಟು ಕಾಲವೂ ರೋಂ ತನ್ನ ವಿಸ್ತಾರ ಹೊಂದುತ್ತಲೇ ಇತ್ತು. ಕ್ರಿ. ಶ. 100ರ ಹೊತ್ತಿಗೆ ರೋಂ ತನ್ನ ವಿಸ್ತೀರ್ಣದ ಪರಾಕಾಷ್ಠೆಯನ್ನು ಮುಟ್ಟಿತು. ಎರಡನೆ ಪ್ಯೂನಿಕ್ ಯುದ್ಧದ ಸಮಯದಲ್ಲಿ ಮತ್ತು ಮೇರಿಯಸ್ ಸೈನ್ಯವನ್ನು ಪುನರ್ರಚಿಸುವ ಮೊದಲೂ ಇದರ ಮುನ್ನಡೆಗೆ ಸ್ವಲ್ಪ ತಡೆ ಬಂದಿತ್ತು. ಸ್ಪಾರ್ಟಕಸ್ಸನ ದಂಗೆಯ ಸಮಯದಲ್ಲಿಯೂ ಮೂರನೆಯ ಸಲ

ಹೀಗಾಗಿತ್ತು. ಈಗ ಫ್ರಾನ್ಸ್ ಮತ್ತು ಬೆಲ್ಜಿಯಂ ಇರುವ ಗಾಲ್ ಪ್ರದೇಶದಲ್ಲಿ ಸೈನ್ಯಾಧಿಕಾರಿಯಾಗಿ ಜೂಲಿಯಸ್ ಸೀಸರ್ ಹೆಸರುಗಳಿಸಿದನು. (ಈ ಪ್ರದೇಶದಲ್ಲಿದ್ದ ತಂಡಗಳಲ್ಲಿ ಮುಖ್ಯರಾದವರು, ಸೆಲ್ಟಿಕ್ ಜನರು. ಉತ್ತರ ಇಟಲಿಯಲ್ಲಿ ಕೆಲಕಾಲ ಇದ್ದು ಮುಂದೆ ಏಷ್ಯಾ ಮೈನರಿಗೆ ನುಗ್ಗಿ ಅಲ್ಲಿ ಗ್ಯಾಲಾಷಿಯನ್ನರೆಂಬ ಹೆಸರಿನಿಂದ ನೆಲಸಿದ ಗಾಲರೂ ಇದೇ ಸೆಲ್ಟಿಕ್ ಗುಂಪಿಗೆ ಸೇರಿದವರೇ). ಗಾಲ್ ಮೇಲೆ ಜರ್ಮನರು ದಂಡೆತ್ತಿ ಬಂದಾಗ ಸೀಸರನು ಅವರನ್ನು ಹೊಡೆದೋಡಿಸಿ ಆ ಪ್ರದೇಶವನ್ನೆಲ್ಲಾ ರೋಂ ಸಾಮ್ರಾಜ್ಯಕ್ಕೆ ತಂದಿತ್ತನು. ಡೋವರ್ ಜಲಸಂಧಿಯನ್ನು ಎರಡು ಸಲ ದಾಟಿ ಬ್ರಿಟನ್ನಿಗೆ ಹೋದನು (ಕ್ರಿ.ಪೂ. 55 ಮತ್ತು 54). ಆದರೆ ಈತನು ಅದನ್ನು ಕಾಯವಾಗಿ ಅಧೀನಮಾಡಿಕೊಳ್ಳಲಿಲ್ಲ. ಇದೇ ಸಮಯದಲ್ಲಿ ಪಾಂಪೆಯು ಪೂರ್ವದಿಕ್ಕಿಗೆ ಕ್ಯಾಸ್ಪಿಯನ್ ಸಮುದ್ರದವರೆಗಿನ ಪ್ರದೇಶಗಳನ್ನು ರೂಢಿಸಿಕೊಳ್ಳುತ್ತಿದ್ದನು.

ಕ್ರಿ.ಪೂ. 1ನೆಯ ಶತಮಾನದ ಮಧ್ಯಭಾಗದಲ್ಲಿ ಸಹ ಸೆನೆಟಿನ ಹೆಸರಿನಲ್ಲಿ ಯಾದರೂ ರೋಮ್ ಆಡಳಿತದ ಕೇಂದ್ರವಾಗಿತ್ತು. ಕಾನ್ಸಲ್ ಮತ್ತಿತರ ಅಧಿಕಾರಿಗಳನ್ನು ನೇಮಿಸುವುದು, ವ್ಯಕ್ತಿಗಳಿಗೆ ಅಧಿಕಾರವಹಿಸಿಕೊಡುವುದು ಇವುಗಳು ಸೆನೆಟಿನ ಮುಖಾಂತರ ನಡೆಯುತ್ತಿದ್ದುವು. ರೋಂ ಪ್ರಜಾಪಭುತ್ವದ ಘನ ಸಂಪ್ರದಾಯಗಳನ್ನು ಕಾದಿಡುವುದಕ್ಕಾಗಿ ಮತ್ತು ಅದರ ಕಾನೂನುಗಳಿಗೆ ಸಲ್ಲಬೇಕಾದ ವಿಧೇಯತೆ ತಪ್ಪಿಹೋಗದಿರಲೆಂದು ಅನೇಕ ರಾಜಕಾರಣಿಗಳು ಶ್ರಮಿಸುತ್ತಿದ್ದರು. ಇವರಲ್ಲಿ ಸಿಸಿರೊವಿನ ವ್ಯಕ್ತಿತ್ವ ಮೇಲಿದ್ದು ಕಾಣುತ್ತದೆ. ಆದರೆ ಸ್ವತಂತ್ರ ರೈತರು ಯಾವಾಗ ಇಲ್ಲವಾದರೋ ಆಗಲೇ ಜನರಲ್ಲಿ ಪೌರತ್ವದ ಅಭಿಮಾನ ಹೊರಟುಹೋಗಿತ್ತು. ಈಗ ದೇಶದ ತುಂಬ ಗುಲಾಮರು ಅಥವಾ ತಮ್ಮದನ್ನೆಲ್ಲಾ ಕಳೆದುಕೊಂಡ ಬಡಜನರು ತುಂಬಿದ್ದರು. ಇವರಿಗೆ ಸ್ವಾತಂತ್ರ್ಯದ ಆಸೆ ಇರುವುದಿರಲಿ ಅದರ ಮಹತ್ವ ಏನೆಂದು ಸಹ ತಿಳಿದಿರಲಿಲ್ಲ. ಪ್ರಜಾರಾಜ್ಯದಲ್ಲಿ ಆಸಕ್ತಿಯುಳ್ಳ ಮುಂದಾಳುಗಳಿಗೆ ಎಲ್ಲಿಯೂ ಬೆಂಬಲ ವಿರಲಿಲ್ಲ. ಆದೇ ಇವರು ಹಿಡಿತಕ್ಕೆ ತರಬೇಕೆಂದು ಬಯಸುತ್ತಿದ್ದ ಸಾಹಸಿ ದಂಡನಾಯಕರುಗಳ ಕೈಕೆಳಗೆ ಅವರು ಸಂಬಳಕೊಟ್ಟು ಇಟ್ಟುಕೊಂಡಿದ್ದ ಸೈನ್ಯಗಳಿದ್ದುವು. ಸೆನೆಟಿನ ಪಾತ್ರವಿಲ್ಲದೆಯೇ ಸಾಮ್ರಾಜ್ಯದ ಆಡಳಿತವನ್ನು ಕ್ರಾಸಸ್, ಪಾಂಪೆ ಮತ್ತು ಸೀಸರ್ ತಮ್ಮಲ್ಲಿ ಹಂಚಿಕೊಂಡರು. ಇದೇ ಮೊದಲನೆಯ ನಾಯಕತ್ರಯ (Trium virate). ದೂರದ ಕಾರ್ಹೇಯಲ್ಲಿ ಪಾರ್ಥಿಯನ್ನರಿಂದ ಕ್ರಾಸಸ್ಸನ ಕೊಲೆಯಾಗುತ್ತಲೂ ಪಾಂಪೆ ಸೀಸರರಲ್ಲಿ ಕಾದಾಟ ಮೊದಲಾಯಿತು. ಪಾಂಪೆ ಪ್ರಜಾರಾಜ್ಯ ನಾಯಕರ ಪರ ವಹಿಸಿಕೊಂಡನು. ಕಾನೂನು ಉಲ್ಲಂಘಿಸಿ ನಡೆದನೆಂದೂ ಸೆನೆಟಿನ ನಿರ್ಣಯಗಳನ್ನು ನಡೆಸಲಿಲ್ಲವೆಂದೂ ಸೀಸರನ ಮೇಲೆ ಆಪಾದನೆ ಹೊರಿಸಿ ಈತನು ವಿಚಾರಣೆಯನ್ನೆದುರಿಸಬೇಕೆಂದು ಸೆನೆಟಿನಲ್ಲಿ ತೀರ್ಮಾನವಾಯಿತು.

ಆಗ ಯಾವುದೇ ಸೈನ್ಯಾಧಿಕಾರಿಯಾಗಲೀ ತನ್ನ ಸೈನ್ಯಗಳನ್ನು ತನಗೆ ವಹಿಸಿಕೊಟ್ಟಿದ್ದ ಪ್ರದೇಶದ ಹೊರಗೆ ತರುವಂತಿರಲಿಲ್ಲ. ಸೀಸರನ ಪ್ರಾಂತಕ್ಕೂ ಇಟಲಿಗೂ

ರೂಬಿಕಾನ್‌ನದಿ ಮೇರೆಯಾಗಿತು. ಕ್ರಿ.ಪೂ. 49ರಲ್ಲಿ ಸೀಸರನು "ದಾಳವೆಸೆದಾಯಿತು" ಎಂದು ಹೇಳಿ ಈ ನದಿಯನ್ನು ದಾಟಿ ರೋಮಿನ ಮೇಲೆ ಅಂದರೆ ಪಾಂಪೆಯ ಮೇಲೆ ದಂಡೆತ್ತಿ ಬಂದನು.

ಇದಕ್ಕೆ ಹಿಂದೆ ತುರುತು ಪರಿಸ್ಥಿತಿ ಒದಗಿದಾಗ ರೋಮಿನಲ್ಲಿ ಸರ್ವಾಧಿಕಾರಿಯೊಬ್ಬನನ್ನು ಚುನಾಯಿಸುವ ಪದ್ಧತಿ ಇತ್ತು. ಇವನಿಗೆ ಏನು ಬೇಕಾದರೂ ಮಾಡುವ ಅಧಿಕಾರ ಇರುತ್ತಿತ್ತು. ಪಾಂಪೆಯನ್ನು ಸೋಲಿಸಿದ ಮೇಲೆ ಸೀಸರನನ್ನು ಸರ್ವಾಧಿಕಾರಿಯನ್ನಾಗಿ ಮಾಡಲಾಯಿತು. ಮೊದಲು ಈತನ ಅಧಿಕಾರ ಕಾಲಾವಧಿ ಹತ್ತು ವರ್ಷಗಳು ಮಾತ್ರ ಎಂದಿತ್ತು. ಅನಂತರ ಕ್ರಿ.ಪೂ. 45ರಲ್ಲಿ ಇದು ಆಮರಣಾಂತ ನಡೆಯುಬೇಕೆಂದು ಆಯಿತು. ಒಟ್ಟಿನಲ್ಲಿ ಇದರ ಅರ್ಥ ಈತನು ಮೃತಿಹೊಂದುವವರೆಗೆ ರೋಮಿನ ಚಕ್ರವರ್ತಿಯಾದಂತೆ ಅಲ್ಲಲ್ಲೇ "ರಾಜಪದವಿ"ಯೆಂಬ ಮಾತೂ ಕೇಳಿ ಬರುತ್ತಿತು. ಐದು ಶತಮಾನಗಳ ಮೊದಲು ಎಟ್ರುಸ್ಕನ್ನರನ್ನು ಹೊರತಳ್ಳಿದಾಗಿನಿಂದ ರೋಮನ್ನರಿಗೆ "ರಾಜ" ಎಂಬ ಪದ ಕೇಳಿದರೇ ಆಗುತ್ತಿರಲಿಲ್ಲ. ಸೀಸರ್ ರಾಜನಾಗಲು ಒಪ್ಪಿಕೊಳ್ಳದಿದ್ದರೂ ರಾಜದಂಡ ಮತ್ತು ಸಿಂಹಾಸನಗಳನ್ನು ಸ್ವೀಕರಿಸಿದನು. ಪಾಂಪೆ ಸೋತು ಹೋದ ಮೇಲೆ ಸೀಸರ್ ಈಜಿಪ್ಟಿಗೆ ಹೋಗಿ ಅಲ್ಲಿ ಟಾಲೆಮಿ ವಂಶದ ದೈವಿಕವೆಂದು ನಂಬುತ್ತಿದ್ದ ರಾಣಿ ಕ್ಲಿಯೋಪಾತ್ರಳೊಡನೆ ಪ್ರಣಯಪ್ರಸಂಗ ನಡೆಸಿದ್ದನು. ಈಕೆಯ ಸಹವಾಸದಿಂದ ಸೀಸರನ ತಲೆ ಸಂಪೂರ್ಣವಾಗಿ ತಿರುಗಿಹೋಯಿತು ಎಂಬಂತೆ ತೋರುತ್ತದೆ. ರೋಮಿಗೆ ಹಿಂತಿರುಗಿದಾಗ "ರಾಜನು ದೇವಾಂಶಸಂಭೂತನು" ಎಂಬ ಈಜಿಪ್ಟಿನ ಭಾವನೆಯು ಈತನ ಮನಸ್ಸನ್ನು ಸೆಳೆದಿತ್ತು. ದೇವಸ್ಥಾನವೊಂದರಲ್ಲಿ ಈತನ ಮೂರ್ತಿಯನ್ನು ಇಟ್ಟು ಅದರ ಕೆಳಗೆ "ಎಂದೆಂದೂ ಪರಾಜಯನು ಹೊಂದದ ದೇವನಿಗೆ" ಎಂದು ಕೆತ್ತಲಾಯಿತು. ಇಷ್ಟು ಹೊತ್ತಿಗೆ ಕೊನೆಯುಸಿರು ಬಿಡುತ್ತಿದ್ದ ರೋಮಿನ ಪ್ರಜಾತಂತ್ರಾಭಿಮಾನ ಕೆರಳಿ ತನ್ನ ಕೊಟ್ಟಕೊನೆಯ ಪ್ರತಿಭಟನೆಯನ್ನು ತೋರಿಸಿತು. ಕೊಲೆಯಾಗಿ ಸತ್ತ ಪ್ರತಿಸ್ಪರ್ಧಿ ಪಾಂಪೆ ಮಹಾಶಯನ ಮೂರ್ತಿಯ ಪಾದಗಳ ಬಳಿ ಸೆನೆಟ್ ಕಟ್ಟಡದಲ್ಲಿ ಸೀಸರನದೂ ಹತ್ಯೆ ನಡೆದು ಹೋಯಿತು.

ಇನ್ನೂ ಹದಿಮೂರು ವರ್ಷಗಳು ಅತಿ ಆಕಾಂಕ್ಷೆಯುಳ್ಳ ವ್ಯಕ್ತಿಗಳ ನಡುವೆ ಕಲಹ ನಡೆಯಿತು. ಮತ್ತೊಮ್ಮೆ ಒಂದು "ನಾಯಕತ್ರಯ"ದ ಸ್ಥಾಪನೆಯಾಯಿತು. ಇದರಲ್ಲಿ ಲೆಪಿಡಸ್, ಮಾರ್ಕ್ ಆಂಟೊನಿ ಮತ್ತು ಜೂಲಿಯಸ್ ಸೀಸರನ ಸಹೋದರನ ಮಗ ಆಕ್ಟೇವಿಯನ್‌ಸೀಸರ್ ಇದ್ದರು. ಇವರಲ್ಲಿ ಆಕ್ಟೇವಿಯನ್ ಸೀಸರ್ ತನ್ನ ಚಿಕ್ಕಪ್ಪನಂತೆ ಪಶ್ಚಿಮದ ಜಿಲ್ಲೆಗಳನ್ನು ತೆಗೆದುಕೊಂಡನು. ಅಲ್ಲಿಯ ಜನರು ಬಡವರೂ ಕಷ್ಟ ಸಹಿಷ್ಣುಗಳೂ ಆಗಿದ್ದುದರಿಂದ ಇಲ್ಲಿ ಉಳಿದೆಡೆಗಳಿಗಿಂತ ಉತ್ತಮವಾದ ಸೈನ್ಯ ಕಟ್ಟಬಹುದಾಗಿತ್ತು. ಕ್ರಿ.ಪೂ. 31ರಲ್ಲಿ ಆಕ್ಟೇವಿಯನ್ ಮಾರ್ಕ್ ಆಂಟೊನಿಯನ್ನು ಆಕ್ಟಿಯಂನಲ್ಲಿ ನೌಕಾಯುದ್ಧದಲ್ಲಿ ಸೋಲಿಸಿದನು. ಈತನ ನಿಜವಾದ ಪ್ರತಿಸ್ಪರ್ಧಿ ಆಂಟೊನಿಯೊಬ್ಬನೇ ಆಗಿದ್ದುದರಿಂದ ಈ ಕಾಳಗದ ನಂತರ ಆಕ್ಟೇವಿಯನ್ ರೋಮನ್ ಪ್ರಪಂಚದ

ಏಕಮಾತ್ರ ಸ್ವಾಮಿಯಾದನು. ಈತನಿಗೂ ಜೂಲಿಯಸ್ ಸೀಸರನಿಗೂ ತುಂಬಾ ವ್ಯತ್ಯಾಸವಿತ್ತು. ದೊರೆಯಾಗಬೇಕು, ದೇವತೆಯ ಸ್ಥಾನ ಪಡೆಯಬೇಕು ಎಂಬ ಹುಚ್ಚು ಆಸೆ ಇವನಿಗಿರಲಿಲ್ಲ. ಯಾವುದೇ ರಾಣಿ–ಪ್ರಣಯಿನಿಯನ್ನು ಈತನು ಬೆರಗುಮಾಡಬೇಕಾಗಿರಲಿಲ್ಲ. ಸೆನೆಟಗೆ ಮತ್ತು ರೋಮಿನ ಜನತೆಗೆ ಇವನು ಸ್ವಾತಂತ್ರ್ಯವನ್ನು ತಿರುಗಿ ತಂದುಕೊಟ್ಟನು. ಸರ್ವಾಧಿಕಾರಿಯಾಗಲು ಈತನು ಒಪ್ಪಿಕೊಳ್ಳಲಿಲ್ಲ. ಇವರ ಫಲವಾಗಿ ಸೆನೆಟ್ ಕೃತಜ್ಞತೆಯಿಂದ ಹೊರತೋರಿಕೆಯ ಅಧಿಕಾರ ಚಿಹ್ನೆಗಳ ಬದಲು ನಿಜವಾದ ಅಧಿಕಾರವನ್ನೇ ವಹಿಸಿಕೊಟ್ಟಿತು. ರಾಜನೆಂದು ಕರೆಯದಿದ್ದರೂ ಈತನನ್ನು ಪ್ರಿನ್ಸೆಪ್ಸ್ ಮತ್ತು ಆಗಸ್ಟಸ್ ಎಂದು ಕರೆಯಿತು. ಹೀಗೆ ಆಗಸ್ಟಸ್ ಸೀಸರ್ ಮೊದಲನೆಯ ರೋಮನ್ ಚಕ್ರವರ್ತಿಯಾದನು (ಕ್ರಿ.ಪೂ. 27 ರಿಂದ ಕ್ರಿ.ಶ. 14).

ಇವನ ಬಳಿಕ ಟೈಬೀರಿಯಸ್ ಸೀಸರ್ (ಕ್ರಿ.ಶ. 14–ಕ್ರಿ.ಶ. 37), ಅನಂತರ ಕಾಲಿಗೂಲ, ಕ್ಲಾಡಿಯಸ್, ನೀರೋ, ಹೀಗೆಯೇ ಕ್ರಿ.ಶ. 98ರಲ್ಲಿ ಟ್ರಾಜನ್, ಹಾಡ್ರಿಯನ್ (ಕ್ರಿ.ಶ. 117), ಆ್ಯಂಟೊನಿನಸ್ ಪಯಸ್ (ಕ್ರಿ.ಶ. 138), ಮಾರ್ಕಸ್ ಆರಿಲಿಯಸ್ (ಕ್ರಿ.ಶ. 161–180) ಈ ಚಕ್ರವರ್ತಿಗಳು ಆಳಿದರು. ಇವರೆಲ್ಲರೂ ಸೈನ್ಯದ ಬೆಂಬಲದ ಮೇಲೆ ನಿಂತಿದ್ದ ಚಕ್ರವರ್ತಿಗಳು. ಎಲ್ಲರೂ ಸೈನ್ಯದ ಸಹಾಯದಿಂದ ಪಟ್ಟಕ್ಕೆ ಬಂದರು. ಕೆಲವರನ್ನು ಸೈನ್ಯವೇ ಪಟ್ಟದಿಂದ ಕೆಳಗಿಳಿಸಿತು. ಸೆನೆಟ್ ಮೆಲ್ಲ ಮೆಲ್ಲನೆ ರೋಮಿನ ಚರಿತ್ರೆಯಿಂದ ಕಣ್ಮರೆಯಾಯಿತು. ಚಕ್ರವರ್ತಿ ಮತ್ತು ಆತನ ಅಧಿಕಾರವರ್ಗ ಅವರ ಸ್ಥಾನದಲ್ಲಿ ಬಂದರು. ಸಾಮ್ರಾಜ್ಯ ಮತ್ತೂ ದೊಡ್ಡದಾಗುತ್ತಾ ಹೋಗಿ ಅತ್ಯಂತ ವಿಶಾಲವಾಯಿತು. ಬ್ರಿಟನ್ನಿನ ಬಹುಭಾಗ ಇದಕ್ಕೆ ಸೇರಿತು. ಟ್ರಾನ್ಸಿಲ್ವೇನಿಯವು Dacia ಎಂಬ ಹೆಸರಿನ ಹೊಸಜಿಲ್ಲೆಯಾಯಿತು. ಟ್ರಾಜನ್ ಯೂಫ್ರೆಟಿಸ್ ನದಿಯನ್ನು ದಾಟಿದನು. ಹಾಡ್ರಿಯನ್ನನು ಉತ್ತರದಿಕ್ಕಿನಿಂದ ಧಾಳಿ ಮಾಡುತ್ತಿದ್ದ ಅನಾಗರಿಕ ಜನರನ್ನು ತಡೆಯಲು ಬ್ರಿಟನ್ನಿನಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಗೋಡೆಯನ್ನೂ ರೈನ್ ಡ್ಯಾನ್ಯೂಬ್ ನದಿಗಳ ನಡುವೆ ಬಲವಾದ ಬೇಲಿಯನ್ನೂ ಕಟ್ಟಿಸಿದನು. ಇದನ್ನು ಕೇಳಿದರೆ ಪ್ರಾಚೀನ ಪ್ರಪಂಚದ ಮತ್ತೊಂದು ತುದಿಯಲ್ಲಿ ಷಿ–ಹ್ಯಾಂಗ್–ಟಿ ಚೀನದ ದೊಡ್ಡಗೋಡೆಯನ್ನು ಕಟ್ಟಿಸಿದುದು ನೆನಪಿಗೆ ಬರುತ್ತದೆ. ಟ್ರಾಜನ್ ವಶಪಡಿಸಿಕೊಂಡಿದ್ದ ಕೆಲವು ಪ್ರದೇಶಗಳನ್ನು ಈತನು ಬಿಟ್ಟು ಕೊಟ್ಟನು.

ರೋಮ್ ಸಾಮ್ರಾಜ್ಯ ವಿಸ್ತರಣೆ ಇಲ್ಲಿಗೆ ಕೊನೆಗೊಂಡಿತು.

34. ರೋಮ್ ಮತ್ತು ಚೀನಾ

ಕ್ರಿ.ಪೂ. ಎರಡು ಮತ್ತು ಒಂದನೆಯ ಶತಮಾನಗಳು ಮಾನವನ ಚರಿತ್ರೆಯಲ್ಲಿ ಒಂದು ಹೊಸ ಘಟ್ಟವನ್ನು ಗುರುತಿಸುತ್ತವೆ. ಮೆಸಪೊಟೇಮಿಯ ಮತ್ತು ಪೂರ್ವ ಮೆಡಿಟರೇನಿಯನ್ ಪ್ರದೇಶಗಳ ಪ್ರಾಮುಖ್ಯತೆ ಇಷ್ಟು ಹೊತ್ತಿಗೆ ಹೊರಟು ಹೋಗಿತ್ತು. ಈಜಿಪ್ಟ್ ಮೆಸಪೊಟೇಮಿಯಗಳು ಆಗಲೂ ಫಲವತ್ತಾದ ಜನಭರಿತ ಪ್ರದೇಶಗಳಾಗಿ

ದ್ದರೂ, ಬೇರೆ ಕೆಲವು ಪ್ರದೇಶಗಳಿಗೆ ಇವುಗಳಿಗಿಂತ ಹೆಚ್ಚು ಪ್ರಾಮುಖ್ಯತೆ ಬಂದಿತ್ತು. ಇವುಗಳ ಪಶ್ಚಿಮದಲ್ಲಿ ಹೊಸದಾದ ರೋಂ ಚಕ್ರಾಧಿಪತ್ಯ, ಪೂರ್ವದಲ್ಲಿ ಪುನರುಜ್ಜೀವನ ಪಡೆದಿದ್ದ ಚೀನಾಚಕ್ರಾಧಿಪತ್ಯ ಈ ಎರಡು ಬೃಹತ್ಸಾಮ್ರಾಜ್ಯಗಳು ಈಗ ಪ್ರಪಂಚದಲ್ಲಿ ಪ್ರಧಾನ ಪಾತ್ರ ಪಡೆದಿದ್ದುವು. ರೋಮಿನ ಅಧಿಕಾರ ಯೂಫ್ರೆಟಿಸ್ ನದಿಯವರೆಗೂ ಹರಡಿತ್ತು. ಇದಕ್ಕಿಂತ ಮುಂದೆ ಪ್ರಸರಿಸಲು ಅದಕ್ಕೆ ಸಾಧ್ಯವಾಗಲೇ ಇಲ್ಲ. ಈ ಪ್ರದೇಶ ರೋಮಿಗೆ ಅತಿ ದೂರವಾಗಿದ್ದುದೇ ಇದಕ್ಕೆ ಕಾರಣ. ಯೂಫ್ರೆಟಿಸಿನಿಂದ ಪೂರ್ವಕ್ಕೆ ಮೊದಲು ಸೆಲ್ಯೂಸಿಡ್ ದೊರೆಗಳ ವಶದಲ್ಲಿದ್ದ ಪರ್ಷಿಯ ಮತ್ತು ಇಂಡಿಯದ ಪ್ರದೇಶಗಳು ಈಗ ಅನೇಕ ಹೊಸಹೊಸ ಒಡೆಯರ ಕೈಸೇರಿದ್ದುವು. ಷಿ ಹ್ಯಾಂಗ್‌ಟಿಯ ಮರಣದನಂತರ ಟ್ಸಿನ್ ವಂಶದ ಸ್ಥಾನವನ್ನು ಹನ್ ಸಂತತಿ ಪಡೆದುಕೊಂಡಿತ್ತು. ಇದರ ಆಧೀನದಲ್ಲಿದ್ದ ಚೀನಾ ಸಾಮ್ರಾಜ್ಯ ಟಿಬೆಟ್ಟನ್ನು ದಾಟಿ ಉನ್ನತವಾದ ಪಾಮಿರ್ ಪರ್ವತಗಳ ಕಣಿವೆ ಮಾರ್ಗಗಳನ್ನು ಹಾದು ಪಶ್ಚಿಮ ಟರ್ಕಿಸ್ತಾನದವರೆಗೂ ಹರಡಿತು. ಅಲ್ಲಿಗೆ ಇದು ತನ್ನ ಪರಮಾವಧಿಯನ್ನು ಮುಟ್ಟಿತು. ಇದಕ್ಕೂ ಮುಂದೆ ಹೋಗುವುದೆಂದರೆ ಚೀನಕ್ಕೆ ಬಲು ದೂರವಾಗುತ್ತಿತ್ತು.

ಅಂದಿನ ರಾಜಕೀಯ ವ್ಯವಸ್ಥೆಗಳಲ್ಲೆಲ್ಲಾ ಚೀನಾ ಅತ್ಯಂತ ದೊಡ್ಡದೂ, ಅತ್ಯುತ್ತಮ ರೀತಿಯಲ್ಲಿ ಸಂಘಟಿತವಾದುದೂ, ಅತಿಶ್ರೇಷ್ಠನಾಗರಿಕತೆಯುಳ್ಳದ್ದೂ ಆಗಿತ್ತು. ರೋಂ ಅತಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗಲೂ ಇದನ್ನು ವಿಸ್ತೀರ್ಣ ಜನ ಸಂಖ್ಯೆಗಳಲ್ಲಿ ಸರಿಗಟ್ಟಲಿಲ್ಲ. ಆಗ ಕಾಲಸ್ಥಿತಿ ಹೇಗಿತ್ತೆಂದರೆ ಒಂದೇ ಪ್ರಪಂಚದಲ್ಲಿ, ಒಂದೇ ಕಾಲದಲ್ಲಿ ಈ ಬೃಹದ್ರಾಜ್ಯಗಳು ಬಾಳುತ್ತಿದ್ದರೂ ಒಂದರ ಇರವು ಮತ್ತೊಂದಕ್ಕೆ ಗೊತ್ತೇ ಇರಲಿಲ್ಲವೆನ್ನಬೇಕು. ಜಲಮಾರ್ಗ ಭೂಮಾರ್ಗಗಳೆರಡರಲ್ಲೂ ಸಾರಿಗೆ ಸೌಕರ್ಯಗಳು ಇನ್ನು ಸಾಕಷ್ಟು ಅಭಿವೃದ್ಧಿ ಹೊಂದಿರಲಿಲ್ಲ. ಹೀಗಾಗಿ ಎರಡು ಸಾಮ್ರಾಜ್ಯಗಳಿಗೆ ನೇರ ಘರ್ಷಣೆ ಆಗಲಿಲ್ಲ.

ಆದರೂ ಗಮನಾರ್ಹ ರೀತಿಯಲ್ಲಿ ಇವು ಒಂದಕ್ಕೊಂದು ಪ್ರತಿಕ್ರಿಯೆ ತೋರಿದುವು ಮತ್ತು ತಮ್ಮ ನಡುವೆ ಇದ್ದ ಮಧ್ಯ ಏಷ್ಯ ಮತ್ತು ಇಂಡಿಯದ ಪ್ರದೇಶಗಳ ಮೇಲೆ ಆಳವಾದ ಪ್ರಭಾವ ಬೀರಿದುವು. ಪರ್ಷಿಯದ ಒಂಟೆ ಕಾರವಾನುಗಳ ಮುಖಾಂತರ, ಇಂಡಿಯ ಮತ್ತು ಕೆಂಪು ಸಮುದ್ರಗಳ ಮಾರ್ಗವಾಗಿ ಸಮುದ್ರತೀರದ ಬಳಿಯಲ್ಲೇ ಸಾಗುತ್ತಿದ್ದ ಹಡಗುಗಳ ಮುಖಾಂತರ ಹಾಗೂ ಹೀಗೂ ಈ ಎರಡು ಸಾಮ್ರಾಜ್ಯಗಳ ನಡುವೆ ಸ್ವಲ್ಪ ವ್ಯಾಪಾರ ನಡೆಯುತ್ತಿತ್ತು. ಕ್ರಿ.ಪೂ. 66ರಲ್ಲಿ ಪಾಂಪೆಯ ಸೈನ್ಯವು ಅಲೆಕ್ಸಾಂಡರ್ ಮಹಾಶಯನ ದಾರಿಯನ್ನೇ ಅನುಸರಿಸಿ ಕ್ಯಾಸ್ಪಿಯನ್ ಸಮುದ್ರದ ಪೂರ್ವತೀರದಲ್ಲಿ ಉತ್ತರಾಭಿಮುಖವಾಗಿ ಸಾಗಿತು. ಕ್ರಿ.ಶ. 102ರಲ್ಲಿ ಪಾನ್ ಚಾವೊ ನೇತೃತ್ವದಲ್ಲಿ ಚೀನೀ ಸೈನ್ಯದಳವೊಂದು ಕ್ಯಾಸ್ಪಿಯನ್ ಸಮುದ್ರದವರೆಗೂ ಹೋಗಿ ಅಲ್ಲಿಂದ ರೋಮ್ ಸಾಮ್ರಾಜ್ಯವನ್ನು ಕುರಿತು ವರದಿ ಮಾಡಲು ದೂತರನ್ನು ಕಳುಹಿಸಿತು. ಇದರೆ ಸಮಾನಾಂತರ ರೇಖೆಗಳಂತೆ ಇದ್ದ ಯೂರೋಪಿನ ಮತ್ತು ಪೂರ್ವ ಏಷ್ಯದ ಪ್ರಪಂಚಗಳಲ್ಲಿ

ನೇರ ಸಂಪರ್ಕ ಬಂದು ಒಂದನ್ನೊಂದು ತಿಳಿದುಕೊಳ್ಳಲು ಇನ್ನೂ ಅನೇಕ ಶತಮಾನಗಳು ಕಳೆಯಬೇಕಾಯಿತು.

ಇವೆರಡು ಚಕ್ರಾಧಿಪತ್ಯಗಳ ಉತ್ತರದಲ್ಲೂ ನಾಗರಿಕತೆ ಇಲ್ಲದ ಕಾಡುಪ್ರದೇಶಗಳಿದ್ದುವು. ಈಗ ಜರ್ಮನಿ ಇರುವಲ್ಲಿ ದಟ್ಟ ಕಡಿದು ಬರಿ ಕಾಡುಗಳಿದ್ದುವು. ಈ ಅರಣ್ಯ ಪ್ರದೇಶ ರಷ್ಯದೊಳಕ್ಕೂ ಬಹುದೂರದವರೆಗೂ ಹಬ್ಬಿತ್ತು. ಅಲ್ಲಿ ಅರೊಕ್ ಎಂಬ ಆನೆಗಾತ್ರದ ದನ ವಾಸಿಸುತ್ತಿತ್ತು. ಏಷ್ಯದ ಮಹಾ ಪರ್ವತ ಶ್ರೇಣಿಗಳ ಉತ್ತರಕ್ಕೆ ಕ್ರಮವಾಗಿ ಮರಳುಕಾಡುಗಳು, ಸ್ಟೆಪ್ ಹುಲ್ಲು ಗಾವಲುಗಳು, ಅರಣ್ಯಗಳು ಮತ್ತು ಹೆಪ್ಪುಗಟ್ಟಿದ ಭೂಮಿ ಇದ್ದುವು. ಏಷ್ಯದ ಉನ್ನತ ಪ್ರದೇಶಗಳ ಪೂರ್ವ ಭಾಗದಲ್ಲಿ ತ್ರಿಕೋನಾಕಾರದ ಮಂಚೂರಿಯ ಇದ್ದಿತು. ದಕ್ಷಿಣರಷ್ಯ, ಟರ್ಕಿಸ್ತಾನಗಳಿಂದ ಮಂಚೂರಿಯದವರೆಗಿನ ಈ ಪ್ರದೇಶಗಳ ಬಹುಭಾಗಗಳಲ್ಲಿ ವಾಯುಗುಣ ಹೀಗೇ ಇರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಕೇವಲ ಕೆಲವೇ ಶತಮಾನಗಳಲ್ಲಿಯೇ ಇಲ್ಲಿ ಮಳೆ ಬೀಳುವುದರಲ್ಲಿ ಬಹಳ ವ್ಯತ್ಯಾಸಗಳಾಗುತ್ತವೆ. ಇಲ್ಲಿಯ ನೆಲವನ್ನು ಮಾನವ ಒಂದೇ ಮನಸ್ಸಿನಿಂದ ನೆಚ್ಚಿಕೊಂಡಿರುವಂತಿಲ್ಲ. ಅನೇಕ ವರ್ಷಗಳು ಇಲ್ಲಿ ಹುಲ್ಲು ಹಸುರಾಗಿದ್ದು ವ್ಯವಸಾಯ ಚೆನ್ನಾಗಿ ನಡೆಯುತ್ತವೆ. ಬಳಿಕ ತೇವ ಕಡಿಮೆಯಾಗಿ ಕ್ಷಾಮಗಳ ಒಂದು ಚಕ್ರವೇ ಮೊದಲಾಗುತ್ತದೆ.

ಉತ್ತರದ ಈ ಅನಾಗರಿಕ ಪ್ರದೇಶದ ಪಶ್ಚಿಮ ಭಾಗ ಎಂದರೆ ಜರ್ಮನ್ ಅರಣ್ಯಗಳಿಂದ ದಕ್ಷಿಣರಷ್ಯ ಮತ್ತು ಟರ್ಕಿಸ್ತಾನ, ಗಾಫ್‌ಲ್ಯಾಂಡಿನಿಂದ ಆಲ್ಪ್ಸ್‌ವರೆಗಿನ ಪ್ರದೇಶ ನಾರ್ಡಿಕ್ ಜನರಿಗೆ ಮತ್ತು ಆರ್ಯನ್ ಭಾಷೆಗೆ ಜನ್ಮ ಕೊಟ್ಟಿತು. ಭಾಷೆಗಳು, ಕುಲ ಮತ್ತು ಜೀವನಮಾರ್ಗಗಳಲ್ಲಿ ಸಾಮ್ಯವಿದ್ದ ಹೂಣರ, ಮಂಗೋಲರ ಟಾರ್ಟರರ ಮತ್ತು ತುರುಕರ ಜನ್ಮಸ್ಥಾನ ಪೂರ್ವ ಸ್ಟೆಪ್‌ಗಳು ಮತ್ತು ಮಂಗೋಲಿಯದ ಮರಳು ಕಾಡುಗಳು. ನಾಗರಿಕತೆ ಬೆಳೆಯುತ್ತಿದ್ದ ಮೆಸಪೊಟೇಮಿಯ ಮತ್ತು ಮೆಡಿಟರೇನಿಯನ್ ಪ್ರದೇಶಗಳ ಮೇಲೆ ನಾರ್ಡಿಕ್ ಜನ ತಮ್ಮ ಸ್ಥಾನಗಳಿಂದ ಹೊರಬಿದ್ದು ಒಂದೇ ಸಮನಾಗಿ ಒತ್ತಿಕೊಂಡು ಬರುತ್ತಿದ್ದಂತೆಯೇ ಹೂಣಕುಲದವರಲ್ಲಿಯೂ ಜನಸಂಖ್ಯೆ ಮಿತಿಮೀರಿದಂತೆ ಹೆಚ್ಚಿನ ಜನ ಅಲ್ಲಿಂದ ಹೊರಬಿದ್ದು ಅಲೆಮಾರಿಗಳಂತೆಯೋ, ಧಾಳಿಕಾರರಂತೆಯೋ ಚೀನದ ಜನವಸತಿಯ ಪ್ರದೇಶಗಳನ್ನು ಪ್ರವೇಶಿಸುತ್ತಿದ್ದರು. ಸುಭಿಕ್ಷವಿದ್ದಾಗ ಉತ್ತರ ದಿಕ್ಕಿನಲ್ಲಿ ಜನಸಂಖ್ಯೆ ಬೆಳೆಯುತ್ತಿತ್ತು. ಹುಲ್ಲಿನ ಬರವೋ ದನಕರುಗಳ ರೋಗವೋ ಬರುತ್ತಲೂ ಹಸಿದ ಯುದ್ಧ ಸನ್ನದ್ಧರಾದ ಅನಾಗರಿಕರು ದಕ್ಷಿಣಕ್ಕೆ ನುಗ್ಗುತ್ತಿದ್ದರು.

ಕೆಲವು ಕಾಲ ಈ ಎರಡೆಡೆಯಲ್ಲಿಯೂ ಸಶಕ್ತವಾದ ಎರಡು ಸಾಮ್ರಾಜ್ಯಗಳಿದ್ದುವು. ಇವು ಈ ಅನಾಗರಿಕರ ಧಾಳಿಗಳನ್ನು ತಡೆಯುವುದಷ್ಟೇ ಅಲ್ಲದೆ ತಮ್ಮ ಎಲ್ಲೆಯನ್ನು ಸಹ ಅದೇ ದಿಕ್ಕಿನಲ್ಲಿ ವಿಸ್ತರಿಸುತ್ತಿದ್ದುವು. ಹಾನ್ ಚಕ್ರಾಧಿಪತ್ಯವು ಉತ್ತರ ಚೀನಾದಿಂದ ಮಂಗೋಲಿಯದ ಕಡೆಗೆ ಒಂದೇ ಸಮನೆ ಒತ್ತರಿಸಿಕೊಂಡು ಬರುತ್ತಿತ್ತು. ಚೀನದ ಜನ ಚೀನದ ದೊಡ್ಡ ಗೋಡೆಯ ಹೊರ ಹೊಮ್ಮಿದರು. ಚೀನೀ ಚಕ್ರಾಧಿಪತ್ಯದ ಸರಹದ್ದಿನ

ರಕ್ಷಣಾ ದಳದ ಸೈನಿಕರು ಹಿಂದೆಯೇ ಚೀನೀ ಕೃಷಿಕರು ಕುದುರೆ ನೇಗಿಲುಗಳೊಡನೆ ಬಂದು ಹುಲ್ಲುಗಾವಲನ್ನು ಉತ್ತು ಬಿತ್ತಿ ಚಳಿಗಾಲದಲ್ಲಿ ದನಕರುಗಳು ಮೇಯುವ ಪ್ರದೇಶಕ್ಕೆ ಬೇಲಿ ಹಾಕಿಟ್ಟುಕೊಳ್ಳುತ್ತಿದ್ದರು. ಹೊಸದಾಗಿ ಹೀಗೆ ನೆಲೆಸಿದವರ ಮೇಲೆ ಧಾಳಿಮಾಡಿ ಹೂಣ ಜನರು ಅವರನ್ನು ಕೊಲ್ಲುತ್ತಿದ್ದರು. ಆದರೂ ತಮ್ಮನ್ನು ಶಿಕ್ಷಿಸಲು ಬಂದ ಚೀನಿ ಸೈನ್ಯವನ್ನು ಎದುರಿಸಲು ಹೂಣರಿಗೆ ಸಾಧ್ಯವಾಗಲಿಲ್ಲ. ಈ ಅಲೆಮಾರಿ ಹೂಣರು ಇಲ್ಲವೇ ತಾವೂ ನೇಗಿಲು ಹಿಡಿದು ಕೃಷಿ ಮಾಡಿ ಕಂದಾಯ ಕೊಟ್ಟುಕೊಂಡು ಚೀನಿ ಪ್ರಜೆಗಳಾಗ ಬೇಕಾಯಿತು, ಅಥವಾ ಹೊಸ ಹುಲ್ಲುಗಾವಲುಗಳನ್ನು ಹುಡುಕಿಕೊಂಡು ಹೊರಡ ಬೇಕಾಯಿತು. ಕೆಲವರು ಮೊದಲ ಮಾರ್ಗವನ್ನನುಸರಿಸಿ ಚೀನಿ ಜನತೆಯಲ್ಲಿ ಬೆರೆತು ಹೋದರು ಮತ್ತೆ ಕೆಲವರು ಕಣಿವೆಗಳನ್ನು ದಾಟಿ ಪಶ್ಚಿಮ ಮತ್ತು ವಾಯುವ್ಯದಿಕ್ಕುಗಳಿಗೆ ಹೋಗಿ ಪಶ್ಚಿಮ ಟರ್ಕಿಸ್ಥಾನಕ್ಕೆ ಇಳಿದರು.

ಹೀಗೆ ಕ್ರಿ. ಪೂ. 200 ರಿಂದಲೂ ಕುದುರೆ ಸಾಕುತ್ತಿದ್ದ ಮಂಗೋಲ್ ಜನರ ಪಶ್ಚಿಮ ದಿಕ್ಕಿನ ಯಾತ್ರೆ ನಡೆಯುತ್ತಲೇ ಇತ್ತು. ಇವರು ಅಲ್ಲಿದ್ದ ಆರ್ಯರ ಬುಡಕಟ್ಟಿನವರನ್ನು ಪಶ್ಚಿಮಕ್ಕೆ ಒತ್ತರಿಸತೊಡಗಿದರು. ಈ ಆರ್ಯರು ರೋಮ್ ಸಾಮ್ರಾಜ್ಯದ ಎಲ್ಲೆಗಳ ಕಡೆ ಬರಲಾರಂಭಿಸಿ ಅಲ್ಲಿ ಎಲ್ಲಿಯಾದರೂ ದೌರ್ಬಲ್ಯ ತೋರಿ ಬಂದರೆ ಸಾಕು ಚಕ್ರಾಧಿಪತ್ಯದ ಒಳ ನುಗ್ಗಲು ಸಿದ್ಧವಾಗಿದ್ದರು. ಮಂಗೋಲ್ ಮಿಶ್ರಣವಿತ್ತೆಂದು ಊಹಿಸ ಬಹುದಾದ ಸಿಥಿಯನ್ ಜನರಾದ ಪಾರ್ಥಿಯನ್ನರು ಕ್ರಿ.ಪೂ. ಒಂದನೆ ಶತಮಾನದಲ್ಲಿ ಯೂಫ್ರೆಟಿಸ್ ನದಿಯವರೆಗೆ ಬಂದರು. ಪಾಂಪೆ ಪೂರ್ವ ದಿಕ್ಕಿಗೆ ದಂಡೆತ್ತಿ ಬಂದಿದ್ದಾಗ ಇವರು ಅವನನ್ನು ಎದುರಿಸಿದರು. ಕ್ರಾಸಸ್‌ನನ್ನು ಸೋಲಿಸಿ ಕೊಂದವರೂ ಇದೇ ಜನರೇ. ಪರ್ಷಿಯದಲ್ಲಿ ಆಳುತ್ತಿದ್ದ ಸೆಲ್ಯೂಸಿಡ್ ಸಂತತಿಯ ಸ್ಥಾನದಲ್ಲಿ ಪಾರ್ಥಿಯನ್ ಕುಲದ ಆರಾಸಿಡ್ ವಂಶದವರು ಆಳತೊಡಗಿದರು.

ಆದರೆ ಈ ಹೊಟ್ಟೆಗಿಲ್ಲದಿದ್ದ ಅಲೆಮಾರಿ ಜನರಿಗೆ ಕೆಲವು ಕಾಲ ಮತ್ತೊಂದು ಸುಲಭ ಮಾರ್ಗವಿತ್ತು. ಪೂರ್ವಕ್ಕೆ ಅಥವಾ ಪಶ್ಚಿಮಕ್ಕೆ ತಿರುಗದೆ ದಕ್ಷಿಣ ಏಷ್ಯವನ್ನು ಹಾದು ಆಗ್ನೇಯ ದಿಕ್ಕಿಗೆ ತಿರುಗಿ ಖೈಬರ್ ಕಣಿವೆ ಮೂಲಕ ಇಂಡಿಯಾ ದೇಶದೊಳನುಗ್ಗುವುದು. ಈ ಮಾರ್ಗದಲ್ಲಿ ಅವರಿಗೆ ಹೆಚ್ಚು ಪ್ರತಿಭಟನೆ ಇರಲಿಲ್ಲ. ಹೀಗೆ ರೋಮ್ ಮತ್ತು ಚೀನಾ ಬಲಿಷ್ಠವಾಗಿದ್ದಷ್ಟು ದಿನವೂ ಮಂಗೋಲರ ನುಗ್ಗಾಟವನ್ನು ಇಂಡಿಯಾ ಸಹಿಸಿಕೊಳ್ಳ ಬೇಕಾಯಿತು. ಪಂಜಾಬಿನ ಮೂಲಕ ಬಂದಾದ ಮೇಲೊಂದರಂತೆ ಧಾಳಿಕಾರರ ಗುಂಪುಗಳು ವಿಶಾಲವಾದ ಮೈದಾನ ಪ್ರದೇಶಗಳಿಗಿಳಿದು ಅಲ್ಲಿ ಲೂಟಿಮಾಡಿ ಎಲ್ಲವನ್ನು ಹಾಳು ಮಾಡಿದುವು. ಅಶೋಕನ ಸಾಮ್ರಾಜ್ಯ ಒಡೆದು ಹೋಯಿತು. ಇಲ್ಲಿ ಸ್ವಲ್ಪ ಕಾಲ ಇಂಡಿಯದ ಮೇಲೆ ಅಂಧಕಾರ ಕವಿಯುತ್ತದೆ. ಈ ಧಾಳಿಕಾರರಲ್ಲಿ ಒಂದು ಗುಂಪಿಗೆ ಸೇರಿದ ಇಂಡೋಸಿಥಿಯನ್ನರು ಕುಶಾನವಂಶ ಎಂಬ ಒಂದು ವಂಶವನ್ನು ಸ್ಥಾಪಿಸಿದರು. ಈ ವಂಶದ ರಾಜರು ಉತ್ತರ ಇಂಡಿಯವನ್ನು ಕೆಲಕಾಲ ಆಳಿದರು. ಆದಷ್ಟು ಕಾಲ ಅಲ್ಲಿ ಸ್ವಲ್ಪ ವ್ಯವಸ್ಥೆ ಇತ್ತು. ಈ ಮಂಗೋಲ್ ಧಾಳಿಗಳು ಹಲವು ಶತಮಾನಗಳು

ನಡೆಯುತ್ತಲೇ ಇದ್ದುವು. ಕ್ರಿ.ಶ. 5ನೆಯ ಶತಮಾನದ ಒಹುಕಾಲ ಇಂಡಿಯಾ ಎಫ್ತಲೈಟ್ ಅಥವಾ ಬಿಳಿಹೂಣರ ಕಾಟದಿಂದ ಬಳಲಿತು. ಇಂಡಿಯದ ಚಿಕ್ಕಚಿಕ್ಕರಾಜರಿಂದ ಕಪ್ಪಕಾಣಿಕೆ ವಸೂಲುಮಾಡುತ್ತಿದ್ದ ಇವರನ್ನು ಕಂಡರೆ ಅಲ್ಲಿನ ಜನ ಭಯದಿಂದ ನಡುಗುತ್ತಿದ್ದರು. ಈ ಜನರು ಪ್ರತಿ ಬೇಸಿಗೆ ಪಶ್ಚಿಮ ಟರ್ಕಿಸ್ತಾನದಲ್ಲಿ ತಮ್ಮ ಮಂದೆಗಳನ್ನು ಮೇಯಿಸಿಕೊಂಡು, ಶರದೃತುವಿನಲ್ಲಿ ಕಣಿವೆಗಳನ್ನಿಳಿದು ಇಂಡಿಯಕ್ಕೆ ಬರುತ್ತಿದ್ದರು.

ಕ್ರಿ.ಪೂ. ಎರಡನೆ ಶತಮಾನ ರೋಂ ಮತ್ತು ಚೀನಗಳಿಗೆ ದೊಡ್ಡ ದುರದೃಷ್ಟದ ಕಾಲ. ಬಹುಶಃ ಆಗಲೇ ಇವುಗಳ ಬಲ ತಗ್ಗಿ ಅನಾಗರಿಕರ ಧಾಳಿಗಳನ್ನು ತಡೆಯುವ ಶಕ್ತಿ ಕುಗ್ಗಿಹೋಯಿತು. ಎಂದೆಂದೂ ಕಂಡಿರದಂತಹ ಘೋರವಾದ ಒಂದು ಸಾಂಕ್ರಾಮಿಕ ಜಾಡ್ಯವೇ ಇದಕ್ಕೆ ಕಾರಣ. ಈ ರೋಗ ಚೀನದಲ್ಲಿ ಹನ್ನೊಂದು ವರ್ಷಗಳು ಹಾವಳಿ ಮಾಡಿ ಅಲ್ಲಿಯ ಜನಜೀವನವನ್ನು ಅಲ್ಲೋಲಕಲ್ಲೋಲ ಮಾಡಿತು. ಹಾನ್ ವಂಶಬಿದ್ದು ಹೋಗಿ ತಿರುಗಿ ಅಲ್ಲಿ ಒಡುಕು ಅವ್ಯವಸ್ಥೆ ಮೊದಲಾದುವು. ಮುಂದೆ ಕ್ರಿ.ಶ. 7ನೆ ಶತಮಾನದಲ್ಲಿ ಟಾಂಗ್ ಸಂಗತಿ ಬರುವವರೆಗೆ ಚೀನ ಇದರಿಂದ ಸರಿಯಾಗಿ ಚೇತರಿಸಿಕೊಳ್ಳಲಿಲ್ಲ.

ಈ ರೋಗ ಏಷ್ಯದಿಂದ ಯೂರೋಪಿಗೆ ಹರಡಿತು. ಕ್ರಿ.ಶ. 164 ರಿಂದ ಕ್ರಿ.ಶ. 180ರ ವರೆಗೆ ಇದು ರೋಂ ಸಾಮ್ರಾಜ್ಯದಲ್ಲಿ ಹಾವಳಿ ಮಾಡಿತು. ರೋಂ ಚಕ್ರಾಧಿಪತ್ಯ ಇದರಿಂದ ಬಹಳ ದುರ್ಬಲವಾಗಿ ಹೋಯಿತು. ಇದಾದ ನಂತರ ರೋಮಿನ ಪ್ರಾಂತ್ಯಗಳಲ್ಲಿ ಜನ ಸಂಖ್ಯೆ ಇದ್ದಕ್ಕಿದ್ದಂತೆ ಇಳಿದು ಹೋಯಿತೆಂದು ತಿಳಿದುಬರುತ್ತದೆ. ಸರ್ಕಾರಿ ಆಡಳಿತದ ದಕ್ಷತೆ ಮತ್ತು ದರ್ಪ ಸಹ ಬಹುಮಟ್ಟಿಗೆ ಕುಗ್ಗಿಹೋದುವು. ಅಂತೂ ರೋಮಿನ ಎಲ್ಲೆಗಳು ಮೊದಲಿನಂತೆ ಅಭೇದ್ಯವಾಗಿರದೆ ಇಲ್ಲಿ ಅಲ್ಲಿ ಧಾಳಿಕಾರರಿಗೆ ಒಳನುಗ್ಗಲು ಅವಕಾಶ ಸಿಗಲಾರಂಭಿಸಿತು. ಗಾಥರೆಂಬ ನಾರ್ಡಿಕ್ ಜನರು ತಮ್ಮ ಮೂಲಸ್ಥಾನವಾದ ಸ್ವೀಡನ್ನಿನ ಗಾಥ್‌ಲ್ಯಾಂಡಿನಿಂದ ರಷ್ಯಾವನ್ನು ದಾಟಿ ವೋಲ್ಗಾನದಿಯ ಪ್ರದೇಶ ಮತ್ತು ಕಪ್ಪು ಸಮುದ್ರತೀರ ಪ್ರದೇಶಗಳಿಗೆ ವಲಸೆ ಹೋಗಿ ಸಮುದ್ರ ಕಳ್ಳತನ ಮಾಡುತ್ತಿದ್ದರು. ಕ್ರಿ.ಶ. 2ನೆ ಶತಮಾನದ ಕೊನೆಗೆ ಇವರಿಗೂ ಹೂಣರ ಪಶ್ಚಿಮ ಯಾತ್ರೆಯ ಬಿಸಿ ತಗುಲಲು ಮೊದಲಾಗಿರಬೇಕು. ಕ್ರಿ.ಶ. 247ರಲ್ಲಿ ಇವರು ಭೂಮಾರ್ಗವಾಗಿ ಡ್ಯಾನ್ಯೂಬ್ ನದಿಯನ್ನು ದಾಟಿ ಈಗ ಸರ್ಬಿಯ ಇರುವಲ್ಲಿ ನಡೆದ ಕದನದಲ್ಲಿ ರೋಮನ್ನರನ್ನು ಸೋಲಿಸಿದರು. ಡೇಸಿಯಸ್ ಚಕ್ರವರ್ತಿ ಇವರಲ್ಲಿ ಮರಣ ಹೊಂದಿದನು ಕ್ರಿ.ಶ. 256ರಲ್ಲಿ ಫ್ರಾಂಕರೆಂಬ ಮತ್ತೊಂದು ಜರ್ಮನಿಕ್ ಗುಂಪಿನವರು ಕೆಳಗಣ ರೈನ್ ಪ್ರದೇಶದಲ್ಲಿ ಆಕ್ರಮಣ ನಡೆಸಿದರು. ಆಲ್ಸ್ಯಾಸ್‌ನಲ್ಲಿ ಆಲೆಮನಿ ಜನರು ನುಗ್ಗಿದರು. ಗಾಲ್‌ನಲ್ಲಿದ್ದ ರೋಮನ್ ಸೈನ್ಯಗಳು ಇವರನ್ನು ಎದುರಿಸಿ ಹಿಂದಕ್ಕೆ ಓಡಿಸಿದರು. ಆದರೆ ಬಾಲ್ಕನ್ ಪರ್ಯಾಯ ದ್ವೀಪದಲ್ಲಿ ಗಾಥರು ತಿರುಗಿ ತಿರುಗಿ ಧಾಳಿ ಮಾಡುತ್ತಲೇ ಇದ್ದರು. ರೋಮ್ ಸಾಮ್ರಾಜ್ಯದಿಂದ ಡೇಸಿಯಾ ಪ್ರಾಂತ್ಯ ಕಣ್ಮರೆಯಾಯಿತು.

ರೋಮಿನ ದರ್ಪ, ಆತ್ಮ ವಿಶ್ವಾಸಗಳು ತಣ್ಣಗಾಗಿ ಹೋದುವು. ಮೂರು ಶತಮಾನಗಳ ಕಾಲ ಕೋಟೆಕೊತ್ತಲಗಳೇ ಇಲ್ಲದೆ ನಿರ್ಭಯದಿಂದಿದ್ದ ರೋಮಿಗೆ ಅರೇಲಿಯೆನ್ ಚಕ್ರವರ್ತಿ ಕ್ರಿ.ಶ. 270–275ರಲ್ಲಿ ಕೋಟೆ ಕಟ್ಟಿಸಿದನು.

35. ರೋಮ್ ಸಾಮ್ರಾಜ್ಯದ ಮೊದಲ ಭಾಗದಲ್ಲಿ ಸಾಮಾನ್ಯ ಜನ ಜೀವನ

ಕ್ರಿಸ್ತಶಕೆಗೆ ಮೊದಲ ಎರಡು ಶತಮಾನಗಳಲ್ಲಿ ಸ್ಥಾಪಿತವಾದ, ಆಗಸ್ಟಸ್ ಸೀಸರನ ಕಾಲದಿಂದ ಎರಡು ಶತಮಾನಗಳು ಶಾಂತಿ ಸುಭಿಕ್ಷಗಳಿಂದ ಬಾಳಿದ, ಈ ರೋಮನ್ ಸಾಮ್ರಾಜ್ಯ ಹೇಗೆ ದುರ್ದೆಶೆಗಿಳಿದು ಒಡೆದುಹೋಯಿತೆಂದು ತಿಳಿಸುವ ಮೊದಲು ಈ ಸಾಮ್ರಾಜ್ಯದ ಸಾಮಾನ್ಯ ಜನ ಹೇಗೆ ಜೀವಿಸುತ್ತಿದ್ದರೆಂದು ಗಮನಿಸುವುದು ಒಳ್ಳೆಯದೆಂದು ತೋರುತ್ತದೆ. ನಾವು ಈಗ ಈ ಚರಿತ್ರೆಯಲ್ಲಿ ಇಂದಿಗೆ 2000 ವರ್ಷ ಹಿಂದಿನ ಕಾಲವನ್ನು ಪ್ರವೇಶಿಸಿದ್ದೇವೆ ಮತ್ತು ರೋಮನ್ ಶಾಂತಿ ಮತ್ತು ಹಾನ್ ಯುಗದ ಶಾಂತಿಗಳ ನಾಗರಿಕ ಜನಜೀವನವು ಇಂದಿನ ನಾಗರಿಕ ಜನ ಜೀವನವನ್ನು ಹೆಚ್ಚು ಹೆಚ್ಚು ಹೋಲಲಾರಂಭಿಸುವುದನ್ನು ಗಮನಿಸುತ್ತೇವೆ.

ಪಶ್ಚಿಮ ದೇಶಗಳಲ್ಲಿ ಇಷ್ಟುಹೊತ್ತಿಗೆ ನಾಣ್ಯ ಚಲಾವಣೆ ಸಾಮಾನ್ಯವಾಗಿ ಹೋಗಿತ್ತು. ಸಮಾಜದಲ್ಲಿ ಸರ್ಕಾರದ ಅಧಿಕಾರ ವರ್ಗಕ್ಕಾಗಲೀ ಪುರೋಹಿತ ವರ್ಗಕ್ಕಾಗಲೀ ಸೇರದ ಸ್ವತಂತ್ರ ಆದಾಯವುಳ್ಳ ಅನೇಕ ಜನರಿದ್ದರು. ಜನರು ಮೊದಲೆಂದೂ ಇಲ್ಲವಷ್ಟು ಪ್ರಯಾಣ ಮಾಡುತ್ತಿದ್ದರು. ಇದಕ್ಕೆ ಛಾಟಾಮಾರ್ಗಗಳೂ ಅಲ್ಲಲ್ಲಿ ತಂಗಲು ಪ್ರವಾಸಿ ಗೃಹಗಳೂ ಇದ್ದುವು. ಕ್ರಿ.ಪೂ. 500ರ ಮೊದಲಿನ ಜನಜೀವನಕ್ಕೆ ಹೋಲಿಸಿದರೆ ಈ ಜನ ಜೀವನದಲ್ಲಿ ಅಷ್ಟು ಕಟ್ಟುಪಾಡುಗಳಿರಲಿಲ್ಲ. ಆದರ ಮುಂಚೆ ನಾಗರಿಕ ಮನುಷ್ಯ ತನ್ನ ಜಿಲ್ಲೆ ಅಥವಾ ದೇಶಕ್ಕೆ, ತನ್ನ ಜನರ ಸಂಪ್ರದಾಯಗಳಿಗೆ ಒಳಪಟ್ಟವನಾಗಿದ್ದನು. ಆತನ ಪ್ರಪಂಚ ಬಲು ಕಿರಿದಾಗಿತ್ತು. ಸಂಚಾರಿ ಕುಲಜನರು ಮಾತ್ರ ವ್ಯಾಪಾರ ಮಾಡುತ್ತಾ ಅಲ್ಲಿಂದಿಲ್ಲಿಗೆ ಪ್ರಯಾಣ ಮಾಡುತ್ತಿದ್ದರು.

ಆದರೂ "ರೋಮನ್ ಶಾಂತಿ" ಅಥವಾ "ಹಾನ್ ವಂಶದ ಶಾಂತಿ"ಯ ಫಲವಾಗಿ ರೋಂ ಸಾಮ್ರಾಜ್ಯ ಅಥವಾ ಚೀನಾ ಸಾಮ್ರಾಜ್ಯಗಳಲ್ಲಿ ಎಲ್ಲಾ ಕಡೆಗಳಲ್ಲೂ ಒಂದೇ ಬಗೆಯ ಸಂಸ್ಕೃತಿ ಉದಯಿಸಲಿಲ್ಲ. "ಬ್ರಿಟಿಷ್ ಶಾಂತಿ"ಯ ಇಂಡಿಯಾ ಸಾಮ್ರಾಜ್ಯದಂತೆ ಅಲ್ಲಿಯೂ ಜಿಲ್ಲೆ ಜಿಲ್ಲೆಗೂ ಅನೇಕ ಸಾಂಸ್ಕೃತಿಕ ವ್ಯತ್ಯಾಸಗಳಿದ್ದುವು. ರೋಮ್ ಸಾಮ್ರಾಜ್ಯಕ್ಕೆ ಸೇರಿದ ಆ ವಿಸ್ತಾರ ಪ್ರದೇಶದಲ್ಲಿ ಅಲ್ಲಲ್ಲಿ ರೋಮನ್ ಸೈನ್ಯ ಠಾಣ್ಯಗಳೂ ವಸಾಹತುಗಳೂ ಇದ್ದುವು. ಇಂತಹ ಕಡೆಗಳಲ್ಲಿ ಲ್ಯಾಟಿನ್ ಭಾಷೆಯನ್ನು ಜನರು ಆಡುತ್ತಿದ್ದರು, ರೋಮನ್ ದೇವತೆಗಳನ್ನು ಪೂಜಿಸುತ್ತಿದ್ದರು. ಆದರೆ ರೋಮನ್ನರ ಆಗಮನಕ್ಕೆ ಮುಂಚೆಯೇ ಊರು ಪಟ್ಟಣಗಳಿದ್ದಲ್ಲಿ ಅವು ರೋಮನ್ನರ ಸ್ವಾಧೀನವಾದ ಮೇಲೆಯೂ ತಮ್ಮ ತಮ್ಮ ಕಾರ್ಯಭಾರಗಳನ್ನು ತಾವೇ ನಡೆಸಿಕೊಳ್ಳು

ತ್ತಿದ್ದುವು. ಅಲ್ಲದೆ ಸ್ವಲ್ಪ ಕಾಲದವರೆಗಾದರೂ ತಮ್ಮ ದೇವರುಗಳಿಗೆ ತಮ್ಮದೇ ರೀತಿಯಲ್ಲಿ ಪೂಜೆ ಸಲ್ಲಿಸುತ್ತಿದ್ದುವು. ಗ್ರೀಸ್, ಏಷ್ಯಮೈನರ್, ಈಜಿಪ್ಟ್ ಮತ್ತು ಗ್ರೀಕ್ ಪ್ರಭಾವಕ್ಕೊಳಗಾಗಿದ್ದ ಪೂರ್ವ ಪ್ರದೇಶಗಳಲ್ಲಿ ಲ್ಯಾಟಿನ್ ಭಾಷೆ ಎಲ್ಲಿಯೂ ಜಾರಿಗೆ ಬರಲಿಲ್ಲ. ಅಲ್ಲೆಲ್ಲಾ ಗ್ರೀಕ್ ಭಾಷೆಯೇ ಆಡಳಿತವಿತ್ತು. ಅಪೊಸ್ಟಲ್ ಪಾಲ್ ಆದ ಟಾರ್ಸಸ್ಸಿನ ಸಾಲ್ ಯಹೂದ್ಯಮತದ ರೋಮನ್ ಪ್ರಜೆ. ಆದರೆ ಈತ ಮಾತನಾಡುತ್ತಿದ್ದುದು ಮತ್ತು ಬರೆಯುತ್ತಿದ್ದುದು ಗ್ರೀಕ್ ಭಾಷೆಯಲ್ಲಿ ಹೀಬ್ರೂವಿನಲ್ಲಲ್ಲ. ರೋಮನ್ ಸಾಮ್ರಾಜ್ಯದ ಹೊರಗಿದ್ದ, ಪರ್ಷಿಯನ್, ಗ್ರೀಕ್, ಸೆಲ್ಯೂಸಿಡ್ ಸಂತತಿಯ ದೊರೆಗಳನ್ನು ಪಲ್ಲಟಿಸಿದ ಪಾರ್ಥಿಯನ್ ದೊರೆಗಳ ಆಸ್ಥಾನದಲ್ಲಿ ಸಹ ಗ್ರೀಕ್ ಸಭ್ಯರ ಭಾಷೆಯಾಗಿತ್ತು. ಸ್ಪೇನ್ ಮತ್ತು ಉತ್ತರ ಆಫ್ರಿಕದ ಕೆಲವು ಭಾಗಗಳಲ್ಲಿ ಕಾರ್ಥೇಜಿನ ಪತನದ ನಂತರವೂ ಬಹುಕಾಲ ಕಾರ್ಥೇಜಿನ ಭಾಷೆ ಬಳಕೆಯಲ್ಲಿತ್ತು. ರೋಮನ್ನರ ಹೆಸರು ಕೇಳಿ ಬರುವುದಕ್ಕೆ ಬಹುಮುಂಚಿನಿಂದಲೂ ಇದ್ದ ಐಶ್ವರ್ಯಭರಿತ ಪಟ್ಟಣ ಸೆವಿಲ್ ಕೇವಲ ಕೆಲವೇ ಮೈಲಿ ದೂರದಲ್ಲಿ ಇಟಾಲಿಕ್ ಎಂಬ ನಿವೃತ್ತ ರೋಮನ್ ಸೈನಿಕರ ಕಾಲೊನಿ ಬಂದ ಮೇಲೆಯೂ ಅನೇಕ ತಲೆಮಾರುಗಳು ತನ್ನ ಸೆಮಿಟಿಕ್ ದೇವತೆ ಮತ್ತು ಸೆಮಿಟಿಕ್ ಭಾಷೆಗಳನ್ನು ಉಳಿಸಿಕೊಂಡು ಬಂದಿತು. ಕ್ರಿ.ಶ. 193ರಿಂದ ಕ್ರಿ.ಶ. 211 ರವರೆಗೆ ರೋಮ್ ಸಾಮ್ರಾಟನಾಗಿದ್ದ ಸೆವೆರಸ್ಸನ ಮಾತೃಭಾಷೆ ಕಾರ್ಥೇಜಿನಿಯನ್ ಆಗಿತ್ತು. ಈತನು ಲ್ಯಾಟಿನ್ ಭಾಷೆಯನ್ನು ಹೊಸದಾಗಿ ಕಲಿಯಬೇಕಾಯಿತು. ಈತನ ಸಹೋದರಿ ಲ್ಯಾಟಿನ್ ಭಾಷೆಯನ್ನು ಕಲಿಯಲೇ ಇಲ್ಲವೆಂದೂ ತನ್ನ ರೋಮಿನ ಮನೆಯ ಕೆಲಸಗಳನ್ನೆಲ್ಲಾ ಪ್ಯೂನಿಕ್ ಭಾಷೆಯ ಮೂಲಕವೇ ನಡೆಸುತ್ತಿದ್ದಳೆಂದೂ ದಾಖಲೆಗಳಿವೆ.

ಗಾಲ್, ಬ್ರಿಟನ್‌ಗಳಲ್ಲಿ, ಡೇಷಿಯ (ಇದು ಈಗಿನ ರುಮೇನಿಯ ಎನ್ನಬಹುದು) ಮತ್ತು ಪಾನೊನಿಯ (ಡ್ಯಾನ್ಯೂಬ್ ನದಿಯ ದಕ್ಷಿಣಕ್ಕಿರುವ ಹಂಗೆರಿ) ಪ್ರಾಂತ್ಯಗಳಲ್ಲಿ ರೋಮನ್ನರ ಬರುವಿಕೆಗೆ ಮುಂಚೆ ದೊಡ್ಡ ನಗರಗಳೂ ದೇವಸ್ಥಾನಗಳೂ ಇರುವ ಸಂಸ್ಕೃತಿಗಳಿರಲಿಲ್ಲ. ಅಂತಹ ಪ್ರದೇಶಗಳನ್ನು ರೋಮ್ ಸಾಮ್ರಾಜ್ಯ ಲ್ಯಾಟಿನೈಸ್ ಮಾಡಿತು. ಈ ಪ್ರದೇಶಗಳು ನಾಗರಿಕತೆಯನ್ನು ಕಂಡಿದ್ದು ಇದೇ ಮೊದಲ ಬಾರಿ. ಇಲ್ಲಿ ಹೊಸದಾಗಿ ಸ್ಥಾಪಿತವಾದ ಊರು ಪಟ್ಟಣಗಳಲ್ಲಿ ಮೊದಲಿನಿಂದಲೂ ಲ್ಯಾಟಿನ್ ಪ್ರಮುಖ ಭಾಷೆಯಾಯಿತು. ರೋಮನ್ ದೇವರುಗಳಿಗೆ ಪೂಜೆ ಸಲ್ಲುತ್ತಿತ್ತು. ರೋಮನ್ ಪದ್ಧತಿಗಳು ಜಾರಿಗೆ ಬಂದುವು. ರೋಮನ್ ಉಡಿಗೆ ತೊಡಿಗೆಗಳು ಬಳಕೆಯಲ್ಲಿದ್ದುವು. ಲ್ಯಾಟಿನ್ ಭಾಷೆಯ ರೂಪಾಂತರಗಳಾದ ಇಂದಿನ ರುಮೇನಿಯನ್, ಇಟಾಲಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಷ್ ಭಾಷೆಗಳು ಅಂದು ರೋಮನ್ ಸಂಪ್ರದಾಯಗಳು ಮತ್ತು ಲ್ಯಾಟಿನ್ ಭಾಷೆಗಳು ಎಷ್ಟು ದೂರ ಹರಡಿದ್ದುವು ಎಂಬುದನ್ನು ನೆನಪಿಗೆ ತರುತ್ತವೆ. ಬರುಬರುತ್ತಾ ವಾಯುವ್ಯ ಆಫ್ರಿಕದಲ್ಲೂ ಲ್ಯಾಟಿನ್ ಜನರು ಹೆಚ್ಚಾಗಿ ಬಳಸುವ ಭಾಷೆಯಾಯಿತು. ಆದೇ, ಈಜಿಪ್ಟ್, ಗ್ರೀಸ್ ಮತ್ತು ಪೂರ್ವ ರೋಮನ್

ಸಾಮ್ರಾಜ್ಯದ ಉಳಿದ ಭಾಗಗಳು ಲ್ಯಾಟಿನ್ನೈಸ್ ಆಗಲೇ ಇಲ್ಲ. ಅಲ್ಲೆಲ್ಲಾ ಈಜಿಪ್ಷಿಯನ್ ಮತ್ತು ಗ್ರೀಕ್ ಸಂಸ್ಕೃತಿ ಮತ್ತು ಸತ್ವಗಳು ಉಳಿದುಕೊಂಡುವು. ರೋಮ್ ನಗರದಲ್ಲಿ ಸಹ ವಿದ್ಯಾವಂತರು ಗ್ರೀಕ್ ಭಾಷೆಯನ್ನು ಸಭ್ಯರ ಭಾಷೆಯೆಂದು ಎಣಿಸಿ ಕಲಿಯುತ್ತಿದ್ದರು. ಗ್ರೀಕ್ ಸಾಹಿತ್ಯಕ್ಕೆ ಮತ್ತು ಗ್ರೀಕ್ ಭಾಷೆಯ ಮೂಲಕ ಪಡೆದ ಜ್ಞಾನಕ್ಕೆ ಲ್ಯಾಟಿನ್ನಿಗಿಂತ ಹೆಚ್ಚು ಗೌರವವಿತ್ತು.

ಹೀಗೆ ವೈವಿಧ್ಯದಿಂದ ತುಂಬಿದ ಈ ಸಾಮ್ರಾಜ್ಯದಲ್ಲಿ ಸಹಜವಾಗಿಯೇ ಕೆಲಸ ಕಾರ್ಯಗಳನ್ನೂ ವ್ಯವಹಾರವನ್ನೂ ನಡೆಸುವುದರಲ್ಲಿಯೂ ವೈವಿಧ್ಯವಿತ್ತು. ಇವರು ಸ್ಥಿರವಾಗಿ ನೆಲಸಿದ್ದಲ್ಲೆಲ್ಲಾ ಕೃಷಿಯೇ ಅತ್ಯಂತ ಮುಖ್ಯ ಉದ್ಯೋಗವಾಗಿತ್ತು. ಪ್ರಥಮ ರೋಮನ್ ಪ್ರಜಾಪ್ರಭುತ್ವದ ಬೆನ್ನುಮೂಳೆ ಎನಿಸಿದ್ದ ಗಟ್ಟಿಮುಟ್ಟಾದ ಸ್ವತಂತ್ರ ರೈತರು ಪ್ಯೂನಿಕ್ ಯುದ್ಧಗಳ ನಂತರ ತಮ್ಮ ಹೊಲಗದ್ದೆಗಳನ್ನು ಕಳೆದುಕೊಂಡರೆಂದೂ ಇವುಗಳ ಬದಲು ಗುಲಾಮರು ದುಡಿಯುತ್ತಿದ್ದ ದೊಡ್ಡ ದೊಡ್ಡ ಎಸ್ಟೇಟುಗಳು ರೋಮಿನಲ್ಲಿ ಕಾಣಿಸಿಕೊಂಡುವೆಂದೂ ಈ ಮೊದಲೇ ನೋಡಿದೆವು. ಮೊದಲು ಗ್ರೀಕರಲ್ಲಿ ವ್ಯವಸಾಯ ಮಾಡುವುದರಲ್ಲಿ ಅನೇಕ ವಿಧದ ವ್ಯವಸ್ಥೆಗಳಿದ್ದುವು. ಆರ್ಕೇಡಿಯದಲ್ಲಿ ಪ್ರತಿಯೊಬ್ಬ ಸ್ವತಂತ್ರ ಪ್ರಜೆಯೂ ಸ್ವತಃ ದುಡಿಯಬೇಕಾಗಿತ್ತು. ಆದೇ ಸ್ಪಾರ್ಟಾದಲ್ಲಿ ದುಡಿಯುವುದೆಂದರೆ ಅಪಮಾನವೆಂದು ಎಣಿಸಿ ಬೇಸಾಯವನ್ನು ಸಂಪೂರ್ಣವಾಗಿ ಹೆಲಾಟರೆಂಬ ಗುಲಾಮರಿಂದ ನಡೆಸುತ್ತಿದ್ದರು. ಇವೆರಡು ವೈಪರೀತ್ಯಗಳ ನಡುವೆ ಬೇರೆ ಬೇರೆ ವಿಧದ ವ್ಯವಸ್ಥೆಗಳೂ ಇದ್ದುವು. ಆದರೆ ಇಷ್ಟು ಹೊತ್ತಿಗೆ ಇದೆಲ್ಲಾ ಹಳೆಕಥೆಯಾಗಿ ಗ್ರೀಕ್ ಪ್ರಭಾವವಿದ್ದಲ್ಲೆಲ್ಲಾ ಎಸ್ಟೇಟುಗಳೂ ಗುಲಾಮರ ಗ್ಯಾಂಗುಗಳೂ ಜಾರಿಯಲ್ಲಿ ಬಂದಿದ್ದುವು. ವ್ಯವಸಾಯ ಮಾಡುತ್ತಿದ್ದ ಗುಲಾಮರು ಬೇರೆ ಬೇರೆ ಕಡೆಗಳಿಂದ ಹಿಡಿದು ತಂದವರಾಗಿದ್ದರೆ ಒಬ್ಬರ ಮಾತು ಒಬ್ಬರಿಗೆ ತಿಳಿಯುತ್ತಿರಲಿಲ್ಲ. ಇಲ್ಲವೇ ಇವರು ಗುಲಾಮಗಿರಿಯಲ್ಲೇ ಹುಟ್ಟಿದವರಾಗಿರುತ್ತಿದ್ದರು. ಇವರಿಗೆ ಓದುಬರಹ ಬರುತ್ತಿರಲಿಲ್ಲ. ಇವರಲ್ಲಿ ದಬ್ಬಾಳಿಕೆಯನ್ನೆದುರಿಸಲು ಒಗ್ಗಟ್ಟಾಗಲೀ ತಮ್ಮ ಹಕ್ಕುಗಳ ಅರಿವಾಗಲೀ ಮತ್ತೆ ಯಾವ ವಿಧದ ಜ್ಞಾನವಾಗಲೀ ಇರುತ್ತಿರಲಿಲ್ಲ. ಹಳ್ಳಿಗಾಡಿನಲ್ಲಿ ಇವರೇ ಬಹುಸಂಖ್ಯಾತರಾಗಿದ್ದರೂ ಇವರು ದಂಗೆಯೆದ್ದು ಜಯಿಸಲು ಆಗಲೇ ಇಲ್ಲ. ಕ್ರಿ.ಪೂ. ಒಂದನೆ ಶತಮಾನದಲ್ಲಿ ನಡೆದ ಸ್ಪಾರ್ಟಾಕಸ್ಸಿನ ದಂಗೆಯಲ್ಲಿ ಭಾಗವಹಿಸಿದವರೆಲ್ಲಾ ಗ್ಲೇಡಿಯೇಟೋರಿಯಲ್ ಕದನಗಳಿಗಾಗಿ ವಿಶೇಷ ತರಬೇತು ಪಡೆದಿದ್ದವರೇ. ರೋಮ್ ಪ್ರಜಾಪ್ರಭುತ್ವದ ಕಡೆಯ ಭಾಗ ಮತ್ತು ರೋಮ್ ಸಾಮ್ರಾಜ್ಯದ ಮೊದಲ ಭಾಗದಲ್ಲಿ ಜೀವಿಸಿದ್ದ ಕೃಷಿಕ ಗುಲಾಮರು ಭಯಂಕರ ಅತ್ಯಾಚಾರಗಳನ್ನು ಸಹಿಸಬೇಕಾಯಿತು. ತಪ್ಪಿಸಿಕೊಳ್ಳದಿರುವಂತೆ ರಾತ್ರಿ ಹೊತ್ತು ಇವರನ್ನು ಸರಪಣಿಗಳಿಂದ ಕಟ್ಟಿ ಹಾಕುತ್ತಿದ್ದರು. ಅಥವಾ ತಪ್ಪಿಸಿಕೊಳ್ಳುವುದು ಕಷ್ಟವಾಗಲೆಂದು ತಲೆಯನ್ನು ಅರ್ಧ ಬೋಳಿಸುತ್ತಿದ್ದರು. ಇವರಿಗೆ ಮದುವೆಯಾಗುವ ಹಕ್ಕಿರಲಿಲ್ಲ. ಇವರ ಒಡೆಯರಿಗೆ ಇವರ ಮೇಲೆ ಯಾವುದೇ ಬಗೆಯ ಅತ್ಯಾಚಾರ ನಡೆಸುವ, ಅಂಗಚ್ಛೇದ ಮಾಡುವ, ಕೊಲ್ಲುವ

ಹಕ್ಕು ಸಹ ಇತ್ತು. ಆ ಖಾಡದಲ್ಲಿ ಪ್ರಾಣಿಗಳೊಡನೆ ಹೋರಾಡುವುದಕ್ಕೆ ಗುಲಾಮರನ್ನು ಒಡೆಯರು ಮಾರಬಹುದಾಗಿತ್ತು. ಗುಲಾಮನೊಬ್ಬನು ತನ್ನ ಒಡೆಯನನ್ನು ಕೊಂದರೆ ಅವನನ್ನೊಬ್ಬನನ್ನಷ್ಟೇ ಅಲ್ಲದೆ ಆ ಕುಟುಂಬದ ಗುಲಾಮರೆಲ್ಲರನ್ನೂ ಶಿಲುಬೆಗೇರಿಸುತ್ತಿದ್ದರು. ಗ್ರೀಸಿನ ಕೆಲವೆಡೆಗಳಲ್ಲಿ ಮುಖ್ಯವಾಗಿ ಅಥೆನ್ಸಿನಲ್ಲಿ, ಗುಲಾಮರ ಗತಿ ಯಾವಾಗಲೂ ಇಷ್ಟು ಘೋರವಾಗಿರಲಿಲ್ಲವಾದರೂ ಜುಗುಪ್ಸೆ ಹುಟ್ಟಿಸುವಂತಿತ್ತು. ಹೀಗಿದ್ದ ಜನತೆಗೆ ರೋಮಿನ ಗಡಿ ಪ್ರದೇಶಗಳ ಸೈನ್ಯಗಳನ್ನು ಸೋಲಿಸಿ ಒಳ ನುಗ್ಗಿದ ಅನಾಗರಿಕ ಧಾಳಿಕಾರರು ಶತ್ರುಗಳೆನ್ನಿಸುತ್ತಿರಲಿಲ್ಲ. ಬಂಧ ವಿಮೋಚಕರಾಗಿ ಕಂಡು ಬರುತ್ತಿದ್ದರು.

ಬೇರೆ ಅನೇಕ ಉದ್ಯಮಗಳಿಗೂ ಗುಲಾಮರಿಂದ ಕೆಲಸ ಮಾಡಿಸುವ ಪದ್ಧತಿ ಹರಡಿತ್ತು. ಹಲವು ಮನುಷ್ಯರು ಸೇರಿ ಗುಂಪುಗಳಾಗಿ ಕೆಲಸ ಮಾಡುವಂತಹದರಲ್ಲೆಲ್ಲಾ ಈ ಪದ್ಧತಿ ಬಳಕೆಯಲ್ಲಿತ್ತು. ಗಣಿಗಳಿಂದ ಅದಿರು ತೆಗೆಯುವುದು, ಅದಿರಿನಿಂದ ಲೋಹ ಪಡೆಯುವುದು, ಗ್ಯಾಲಿ ಹಡಗುಗಳನ್ನು ಹುಟ್ಟು ಹಾಕಿ ನಡೆಸುವುದು, ರಸ್ತೆ ಕಾಮಗಾರಿ, ದೊಡ್ಡ ಕಟ್ಟಡಗಳ ಕಟ್ಟುವಿಕೆ ಇವೆಲ್ಲ ಗುಲಾಮರಿಂದ ನಡೆಯುತ್ತಿತ್ತು. ಮನೆಗಳಲ್ಲೂ ಗುಲಾಮರು ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದರು. ಹಳ್ಳಿ ಪಟ್ಟಣಗಳಲ್ಲಿ ಸ್ವತಂತ್ರರಾದ ಬಡವರಾದ ಪ್ರಜೆಗಳೂ ಇದ್ದರು. ಇವರು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಕೂಲಿ ಪಡೆದು ಬೇರೆಯವರ ಕೆಲಸ ಮಾಡಿಕೊಡುತ್ತಿದ್ದುದೂ ಉಂಟು. ಸಾಮಾನ್ಯವಾಗಿ ಇವರು ಕೈಕಸಬು ಮಾಡುತ್ತಿದ್ದರು ಇಲ್ಲವೇ ಮೇಸ್ತ್ರಿ ಕೆಲಸದಂತಹ ಉದ್ಯೋಗದಲ್ಲಿರುತ್ತಿದ್ದರು. ಈ ಹೊಸದಾದ ಹಣಕ್ಕೆ ದುಡಿಯುತ್ತಿದ್ದ ವರ್ಗ ಗುಲಾಮರೊಡನೆ ಸ್ಪರ್ಧಿಸಬೇಕಾಗುತ್ತಿತ್ತು. ಆದರೆ ಒಟ್ಟು ಜನ ಸಂಖ್ಯೆಯಲ್ಲಿ ಎಷ್ಟು ಭಾಗ ಇಂತಹ ಜನರಿದ್ದರು ಎಂದು ಗೊತ್ತಿಲ್ಲ. ಬಹುಶಃ ಇವರ ಸಂಖ್ಯೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಬಹುಮಟ್ಟಿಗೆ ಹೆಚ್ಚು ಕಡಿಮೆ ಆಗುತ್ತಾ ಇದ್ದಿರಬೇಕು. ಗುಲಾಮರಲ್ಲಿಯೂ ಅನೇಕ ವಿಧದವರಿದ್ದಿರಬೇಕು. ರಾತ್ರಿ ಸರಪಳಿಗಳಿಂದ ಬಂಧಿಸಿಡಲಾಗುತ್ತಿದ್ದವರು, ಚಾವಟಿ ಏಟು ತಿಂದು ಗಣಿಗಳಲ್ಲಿ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದವರಿಂದ ಹಿಡಿದು ಹೆಚ್ಚು ಕಡಿಮೆ ಸ್ವತಂತ್ರ ಪ್ರಜೆಯಂತೆಯೇ ಜೀವಿಸುತ್ತಿದ್ದ ಗುಲಾಮರೂ ಇದ್ದರು. ಇಂತಹವರು ತಮ್ಮದೇ ಜಮೀನು ಸಾಗುವಳಿ ಮಾಡಬಹುದಾಗಿತ್ತು, ಅಥವಾ ಯಾವುದಾದರೂ ಕೈ ಕಸಬು ಮಾಡಿಕೊಂಡಿರಬಹುದಾಗಿತ್ತು. ಅಲ್ಲದೆ ಸ್ವತಂತ್ರ ಪ್ರಜೆಯಂತೆಯೇ ಮದುವೆ ಮಾಡಿಕೊಂಡು ಹೆಂಡತಿಯೊಡನೆ ಇರುವ ಹಕ್ಕೂ ಇತ್ತು. ಇಂತಹ ಗುಲಾಮರ ಒಡೆಯರಿಗೆ ಈ ತರಹ ವ್ಯವಸ್ಥೆಯೇ ಹೆಚ್ಚು ಅನುಕೂಲವೆಂಬಂತೆ ತೋರುತ್ತಿತ್ತು. ಈ ಗುಲಾಮರು ಒಡೆಯನಿಗೆ ತೃಪ್ತಿಯಾಗುವಷ್ಟು ಹಣವನ್ನು ಕೊಡಬೇಕಾಗುತ್ತಿತ್ತು.

ಕೆಲವು ಗುಲಾಮರಿಗೆ ಆಯುಧ ತರಪೇತೂ ಇರುತ್ತಿತ್ತು. ಪ್ಯೂನಿಕ್ ಯುದ್ಧಗಳು ಕ್ರಿ.ಪೂ. 263ರಲ್ಲಿ ಪ್ರಾರಂಭವಾದಾಗ ಗುಲಾಮರಲ್ಲಿ ಕಾಳಗ ನಡೆಸಿ ಮನರಂಜನೆ ಮಾಡಿಕೊಳ್ಳುವ ಹಳೆಯ ಎಟ್ರುಸ್ಕನ್ ಪದ್ಧತಿ ಮತ್ತೆ ಮೇಲೆ ಬಂದಿತು. ಬಹುಬೇಗ

ಇದು "ಫ್ಯಾಷನ್" ಆಗಿ ಹೋಯಿತು. ಪ್ರತಿಯೊಬ್ಬ ಶ್ರೀಮಂತನೂ ಗ್ಲೇಡಿಯೇಟರರ ಒಂದು ಪಡೆಯನ್ನು ಇಟ್ಟುಕೊಳ್ಳಲು ಮೊದಲು ಮಾಡಿದನು. ಇವರು ಕೆಲವು ಬಾರಿ ಅಖಾಡದಲ್ಲಿ ಕಾಳಗಮಾಡುತ್ತಿದ್ದರು. ಆದರೆ ಇವರ ನಿಜವಾದ ಕಾರ್ಯ ಶ್ರೀಮಂತನ ಅಂಗರಕ್ಷಕರಾಗಿರುವುದು ಮತ್ತು ಆತನ ಪರವಾಗಿ ಬೇರೆಯವರನ್ನು ಹಿಂಸಿಸುವುದು. ಇದಲ್ಲದೆ ವಿದ್ಯಾವಂತ ಗುಲಾಮರೂ ಇದ್ದರು. ರೋಂ ಪ್ರಜಾಪ್ರಭುತ್ವದ ಕೆಲದಿನಗಳಲ್ಲಿ ರೋಂ ಉನ್ನತ ನಾಗರಿಕತೆ ಪಡೆದ ಗ್ರೀಸ್, ಉತ್ತರ ಆಫ್ರಿಕಾ, ಏಷ್ಯಾ ಮೈನರಿನ ಪಟ್ಟಣಗಳನ್ನು ಜಯಿಸಿ ಉತ್ತಮ ಶಿಕ್ಷಣ ಪಡೆದ ಅನೇಕ ಜನರನ್ನು ಹಿಡಿದು ತಂದಿತು. ಕುಲೀನ ರೋಮನ್ ವಂಶದಲ್ಲಿ ಮಕ್ಕಳ ಉಪಾಧ್ಯಾಯನು ಸಾಮಾನ್ಯವಾಗಿ ಗುಲಾಮನಾಗಿರುತ್ತಿದ್ದನು. ಕುಟುಂಬದ ಪುಸ್ತಕ ಭಂಡಾರದ ಮೇಲ್ವಿಚಾರಣೆ ಗ್ರೀಕ್ ಗುಲಾಮನದಾಗಿರುತ್ತಿತ್ತು. ಕಾರ್ಯದರ್ಶಿಗಳು ಮತ್ತು ಪಂಡಿತರೂ ಗುಲಾಮರಾಗಿರುತ್ತಿದ್ದರು. ಸರ್ಕಸ್ಸಿನ ಆಟಗಳನ್ನು ಕಲಿತ ನಾಯಿಗಳನ್ನು ಸಾಕಿದಂತೆಯೇ ರೋಮನ್ ಶ್ರೀಮಂತನು ಕವಿಗಳನ್ನು ಸಾಕುತ್ತಿದ್ದನು. ಆಧುನಿಕ ಲೇಖನ ಕಲೆ ಮತ್ತು ಸಾಹಿತ್ಯ ವಿಮರ್ಶೆಯ ಕೂಲಂಕಷ, ವಿನಯಪರ ಆದರೂ ತಪ್ಪು ಕಂಡುಹಿಡಿಯುವ ಸಂಪ್ರದಾಯಗಳು ಅಂದಿನ ಆ ಪರಾಧೀನತೆಯ ವಾತಾವರಣದಲ್ಲೇ ವಿಕಾಸಗೊಂಡುವು. ಕೆಲವು ಉದ್ಯಮಶೀಲರಾದ ಜನರು ಸೂಕ್ಷ್ಮ ಬುದ್ಧಿಯ ಗುಲಾಮ ಹುಡುಗರನ್ನು ಖರೀದಿ ಮಾಡಿ ಅವರಿಗೆ ವಿದ್ಯೆ ಕಲಿಸಿ ಬಳಿಕ ಹೆಚ್ಚು ಬೆಲೆಗೆ ಅವರನ್ನು ಮಾರುತ್ತಿದ್ದುದೂ ಉಂಟು. ಪುಸ್ತಕಗಳ ನಕಲು ಮಾಡುವುದು, ಅಕ್ಕಸಾಲಿ ಕೆಲಸ ಇಂತಹ ಕೌಶಲ್ಯಪೂರಿತ ವೃತ್ತಿಗಳ ತರಪೇತನ್ನು ಗುಲಾಮರಿಗೆ ಕೊಡಿಸುತ್ತಿದ್ದರು. ರೋಮನ್ ಶ್ರೀಮಂತರ ಪ್ರಜಾಪ್ರಭುತ್ವಗಳ ಆರಂಭದ ವಿಜಯಯಾತ್ರೆಗಳಿಗೂ ಘೋರವಾದ ಸಾಂಕ್ರಾಮಿಕ ರೋಗದ ನಂತರ ರೋಂ ಸಾಮ್ರಾಜ್ಯ ಒಡೆದು ಹೋಗಲಾರಂಭಿಸಿದ ಕಾಲಕ್ಕೂ ನಡುವಿನ ನಾಲ್ಕುನೂರು ವರ್ಷಗಳಲ್ಲಿ ಗುಲಾಮರ ಪರಿಸ್ಥಿತಿಯಲ್ಲಿ ಅನೇಕ ಬದಲಾವಣೆಗಳಾದುವು. ಕ್ರಿ. ಪೂ. 2ನೇ ಶತಮಾನದಲ್ಲಿ ಬೇಕಾದಷ್ಟು ಯುದ್ಧ ಖೈದಿಗಳಿದ್ದರು. ಆಗ ಗುಲಾಮರನ್ನು ಬಹು ಕ್ರೌರ್ಯದಿಂದ ನೋಡುತ್ತಿದ್ದರು. ಅವರಿಗೆ ಯಾವ ಹಕ್ಕುಗಳೂ ಇರಲಿಲ್ಲ. ಓದುಗರು ಏನೇನು ಅತ್ಯಾಚಾರಗಳನ್ನು ಊಹಿಸಬಲ್ಲರೋ ಅಷ್ಟನ್ನೂ ಅಂದಿನ ಗುಲಾಮರು ಅನುಭವಿಸಬೇಕಾಯಿತು. ಆದೇ ಕ್ರಿ.ಶ. ಒಂದನೇ ಶತಮಾನದಲ್ಲಿ ಗುಲಾಮರ ಬಗೆಗೆ ಜನರ ಮನೋಭಾವ ಬಹುಮಟ್ಟಿಗೆ ಉತ್ತಮಗೊಂಡಿತೆಂದು ತಿಳಿಯುತ್ತದೆ. ಒಂದನೆಯದಾಗಿ ಮೊದಲಿನಷ್ಟು ಯುದ್ಧ ಬಂದಿಗಳು ಈಗ ಸಿಗುತ್ತಿರಲಿಲ್ಲ. ಗುಲಾಮರ ಬೆಲೆ ಏರಿತ್ತು ಮತ್ತು ಈ ಬಡಪಾಯಿಗಳ ಆತ್ಮಗೌರವ ಏರಿದಷ್ಟೂ ತಮಗೇ ಹೆಚ್ಚಿನ ಸುಖ ಮತ್ತು ಲಾಭ ಉಂಟಾಗುವುದೆಂದು ಗುಲಾಮರ ಒಡೆಯರಿಗೆ ತಿಳಿಯಲು ಮೊದಲಾಯಿತು. ಅಲ್ಲದೆ ಸಮಾಜದ ನೈತಿಕ ಮಟ್ಟವೂ ಉತ್ತಮಗೊಂಡಿತ್ತು. ನ್ಯಾಯಾ-ನ್ಯಾಯ ವಿವೇಚನಾಶಕ್ತಿಯೂ ಬೆಳೆದಿತ್ತು. ಗ್ರೀಸಿನ ಉನ್ನತ ಮನೋಗುಣವು ಹಳೆಯ ರೋಮನ್ ಒರಟುತನವನ್ನು ತಗ್ಗಿಸಿತು. ಕ್ರೂರಕೃತ್ಯಗಳಿಗೆ ನಿರ್ಬಂಧವನ್ನು ವಿಧಿಸ

ಲಾಯಿತು. ಒಡೆಯರು ತನ್ನ ಗುಲಾಮರನ್ನು ಪಶುಗಳೊಡನೆ ಕಾಳಗಕ್ಕಾಗಿ ಮಾರುವಂತಿರಲಿಲ್ಲ. "ಪೆಕ್ಯೂಲಿಯಮ್" ಎಂಬ ಹೆಸರಿನಲ್ಲಿ ಒಡೆಯನು ಗುಲಾಮನಿಗೆ ಆಸ್ತಿಯನ್ನು ತೆಗೆದಿಡುವ ಪದ್ಧತಿ ಬಂದು ಗುಲಾಮರಿಗೂ ಆಸ್ತಿಯನ್ನು ಪಡೆಯುವ ಹಕ್ಕು ಬಂದಿತು. ಹುರುಪು ಬರುವುದಕ್ಕಾಗಿ ಅವರಿಗೆ ಕೆಲಸಕ್ಕೆ ಕೂಲಿ ಕೊಡುವ ಪದ್ಧತಿ ಬಂದಿತು. ಅವರಲ್ಲಿ ಒಂದು ಬಗೆಯ ವಿವಾಹ ವಿಧಿಗೆ ಒಪ್ಪಿಗೆ ಬಂದಿತು. ಅನೇಕ ವಿಧದ ಬೇಸಾಯಗಳಲ್ಲಿ ಹೆಚ್ಚು ಜನ ಒಟ್ಟುಗೂಡಿ ಕೆಲಸ ಮಾಡುವ ಅವಶ್ಯಕತೆ ಇರುವುದಿಲ್ಲ. ಕೆಲವು ಬೆಳೆಗಳಲ್ಲಿ ಕೆಲವು ಋತುಗಳಲ್ಲಿ ಮಾತ್ರ ಹೆಚ್ಚು ಜನ ಬೇಕಾಗುತ್ತದೆ. ಇಂತಹ ಕಡೆಗಳಲ್ಲಿ ಗುಲಾಮನು "ಜೀತದಾಳು" ಆದನು. ಅಂದರೆ ತಾನು ತೆಗೆದ ಬೆಳೆಯಲ್ಲಿ ಸ್ವಲ್ಪ ಭಾಗವನ್ನು ಒಡೆಯನಿಗೆ ಕೊಡುತ್ತಿದ್ದನು. ಇಲ್ಲವೇ ಕೆಲವು ಋತುಗಳಲ್ಲಿ ಮಾತ್ರ ಒಡೆಯನಿಗಾಗಿ ಕೆಲಸ ಮಾಡುತ್ತಿದ್ದನು.

ಹೀಗೆ ಕ್ರಿಸ್ತ ಶಕದ ಮೊದಲಿನ ಶತಮಾನಗಳ ಗ್ರೀಕ್ ಲ್ಯಾಟಿನ್ ಸಂಸ್ಕೃತಿಯ ಈ ಮಹಾಸಾಮ್ರಾಜ್ಯ ಗುಲಾಮಗಿರಿಯ ತಳಹದಿಯ ಮೇಲೆ ನಿಂತಿತ್ತು. ಇದರಲ್ಲಿ ಜನತೆಯಲ್ಲಿ ಅತಿ ಅಲ್ಪ ಸಂಖ್ಯೆಯವರಿಗೆ ಮಾತ್ರ ಜೀವನದಲ್ಲಿ ಸ್ವಾತಂತ್ರ್ಯ ಮತ್ತು ನೆಮ್ಮ ಉಳಿದಿದ್ದುವು. ಈ ಅಂಶವನ್ನು ಅರ್ಥಮಾಡಿಕೊಂಡರೆ ಈ ಸಾಮ್ರಾಜ್ಯದ ಅಧೋಗತಿ ಮತ್ತು ಪತನಕ್ಕೆ ಕಾರಣಗಳೇನೆಂದು ಸ್ಪಷ್ಟವಾಗುತ್ತದೆ. ಇಂದಿನ ಸಮಾಜದಲ್ಲಿ ಕಾಣಬರುವ ಕುಟುಂಬ ಜೀವನ ಆಗ ಹೆಚ್ಚು ಕಡಿಮೆ ಇರಲೇ ಇಲ್ಲವೆನ್ನಬಹುದು. ಮಿತ್ರಾಚಾರದ ಕ್ರಿಯಾಪೂರ್ಣ ಪರ್ಯಾಲೋಚನೆ ಮತ್ತು ಅಧ್ಯಯನಗಳನ್ನು ನಡೆಸುತ್ತಿದ್ದ ಕುಟುಂಬಗಳು ಎಲ್ಲೋ ಕೆಲವಿದ್ದುವು. ಶಾಲೆಗಳು ವಿಶ್ವವಿದ್ಯಾಲಯಗಳು ಎಲ್ಲೋ ಅಲ್ಲಿ ಇಲ್ಲಿ ಕಂಡುಬರುತ್ತಿದ್ದುವು. ಸ್ವತಂತ್ರವಾದ ಮನಸ್ಸು ಮತ್ತು ಬುದ್ಧಿ ಎಲ್ಲಿಯೂ ಇರಲಿಲ್ಲ. ದೊಡ್ಡ ಛಾಟಾ ಮಾರ್ಗಗಳು, ಭವ್ಯವಾದ ಕಟ್ಟಡಗಳ ಅವಶೇಷಗಳು, ಕಾನೂನು ಮತ್ತು ಅಧಿಕಾರಗಳ ಪ್ರಾಬಲ್ಯದ ಸಂಪ್ರದಾಯ, ಈ ಆಶ್ಚರ್ಯಕರವಾದ ಸಂಗತಿಗಳ ನೆನಪುಗಳನ್ನು ಮುಂದಿನ ತಲೆಮಾರುಗಳ ಜನರಿಗೆ ಈ ಸಾಮ್ರಾಜ್ಯ ಬಿಟ್ಟು ಹೋಯಿತೇನೋ ನಿಜ. ಆದರೆ ಈ ವೈಭವಗಳ ಹಿಂದೆ ಭಂಗಿತವಾದ ಸಂಕಲ್ಪಶಕ್ತಿ, ಅದುಮಿಟ್ಟ ಬುದ್ಧಿ, ಮುರಿಯಲಾದ ವಿಕೃತಗೊಳಿಸಿದ ಅಭಿಲಾಷೆಗಳು ಇದ್ದುವೆಂಬುದನ್ನು ನಾವು ನಮ್ಮ ಆಶ್ಚರ್ಯದಲ್ಲಿ ಮರೆಯಬಾರದು. ದಾಸ್ಯ, ನಿರ್ಬಂಧ ಮತ್ತು ಬಲಾತ್ಕಾರದ ಜೀತಗಳ ಮೇಲೆ ನಿಂತಿದ್ದ ಈ ವಿಶಾಲವಾದ ರಾಜ್ಯದ ತುತ್ತ ತುದಿಯಲ್ಲಿ ಮೆರೆಯುತ್ತಿದ್ದ ಪ್ರಬಲರಾಗಿದ್ದ ಅಲ್ಪ ಸಂಖ್ಯೆಯ ಜನರಿಗೂ ಆತ್ಮದ ಅಂತರಾಳದಲ್ಲಿ ಸುಖಶಾಂತಿಗಳಿರಲಿಲ್ಲ. ನಿರ್ಬಂಧಗಳಿಗೊಳಗಾಗದ ಸಂತುಷ್ಟ ಚಿತ್ತಗಳಲ್ಲಿ ಮಾತ್ರ ಫಲಿಸುವ ಕಲೆ, ಸಾಹಿತ್ಯ, ವಿಜ್ಞಾನ ಮತ್ತು ತತ್ತ್ವ ಜ್ಞಾನಗಳು ಈ ವಾತಾವರಣದಲ್ಲಿ ಕುಂದಿ ಹೋದುವು. ಹಳೆಯದರ ಅನುಕರಣ ಬೇಕಾದಷ್ಟು ನಡೆಯುತ್ತಿತ್ತು. ಚತುರರಾದ ಕುಶಲಕರ್ಮಿಗಳು ಅನೇಕರಿದ್ದರು. ವಿದ್ವಾಂಸರಲ್ಲಿ ದಾಸ್ಯ ಮನೋಭಾವದ ಒಣ ಪಾಂಡಿತ್ಯ ಬೇಕಾದಷ್ಟಿತ್ತು. ಆದರೆ ಇದಕ್ಕಿಂತ ಬಹುಪುಟ್ಟದಾಗಿದ್ದ ಅಥೆನ್ಸ್ ಪಟ್ಟಣ

ಸ್ವಾತಂತ್ರ್ಯ ಸ್ಥಿತಿಯಲ್ಲಿದ್ದಾಗ ಕೇವಲ ಒಂದೇ ಶತಮಾನದಲ್ಲಿ ನಡೆದ ಆಳವಾದ ಸ್ವತಂತ್ರವಾದ ಬೌದ್ಧಿಕ ಚಟುವಟಿಕೆ ಈ ದೊಡ್ಡ ಸಾಮ್ರಾಜ್ಯದಲ್ಲಿ ನಾಲ್ಕು ಶತಮಾನಗಳ ದೀರ್ಘ ಕಾಲದಲ್ಲಿ ನಡೆಯಲಿಲ್ಲ. ರೋಮಿನ ವಶಕ್ಕೆ ಬಂದ ಮೇಲೆ ಅಥೆನ್ಸ್ ಸೊರಗಿ ಹೋಯಿತು. ಅಲೆಕ್ಸಾಂಡ್ರಿಯದ ವಿಜ್ಞಾನವೂ ನಶಿಸಿ ಹೋಯಿತು. ಅಷ್ಟೇಕೆ ಮಾನವ ಮನಸ್ಸೇ ಆ ದಿನಗಳಲ್ಲಿ ಕ್ಷೀಣಿಸಿ ಹೋಗುತ್ತಿತ್ತೆನಿಸುತ್ತಿತ್ತು.

ಟಿಪ್ಪಣಿಗಳು

25. ಈಗ ಇದು ಪಾಕಿಸ್ತಾನದಲ್ಲಿದೆ.

ಮಾನವಿಕ ಕರ್ಣಾಟಕ

ವಿಷಯ ಸೂಚಿಕೆ

ಸಂಪುಟ ೧೫

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೪-೮೫

ವಿಷಯ ಸೂಚಿ

ಲೇಖನಗಳು

ಪುಸ್ತಕ ವಿಮರ್ಶೆ

ಲೇಖಕ ಸೂಚಿ

ರಾಮಕೃಷ್ಣ, ಆರ್.	ಸಂಗೀತ ಮತ್ತು ಧ್ವನಿವಿಜ್ಞಾನ (ಫೊನೆಟಿಕ್ಸ್)	೧೫–೩
”	ಜನಾಂಗ, ಭಾಷೆ ಮತ್ತು ಸಂಸ್ಕೃತಿ	೧೫–೪
೨೭ ರೇಣುಕಾರ್ಯ, ಸಿ. ಕೆ.	ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ವಿಜೇತ ರಿಚರ್ಡ್ ಸ್ಟೋನ್	೧೫–೪
೨೮ ಲಕ್ಷ್ಮೀನಾರಾಯಣ ಅರೋರಾ	ವ್ಯಾಕರಣ ರಚನೆ ಮತ್ತು ವಿಶ್ಲೇಷಣೆ	೧೫–೩
೨೯ ವೆಂಕಟಾಚಲಶಾಸ್ತ್ರೀ, ಟಿ. ವಿ.	ಚಿಂತನೆ	೧೫–೨
೩೦ ಶಿವಗಣೇಶಮೂರ್ತಿ, ಆರ್. ಎಸ್.	ಭಾರತೀಯ ಲಿಪಿಮಾಲೆಯ ಉಗಮ	೧೫–೨
೩೧ ಸೀತಾರಾಮ ಜಾಗೀರ್‌ದಾರ್	ವಡ್ಡರಾವುಳಸುಂಕ	೧೫–೨
	ಕಲ್ಯಾಣದ ಚಾಳುಕ್ಯರ ಇತಿಹಾಸದ ಮೇಲೆ ಹೊಸ ಬೆಳಕು	೧೫–೩
೩೨ ಹರಿತಸ ಅನಂತಶರ್ಮ	ಮ್ಯಾಕ್‌ಬೆತ್ ಅನುವಾದಗಳು	೧೫–೩
೩೩ ಹರೀಶ್, ಪಿ. ಎನ್.	ದನಗಳ ಸುಳಿಗಳು : ಒಂದು ಅಧ್ಯಯನ	೧೫–೨

ರಿಜಿಸ್ಟ್ರೇಷನ್ ಆಫ್ ನ್ಯೂಸ್ ಪೇಪರ್ಸ್ (ಸೆಂಟ್ರಲ್) 1956ರ 8ನೇ ನಿಯಮದ 4ನೇ ಫಾರಂಗೆ ಸಂಬಂಧಿಸಿದಂತೆ "ಮಾನವಿಕ ಕರ್ಣಾಟಕ" ತ್ರೈಮಾಸಿಕ ಪತ್ರಿಕೆಯ ಸ್ವಾಮಿತ್ವ ಮತ್ತು ಇತರ ವಿಷಯಗಳ ಬಾಬ್ತು ವಿವರ :

1.	ಪ್ರಕಾಶನ ಸ್ಥಳ	:	ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–6
2.	ನಿಯತಕಾಲಿಕತೆ	:	ತ್ರೈಮಾಸಿಕ
3.	(ಅ) ಮುದ್ರಕರು	:	ಟಿ. ಬಾಬು, ಶ್ರೀ ಲಕ್ಷ್ಮೀ ಮುದ್ರಣಾಲಯ, 728/1, 2ನೇ ಕ್ರಾಸ್, ರವೆ ಬೀದಿ, ಮೈಸೂರು
	(ಆ)	:	ಕೆ. ಪಿ. ಪುಟ್ಟಸ್ವಾಮಿ, ಶ್ರೀ ಮಿರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಶ್ರೀ ಲಕ್ಷ್ಮೀ ಮುದ್ರಣಾಲಯ, 728/1, 2ನೇ ಕ್ರಾಸ್, ರವೆ ಬೀದಿ, ಮೈಸೂರು ಶ್ರೀ ಮಿರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು
4.	ಪ್ರಕಾಶಕರ ಹೆಸರು	:	ಕೆ.ಟಿ. ವೀರಪ್ಪ, ನಿರ್ದೇಶಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–6
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–6
5.	ಸಂಪಾದಕರ ಹೆಸರು	:	ಡಾ|| ಬಿ. ಕೆ. ಗುರುರಾಜರಾವ್ ಡಾ|| ಸಿ. ಕೆ. ರೇಣುಕಾರ್ಯ
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-6

6. ಪತ್ರಿಕಾ ಸ್ವಾಮಿತ್ವ ಮತ್ತು : ವಿಳಾಸ ಬಂಡವಾಳದಲ್ಲಿ ನೂರಕ್ಕೆ 1 ಕ್ಕಿಂತ ಹೆಚ್ಚು ಹಣ ಹಾಕಿರುವವರ ವಿವರ : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–5

ಕೆ. ಟಿ. ವೀರಪ್ಪನಾದ ನಾನು ಮೇಲಿನ ವಿವರಗಳಲ್ಲಿಯ ಎಲ್ಲ ವಿಷಯಗಳೂ ನನಗೆ ತಿಳಿದಮಟ್ಟಿಗೆ ಸತ್ಯವೆಂದು ಈ ಮೂಲಕ ಘೋಷಿಸುತ್ತೇನೆ.

(ಸಹಿ) ಕೆ. ಟಿ. ವೀರಪ್ಪ
ನಿರ್ದೇಶಕ ಹಾಗೂ ಪ್ರಕಾಶಕ, ಪ್ರಸಾರಾಂಗ, ಮೈಸೂರು–6

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

- ಮಾನವಿಕ ಕರ್ಣಾಟಕ
- ವಿಜ್ಞಾನ ಕರ್ಣಾಟಕ
- ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬